ಸದಾನಂದಗೌಡರು ಮಾತನಾಡಲಿ.

2. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ.

+ ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೇ, ಇತ್ತೀಚಿನ ದಿನಗಳಲ್ಲಿ ರಾಜ್ಯಪಾಲರ ಭಾಷಣ ಮತ್ತು ಅದರ ವಂದನಾ ನಿರ್ಣಯದ ಮೇಲಿನ ಚರ್ಚೆ ಏಕೋ ತನ್ನ ವರ್ಚಸ್ಸನ್ನು ಕಳೆದುಕೊಳ್ಳುತ್ತಿದೆ ಎಂದು ನನಗನ್ನಿಸುತ್ತಿದೆ. ರಾಜ್ಯದ ಜ್ವಲಂತ ಸಮಸ್ಯೆಗಳು ಮತ್ತು ಇನ್ನಿತರ ವಿಚಾರಗಳನ್ನು ಸರ್ಕಾರ ರಾಜ್ಯಪಾಲರ ಭಾಷಣದ ಮೂಲಕ ಈ ಸದನದ ಮುಂದೆ ತನ್ಮೂಲಕ ರಾಜ್ಯದ ಜನತೆಗೆ ತಿಳಿಸಬಹುದಾಗಿದೆ. ಆದರೆ ಇಂದು ರಾಜ್ಯಪಾಲರ ಭಾಷಣ ಎನ್ನುವುದು ಕೇವಲ ನಾಟಕೀಯವಾಗಿದ್ದು, ಸರ್ಕಾರ ತನ್ನ ಜವಾಬ್ದಾರಿಗಳಿಂದ ನುಣುಚಿಕೊಳ್ಳುವ ಪ್ರಯತ್ನಗಳು ಇದರಲ್ಲಿ ಕಾಣುತ್ತವೆ. ಈ ವಿಚಾರಗಳನ್ನು ಆಡಳಿತ ಪಕ್ಷದ ಮತ್ತು ಜನರ ಗಮನಕ್ಕೆ ತರುವಂತಹ ಮಹತ್ತರ ಕಾರ್ಯವನ್ನು ವಿರೋಧ ಪಕ್ಷಗಳು ನಿರ್ವಹಿಸುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ರೀತಿಯ ಚರ್ಚೆಗೆ ಬಹಳ ಕಡಿಮೆ ಅವಧಿ ಸಿಗುತ್ತಿದೆ. ಅದರಲ್ಲೂ ಸಿಗುವ ಅವಧಿಯಲ್ಲೂ ಕೂಡ ರಾಜ್ಯಪಾಲರ ಭಾಷಣಕ್ಕೆ ಸೀಮಿತವಾಗದೇ, ರಾಜ್ಯಪಾಲರ ಭಾಷಣದಲ್ಲಿ ತೋರಿಸಿದಂತಹ ವಿಚಾರಗಳನ್ನು ಹೊರತುಪಡಿಸಿ, ರಾಜ್ಯದ ಜ್ವಲಂತ ಸಮಸ್ಯೆಗಳನ್ನೂ ಹೊರತುಪಡಿಸಿ ಮಾತನಾಡುವಂತಹ ಸಂದರ್ಭಗಳೇ ಜಾಸ್ತಿಯಾಗುವುದನ್ನು ನಾನು ಇವತ್ತು ನೋಡುತ್ತಿದ್ದೇನೆ. ಇದರಿಂದಾಗಿಯೇ ನಾನು ಆಗಲೇ ಭಾಷಣದ ಪ್ರಾರಂಭದಲ್ಲೇ ಹೇಳಿದಂತೆ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ಇವತ್ತು ಸ್ವಲ್ಪಮಟ್ಟಿಗೆ ತನ್ನ ಮಹತ್ವವನ್ನು ಕಳೆದುಕೊಂಡಿದ್ದು ನಮಗೆಲ್ಲಾ ನಿಸ್ಸಂಶಯವಾಗಿ ಕಾಣಿಸುತ್ತಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇದು ಮೂರನೇ ರಾಜ್ಯಪಾಲರ ಭಾಷಣವಾಗಿದೆ. ದಿನಾಂಕ 27.10.1999ಕ್ಕೆ ಮೊದಲ ಬಾರಿಗೆ ಮತ್ತು ದಿನಾಂಕ 15.3.2000ಕ್ಕೆ ಎರಡನೇ ಬಾರಿಗೆ ಮತ್ತು ಇದೀಗ ಮೂರನೇ ಬಾರಿಗೆ ರಾಜ್ಯಪಾಲರು ಸದನವನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಈ ಬಾರಿಯ ರಾಜ್ಯಪಾಲರ ಭಾಷಣವಂತೂ ಸುದೀರ್ಘವಾಗಿದೆಯೇ ಹೊರತು ಯಾವುದೇ ಸಂದರ್ಭದಲ್ಲೂ ಕೂಡ ರಾಜ್ಯದ ನೈಜ ಚಿತ್ರಣ ಮತ್ತು ರಾಜ್ಯದ ಜವಾಬ್ದಾರಿಯನ್ನು ಜನತೆಗೆ ತಿಳಿಸುವಂತಹ ಪ್ರಯತ್ನಗಳನ್ನು ಮಾಡಿಲ್ಲ. ಕರ್ನಾಟಕದ ಜನತೆ ಯಾವ ನಿರೀಕ್ಷೆ ಇಟ್ಟುಕೊಂಡು ಈ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದರೋ ಅವೆಲ್ಲವನ್ನೂ ಕೂಡ ಹುಸಿ ಮಾಡುವಂತಹ ರೀತಿಯಲ್ಲಿ ಈ ಭಾಷಣ ಇದೆ. ಕೇವಲ ಸಂವಿಧಾನಾತ್ಮಕವಾದ ಹೊಣೆ

ಎಂಬ ದೃಷ್ಟಿಯಿಂದ ಮಾತ್ರ ಮಾಡಿಸಿರುವಂತಹ ರಾಜ್ಯಪಾಲರ ಭಾಷಣ ಇದಾಗಿದೆ. ಇದೊಂದು ಸಾಧಾರಣ ಸಿದ್ಧಹಸ್ತವಾಗಿರುವಂತಹ ಒಂದು ವ್ಯವಸ್ಥಿತ ವಂಚನೆಯ ಭಾಷಣವೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ಮಾತು ಮಾತಿಗೂ ತನ್ನದು 'ಹೈಟೆಕ್ ಸರ್ಕಾರ' ಎಂದು ಹೇಳಿಕೊಳ್ಳುತ್ತಿದೆ. ಪದೇ ಪದೇ ತಮ್ಮ ಸರ್ಕಾರ ಶರವೇಗದಲ್ಲಿ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡುತ್ತದೆ ಎಂದು ಹೇಳಿಕೊಳ್ಳುತ್ತಿದ್ದೀರಿ. ಆದರೆ ಈ ಸರ್ಕಾರ ಹೈಟೆಕ್ ಯುಗದಲ್ಲಿ ಶರವೇಗದಲ್ಲಿ ಸಾಗುವ ಬದಲು ಆಮೆ ನಡಿಗೆಯಲ್ಲಿ ಸಾಗುವಂತಹ ಶಿಲಾಯುಗದ ಬುರುಡೆ ಬಿಡುವಂತಹ ಸರ್ಕಾರ ಇದು ಎಂಬ ಭಾವನೆ ನನಗೆ ಉಂಟಾಗುತ್ತಿದೆ. ಸುಮಾರು ಒಂದೂವರೆ ವರ್ಷಗಳ ತನ್ನ ಅಧಿಕಾರದ ಅವಧಿಯಲ್ಲಿ ಈ ಸರ್ಕಾರ ಭರವಸೆಗಳ ಮಹಾಪೂರವನ್ನೇ ಹರಿಸಿದೆ. ಆದರೆ ಆ ಭರವಸೆಗಳನ್ನು ಈಡೇರಿಸದ ಸರ್ಕಾರ ಇದು ಎಂದು ನಮಗೆಲ್ಲಾ ಗೊತ್ತಾಗಿದೆ. ಈ ರಾಜ್ಯಪಾಲರ ಭಾಷಣದಲ್ಲಿ ಹೆಚ್ಚಿನ ಪುಟಗಳಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಕಡೆಗೆ ಎಲ್ಲದಕ್ಕೂ ಬೊಟ್ಟು ಮಾಡುವ ಕೆಲಸ ಮಾಡಿರುವುದನ್ನು ನೋಡಬಹುದಾಗಿದೆ. ಎಲ್ಲವನ್ನೂ ಕೇಂದ್ರ ಸರ್ಕಾರವೇ ಮಾಡಬೇಕು, ನಾವು ಇಲ್ಲಿ ಕುರ್ಚಿಯಲ್ಲಿ ಕುಳಿತುಕೊಂಡು ಆಡಳಿತ ಮಾಡುತ್ತೇವೆ ಎಂದು ಹೇಳುವಂತಹ ರೀತಿಯಲ್ಲಿ ಈ ಭಾಷಣ ಇದೆ. ಕೇಂದ್ರ ಸರ್ಕಾರಕ್ಕೆ ವಿನಂತಿ ಪತ್ರ ಅರ್ಪಿಸಿದ ರೀತಿಯಲ್ಲಿ ಈ ಭಾಷಣ ಇದೆ. ಭಾಷಣದ ಕೆಲವು ಭಾಗಗಳಲ್ಲಿ ಹೀಗೆಯೇ ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ನಿರ್ದೇಶನವನ್ನು ಸಹ ನೀಡಲಾಗಿದೆ. ಇನ್ನು ಕೆಲವು ಭಾಗಗಳಲ್ಲಿ ಕೇಂದ್ರದಿಂದ ಈ ರೀತಿ ಆಗಬೇಕು ಎಂದು ಕೋರುವಂತಹ ವಿನಂತಿ ಪತ್ರದ ರೀತಿಯಲ್ಲಿ ಈ ರಾಜ್ಯಪಾಲರ ಭಾಷಣ ಇದೆ. ನಿಜವಾಗಿ ಈ ಸರ್ಕಾರ ರಾಜ್ಯದ ಜನತೆಗೆ ಏನು ಮಾಡಬೇಕು ಎಂದು ಹೇಳುವಂತಹದ್ದರ ಬಗ್ಗೆ ಯಾವುದೇ ಚಿಂತನೆಗಳು ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಇಲ್ಲದಿರುವುದಂತೂ ನಮ್ಮ ದುರ್ದೈವ ಎಂದು ನಾನು ಭಾವಿಸುತ್ತಿದ್ದೇನೆ. ಈ ಸರ್ಕಾರ ಎಲ್ಲಾ ರಂಗಗಳಲ್ಲೂ ಕೂಡ ವಿಫಲವಾಗಿದೆ. ರೈತರ ಸಮಸ್ಯೆಗಳ ಬಗ್ಗೆ ಈಗಾಗಲೇ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ನಾನು ಅದರ ಬಗ್ಗೆ ಮತ್ತಷ್ಟು ಉಲ್ಲೇಖಗಳನ್ನು ಮಾಡಲಿಕ್ಕೆ ಹೋಗುವುದಿಲ್ಲ. ರೈತರ ಜ್ವಲಂತ ಸಮಸ್ಯೆಗಳ ಬಗ್ಗೆ ಈ ಸರ್ಕಾರ ಏನು ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ ಅಥವಾ ರಾಜ್ಯಪಾಲರ ಭಾಷಣದಲ್ಲಿ ಸಹ ಅದರ ಬಗ್ಗೆ ಹೇಳಿಲ್ಲ. ಅದಕ್ಕೆ ಪೂರ್ತಿ ತದ್ವಿರುದ್ಧವಾದಂತಹ ಕೆಲಸಗಳನ್ನೇ ಮಾಡಿದ್ದನ್ನು ನಾವು ನೋಡುತ್ತಿದ್ದೇವೆ. ಕೇಂದ್ರ ಸರ್ಕಾರ ಸಕಾಲದಲ್ಲಿ ಬೆಂಬಲ ಬೆಲೆಗಳನ್ನು ಘೋಷಣೆ ಮಾಡಿದ್ದರೂ ಕೂಡ ರಾಜ್ಯ ಸರ್ಕಾರ ಮಾರುಕಟ್ಟೆಯಲ್ಲಿ ಮಾಲನ್ನು ಖರೀದಿ ಮಾಡುವಂತಹ ವ್ಯವಸ್ಥೆಗಳನ್ನು ಸರಿಯಾಗಿ ಮಾಡಲಿಲ್ಲ. ವಿಶೇಷವಾಗಿ ಮಧ್ಯವರ್ತಿಗಳು ಈ ಸರ್ಕಾರದ ಪರವಾಗಿದ್ದಾರೋ ಅಥವಾ ಮಧ್ಯವರ್ತಿಗಳೇ ಈ ಸರ್ಕಾರಕ್ಕೆ ಪರೋಕ್ಷವಾಗಿ ಈ ರೀತಿಯ ವ್ಯವಸ್ಥೆಗಳನ್ನು ಮಾಡಿದ್ದಾರೋ ಗೊತ್ತಿಲ್ಲ. ಇವತ್ತು ಮಧ್ಯವರ್ತಿಗಳಿಂದ ರೈತರ

ಶೋಷಣೆಯನ್ನು ತಪ್ಪಿಸುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಬೆಂಬಲ ಬೆಲೆಗೆ ಬೆಳೆಗಳನ್ನು ಕೊಳ್ಳುವುದರಲ್ಲಿ ಇರಬಹುದು ಅಥವಾ ಬಾಕಿ ವಿಚಾರಗಳಲ್ಲಿ ಇರಬಹುದು, ರಾಜ್ಯ ಸರ್ಕಾರದ ವಿಳಂಬ ನೀತಿಯಿಂದಾಗಿ ಮಧ್ಯವರ್ತಿಗಳು ಸಾರಾಸಗಟಾಗಿ ರೈತರುಗಳನ್ನು ಶೋಷಣೆ ಮಾಡುವಂತಹ ಸಂಗತಿಗಳು ನಡೆದಿವೆ. ಕಳಪೆ ಬೀಜ ಪೂರೈಕೆಯನ್ನು ತಡೆಯುವಂತಹ ಯಾವುದೇ ರೀತಿಯ ಪ್ರಯತ್ನ ಈ ಸರ್ಕಾರದಿಂದ ನಡೆದಿಲ್ಲದಿರುವುದನ್ನು ನಾವೆಲ್ಲಾ ನೋಡಿದ್ದೇವೆ. ಈ ಸಂದರ್ಭದಲ್ಲಿ ಹಲವಾರು ವಿಚಾರಗಳು ಉಲ್ಲೇಖವಾದರೂ ಕೂಡ ಈ ಸರ್ಕಾರ ಅದರ ಬಗ್ಗೆ ಒಂದು ಸೌಜನ್ಯದ ಮಾತನ್ನಾದರೂ ಹೇಳಿ ಆದಂತಹ ತಪ್ಪನ್ನು ಒಪ್ಪಿಕೊಂಡು ಮುಂದೆಯಾದರೂ ರೈತರ ಪರವಾಗಿ ಇರುತ್ತೇವೆ ಎಂದು ಹೇಳುವಂತಹ ಭಾವನೆಗಳನ್ನು ಕೂಡ ತೋರಿಸದಂತಹ ಸರ್ಕಾರ ಇದಾಗಿದೆ. ಬೆಳೆ ವಿಮೆ ಬಗ್ಗೆ ಸಹ ನಾನು ಪ್ರತ್ಯೇಕವಾಗಿ ಇಲ್ಲಿ ಉಲ್ಲೇಖ ಮಾಡಬೇಕಾಗಿಲ್ಲ. ಇದನ್ನು ಸಮಗ್ರವಾಗಿ ಜಾರಿ ಮಾಡಲಿಕ್ಕೆ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ರಾಜ್ಯಪಾಲರ ಭಾಷಣದಲ್ಲಿ ಕೂಡ ಅದರ ಬಗ್ಗೆ ಯಾವುದೇ ವಿಚಾರಗಳನ್ನು ಸಮರ್ಪಕವಾಗಿ ಪ್ರಸ್ತಾಪ ಮಾಡುವಂತಹ ಪ್ರಯತ್ನಗಳನ್ನೂ ಈ ಸರ್ಕಾರ ಮಾಡಿಲ್ಲ. ರೈತರ ಸಮಸ್ಯೆಗಳ ಪ್ರಸ್ತಾಪ ಬಂದಾಗ ಕೃಷಿ ಕಾರ್ಮಿಕರ ಸಮಸ್ಯೆ ಬಗ್ಗೆ ಸಹ ನಾವು ಮಾತನಾಡಬೇಕಾಗುತ್ತದೆ. ರೈತರು ಬೆಳೆದಂತಹ ಬೆಳೆಗಳಿಗೆ ಧಾರಣೆಗಳು ಕುಸಿದಂತಹ ಸಂದರ್ಭದಲ್ಲಿ ಆ ಕೃಷಿ ಕಾರ್ಮಿಕರಿಗೆ ಎಲ್ಲಿಯೂ ಕೂಡ ಇವತ್ತು ಸರಿಯಾದ ಕೆಲಸಗಳು ಸಿಗದಿರುವುದನ್ನು ನಾವು ನೋಡುತ್ತಿದ್ದೇವೆ. ಅವರಿಗೆ ಸೂಕ್ತವಾದಂತಹ ಸಂಬಳಗಳನ್ನು ಸಹ ಕೊಡಲಿಕ್ಕೆ ರೈತನಿಗೆ ಆಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ದಿನದ ಮೂರು ಹೊತ್ತೂ ಕೂಡ ಊಟಕ್ಕೆ ಬವಣೆ ಪಡುವಂತಹ ಒಂದು ವ್ಯವಸ್ಥೆ ಇಡೀ ರೈತ ಕಾರ್ಮಿಕರಲ್ಲಿ ಉಂಟಾಗಿದೆ. ಆದರೆ ಆ ರೈತ ಕಾರ್ಮಿಕರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಪ್ರಸ್ತಾಪ ಮಾಡದೇ ಅವರ ಬಗ್ಗೆ ಕಾಳಜಿ ತೋರಿಸದಿರುವುದನ್ನು ನಾವು ಕಾಣಬಹುದಾಗಿದೆ. ಮಾನ್ಯ ಸದಸ್ಯರಾದ ಯು.ಆರ್.ಸಭಾಪತಿಯವರು ನಿನ್ನೆ ಸದನದಲ್ಲಿ ಮಾಡನಾಡುತ್ತಾ ಮಾಹಿತಿ ತಂತ್ರಜ್ಞಾನದ ಬಗ್ಗೆ ಭಾರೀ ಉದ್ದುದ್ದದ ಮಾಹಿತಿಗಳನ್ನು ನೀಡಿದರು. ಆದರೆ ಎಷ್ಟರಮಟ್ಟಿಗೆ ಇದು ವ್ಯವಸ್ಥಿತವಾಗಿ ಅನುಷ್ಠಾನಗೊಂಡಿದೆ ಎಂಬುದನ್ನು ನೋಡಬೇಕು. ಈ ಮಾಹಿತಿ ತಂತ್ರಜ್ಞಾನ ಒಂದು ರೀತಿಯಲ್ಲಿ ಕೇವಲ ಪ್ರಚಾರ ಗಿಟ್ಟಿಸಿಕೊಳ್ಳುವಂತಾದ್ದು ಆಗಿದೆ. 'ವೈಟ್ ಕಾಲರ್ಡ್' ಜನರು ಯಾರಿದ್ದಾರೋ ಅವರನ್ನು ತೃಪ್ತಿಪಡಿಸುವಂತಹ ಕೆಲಸ ಇದರಿಂದಾಗಿದೆ ಅಷ್ಟೇ. ರಾಜ್ಯ ಸರ್ಕಾರ ಮಾಹಿತಿ ತಂತ್ರಜ್ಞಾನದ ಬಗ್ಗೆ ಹಲವಾರು ಮೇಳಗಳನ್ನು ನಡೆಸಿತು. ಬೇರೆ ಬೇರೆ ಜನಗಳನ್ನು ಅಲ್ಲಿಗೆ ಕರೆಸುವಂತಹ ವ್ಯವಸ್ಥೆಗಳನ್ನು ಮಾಡಲಾಯಿತು. ದಿನನಿತ್ಯ ಇದರ ಬಗ್ಗೆ ಫೋಟೋಗಳನ್ನು ಪೇಪರ್‌ನಲ್ಲಿ ಹಾಕಿಸಿಕೊಳ್ಳಲಾಯಿತು. ಹೈಟೆಕ್ ಅಥವಾ ಮಾಹಿತಿ ತಂತ್ರಜ್ಞಾನದ ವಿಚಾರದಲ್ಲಿ ದಿನನಿತ್ಯ ಒಂದು ಫೋಟೋವಾದರೂ ಪೇಪರ್‌ನಲ್ಲಿ ಇಲ್ಲದಿದ್ದರೆ ಈ ರಾಜ್ಯದ ಮಾನ್ಯ

ಮುಖ್ಯಮಂತ್ರಿಗಳಿಗೆ ಸಮಾಧಾನ ಇಲ್ಲ. ಆ ರೀತಿಯ ಒಂದು ಪ್ರಚಾರ ಗಿಟ್ಟಿಸಿಕೊಳ್ಳುವಂತಹ ಒಂದು ವ್ಯವಸ್ಥೆಯನ್ನು ಮಾಡಲಾಗಿದೆಯೇ ಹೊರತು ಬೇರೇನನ್ನೂ ಈ ರಾಜ್ಯ ಸರ್ಕಾರ ಮಾಡಿಲ್ಲ. ನಿನ್ನೆ ನನ್ನ ಮಿತ್ರರು ಮಾತನಾಡುತ್ತಾ ಯುವ.ಕಾಮ್, ಶಾಲೆಗಳಲ್ಲಿ 'ಮಾಹಿತಿ ಸಿಂಧು' 'ವಿದ್ಯಾನಿಧಿ' ಇಂತಹ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದು ಹೇಳಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಇರುವಂತಹ ಎಷ್ಟು ಸರ್ಕಾರಿ ಶಾಲೆಗಳಲ್ಲಿ ಇವತ್ತು 'ಮಾಹಿತಿ ಸಿಂಧು' ಕಾರ್ಯಕ್ರಮವನ್ನು ಜಾರಿಗೊಳಿಸಲು ಅಗತ್ಯವಾದ ಮೂಲಭೂತ ಸೌಲಭ್ಯಗಳಿವೆ ಎಂಬುದನ್ನು ನಾನು ಪ್ರಶ್ನಿಸಬಯಸುತ್ತೇನೆ. ಕನಿಷ್ಟಪಕ್ಷ ಆ ಶಾಲೆಗಳಲ್ಲಿ ಕಂಪ್ಯೂಟರ್ ಅಳವಡಿಕೆ ಮಾಡಲು ಅಗತ್ಯವಾದ ಕರೆಂಟ್ ಆದರೂ ಇದೆಯೇ? ನಮ್ಮ ಭಾಗದಲ್ಲಿರುವಂತಹ .ನೂರಾರು ಸರ್ಕಾರಿ ಶಾಲೆಗಳಲ್ಲಿ ಇವತ್ತಿಗೂ ಕೂಡ ವಿದ್ಯುದ್ದೀಕರಣ ಮಾಡಲಾಗಿಲ್ಲ. ಸರ್ಕಾರ ಅದರ ಬಗ್ಗೆ ಗಮನ ಹರಿಸಿಲ್ಲ. ಹೈಟೆಕ್ ಕಂಪ್ಯೂಟರ್ ಕೊಡುತ್ತೇವೆ ಎಂದು ಸರ್ಕಾರ ಹೇಳಿತೇ ವಿನಃ ಅದರ ಅಳವಡಿಕೆಗೆ ಬೇಕಾದಂತಹ ವ್ಯವಸ್ಥೆ ಶಾಲೆಗಳಲ್ಲಿ ಇದೆಯೇ ಎಂದು ನೋಡುವಂತಹ ಕೆಲಸವನ್ನು ಮಾಡಲಿಲ್ಲ. ಈ ಸರ್ಕಾರಿ ಶಾಲೆಗಳಿಗೆ ಕಂಪ್ಯೂಟರ್ ತರಬೇತಿದಾರರನ್ನು, ನೀವು ಎಷ್ಟು ಜನರನ್ನು ಕೊಟ್ಟಿದ್ದೀರಿ? ಕಂಪ್ಯೂಟರ್ ಅಳವಡಿಕೆಗೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಸರ್ಕಾರ ಪ್ರಯತ್ನ ಪಡದೇ ಕೇವಲ ಪ್ರಚಾರ ಗಿಟ್ಟಿಸಿಕೊಳ್ಳುವಂತಹ ಉದ್ದೇಶದಿಂದ ಇದನ್ನು ಮಾಡಿರುವುದನ್ನು ನಾವು ಕಾಣಬಹುದಾಗಿದೆ. ನಿನ್ನೆ ಮಾನ್ಯ ಸಭಾಪತಿಯವರು ಮಾತನಾಡುತ್ತಾ ಕಂಪ್ಯೂಟರ್ ಟ್ರೈನಿಂಗ್ ಕೊಡಲು ಶಾಸಕರುಗಳಿಗೆ ವ್ಯವಸ್ಥೆ ಮಾಡಲಾಗಿದ್ದರೂ ಸಹ ಅನೇಕ ಶಾಸಕರುಗಳು ಹಾಜರಾಗಲೇ ಇಲ್ಲವೆಂದು ಹೇಳಿದರು. ನಿಜವಾಗಿ ಎಷ್ಟು ಜನ ಶಾಸಕರು ತರಬೇತಿಗೆ ಹಾಜರಾದರು ಎಂಬ ಬಗ್ಗೆ ನನ್ನ ಬಳಿ ಅಂಕಿ ಅಂಶಗಳು ಇಲ್ಲ. ಆ ಬಗ್ಗೆ ನಾನು ನಿನ್ನೆ ತಮ್ಮ ಕಾರ್ಯಾಲಯವನ್ನು ಕೇಳಿದೆ. ಆದರೆ ಮಾನ್ಯ ಸಭಾಪತಿಯವರು ಹೇಳಿದಂತೆ ಕೇವಲ 20 ಶಾಸಕರು ಮಾತ್ರ ತರಬೇತಿ ಪಡೆಯಲು ಬಂದರು ಎಂಬ ಸಂಗತಿ ಖಂಡಿತವಾಗಿಯೂ ಸತ್ಯಕ್ಕೆ ದೂರವಾದುದು. ನಾನು ಈ ವಿಷಯವನ್ನು ಇಲ್ಲಿ ಉಲ್ಲೇಖ ಮಾಡಲೇಬೇಕಾಗುತ್ತದೆ. ಮಾನ್ಯ ಸದಸ್ಯರು ಶಾಸಕರುಗಳಿಗೆ ಸದನದಲ್ಲಿ ಅವಮಾನ ಮಾಡಿದ್ದಾರೆ. ಯಾವ ಶಾಸಕರೂ ಕೂಡ ತರಬೇತಿಗೆ ಬರುತ್ತಲೇ ಇಲ್ಲ, ಶಾಸಕರುಗಳಿಗೆ ಕೊಟ್ಟಂತಹ ಸೌಲಭ್ಯ ದುರುಪಯೋಗವಾಗುತ್ತಿದೆ, ಶಾಸಕರು ಅವರಷ್ಟಕ್ಕೆ ಓಡಾಟ ಮಾಡಿಕೊಂಡಿದ್ದಾರೆ, ಶಾಸಕರು ಇದರ ಸೌಲಭ್ಯವನ್ನು ಪಡೆದುಕೊಳ್ಳುತ್ತಿಲ್ಲ ಎಂದು ಮಾನ್ಯ ಸಭಾಪತಿಯವರು ಹೇಳಿದ್ದು ಒಂದು ರೀತಿಯಲ್ಲಿ ಈ ಸದನದ ಸದಸ್ಯರನ್ನು ಅವಮಾನ ಮಾಡಿದಂತಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಹಿಂದಿನ ವಿಧಾನ ಸಭೆಯ ಅವಧಿಯಲ್ಲೂ ಕೂಡ ಶಾಸಕರುಗಳಿಗೆ

ಕಂಪ್ಯೂಟರ್ ತರಬೇತಿಯನ್ನು ಕೊಡಲಾಗಿತ್ತು. ಕಳೆದ ವಿಧಾನ ಸಭಾ ಅವಧಿಯಲ್ಲಿ ಶಾಸಕರಾಗಿದ್ದ ಬಹುತೇಕರು ಈ ಸೌಲಭ್ಯದ ಉಪಯೋಗ ಪಡೆದುಕೊಂಡು ಈಗಾಗಲೇ ಕಂಪ್ಯೂಟರ್‌ತರಬೇತಿಯನ್ನು ಪಡೆದುಕೊಂಡಿದ್ದಾರೆ. ಮತ್ತೆ ಈ ಬಾರಿಯೂ ಸಹ ಪುನಃ ಹಿಂದೆ ಯಾರು ತರಬೇತಿಯ ಉಪಯೋಗ ಪಡೆದು ಕೊಂಡಿರಲಿಲ್ಲವೋ ಅವರಿಗಾಗಿ ಮತ್ತೊಮ್ಮೆ ತರಬೇತಿ ಕಾರ್ಯಕ್ರಮವನ್ನು ಯೋಜಿಸಲಾಗಿತ್ತು. ಆದರೆ ರಾಜಾರೋಷವಾಗಿ 224 ಶಾಸಕರುಗಳಲ್ಲಿ ಕೇವಲ 20 ಜನ ಶಾಸಕರುಗಳು ಮಾತ್ರ ತರಬೇತಿಗೆ ಹಾಜರಾಗಿದ್ದಾರೆ, ಬಾಕಿಯವರೆಲ್ಲಾ ಬರಲೇ ಇಲ್ಲ, ಈ ಶಾಸಕರುಗಳೆಲ್ಲಾ ಎಲ್ಲೋ ತಿರುಗುತ್ತಿದ್ದಾರೆ ಎಂದು ಹೇಳುವಂತಹ ಧಾಟಿಯಲ್ಲಿ ಮಾತನಾಡುವಂತಾದ್ದು ಸರಿಯಲ್ಲ. ಸದನದಲ್ಲಿ ಒಬ್ಬ ಶಾಸಕ ತಾನು ಮಾತ್ರ ಎಲ್ಲವನ್ನೂ ತಿಳಿದುಕೊಂಡವ, ಬಾಕಿ ಎಲ್ಲರೂ ಏನೂ ತಿಳಿದುಕೊಳ್ಳದವರು, ನಾನೇ ಎಲ್ಲ ಕೆಲಸಗಳನ್ನೂ ಸಹ ಮಾಡಿದ್ದೇನೆ ಎನ್ನುವ ರೀತಿಯಲ್ಲಿ ಒಂದು ಅವಮಾನಕರವಾದಂತಹ ಮಾತನ್ನು ಹೇಳಿದ್ದಾರೆ. ನಿಜವಾಗಿ ಆ ಶಾಸಕರು ಅವರ ತಪ್ಪನ್ನು ತಿದ್ದಿಕೊಳ್ಳಬೇಕು. ಈ ರೀತಿ ಸಹ-ಸದಸ್ಯರ ಮೇಲೆ ಗೌರವದಿಂದ ದೂರ ಉಳಿಯುವಂತಹ ಕೆಲಸಗಳನ್ನು ಮಾಡಬಾರದು ಎಂದು ಹೇಳುವಂತಹ ವಿನಂತಿಯನ್ನು ನಾನು ಮಾಡಿಕೊಳ್ಳಲಿಕ್ಕೆ ಇಚ್ಛಿಪಡುತ್ತೇನೆ. ಅವರು ಶಾಸಕರು ಯಾರ್‍ಯಾರು ತರಬೇತಿಗೆ ಹಾಜರಾದರು, ಯಾರ್‍ಯಾರು ಹಾಜರಾಗಿಲ್ಲ ಎಂಬ ಬಗ್ಗೆ ಅಂಕಿ ಅಂಶಗಳನ್ನು ಸದನಕ್ಕೆ ಕೊಡಬೇಕಾಗಿತ್ತು. ಅದನ್ನು ಅವರು ಕೊಡುವುದರ ಬದಲು ನೇರವಾಗಿ ಆಪಾದನೆಗಳನ್ನು ಮಾಡುವಂತಾದ್ದು ಅರ್ಥಹೀನವಾಗಿದೆ. ಇದರಿಂದಾಗಿ ನಮ್ಮೆಲ್ಲಾ ಶಾಸಕರ ಗೌರವಕ್ಕೆ ಧಕ್ಕೆ ಬಂದೊದಗಿದೆ. ಬಹುತೇಕ ನಾವೆಲ್ಲರೂ ಕಳೆದ ಬಾರಿಯಲ್ಲಿ ನೀಡಲಾದ ಕಂಪ್ಯೂಟರ್ ತರಬೇತಿಯನ್ನು ಪಡೆದುಕೊಂಡಿದ್ದೇವೆ. ಹೀಗಿರುವಾಗ ಇವರು ಈ ರೀತಿಯ ಮಾತುಗಳನ್ನು ಹೇಳುವುದಾದರೆ, ಶಾಸಕರ ಬಗ್ಗೆ ಸಾರ್ವಜನಿಕರಲ್ಲಿ ಯಾವ ರೀತಿಯ ಭಾವನೆಗಳು ಮೂಡುತ್ತವೆ ಎಂಬುದನ್ನು ತಾವು ಯೋಚಿಸಬೇಕಾಗಿದೆ. ಈ ರೀತಿಯಾದಂತಹ ಸಣ್ಣ ವಿಚಾರಗಳನ್ನು ಮಾನ್ಯ ಸದಸ್ಯರು ಹೇಳುವಂಥಾದ್ದು ಸರಿಯಲ್ಲ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೇ, ನಾನು ಯಾವುದೇ ಶಾಸಕರ ಮೇಲೆ ಆರೋಪ ಹೊರಿಸಿಲ್ಲ. ವಿಧಾನ ಸಭಾ ಕಾರ್ಯಾಲಯದಿಂದ ಶಾಸಕರುಗಳಿಗೆ 20 ಗಂಟೆ ಕಾಲ ಕಂಪ್ಯೂಟರ್ ತರಬೇತಿಯನ್ನು ಪಡೆಯಲು ವ್ಯವಸ್ಥೆಯನ್ನು ಮಾಡಲಾಗಿತ್ತು. ಆದರೆ ಕಾರ್ಯಾಲಯದ ದಾಖಲೆಗಳ ಪ್ರಕಾರ ಇದುವರೆಗೂ ಪೂರ್ಣವಾಗಿ 20 ಗಂಟೆಗಳ ಕಾಲ ತರಬೇತಿಯನ್ನು ಪಡೆದ ಶಾಸಕರ ಸಂಖ್ಯೆ ಕೇವಲ 20 ಮಾತ್ರವಾಗಿದೆ.

ಅಧ್ಯಕ್ಷರು: ಸ್ವಲ್ಪ ಹೆಚ್ಚು ಕಡಿಮೆ, ಆರು ಗಂಟೆಯಿಂದ 40 ಗಂಟೆಯವರೆಗೆ ಟ್ರೈನಿಂಗ್ ತೆಗೆದುಕೊಂಡಿರುವವರೂ ಇದ್ದಾರೆ. ಎಂಟು ಗಂಟೆಯಿಂದ, 10 ಗಂಟೆ, 20 ಗಂಟೆ,

ಎಲ್ಲ ಸೇರಿದರೆ, 85 ಜನ ಆಗುತ್ತಾರೆ. ಜೊತೆಗೆ ಅವರ ಪಿಎಗಳು 120 ಜನ ಕಲಿತಿದ್ದಾರೆ.

ಶ್ರೀ ಯು.ಆರ್.ಸಭಾಪತಿ: ನಾನು ಹೇಳಿದ್ದಲ್ಲಿ ತಪ್ಪಿದ್ದರೆ, ನಾನು ಅದನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:ಅವರು ಮಾಹಿತಿ ತಂತ್ರಜ್ಞಾನದ ಬಗ್ಗೆ ಮಾತನಾಡುವವರು, ಅವರ ಹತ್ತಿರ ಏನೂ ಮಾಹಿತಿ ಇಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಮನೆಯಲ್ಲಿ ಮೊದಲೇ ಕಂಪ್ಯೂಟರ್ ಇಟ್ಟುಕೊಂಡಿರುವವರ ಪರಿಸ್ಥಿತಿ ಅವರು ಹೇಳುವ ಹಾಗೆ ಇರಬಹುದು. ಅವರು ಮೊದಲೇ ಟ್ರೈನಿಂಗ್ ಪಡೆದಿರಬಹುದು. ಲೆಜಿಸ್ಲೇಟರ್ಸ್ ಹೋಮ್‌ನಲ್ಲಿ ಟ್ರೈನಿಂಗ್ ಕೊಡುವುದು ಒಳ್ಳೆಯ ಕಾರ್ಯಕ್ರಮ.

ಅಧ್ಯಕ್ಷರು: 120 ಜನ ಪಿಎಗಳು ಕಲಿತಿದ್ದಾರೆ. ಹಿಂದಿನ ಅಧ್ಯಕ್ಷರು ಇದ್ದಾಗ ಸುಮಾರು 60 ರಿಂದ 70 ಜನ ಕಲಿತಿದ್ದಾರೆ. ಈಗ 80 ಜನ ಆರು ಗಂಟೆಯಿಂದ ಹಿಡಿದು 40 ಗಂಟೆಯವರೆಗೆ ಕಲಿತಿರುವವರೂ ಇದ್ದಾರೆ. ಶೇಕಡ 75 ಭಾಗ ಶಾಸಕರು ಕಲಿತಿದ್ದಾರೆ.

ಶ್ರೀ ಡಿ.ವಿ.ಸದಾನಂದಗೌಡ: ಮಾಹಿತಿ ಇಲ್ಲದೆ, ಮಾಹಿತಿ ತಂತ್ರಜ್ಞಾನದ ಬಗ್ಗೆ ಮಾತನಾಡುವವರ ಬಗ್ಗೆ ನನಗೆ ಕನಿಕರ ಇದೆ. ಅವರ ಬಗ್ಗೆ ನಾನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮಾಹಿತಿ ತಂತ್ರಜ್ಞಾನ ಸಚಿವರು ಸ್ವಲ್ಪ ದಿವಸದಿಂದ ಕಾಣುತ್ತಿಲ್ಲ, ಮೊನ್ನೆ ಪತ್ರಿಕೆಯಲ್ಲಿ ಅವರು ವಿದೇಶಕ್ಕೆ ಹೋಗಿದ್ದಾರೆಂದು ಓದಿದೆ. ಅವರು ತಮ್ಮ ಅನುಮತಿ ಪಡೆದಿದ್ದಾರಾ? ಅಧಿವೇಶನ ನಡೆಯುವಾಗ ಯಾರಾದರೂ ಸಚಿವರು ವಿದೇಶ ಪ್ರಯಾಣ ಮಾಡುವುದಕ್ಕೆ ಅವಕಾಶವಿದೆಯಾ?

ಅಧ್ಯಕ್ಷರು: ಅವರು ನನ್ನ ಅನುಮತಿ ಪಡೆದಿದ್ದಾರೆ. ವಿದೇಶ ಎಂದರೆ ಅವರು ಮೋಜು ಮಾಡುವುದಕ್ಕೆ ಹೋಗಿಲ್ಲ, ಯಾವುದೋ ಅಗ್ರಿಮೆಂಟ್ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟಂತೆ ಮಾಡಿಕೊಳ್ಳಬೇಕಾಗಿದೆ, ಹಾಗಾಗಿ ಹೋಗಿದ್ದಾರೆ. ಅವರು ಸರ್ಕಾರಿ ಕೆಲಸದ ಮೇಲೆಯೇ ಹೋಗಿದ್ದಾರೆ. ಮಾಹಿತಿ ತಂತ್ರಜ್ಞಾನದ ವಿಷಯದ ಮೇಲೆ ಅಗ್ರಿಮೆಂಟ್ ಮಾಡಿಕೊಂಡು ಬರಬೇಕೆಂದು ನನಗೆ ಕಾಗದ ಬರೆದಿದ್ದಾರೆ. ಆ ಕಾಗದವನ್ನು ಬೇಕಾಗಿದ್ದರೆ ತೋರಿಸುತ್ತೇನೆ. ಅವರು ನಿಧಾನವಾಗಿ ಬರುತ್ತಾರೆಂದು ಕಾನ್‌ಫರೆನ್ಸ್‌ನವರು ಕಾಯುವುದಕ್ಕಾಗುವುದಿಲ್ಲ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ರೈತನ ಸಮಸ್ಯೆ ಬಗ್ಗೆ ಕೂಡ ಇದೇ ರೀತಿಯ ಪರಿಸ್ಥಿತಿಯಾಗಿರಬಹುದು ಎಂದು ನನಗನ್ನಿಸುತ್ತದೆ. ಈ ಸದನದಲ್ಲಿ ಯಾವುದೇ ವಿಚಾರಗಳನ್ನು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಸಾಮಾನ್ಯ ಪರಿಜ್ಞಾನ ಎಲ್ಲರಿಗೂ ಇರಬೇಕಾಗುತ್ತದೆ. ಆ ಪರಿಜ್ಞಾನ ಇಲ್ಲದೆ ಯಾವುದೇ ವಿಚಾರ ಪ್ರಸ್ತಾಪ ಮಾಡಿದರೂ ಅದು ಗೌರವ ತರುವ ವಿಚಾರ ಅಲ್ಲ. ಅದಕ್ಕಾಗಿ ನಾನು ಪ್ರಸ್ತಾಪ ಮಾಡಿದೆ ವಿನಃ ಆರೋಪ-ಪ್ರತ್ಯಾರೋಪ ಮಾಡುವುದಕ್ಕಾಗಿ ಅಲ್ಲ. ವಿದ್ಯುತ್ ವಲಯದ ಬಗ್ಗೆ ತುಂಬ ಚರ್ಚೆಯಾಯಿತು. ಚರ್ಚೆಯಾದರೂ ಕೂಡ ಸಮರ್ಪಕವಾದ ಉತ್ತರ ಆ ಕಡೆಯಿಂದ ಬರುತ್ತಿಲ್ಲ. ಯಾವ ರೀತಿ ಸಮರ್ಪಕವಾದ ವಿದ್ಯುತ್ ಪೂರೈಕೆ ಮಾಡುವುದಕ್ಕೆ ಅವರಿಗೆ ಆಗುವುದಿಲ್ಲ, ಅದೇ ರೀತಿ ಅವರ ಉತ್ತರ ಕೂಡ ಸಮರ್ಪಕವಾಗಿ ನಮಗೆ ಬರುತ್ತಿಲ್ಲ. ಜನರ ಕಡೆಗೆ ಕೂಡ ಸಮರ್ಪಕವಾಗಿ ಹೋಗುತ್ತಿಲ್ಲ. ಖಾಸಗಿಯವರೊಡನೆ ಮಾಡಿಕೊಂಡ ಒಪ್ಪಂದಗಳ ಬಗ್ಗೆ ಅದು ಇನ್ನೂ ರಹಸ್ಯವಾಗಿ ಉಳಿದಿದೆ. ನೀವು ಏನಿದ್ದರೂ ಕೂಡ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ಮಾತನಾಡಿ, ಉತ್ತರ ಕೊಡಿಸುತ್ತೇನೆಂದು ತಾವು ಹೇಳಿದ್ದೀರಿ, ನನಗೆ ತಮ್ಮಲ್ಲಿ ವಿಶ್ವಾಸ ಇದೆ. ಈ ರೀತಿ ಖಾಸಗಿ ಕಂಪನಿಯವರ ಜೊತೆ ಮಾಡಿಕೊಂಡ ಒಪ್ಪಂದಗಳು ಎಷ್ಟು? ಇದನ್ನು ರಹಸ್ಯವಾಗಿ ಇಡುವುದಕ್ಕೆ ಕಾರಣವೇನು? ಎಮ್‌ಓಯು ಗೌಪ್ಯವಾಗಿ ಇಡುವುದಕ್ಕೆ ಕಾರಣವೇನು? ಇದನ್ನು ಸದನದಲ್ಲಿ ಎಲ್ಲರಿಗೂ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತಾರಾ? ಅವರ ನಡವಳಿಕೆ ಎಷ್ಟು ಸಂಶಯಾಸ್ಪದ ಆಗಿದೆ ಎಂದರೆ, ಭಾರೀ ಸಂಶಯಾಸ್ಪದ ರೀತಿಯಲ್ಲಿ ಅವರ ನಡೆವಳಿಕೆ ನಡೆಯುತ್ತಿದೆ. ವಿದ್ಯುತ್ ವಿಚಾರದಲ್ಲಿ ಅವರ ಗೌಪ್ಯತೆ, ಬೇಕಾದರೆ ಇಟ್ಟುಕೊಳ್ಳಲಿ, ಬಾಕಿಯುದನ್ನು ಹೊರಗಡೆ ಹಾಕಲೇಬೇಕಾಗುತ್ತದೆ. ಸದನದ ಸದಸ್ಯರಿಗೆ ಅದರ ಮಾಹಿತಿ ಕೊಡಲೇಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಅವರ ಟ್ಯಾರಿಫ್ ಬಗ್ಗೆ ನಮಗೆ ಈಗಾಗಲೇ ಗೊತ್ತಿದೆ. ಕೆಇಬಿಯನ್ನು ಕೆಪಿಟಿಸಿಎಲ್ ಎಂದು ಮಾಡಿದ್ದಾರೆ, ಹೆಸರು ಬದಲಾವಣೆ ಆದಕೂಡಲೇ ಬಾಕಿ ಬದಲಾವಣೆ ಆಗಲಿಲ್ಲ. ಅದು ಸ್ವಲ್ಪ ಬದಲಾವಣೆ ಆಗಬೇಕಾಗಿತ್ತು. ನಮ್ಮ ಅಪೇಕ್ಷೆ ಕೂಡ ಹಾಗೆ ಇತ್ತು. ಅವರ ಆಯೋಗ ಏನು ಹೇಳಿದೆ, ಅರಿಯರ್ಸ್ ಕಲೆಕ್ಷನ್ ಮಾಡಿದರೆ, ಆ ಟ್ಯಾರಿಫ್ ವ್ಯತ್ಯಾಸ ಮಾಡುವುದಕ್ಕೆ ತೊಂದರೆ ಇಲ್ಲವೆಂದು ಅವರು ತೀರ್ಪು ಕೊಟ್ಟಿದ್ದಾರೆ. 1,600 ಕೋಟಿ ಬಾಕಿ ಇರುವ ಬಗ್ಗೆ ಅವರು ಯಾವುದೇ ಸ್ಟೆಪ್ಸ್ ತೆಗೆದುಕೊಳ್ಳುತ್ತಿಲ್ಲ. ರೈತರ ಬಗ್ಗೆ ಯಾವುದೇ ಕನಿಕರ ಇಲ್ಲ. ಟ್ಯಾರಿಫ್ ಕಡಿಮೆ ಮಾಡುವ ಪ್ರಯತ್ನ ಮಾಡುತ್ತಿಲ್ಲ. ಇದರ ರಿಕವರಿಗೆ ಏನು ಮಾಡುತ್ತಾರೆ ಎಂದು ಈಗಲಾದರೂ ಸದನದಲ್ಲಿ ಹೇಳಲಿ. ನಿನ್ನೆ ಕೂಡ ಅವರು ಪ್ರಸ್ತಾಪ ಮಾಡಲಿಲ್ಲ. ನಾವು ಮಾತನಾಡಿದಾಗ ಬಾಕಿ ವಿಚಾರದ ಬಗ್ಗೆ ಗಮನ ಹರಿಸಿದರೇ ಹೊರತು ಸತ್ಯ ಹೇಳಲಿಲ್ಲ. ವಿದ್ಯುತ್ ಬಗ್ಗೆ ಬರೀ ಪುರಾಣ, ಉದ್ದದ ಭಾಷಣ ಮಾಡಿದರು. ಆದರೆ ಇದಕ್ಕೆ ಬೇಕಾದ ವ್ಯವಸ್ಥೆ ಬಗ್ಗೆ ಹೇಳಲಿಲ್ಲ.

ಸುಧಾರಣೆಗಳು ಕೇವಲ ಕಾಗದದಲ್ಲಿ ಮಾತ್ರ ಆಗುವುದಿಲ್ಲ. ಇನ್ನೊಂದು ಗಂಭೀರವಾದ ವಿಚಾರ ಈ ಸದನದಲ್ಲಿ ಚರ್ಚೆ ಆಗಬೇಕಾಗಿರುವುದು, ಕಾನೂನು ಮತ್ತು ಸುವ್ಯವಸ್ಥೆ ಮತ್ತು ಪೋಲೀಸರ ವ್ಯವಸ್ಥೆ ಇದರ ಬಗ್ಗೆ ನಿಜವಾಗಿ ಚರ್ಚೆಯಾಗಬೇಕಾಗಿದೆ. ಸಾಮಾನ್ಯ ಜನ ಬೀದಿಯಲ್ಲಿ ಮರ್ಯಾದೆಯಾಗಿ ಓಡಾಡುವ ಸಂದರ್ಭ ಈ ರಾಜ್ಯದಲ್ಲಿ ಇಲ್ಲ. ಒಂದೂವರೆ ವರ್ಷದಲ್ಲಿ ಈ ಸರ್ಕಾರ ಬಂದ ಮೇಲೆ ಪರಿಸ್ಥಿತಿ ಮತ್ತಷ್ಟು ಕುಸಿದಿದೆ. ಉದಾಹರಣೆಗೆ ಆಡಳಿತ ಪಕ್ಷದ ಸದಸ್ಯರಾದ ಮಾನ್ಯ ವಸಂತ ಅಸ್ನೋಟಿಕರ್‌ರವರ ಹತ್ಯೆ ಆಯಿತು. ನಾಟಕೀಯವಾಗಿ ಅದರ ವ್ಯವಸ್ಥೆ ಮಾಡಿದ್ದರು. ಅದು ಕೂಡ ನಿಮಗೆ ಗೊತ್ತಿದೆ. ಇಬ್ಬರು ಶಾಸಕರ ಹತ್ಯೆಗೆ ಪ್ರಯತ್ನವಾಯಿತು. ಇನ್ನೆಷ್ಟು ಶಾಸಕರ ಹತ್ಯೆಗಾಗಿ ಪ್ರಯತ್ನ ಆಗುತ್ತದೆಯೋ ಗೊತ್ತಿಲ್ಲ. ಆದರೂ ಕೂಡ ಇನ್ನೂ ಎಚ್ಚೆತ್ತುಕೊಳ್ಳುವ ವ್ಯವಸ್ಥೆ ಸರ್ಕಾರದಲ್ಲಿ ಆಗಲಿಲ್ಲ. ಮಾಜಿ ಪ್ರಧಾನ ಮಂತ್ರಿಯವರ ಪತ್ನಿ ಮತ್ತು ಸೊಸೆ ಮೇಲೆ ಆ್ಯಸಿಡ್ ದಾಳಿಆಯಿತು. ಅದನ್ನು ರಾಜಕೀಕರಣಕ್ಕೆ ತಿರುಚುವ ಪ್ರಯತ್ನ ಮಾಡಿದರು. ಇದನ್ನು ಕೂಲಂಕುಷವಾಗಿ ತನಿಖೆ ಮಾಡಿ, ಗೌರವಾನ್ವಿತ ಸ್ಥಾನದಲ್ಲಿ ಇದ್ದಂತಹ ಈ ದೇಶದ ಪ್ರಧಾನ ಮಂತ್ರಿ ಆಗಿದ್ದವರ ಮನೆಯವರಿಗೆ ಈ ರಾಜ್ಯದಲ್ಲಿ ರಕ್ಷಣೆ ಇಲ್ಲ ಎಂದರೆ, ಅದಕ್ಕಿಂತ ಹೆಚ್ಚು ಉಲ್ಲೇಖ ಮಾಡಬೇಕಾದಂತಹ ಅವಶ್ಯಕತೆ ಇಲ್ಲವೆಂದು ನನಗನ್ನಿಸುತ್ತಿದೆ. ಮಾಜಿ ಪ್ರಧಾನ ಮಂತ್ರಿಯವರ ಕುಟುಂಬದವರಿಗೆ ಈ ರಾಜ್ಯದಲ್ಲಿ ರಕ್ಷಣೆ ಇಲ್ಲ. ಇಂತಹ ಗಲಾಟೆಗಳು ನಡೆದು ನಿಜವಾಗಿ ಪರೋಕ್ಷವಾಗಿ ಕುಮ್ಮಕ್ಕು ನೀಡುವ ವ್ಯವಸ್ಥೆ ನಡೆದಿದೆ ಎಂದು ಪತ್ರಿಕೆಗಳಲ್ಲಿ ಓದಿದ್ದೇವೆ. ಅಷ್ಟರಮಟ್ಟಿಗೆ ಈ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದಿದೆ. ಕಂಬಾಲಪಲ್ಲಿಯಲ್ಲಿ ನಡೆದು ದಲಿತರ ನರಮೇಧ. ಆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆ ಚರ್ಚೆಯ ಹಿನ್ನೆಲೆಯಲ್ಲಿ ಈ ಸರ್ಕಾರ ಆಲೋಚನೆ ಮಾಡಬೇಕಾಗಿತ್ತು. ದಲಿತರ ಬಗ್ಗೆ ನಮ್ಮ ಸರ್ಕಾರ ಇನ್ನೂ ಕೂಡ ವ್ಯವಸ್ಥಿತವಾದ ಕಾರ್ಯಕ್ರಮ ಹಾಕಿಕೊಳ್ಳಲಿಲ್ಲ. ಅಕ್ಕಿ-ಆಲೂರಿನಲ್ಲಿ ಊರಿನಲ್ಲಿರುವವರಿಗೆ ಬದುಕುವುದಕ್ಕೆ ಬಿಡುವುದಿಲ್ಲ. ಒಬ್ಬ ಸತ್ತ ವ್ಯಕ್ತಿಯನ್ನು ದಹನ ಮಾಡುವುದಕ್ಕೆ ಹೋಗುವುದಕ್ಕೆ ಕೂಡ ಹರಿಜನ ಕುಟುಂಬದವರಿಗೆ ಸಾಧ್ಯವಿಲ್ಲವೆಂದರೆ ಆ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಅಕ್ಕಿ-ಆಲೂರಿನ ಘಟನೆ ಏನಾಗಿತ್ತು? ಶವ ಸಂಸ್ಕಾರಕ್ಕೆ ಹೋಗುವ ದಾರಿ ಏನಿದೆ ಅದನ್ನು ಸಮರ್ಪಕವಾಗಿ ದಲಿತರಿಗೆ ಬಿಡಿಸಿ ಕೊಡುವುದಕ್ಕೆ ಈ ರಾಜ್ಯದ ಆಡಳಿತ ಮಾಡುವವರಿಗೆ ಆಗುವುದಿಲ್ಲ. ನಾವು ದಲಿತರ ಪರವಾಗಿದ್ದೇವೆಂದು ಘೋಷಣೆ ಮಾಡುತ್ತಾರೆ. ಅಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಇದು ಪೂರ್ವನಿಯೋಜಿತ ಸಂಚು. ಅಲ್ಲಿರುವ ಅಧಿಕಾರಿಗಳು ಎಲ್ಲರೂ ಒಂದೇ ವರ್ಗಕ್ಕೆ ಸೇರಿದವರು. ಅವರ ಕುಮ್ಮಕ್ಕು ಇದೆ ಎಂದು ಹೇಳುವ ವ್ಯವಸ್ಥೆ ಇತ್ತು. ಅಲ್ಲಿರುವಂತಹ ಆಡಳಿತ ವ್ಯವಸ್ಥೆ ಪೂರ್ತಿ ಒಂದೇ ವರ್ಗಕ್ಕೆ ಸೇರಿದೆ. ಹರಿಜನರ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಈ ಸರ್ಕಾರ ಏನು ಮಾಡುತ್ತಿದೆ? ಅವರು ಯಾವ ರೀತಿ ಇರಬಹುದು? ಕನಿಷ್ಟ ಒಂದು

ಮಾನವೀಯ ಸೌಜನ್ಯವಾದರೂ ಈ ಸರ್ಕಾರಕ್ಕೆ ಇದ್ದರೆ, ಈ ರಾಜ್ಯದಲ್ಲಿ ತುಳಿತಕ್ಕೆ ಒಳಗಾದವರಿಗೆ ಕನಿಷ್ಟ ಬದುಕುವ ಹಕ್ಕನ್ನು ಕೊಡುವ ವ್ಯವಸ್ಥೆ ಈ ಸರ್ಕಾರದಿಂದ ಆಗಬೇಕಾಗಿತ್ತು. ಆದ್ದರಿಂದ ಅತ್ಯಂತ ನಿಕೃಷ್ಟ ರೀತಿಯಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿದೆ ಎಂದು ಹೇಳಬೇಕಾಗಿದೆ. ಧಾರವಾಡ, ಹಾವೇರಿ, ಚಾಮರಾಜನಗರ ಮತ್ತು ಮಂಡ್ಯದಲ್ಲಿ ನಡೆದ ಗುಂಪು ಘರ್ಷಣೆ ಎಷ್ಟು ಭೀಕರವಾಗಿತ್ತು. ಮುಖ್ಯಮಂತ್ರಿಯವರ ಊರಿನಲ್ಲಿ ದಿನನಿತ್ಯ ಗಲಾಟೆ, ಮಂಡ್ಯದಲ್ಲಿ ಗಲಾಟೆ ಇಲ್ಲದ ದಿನ ಇಲ್ಲ. ಮಂಡ್ಯ ಮೈಸೂರು ಹೆದ್ದಾರಿಯಲ್ಲಿ ದಿನವೂ ಬಂದ್, ಎಷ್ಟು ಜೀಪ್ ಸುಟ್ಟಿದ್ದಾರೊ ಗೊತ್ತಿಲ್ಲ. ಅದನ್ನೂ ಕೂಡ ಸದನಕ್ಕೆ ತಿಳಿಸಬೇಕು. ದಿನಕ್ಕೆ ಒಂದೆರಡು ಪೋಲಿಸ್ ಜೀಪ್‌ಗಳಿಗೆ ಬೆಂಕಿ ಇಡುತ್ತಾರೆ. ಒಬ್ಬ ಸಾಮಾನ್ಯ ಹುಡುಗಿ ಮಂಡ್ಯದಲ್ಲಿ ಮರ್ಯಾದೆಯಿಂದ ಓಡಾಡುವುದಕ್ಕೆ ಆಗುತ್ತಿಲ್ಲ. ಈ ರಾಜ್ಯದ ಮುಖ್ಯಮಂತ್ರಿಗಳು ನಮಗೆ ಹೇಳಬೇಕು. ಅಲ್ಲಿಯೂ ಕೂಡ ರಾಜಕಾರಣವಾಗುತ್ತಿದೆ. ಒಂದು ಕಡೆಯಿಂದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಗೃಹ ಮಂತ್ರಿಗಳಾಗಿ ಅವರ ವ್ಯವಸ್ಥೆಯನ್ನು, ಅವರ ಪವರನ್ನು ರಾಜ್ಯದಲ್ಲಿ ತೋರಿಸಿ ಮಾನ್ಯ ಮುಖ್ಯಮಂತ್ರಿಯವರ ಮುಖಕ್ಕೆ ಮಸಿ ಬಳಿಯುವ ಪ್ರಯತ್ನ ಮಾಡುತ್ತಿದ್ದಾರೆಂಬ ಮಾತನ್ನು ಕೇಳುತ್ತಿದ್ದೇವೆ. ಇನ್ನೊಂದು ಕಡೆ ಮಾನ್ಯ ಮುಖ್ಯಮಂತ್ರಿಗಳು, ಸ್ವತಃ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅವರ ಕ್ಷೇತ್ರದಲ್ಲಿ, ಗೃಹ ಇಲಾಖೆಯಲ್ಲಿ ವಿಫಲರಾಗಿದ್ದಾರೆಂದು ತೋರಿಸುವ ರೀತಿಯಲ್ಲಿ ರಾಜ್ಯದಲ್ಲಿ ಕೆಲಸ ಆಗುತ್ತಿದೆ. ಇವರಿಬ್ಬರ ಜಗಳ ಇಡೀ ರಾಜ್ಯದಲ್ಲಿ ಜನಸಾಮಾನ್ಯರ ಬದುಕನ್ನು ಜಂಜಾಟದ ಮಧ್ಯೆ ಸಿಕ್ಕಿಸಿರುವುದು ಗೊತ್ತಾಗುತ್ತಿದೆ. ನಾನು ಕೇಳುತ್ತಿದ್ದೇನೆ, ಒಂದು ಸಾವಿರ ಕೋಟಿ ರೂಪಾಯಿಗಳನ್ನು ಪೋಲೀಸ್ ವ್ಯವಸ್ಥೆಗೆ ಕೇಂದ್ರ ಸರ್ಕಾರ ಈ ರಾಜ್ಯಕ್ಕೆ ಕೊಡುವ ವ್ಯವಸ್ಥೆ ಮಾಡಿದೆ ಎಂದು ನಮಗೆ ಗೊತ್ತಾಗಿದೆ. ರಾಜ್ಯ ಸರ್ಕಾರ ಅದರ ಪಾಲು ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ರಾಜ್ಯ ಸರ್ಕಾರದಲ್ಲಿ ದುಡ್ಡು ಇಲ್ಲ. ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಒಂದು ಸಾವಿರ ಕೋಟಿ ರೂಪಾಯಿಗಳನ್ನು ರಾಜ್ಯದಲ್ಲಿ ಪೋಲೀಸ್ ವ್ಯವಸ್ಥೆ ಸುಧಾರಣೆಗಾಗಿ ಕೊಡುತ್ತಿದೆ ಎಂದು ಹೇಳಿದಾಗ ಅದರ ಕಾಂಟ್ರಿಬ್ಯೂಷನ್ ಪಡೆದುಕೊಳ್ಳುವ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಏಕೆ ಮಾಡುತ್ತಿಲ್ಲ?

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಸದಾನಂದಗೌಡರು ನಮ್ಮ ರಾಜ್ಯ ಸರ್ಕಾರದಲ್ಲಿ ದುಡ್ಡು ಇಲ್ಲವೆಂದು ಹೇಳುತ್ತಿದ್ದಾರೆ. ಯು.ಪಿ. ಸರ್ಕಾರದಲ್ಲಿ ದುಡ್ಡು ಇದೆಯಾ? ಸದಾನಂದಗೌಡರೆ, ನಿಮ್ಮ ಪಕ್ಷ ಆಡಳಿತದಲ್ಲಿರುವ ಉತ್ತರ ಪ್ರದೇಶದಲ್ಲಿ ಲಾಟ್ ಲಾಟ್ ದುಡ್ಡು ಇದೆಯೇ? ಸರ್ಕಾರ ಎಂದ ಮೇಲೆ ಪ್ರತಿ ದಿನ ದುಡ್ಡು ಬರುತ್ತಿರುತ್ತದೆ, ಹಾಗೆಯೇ ಖರ್ಚೂ ಕೂಡ ಆಗುತ್ತಿರುತ್ತದೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಈ ಸರ್ಕಾರದವರು ಹೈಟೆಕ್‌ಗೆ ಖರ್ಚು ಮಾಡುವ ಹಣವನ್ನು ಬೇರೆ ಕ್ಷೇತ್ರಗಳಿಗೂ ಖರ್ಚು ಮಾಡಿದರೆ ಕರ್ನಾಟಕದ ಜನತೆಗೆ ಒಳ್ಳೆಯದಾಗುತ್ತದೆ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಾನಂದಗೌಡರು ಇದ್ದದ್ದನ್ನು ಇದ್ದ ಹಾಗೆ ಮಾತನಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಇವರು ಸ್ವಲ್ಪ ಉತ್ಪ್ರೇಕ್ಷೆ ಮಾಡಿ ಮಾತನಾಡುತ್ತಿದ್ದಾರೆ. ಮಾನ್ಯ ಯು.ಆರ್.ಸಭಾಪತಿಗಳು ಸೌತ್ ಕೆನರಾ ಬಗ್ಗೆ ಮಾತನಾಡಿದರು ಎಂದು ಅವರಿಗೆ ಉತ್ತರ ಹೇಳಲು ನೀವು ಮಾತನಾಡುತ್ತಿದ್ದೀರೋ ಹೇಗೆ?

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಸಭಾಪತಿಗಳಿಗೆ ಮಾತ್ರವಲ್ಲ, ನಿಮಗೆಲ್ಲರಿಗೂ ಕೂಡ ಉತ್ತರ ಹೇಳುವ ಕಾಲ ಬರುತ್ತದೆ. ನೀವೇನೂ ಈಗ ಗಡಿಬಿಡಿ ಮಾಡಬೇಡಿ. ಮಾನ್ಯ ಅಧ್ಯಕ್ಷರೆ, ಇಂದು ಗೃಹ ಇಲಾಖೆ ಪ್ರತಿದಿನ ಕನಿಷ್ಠರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕೊಲೆ ಸುಲಿಗೆಗಳು, ರಸ್ತೆ ದರೋಡೆಗಳು ನಡೆಯುತ್ತಿವೆ. ಬೆಂಗಳೂರಿನಲ್ಲಿ ಶಾಲೆಗೆ ಹೋಗುವ ಮಕ್ಕಳನ್ನು ಅಪಹರಣ ಮಾಡಿ ದುಡ್ಡು ಕೇಳುವುದು ಜಾಸ್ತಿಯಾಗಿದೆ. ಬೀದಿ ಬೀದಿಯಲ್ಲಿ ಗುಂಪು ಘರ್ಷಣೆಗಳು ಜಾಸ್ತಿಯಾಗಿದೆ. ಇಲ್ಲಿ ಪೋಲೀಸರು ಇದ್ದಾರೆಯೇ ಅಥವಾ ಅವರು ಇದ್ದೂ ಇಲ್ಲದವರ ಹಾಗೆ ನಟನೆ ಮಾಡುತ್ತಿದ್ದಾರೆಯೇ? ಇದು ನನಗೆ ಗೊತ್ತಾಗುತ್ತಿಲ್ಲ. ಪಟ್ಟಣ ಪ್ರದೇಶಗಳಲ್ಲಿ ಮಾಫಿಯಾಗಳು ಜಾಸ್ತಿಯಾಗಿ ಇಂದು ಕರ್ನಾಟಕ ರಾಜ್ಯ ಇಡೀ ದೇಶಕ್ಕೆ ಕೇಂದ್ರ ಸ್ಥಾನವಾಗುತ್ತಿದೆ. ಬಾಂಬೆ ಮತ್ತಿತರ ಕಡೆಗಳಿಂದ ಕರ್ನಾಟಕ ರಾಜ್ಯಕ್ಕೆ ಬರುವ ಮಾಫಿಯಾಗಳಿಂದ ಇಲ್ಲಿ ಅಕ್ರಮ ಚಟುವಟಿಕೆಗಳು ಜಾಸ್ತಿಯಾಗಿದೆ. ಬಹುಶಃ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಬಾಂಬೆಯ ಮಾಫಿಯಾಗಳಿಗೆ ಅತ್ಯಂತ ಸ್ವರ್ಗದ ಜಾಗವಾಗಿದೆ. ಪೋಲೀಸರ ಜೊತೆ ಷಾಮೀಲು ಆಗಿದ್ದಾರೆ. ಬಹುಶಃ ಆಡಳಿತದವರ ಹತ್ತಿರ ಷಾಮೀಲಾಗಿದ್ದಾರೋ ಏನೋ ನನಗೆ ಗೊತ್ತಿಲ್ಲ. ಇಂದು ಇವರು ಸ್ವತಂತ್ರವಾಗಿ ಯಾರ ಭಯವೂ ಇಲ್ಲದೇ ಇರುವುದರಿಂದ ಜನರು ತಮ್ಮ ಸ್ವಂತ ದುಡಿಮೆಯಲ್ಲಿ ಶಾಂತಿಯಿಂದ ಜೀವನ ನಡೆಸುವುದಕ್ಕೆ ಆಗುತ್ತಿಲ್ಲ. ಈ ರೀತಿಯ ಭಯದ ವಾತಾವರಣದ ವ್ಯವಸ್ಥೆ ಇರುವುದಕ್ಕೆ ನಮ್ಮ ಗೃಹ ಮಂತ್ರಿಗಳು ಏನಾದರೂ ಸ್ಪಂದಿಸುತ್ತಾರೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ನನ್ನ ಕರಾವಳಿಜಿಲ್ಲೆ ಹಿಂದಿನಿಂದಲೂ ಅತ್ಯಂತ ಸಜ್ಜನರ ಹಾಗೂ ಶಾಂತಿಪ್ರಿಯರ ಜಿಲ್ಲೆಯಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಗಂಭೀರ ಸ್ವರೂಪ ಪಡೆದು ದಿನನಿತ್ಯ ಗುಂಪು ಗಲಭೆಗಳು, ದಲಿತರ ಹತ್ಯೆಗಳು ನಡೆಯುತ್ತಿವೆ. ಇತ್ತೀಚೆಗೆ ಮಂಗಳೂರು ಜಿಲ್ಲೆಯ ಭಂಟ್ವಾಳ ತಾಲ್ಲೂಕಿನ ಕಾವಲಗೋಡು ಗಜಕೋಡಿ ಎನ್ನುವ ಕಡೆ ಶಿವಪ್ಪ ಬಂಗೇರ ಎನ್ನುವ ದಲಿತರ

ಹತ್ಯೆಯಾಗಿದೆ. ಇದು ಉಸ್ತುವಾರಿ ಸಚಿವರ ಕ್ಷೇತ್ರದಲ್ಲಿಯೇ ಬರುತ್ತದೆ. ಹತ್ಯೆಯಾದವರು ಪರಿಶಿಷ್ಟ ಜಾತಿ ವಿವಿಧೋದ್ದೇಶ ಸಹಕಾರಿ ಸಂಘದ ಜಿಲ್ಲೆಯ ಅಧ್ಯಕ್ಷರಾಗಿದ್ದವರು. ಈ ವ್ಯಕ್ತಿಪರಿಶಿಷ್ಟ ಜಾತಿ/ಪಂಗಡಗಳ ಜನತೆಯ ಎಲ್ಲ ಸಮಸ್ಯೆಗಳಿಗೆ ಸ್ಪಂಧಿಸುತ್ತಿದ್ದವನಾಗಿದ್ದವನು. ರಾಜಾರೋಷವಾಗಿ ದಲಿತ ಜನಾಂಗದ ಮೇಲೆ ಸವಾರಿ ಮಾಡುವ ರಾಜಕೀಯ ಪ್ರತಿಯರೋಧದ ಜನಗಳೇ ಒಂದು ದಿನ ರಾತ್ರಿ ಇವರ ಮನೆಯ ಬಾಗಿಲು ಬಡಿದು ದಾರಿ ಕೇಳುವ ನೆಪದಲ್ಲಿ ಹೊರಗೆ ಕರೆದು ಶಿವಪ್ಪ ಬಂಗೇರನ ರುಂಡವನ್ನು ಕತ್ತರಿಸಿದ್ದಾರೆ. ಅದೇ ದಿವಸ ರಾತ್ರಿ ಪಕ್ಕದಲ್ಲಿಯ ಸ್ಥಳದಲ್ಲಿ ಕಂಬಳ ನಡೆಯುತ್ತಿತ್ತು, ಕಂಬಳದಿಂದ ಬಂದಂಥ ಜನಗಳೇ ಮಾಡಿದ್ದಾರೆ ಎನ್ನುವ ಸುದ್ಧಿ ಕೂಡ ನಮಗೆ ಬಂದಿದೆ. ನಿಜವಾಗಿಯೂ ಇದಕ್ಕೆ ಯಾರು ಪ್ರಚೋದಕರು? ಇಂದು ಕಾನೂನು ಸುವ್ಯವಸ್ಥೆಯಾಗಿದೆಯೇ? ಪರಂಗಿ ಪೇಟೆಯ ಜಾತ್ರೆಯಲ್ಲಿಯೂ ಕೂಡ ಜಾತ್ರೆ ಮುಗಿಸಿಕೊಂಡು ಬರುತ್ತಿದ್ದವರಲ್ಲಿ ಎರಡು ಜನರನ್ನು ಒಂದು ದಿನ, ಮತ್ತೆರಡು ಜನರನ್ನು ಒಂದು ದಿನ ಕಡಿದರು. ಪತ್ರಿಕೆಯಲ್ಲಿ ಏನು ಸುದ್ಧಿ ಬಂತೆಂದರೆ ಕೋಮು ಗಲಭೆಗಳು ಎಲ್ಲೆಲ್ಲಿ ಆಗುತ್ತವೆಯೋ ಆ ಕೋಮು ಗಲಾಟೆಯಾದ ಸ್ಥಳಗಳಲ್ಲಿ ಕೋಮು ದ್ವೇಷದ ವಿಚಾರದಲ್ಲಿ ಪ್ರತೀಕಾರ ಮಾಡುವ ಸಲುವಾಗಿ ಪರಂಗಿಪೇಟೆಯನ್ನು ಒಂದು ಕೇಂದ್ರವನ್ನಾಗಿ ಮಾಡಿಕೊಳ್ಳುತ್ತಾರೆ ಎಂದು ಹೇಳಲಾಗಿದೆ. ಇಂದು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅಪರಾಧಿಗಳನ್ನು ಸಾಕುವವರ ಸಂಖ್ಯೆ ಜಾಸ್ತಿಯಾಗಿದೆ. ಅಪರಾಧಿಗಳು ಬೇರೆ ಬೇರೆ ವಿಚಾರಗಳಲ್ಲಿ ಅವರ ದಾಕ್ಷಿಣ್ಯಕ್ಕೋಸ್ಕರ ಅವರ ಜೊತೆ ಇರುತ್ತಾರೆ. ಕಾಣದ ಕೈಗಳು ಈ ಕೆಲಸವನ್ನು ಇಂದು ಮಾಡುತ್ತಿವೆ. ಮೊನ್ನೆ ದಿನ ಕಾಣದ ಕೈಗಳನ್ನು ಪ್ರಥಮ ಹಂತದಲ್ಲಿಯೇ ತುಂಡರಿಸಬೇಕೆಂದು ಡಿ.ಸಿ. ಮತ್ತು ಎಸ್.ಪಿಯವರಿಗೆ ಹೇಳಿದ್ದೇವೆ. ಇಂದು ನಿರಂತರವಾಗಿ ಕಾಣದ ಕೈಗಳ ಕೆಲಸ ಹೆಚ್ಚಾಗಿ ನಡೆಯುತ್ತಿದೆ. ಭೂಗತ ದೊರೆಗಳ ನಿಕಟ ಸಂಪರ್ಕ ಹೊಂದಿರುವ ಜನಗಳು ಹೆಚ್ಚಾಗಿದ್ದಾರೆ. ಇಂದು ಇಂಥ ಸಾವಿರಾರು ಜ್ವಲಂತ ಸಮಸ್ಯೆಗಳು ಗೃಹ ಇಲಾಖೆಯಿಲ್ಲದೆ. ಇದಕ್ಕೆ ಅಗತ್ಯವಾದ ವ್ಯವಸ್ಥೆಗಳನ್ನು ಮಾಡದೇ ಇರುವುದು ದುರಂತಕರವಾದುದೇ ಆಗಿದೆ. ಡಾ||ರಾಜ್‌ಕುಮಾರ್ ಅಪಹರಣದಲ್ಲೂ ಕೂಡ ಒಂದು ಸುದ್ಧಿ ಬಂದಿದೆ. ಏನೆಂದರೆ ಇಂದು ಎಸ್.ಟಿ.ಎಫ್. ನವರು ವೀರಪ್ಪನ್‌ನನ್ನು ಹುಡುಕುವುದಕ್ಕಿಂತ ವೀರಪ್ಪನ್‌ಗೆ ರಾಜ್ ಬಿಡುಗಡೆಯಾಗಿ ಸಂದಾಯವಾದ ಹಣವನ್ನು ಎಲ್ಲಿ ವೀರಪ್ಪನ್ ಬಚ್ಚಿಟ್ಟಿದ್ದಾನೆ ಎಂದು ಹುಡುಕುತ್ತಿದ್ದಾರೆ ಎನ್ನುವ ಮಾತುಗಳು ಕೇಳಿ ಬರುತ್ತಿವೆ. ಸರ್ಕಾರ ಅದಕ್ಕೆ ಉತ್ತರ ಕೊಡುತ್ತಿಲ್ಲ. ಆಡಳಿತದ ತೊಂದರೆ ಇರಬಹುದೇನೋ? ಒಟ್ಟಾರೆ ಇದರ ಬಗ್ಗೆ ಸರ್ಕಾರ ಗಮನ ಹರಿಸಲಿಲ್ಲ. ಈ ಸರ್ಕಾರ ಸಾಮಾನ್ಯ ಜನರು ಬದುಕುವುದಕ್ಕೆ ಅವಕಾಶ ಮಾಡಿಕೊಡುತ್ತಾರೋ ಅಥವಾ ಗೂಂಡಾ ಸಾಮ್ರಾಜ್ಯವನ್ನು ನಿರ್ಮಾಣಮಾಡುತ್ತಾರೋ ಹೇಗೆ ಎಂದು ಮುಖ್ಯಮಂತ್ರಿಗಳು ಹೇಳಬೇಕು. ಇಂದು ಕೇಂದ್ರ ಸರ್ಕಾರ ಕೊಡುವ ಹಣವನ್ನು ರಾಜ್ಯ ಸರ್ಕಾರ

ಸದುಪಯೋಗಪಡಿಸಿಕೊಳ್ಳಬೇಕು. ಗೃಹ ಇಲಾಖೆಯನ್ನು ಇನ್ನಷ್ಟು ಚುರುಕುಗೊಳಿಸಬೇಕು. ಮುಖ್ಯಮಂತ್ರಿ ಹಾಗೂ ಗೃಹಮಂತ್ರಿಗಳ ಜಗಳದಲ್ಲಿ ರಾಜ್ಯದ ಜನರು ತೊಂದರೆಗೀಡಾಗಬಾರದು ಎಂದು ಮಾನ್ಯ ಅಧ್ಯಕ್ಷರ ಮೂಲಕ ಅವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಇಂದು ಉಡುಪಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಉಳಿಸಿಕೊಳ್ಳುವ ಸಲುವಾಗಿ ಶಾಸಕರ ಮತ್ತು ಮಂತ್ರಿಗಳ ನಡುವೆ ನಡೆಯುತ್ತಿರುವ ಕಚ್ಚಾಟಗಳು ನಿಂತರೆ ಒಳ್ಳೆಯದು. ಇಂದು ಅಲ್ಲಿ ಮಂತ್ರಿಗಳ ಮತ್ತು ಶಾಸಕರ ನಡುವೆ ಜಗಳಗಳು ನಡೆದು ಪೋಲೀಸ್ ಸ್ಟೇಷನ್‌ನಲ್ಲಿ ದೂರು ಕೊಡುವ ಮಟ್ಟದಲ್ಲಿ ನಡೆಯುತ್ತಿದೆ. ಇದು ಒಳ್ಳೆಯ ಸಂಕೇತವಲ್ಲ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಇಂದು ಈ ಸರ್ಕಾರ ಪ್ರಾದೇಶಿಕ ಅಸಮತೋಲನದ ಬಗ್ಗೆ ಮತ್ತು ಸಮಗ್ರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಬಾರಿ ಹೇಳಿಕೆಗಳನ್ನು ಕೊಡುತ್ತಿದೆ. ರಾಜ್ಯಪಾಲರ ಭಾಷಣದಲ್ಲಿ ಮಹಾಜನ್ ಆಯೋಗದ ವರದಿ ಬಗ್ಗೆ ನಾವು ಪೂರ್ಣ ಬದ್ಧರು ಎಂದು ಹೇಳಿದ್ದಾರೆ. ಕೇವಲ ಹೇಳುತ್ತಿದ್ದಾರೆಯೇ ಹೊರತು ಅದರ ಬಗ್ಗೆ ಯಾವ ಕಾರ್ಯ ಕ್ರಮಗಳನ್ನು ಹಾಕಿಕೊಳ್ಳುತ್ತಿಲ್ಲ. ಕೇವಲ ರಾಜ್ಯಪಾಲರ ಭಾಷಣದಲ್ಲಿ ಹೇಳುವುದರಿಂದ ಕಾಸರಗೋಡಿನ ಕನ್ನಡಿಗರ ಸಮಸ್ಯೆ ಪರಿಹಾರವಾಗುತ್ತದೆಯೇ? ಬೆಳಗಾಂ ಪ್ರದೇಶದ ಸಮಸ್ಯೆ ಪರಿಹಾರವಾಗುತ್ತದೆಯೇ? 1956ರಿಂದಲೂ ಈ ಸಮಸ್ಯೆ ಬಗ್ಗೆ ಈ ಸದನದಲ್ಲಿ ಮತ್ತು ಹೊರಗಡೆ ಅನೇಕ ಪ್ರಸ್ತಾವಗಳು ಬಂದು ಚರ್ಚೆಯಾಗಿದೆ. ಈಗ ಈ ವಿಚಾರದಲ್ಲಿ ಮಹಾರಾಷ್ಟ್ರ ಸರ್ಕಾರದವರು ಮತ್ತು ಅಲ್ಲಿಯ ಮುಖಂಡರು ಸುಪ್ರೀಂ ಕೋರ್ಟ್‌ಗೆ ಹೋಗುತ್ತಾರೆನ್ನುವ ಸುದ್ದಿಯನ್ನು ನಾನು ಕೇಳಿದ್ದೇನೆ. ಆದರೆ ನಮ್ಮ ರಾಜ್ಯ ಸರ್ಕಾರದವರು ಮಹಾಜನ್ ಆಯೋಗದ ವರದಿಗೆ ಬದ್ಧ ಎನ್ನುವ ಮಾತನ್ನು ಹೇಳುವುದನ್ನು ಬಿಟ್ಟರೆ ಬೇರೆ ಯಾವುದೇ ಮಾತನ್ನು ಅವರು ಉಲ್ಲೇಖ ಮಾಡುತ್ತಿಲ್ಲ. ದೆಹಲಿಯಲ್ಲಿ ಇಂದು ಒಳ್ಳೆಯ ಸರ್ಕಾರವಿದೆ. ಇಂದು ನಾವೆಲ್ಲಾ ಒಟ್ಟಾಗಿ ದೆಹಲಿಗೆ ಹೋಗಿ ಕೇಂದ್ರ ಸರ್ಕಾರ ಮಹಾಜನ್ ಆಯೋಗದ ವರದಿಯನ್ನು ಅನುಷ್ಠಾನ ಮಾಡಬೇಕೆಂದು ಕನ್‌ವಿನ್ಸ್ ಮಾಡಿದರೆ ಅದನ್ನು ಕೇಳುವಂಥ ಸರ್ಕಾರವೇ ದೆಹಲಿಯದಲ್ಲಿದೆ. ಆದರೆ ರಾಜ್ಯ ಸರ್ಕಾರ ಅದರ ಬಗ್ಗೆ ಪ್ರಯತ್ನ ಪಡುತ್ತಿಲ್ಲ. ಏಕೆ ಪ್ರಯತ್ನ ಪಡುತ್ತಿಲ್ಲ?

ಅಧ್ಯಕ್ಷರು: ಮಾನ್ಯ ನಾಡಗೌಡರೆ, ಮಾನ್ಯ ಸದಸ್ಯರು ಮಾತನಾಡುವಾಗ ಅವರು ಏನು ಮಾತನಾಡುತ್ತಾರೆ ಎಂಬುದನ್ನು ನೋಟ್ ಮಾಡಿಕೊಳ್ಳಲು ಇಲ್ಲಿ ಯಾರಾದರೂ ಮಂತ್ರಿಗಳು ಇರಬೇಕಲ್ಲವೆ? ವಿಧಾನಸಭೆಗೆ ಮತ್ತು ವಿಧಾನಪರಿಷತ್ತಿಗೆ 22 ಜನರಂತೆ

ಅಲಾಟ್ ಮಾಡಿರುವಾಗ ಈ ರೀತಿ ಸದನದಲ್ಲಿ ಅವರುಗಳು ಇಲ್ಲದಿದ್ದರೆ ಹೇಗೆ?

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಕೋಣನ ಮುಂದೆ ಕಿಂಜರಿ ಬಾರಿಸಿದ ಹಾಗೆ ಆಗುವುದರಿಂದ ನೀವು ಹೇಳಿದ ವಿಷಯವನ್ನು ನಾವು ಪ್ರಸ್ತಾಪ ಮಾಡಬಾರದೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನೀವೇ ಮಂತ್ರಿಗಳನ್ನು ಕರೆಸಲು ಮುಂದಾಗಿರುವುದು ಅತ್ಯಂತ ಸ್ವಾಗತಾರ್ಹವಾದುದೇ ಆಗಿದೆ. ನೀವು ಈ ರೀತಿ ಬಿಗು ನಿಲುವನ್ನು ತೆಗೆದುಕೊಳ್ಳುವುದೇ ಒಳ್ಳೆಯ ಕ್ರಮ. ಅಧಿಕಾರಿಗಳೂ ಕೂಡ ಇಲ್ಲ, ಆದುದರಿಂದ ನೀವು ಆ ಕಡೆಗೂ ಸ್ವಲ್ಪ ನೋಡಬೇಕಾಗುತ್ತದೆ. ಈ ಸರ್ಕಾರಕ್ಕೆ ಯಾರ ಹಿಡಿತವೂ ಇಲ್ಲ ಎನ್ನುವಂತೆ ಆಗಿದೆ.

ಅಧ್ಯಕ್ಷರು: ಸಾಮಾನ್ಯವಾಗಿ ವಿರೋಧಪಕ್ಷದ ನಾಯಕರು ಮಾತನಾಡುವಾಗ ಅಧಿಕಾರಿಗಳು ಸದನದಲ್ಲಿದ್ದು ಸದಸ್ಯರುಗಳು ಏನು ಮಾತನಾಡಿದರು ಎಂಬುದನ್ನು ನೋಟ್ ಮಾಡಿಕೊಂಡು ಮಂತ್ರಿಗಳು ಏನು ಉತ್ತರವನ್ನು ಹೇಳಬೇಕು ಎಂಬುದನ್ನು ಮಂತ್ರಿಗಳಿಗೆ ನೋಟ್ ಮಾಡಿಕೊಟ್ಟರೆ ಮಂತ್ರಿಗಳು ನಾಳೆ ಉತ್ತರ ಹೇಳಲು ಅನುಕೂಲವಾಗುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿನ ಇಲ್ಲಿ ಕಾನೂನು ಸಚಿವರು ಹೇಳಿದ್ದಾರೆ

11.40 ಎಎಂ

ಬೇರೆ ಏನು ಮಾಡುತ್ತಿಲ್ಲ. ನಮ್ಮ ಚಟ ತೀರಿಸಿಕೊಳ್ಳುವುದಕ್ಕೆ ನಾವು ಮಾತನಾಡುತ್ತೇವೆ. ಅವರು ಏನು ಉತ್ತರ ಕೊಡುತ್ತಾರೋ ನಮಗೆ ಗೊತ್ತಿಲ್ಲ. This is exactly what is happening. ತಾವೇನು ಈಗ ಆಡಳಿತ ಪಕ್ಷದವರನ್ನು ಕರೆಯುವುದಕ್ಕೆ ಹೇಳಿದಿರಿ ಅದು ಬಹಳ ಒಳ್ಳೆಯ ಕೆಲಸ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಇಲ್ಲಿ ವೈಕುಂಠ ಬಾಳಿಗರವರು ಹಿಂದೆ, ತಾವು ಕುಳಿತುಕೊಂಡಿರುವಂಥ ಸ್ಥಾನದಲ್ಲಿ ಅವರು ಕುಳಿತುಕೊಂಡಿದ್ದರು. 1956ರಲ್ಲಿ ಅವರು ತಮ್ಮ ಪ್ರಥಮ ಭಾಷಣದಲ್ಲಿ ಕಾಸರಗೋಡು ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಕಾಸರಗೋಡು ಜನರ ಪರಿಸ್ಥಿತಿ ಇವತ್ತು ಏನಾಗಿದೆ ಗೊತ್ತೆ? ನೀವು ನನ್ನ ಜೊತೆ ಬರಬೇಕು. ಕಾಸರಗೋಡಿನ ಭಾಗದಲ್ಲಿ ಇರುವಂತಹ ಜನ ಅವರ ದಿನನಿತ್ಯದ ಎಲ್ಲಾ ವ್ಯವಹಾರಗಳು ಕನ್ನಡದಲ್ಲಿ ದಿನಚರಿಗಳು ಕನ್ನಡದಲ್ಲಿ, ಅಲ್ಲಿ ಹೈಸ್ಕೂಲುಗಳು ಇರುವಂಥಾದ್ದು ಕನ್ನಡದಲ್ಲಿ. ಆದರೆ ಬಲಾತ್ಕಾರವಾಗಿ ಆ ಭಾಗದ

ಜನಗಳ ಮೇಲೆ ಮಲೆಯಾಳಿ ಭಾಷೆ ಹೇರಲ್ಪಟ್ಟಿದೆ. ಸುದೀರ್ಘವಾದಂತಹ ಅವರ ಬೇಡಿಕೆಗಳಿದ್ದರೂ ಕೂಡ ಇದುವರೆಗೆ ಅವರ ಬೇಡಿಕೆಗಳಿಗೆ ಮನ್ನಣೆ ಸಿಕ್ಕಿಲ್ಲ. ಅಲ್ಲಿಯ ಒಂದು ವ್ಯವಸ್ಥೆ ಹೇಗಿದೆ ಎಂದರೆ ನಾವು ಮಾತ್ರ ಅಲ್ಲ, ಮಹಾಜನ್ ಆಯೋಗದ ವರದಿಯನ್ನು ಅಂದಿನ ಮುಖ್ಯಮಂತ್ರಿಯಾಗಿದ್ದಂತಹ ಇ.ಎಂ.ಎಸ್. ನಂಬೂದರಿಪಾದ್ ಇರಬಹುದು, ಕೇರಳದ ಪ್ರಥಮ ಮುಖ್ಯಮಂತ್ರಿ ಪಟ್ಟತ್ತಾನ್ ಪಿಳ್ಳೆ ಇರಬಹುದು, ಇವರೆಲ್ಲಾ ಒಪ್ಪಿಕೊಂಡಿದ್ದಾರೆ. ಚಂದ್ರಗಿರಿ ಹೊಳೆಯ ಈ ಕಡೆ ಇರುವಂತಹ ಭಾಗ, ಚಂದ್ರಗಿರಿ ಹೊಳೆಯ ಆಚೆ ಕಡೆ ಇರುವ ಮೂರು ಗ್ರಾಮಗಳು ಆ ಭಾಗ ಪೂರ್ತಿ ಕನ್ನಡದಲ್ಲಿ ಇರುವಂಥಾದ್ದು. ಅದು ಕರ್ನಾಟಕಕ್ಕೆ ಸೇರಬೇಕು ಎಂದು ಕೂಡ ಇದೆ. ಆದರೆ ಅದನ್ನು ನಾವು ಇಂಪ್ಲಿಮೆಂಟ್ ಮಾಡುವುದಕ್ಕೆ ವಿಫಲರಾಗಿದ್ದೇವೆ. ಇವತ್ತು ಇದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದರೆ ಸಾಕಾಗುವುದಿಲ್ಲ. ನಾನು ವಿನಂತಿ ಮಾಡುತ್ತಿದ್ದೇನೆ, ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಲಿ. ನಮ್ಮ ಕೇಂದ್ರ ಸರ್ಕಾರಕ್ಕೆ ನಾವು ಒಂದು ನಿಯೋಗವನ್ನು ತೆಗೆದುಕೊಂಡು ಹೋಗೋಣ. ಕೇಂದ್ರ ಸರ್ಕಾರದ ಜೊತೆ ಇದರ ಬಗ್ಗೆ ಮಾತನಾಡೋಣ. ಕೇರಳ ಸರ್ಕಾರ ಇತ್ತೀಚೆಗೆ ಸ್ವಲ್ಪ ರಾಜಕೀಯ ಮಾಡುವುದಕ್ಕೆ ಪ್ರಾರಂಭ ಮಾಡಿದೆ. ನಾನು ಮೊನ್ನೆ ಪ್ರಸ್ತಾಪ ಮಾಡಿದೆ. ಕಾಸರಗೋಡು ಎನ್ನುವಂತಹ ಕನ್ನಡದ ಹೆಸರನ್ನು ತೆಗೆಯಬೇಕು ''ಕೊಳಕ್ಕನಾಡು'' ಎನ್ನುವಂತಹ ಮಲೆಯಾಳಿ ಹೆಸರನ್ನು ಬದಲಾವಣೆ ಮಾಡಬೇಕು, ಈ ಮೂಲಕ ಕನ್ನಡದ ಭಾಗವನ್ನು ಮಲೆಯಾಳೀಕರಣ ಮಾಡಬೇಕು ಎನ್ನುವ ಭಾವನೆ ಅವರಲ್ಲಿ ಇದೆ ಎಂದು ನಮಗೆ ಗೊತ್ತಾದ ಮೇಲೆ ನಾವು ಸುಮ್ಮನೆ ಕುಳಿತುಕೊಳ್ಳುವುದು ಅಷ್ಟು ಸಮಂಜಸವಾಗುವುದಿಲ್ಲ. ಇದರ ಬಗ್ಗೆ ಸ್ವಲ್ಪ ಹೆಚ್ಚಿನ ಮುತುವರ್ಜಿ ವಹಿಸಬೇಕು. ಕೇವಲ ಬಾಯಿ ಮಾತುಗಳಲ್ಲಿ ಹೇಳಿದರೆ ಆಗುವುದಿಲ್ಲವೆನ್ನುವ ವಿನಂತಿಯನ್ನು ನಾನು ತಮ್ಮ ಮುಂದೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯ ಒಂದು ಅಸಮತೋಲನ, ನಮ್ಮ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎನ್ನುವುದನ್ನು ಬಿಟ್ಟು ಸಮಗ್ರ ಕರ್ನಾಟಕ ಎಂದು ಮಾತನಾಡಬೇಕೆಂದು ಹೇಳುತ್ತಾರೆ. ಆದರೂ ಹೈಕೋರ್ಟ್ ಪೀಠದ ಬಗ್ಗೆ ಏನಾಯಿತು? ತಾಂತ್ರಿಕ ಕಾರಣ ಹೇಳಿ ಆ ಫೈಲ್‌ನ್ನು ಕ್ಲೋಜ್ ಮಾಡುವಂತಹ ಕೆಲಸಗಳನ್ನು ಇವರು ಮಾಡುತ್ತಿದ್ದಾರೆ. ಇದು ಸುಪ್ರಿಂ ಕೋರ್ಟ್‌ಗೆ ಬಿಟ್ಟಿದ್ದು, ಹೈಕೋರ್ಟ್‌ಗೆ ಬಿಟ್ಟಿದ್ದು, ನಮಗೆ ಸಂಬಂಧಪಟ್ಟಿದ್ದು ಅಲ್ಲ ಎಂದು ಹೇಳುತ್ತಾರೆ. ಆಡಳಿತ ಮಾಡುವ ಜನ ಜನರ ಸಮಸ್ಯೆಗಳು ಬಂದಾಗ ಮಾತುಕತೆ ಮೂಲಕ ಅದನ್ನು ಪರಿಹಾರ ಮಾಡುವ ವ್ಯವಸ್ಥೆಯನ್ನು ಅವರು ಮಾಡಬೇಕಿತ್ತು. ಆದರೆ ಇದುವರೆಗೂ ಆ ಪರಿಹಾರವನ್ನು ಮಾಡುವಂತಹ ಕೆಲಸ ಮಾಡಲಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ಕೇಂದ್ರದ ಕಾನೂನು ಮಂತ್ರಿಗಳು

ಹೇಳಿಕೆ ಕೊಟ್ಟಿದ್ದಾರೆ. ಅದು ಸಮಂಜಸವಾದುದಲ್ಲ, ಸಾಧುವಾದುದಲ್ಲ, ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠ ಮಾಡುವುದು ಬೇಡ ಎಂದು ಹೇಳಿದ್ದಾರೆ.

ಶ್ರೀ ಡಿ.ವಿ.ಸದಾನಂದಗೌಡ: ನೀವು ಅದನ್ನು ಕೇಳಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಲ್ಲ. ನಾವು ಅವರಿಗೆ ಇದು ಸಮಂಜಸವಾದುದು ಎಂದು ಕನ್‌ವಿನ್ಸ್ ಮಾಡಬೇಕು. ನೀವು ಹಿರಿಯರಿದ್ದೀರಿ. ನಿಮಗೆ ಎಲ್ಲರನ್ನು ಸಮಾಧಾನ ಮಾಡಿ ಹೇಳುವ ತಾಕತ್ತು ಇದೆ. ನೀವು ಮುತುವರ್ಜಿ ತೆಗೆದುಕೊಳ್ಳಿ, ಯಾರಾದರೂ ಬಂದು ಈ ಭಾಗಕ್ಕೆ ಬೇಡ, ಆಗುವುದಿಲ್ಲ ಎಂದರೆ ಬಿಟ್ಟು ಹೋಗುವುದೇ? ನೀವು ಯಾರೂ ಕೇಳುವುದಕ್ಕೆ ತಯಾರಿಲ್ಲ. ಆದರೆ ನಾವು ಮಾತನಾಡುವುದಕ್ಕೆ ತಯಾರಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ? ನೀವು ಕೇಳದಿದ್ದರೂ ಪತ್ರಿಕೆಯಲ್ಲಿ ಬಂದಿದ್ದನ್ನು ಜನ ಓದುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್: ಹೈಕೋರ್ಟ್ ನ್ಯಾಯಾಧೀಶರ ಒಂದು ಪೀಠ ಏನಿತ್ತು ಅದು ಕೊಡುವುದಕ್ಕೆ ಸಮರ್ಥನೆ ಮಾಡಿಲ್ಲ ಎಂದು ಹೇಳಿದ್ದಾರೆ. ನಾವು ನೀವು ಹೇಳುವುದಲ್ಲ. ಹೈಕೋರ್ಟ್ ವರದಿಯನ್ನು ಅವರು ಆಧರಿಸಿ ಹೇಳಿದ್ದಾರೆ. ಅಂತಹ ಪರಿಸ್ಥಿತಿ ಕೇಂದ್ರದಲ್ಲಿ ಬಂದರೆ ಹೇಗಾಗುತ್ತದೆ?

ಶ್ರೀ ಡಿ.ವಿ.ಸದಾನಂದಗೌಡ: ಅದಕ್ಕೆ ಸ್ವಲ್ಪ ದಿಟ್ಟತನ ಬೇಕು. ಆಡಳಿತ ಮಾಡುವವರಿಗೆ ಸ್ವಲ್ಪ ದಿಟ್ಟತನ ಬೇಕು. ಮತ್ತು ಅದನ್ನು ಯಾವ ರೀತಿಯಿಂದ ಪರಿಹಾರ ಮಾಡಬೇಕು ಎನ್ನುವಂತಹ ವ್ಯವಸ್ಥೆ ಬೇಕು. ಒಂದು ಯೋಚನೆ, ಮತ್ತೊಂದು ಯೋಜನೆ ಇದರ ಜೊತೆಯಲ್ಲಿ ಮುಂದಾಲೋಚನೆ ಕೂಡ ಇರಬೇಕು. ಈ ಮೂರು ಇಲ್ಲದೆ ಇದ್ದರೆ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ಸರ್ಕಾರ ಮಾಡಿದ ಹಾಗೆ ಆಗುತ್ತದೆ. ಈ ರೀತಿಯಲ್ಲಿ ದಿಟ್ಟ ಹೆಜ್ಜೆ ತೆಗೆದುಕೊಂಡು ಕೆಲಸ ಮಾಡುವಂತಹ ಪ್ರಯತ್ನಗಳು ಆದರೆ ಮಾತ್ರ ಈ ಪ್ರಾದೇಶಿಕ ಅಸಮತೋಲನ ಹೋಗುತ್ತದೆಯೇ. ಹೊರತು ಕೇವಲ ಸಮಿತಿ ಮಾಡಿದರೆ ಆಗುವುದಿಲ್ಲ. ಡಾ:ಅಲಗ್ ಸಮಿತಿ ಮಾಡಿದರು. ಸ್ವಲ್ಪದಿನ ಆದಮೇಲೆ ಅವರು ನನಗೆ ಜವಾಬ್ದಾರಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಬಿಟ್ಟುಬಿಟ್ಟರು. ಈಗ ಬದಲಾವಣೆ ಮಾಡಿದ್ದಾರೆ, ಅದು ಒಂದು ಕಾಲಹರಣ ತಂತ್ರವಾಗಿದೆಯೇ ಹೊರತು ಬೇರೆ ಏನೂ ಅಲ್ಲ ಎಂದು ಹೇಳುವಂತಹ ವಿಚಾರ ಸ್ಪಷ್ಟವಾದ ಕಾರಣ ಇದರ ಬಗ್ಗೆ ಕೂಡ ಒಂದು ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಅದೇ ರೀತಿ ಈ ಸರ್ಕಾರ ಇನ್ನೊಂದು ದೊಡ್ಡ ಭಾರೀ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಅದು ಗೊಂದಲಗಳನ್ನು ಸೃಷ್ಟಿ ಮಾಡುವುದು. ಆಡಳಿತ ವ್ಯವಸ್ಥೆಯಲ್ಲಿ ಗೊಂದಲ ನಿರ್ಮಾಣ

ಮಾಡುವುದು ಮತ್ತು ಅದಕ್ಕೆ ಪರಿಹಾರ ನಾವೇ ಮಾಡಿದ್ದೇವೆಂದು ಹೇಳುವುದು. ಅದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಹೌದು, ಎಂದು ಇದ್ದರೆ ಹೌದು ಎಂದು ಹೇಳಿ. ಇಲ್ಲ ಎಂದರೆ ಇಲ್ಲವೆಂದು ಹೇಳಿ. ಒಂದು ಶಾಲಾ ವೇಳೆಯನ್ನು ಬದಲಾವಣೆ ಮಾಡಿದಿರಿ. ಏನಾಯಿತು? ಕೊನೆಗೆ ಎಲ್ಲಿಗೆ ಬಂತು? ಮತ್ತೆ ಹಿಂದಕ್ಕೆ ಬಂದಿದ್ದೀರಿ? ಇದರಿಂದ ಇಡೀ ಸಮಾಜದಲ್ಲೊಂದು ಗೊಂದಲ ನಿರ್ಮಾಣ ಮಾಡಿದರು. ಇಡೀ ಶಾಲೆಗಳಲ್ಲಿ, ಹೆತ್ತವರಿಗೆ, ಮಕ್ಕಳಿಗೆ, ಊರಿನವರಿಗೆ ಅಧ್ಯಾಪಕರಿಗೆ ಗೊಂದಲ ನಿರ್ಮಾಣ ಮಾಡಿದರು. ಕೊನೆಗೆ ಎಲ್ಲವನ್ನು ಬಿಟ್ಟು ನಮ್ಮ ಹಳೇ ಕಂಬಳಿ ಲೇಸು ಎಂದು ಹೇಳಿ ಪುನಃ ಹಳೆ ಚಾಳಿಗೆ ಬಂದರು. ಇದರ ಅವಶ್ಯಕತೆ ಇತ್ತೆ? ಅಥವಾ ಅದನ್ನು ಈ ರೀತಿ ಮಾಡುವುದಿದ್ದರೂ ಕೂಡ ಅದಕ್ಕೆ ವ್ಯವಸ್ಥೆಗಳು ಇರಲಿಲ್ಲವೇ? ಈ ಸರ್ಕಾರ ಆ ಕೆಲಸವನ್ನು ಮಾಡುತ್ತಿದ್ದಾರೆ. ಇನ್ನು ಪರಿಶಿಷ್ಟ ಜನಾಂಗದ ಮೂರು ಜಾತಿಗಳನ್ನು ತೆಗೆದು ಹಾಕಬೇಕೆಂದು ಕ್ಯಾಬಿನೇಟ್‌ನಲ್ಲಿ ತೀರ್ಮಾನ ಮಾಡಿದರು. ಒಂದು ವಾರದ ನಂತರ ಪುನಃ ಏನು ಮಾಡಿದಿರಿ? ಇಲ್ಲ ಅದರಲ್ಲಿ ಇರಲಿ ಎಂದು ಹೇಳಿದಿರಿ. ಏಕೆ ಈ ಗೊಂದಲಗಳನ್ನು ನಿರ್ಮಾಣ ಮಾಡುವುದು? ಒಂದು ರೀತಿಯಲ್ಲಿ ತಾವು ಕರ್ತವ್ಯ ಯಶಸ್ವಿಯಾಗಿ ನಿರ್ವಹಣೆಯಾಗದೇ ಇದ್ದಾಗ ಆ ಕರ್ತವ್ಯದ ಬಗ್ಗೆ ಜನರ ಗಮನ ಬಂದಾಗ ಅವರ ಆ ದೃಷ್ಟಿಯನ್ನು ಬೇರೆ ಕಡೆಗೆ ಬದಲಿಸುವ ಒಂದು ವ್ಯವಸ್ಥೆ ಅದು. ಇನ್ನು ಪುರಸಭೆ ಚುನಾವಣೆ ಘೋಷಣೆ ಮಾಡಿದರು. ಚುನಾವಣೆ ಘೋಷಣೆ ಮಾಡುವುದು ಇವರಿಗೆ ಗೊತ್ತಿಲ್ಲವೇ? ಒಂದು ಆಡಳಿತ ಮಾಡುತ್ತಿರುವಂತಹ ಸರ್ಕಾರ ಅದರಲ್ಲಿ ಇರುವಂತಹ ಅಧಿಕಾರಿಗಳಿಗೆ ಗೊತ್ತಿಲ್ಲವೆ? ಯಾವುದು ಮೀಸಲಾತಿ ಮಾಡಬೇಕು, ಹೇಗೆ ಮಾಡಬೇಕೆಂದು? ಯಾವ ಮಾರ್ಗಸೂಚಿ ಇಲ್ಲದೆ ಮಾಡಿದರು. ಅದಕ್ಕೆ ಹೈಕೋರ್ಟ್‌ನವರು ಛೀಮಾರಿ ಹಾಕಿದರು. ಇದು ಸರ್ಕಾರದ ಬೇಜವಾಬ್ದಾರಿ ಕೆಲಸ ಅಲ್ಲವೇ? ಇನ್ನಾದರೂ ಹೇಳುತ್ತಿದ್ದೇನೆ, ಒಂದು ಸಮರ್ಪಕವಾದಂತಹ, ವ್ಯವಸ್ಥಿತವಾದಂತಹ ಆಲೋಚನೆ ಹಿನ್ನೆಲೆಯಲ್ಲಿ ಆಡಳಿತವನ್ನು ಮಾಡಬೇಕು. ಕೇವಲ ಗೊಂದಲಗಳನ್ನು ನಿರ್ಮಾಣ ಮಾಡುವುದಲ್ಲ. ಇನ್ನು ಸಮವಸ್ತ್ರ ಪೂರೈಕೆ ವಿಚಾರ ಬಂತು. ಮಾನ್ಯ ಸುರೇಶ್ ಕುಮಾರ್ ಅವರ ಪ್ರಶ್ನೆ ಬಹಳ ಚೆನ್ನಾಗಿ ಬಂತು. ಇವರು ಎಲ್ಲವನ್ನು ಒಪ್ಪಿಕೊಂಡಿದ್ದಾರೆ. ಸರ್ಕಾರ ಆದೇಶ ಮಾಡುತ್ತಿದೆ. ಯಾವುದೇ ಇಲಾಖೆಗಳು ಕೇಳುತ್ತಿಲ್ಲ, ಯಾವುದೇ ನಿಗಮಗಳು ಕೇಳುತ್ತಿಲ್ಲ ಎನ್ನುವಂತಹ ತಪ್ಪನ್ನು ಒಪ್ಪಿಕೊಂಡರು. ಏನು ಸರ್ಕಾರ ಇದು? ಆಡಳಿತದಲ್ಲಿ ಬಿಗಿ ಇಲ್ಲದೇ ಇರುವ ವ್ಯವಸ್ಥೆ ಇದು. ಈ ರೀತಿಯಾದರೆ ಹೇಗೆ? ಸಮವಸ್ತ್ರದ ಬಗ್ಗೆ ಗೊಂದಲ! ವಿದ್ಯಾ ಮಂತ್ರಿಗಳಿಗೆ ಮತ್ತು ನಮ್ಮ ರೇಷ್ಮೆ ಮಂತ್ರಿಗಳಿಗೆ ಗೊಂದಲ! ಆ ಒಂದು ಗೊಂದಲದಲ್ಲಿ ಸಾಮಾನ್ಯ ಜನರಿಗೆ ತೊಂದರೆ. ಈ ರೀತಿಯ ಗೊಂದಲಗಳನ್ನು ನಿರ್ಮಾಣ ಮಾಡುವಂಥಾದ್ದು. ಇನ್ನು ವಿದ್ಯಾ ಇಲಾಖೆಯಲ್ಲಿ ಹೈಯರ್ ಎಜುಕೇಷನ್‌ಗೆ ಏನು ಮಾಡಿದಿರಿ ಸ್ವಾಮಿ? ರಾಜ್ಯದ ಅನುದಾನಿತ ಕಾಲೇಜುಗಳಿಗೆ 15 ಪರ್ಸೆಂಟ್ ಅನುದಾನವನ್ನು ಕಡಿಮೆ

ಮಾಡಿದಿರಿ. ಆಮೇಲೆ ಗೊತ್ತಾಯಿತು. ಸ್ವಲ್ಪ ಇದು ಬಿಸಿ ಆಗುತ್ತದೆ. ತಕ್ಷಣ ಹಣವನ್ನು ಎಲ್ಲಾ ಕೊಡುವಂತಹ ವ್ಯವಸ್ಥೆಯಾಯಿತು. ಮಾನ್ಯ ಕಾಗೋಡು ತಿಮ್ಮಪ್ಪನವರು ಇರಲಿಲ್ಲ. ನಾನು ಐದಾರು ಉದಾಹರಣೆಗಳನ್ನುಕೊಟ್ಟೆ. ಸರ್ಕಾರ ಸೃಷ್ಟಿಸಿದ ಗೊಂದಲ, ನಿಮ್ಮ ವಿಫಲತೆ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಅದರ ಬಗ್ಗೆ ವ್ಯವಸ್ಥೆಯಾಗಬೇಕೆಂದು, ಒಂದು ರೀತಿ ಅವ್ಯವಸ್ಥೆಯಾಗಬಾರದು ಎಂದು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಜೀವನವೇ ಗೊಂದಲಮಯ.

ಶ್ರೀ ಅರಗ ಜ್ಞಾನೇಂದ್ರ: ಇವರೇನು ಮಠ ಸೇರುವುದಕ್ಕೆ ಯೋಚನೆ ಮಾಡುತ್ತಿದ್ದಾರಾ? ಏಕೋ ಈ ರೀತಿ ಉಪದೇಶ ಮಾಡುತ್ತಿದ್ದಾರೆ? ಈ ಲೋಕ ಬಿಟ್ಟು ಪರಲೋಕದ ಬಗ್ಗೆ ಯೋಚನೆ ಮಾಡುತ್ತಿದ್ದಾರಾ?

ಶ್ರೀ ಡಿ.ವಿ.ಸದಾನಂದಗೌಡ: ಇನ್ನು ಭ್ರಷ್ಟಚಾರದಲ್ಲಿ ದಾಖಲೆ. ನಾನು ಹೇಳಿದರೆ ಅವರಿಗೆ ತಕ್ಷಣ ಬೇಜಾರು ಆಗಬಹುದು. ನಾನು ಉದಾಹರಣೆ ಕೊಟ್ಟು ಹೇಳುತ್ತೇನೆ. ಯಾವುದೇ ಒಂದು ವಿಚಾರವನ್ನು ನಾನು ಒಂದೊಂದು ಗಂಟೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಎಲ್ಲಾ ವಿಚಾರಗಳನ್ನು ಸ್ಪಷ್ಟವಾಗಿ ಅವರ ಗಮನಕ್ಕೆ ತರುವಂತಹ ಪ್ರಯತ್ನ ಮಾಡುತ್ತೇನೆ. ಅದು ಎಷ್ಟರ ಮಟ್ಟಿಗೆ ಅವರಿಗೆ ಅರ್ಥವಾಗುತ್ತದೆ? ಇವತ್ತು ಸರ್ಕಾರಿ ಕಚೇರಿಗಳಲ್ಲಿ ಬೋರ್ಡ್ ಬದಲಾವಣೆ ಬಾಕಿ ಇದೆ. ಬರಿ ಎಲ್ಲಾ ಕಾಂಗ್ರೆಸ್ ಕಚೇರಿಗಳು. ಯಾವ ತಾಲ್ಲೂಕು ಆಫೀಸಿಗೆ ಹೋಗಿ, ಪೋಲೀಸ್ ಸ್ಟೇಷನ್‌ಗೆ ಹೋಗಿ ಬೋರ್ಡ್ ಒಂದು ಚೇಂಜ್ ಆಗಬೇಕು. ಅದು ಬಿಟ್ಟರೆ ಬೇರೆ ಎಲ್ಲಾ ಅದೇ ವ್ಯವಸ್ಥೆ. ಬೆಳಿಗ್ಗೆ ನೋಡಿದರೆ ಸಾಕು, ಈ ಆಡಳಿತ ಪಕ್ಷದ ಮುಖಂಡರು ಅಲ್ಲಿ ಹಾಜರು. ಯಾವುದು ನೋಡಿದರೂ ಏಜೆಂಟ್‌ಗಿರಿ. ಆಶ್ರಯಮನೆ, ಮತ್ತೊಂದು ಯಾವುದೇ ಕೊಡಬೇಕಾದರೂ ಏಜೆಂಟ್. ನಿಜವಾಗಿ ನನಗೆ ಬೇಜಾರು ಆಗುತ್ತದೆ.

ಅಧ್ಯಕ್ಷರು: ಸಾರ್ವಜನಿಕ ಕೆಲಸಗಳಿಗೆ ಹೋಗುತ್ತಾರೆ. ತಾವು ಹೋಗುವುದಿಲ್ಲವೇ !

ಶ್ರೀ ಡಿ.ವಿ.ಸದಾನಂದಗೌಡ: ನಾನು ಒಪ್ಪಿಕೊಳ್ಳುತ್ತೇನೆ. ಅವರು ಒಂದು ಕೆಲಸಕ್ಕೆ ಹೋದರೆ ಸರಿ. ಇರುವ 30 ದಿವಸ ಕೂಡ ಅಲ್ಲಿ ಇರುತ್ತಾರೆ.

ಶ್ರೀ ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತು ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ವಿಜಯಕುಮಾರ್ ಶೆಟ್ಟಿಯವರೆ, ಮಾತಿಗೆ ಮಾತು ಬೆಳೆದು ಇಲ್ಲಿ

ಸುಮ್ಮನೆ ಸಮಯ ಕಳೆಯುತ್ತದೆ. ಮಾನ್ಯ ಸದಸ್ಯರು ಈಲ್ಡ್ ಆಗಿಲ್ಲ.

ಡಿ.ವಿ.ಸದಾನಂದಗೌಡ: ಕಳೆದ ಬಾರಿ ಏನು ಹೇಳಿದರು? ಕನಿಷ್ಟ ಪ್ರಮಾಣದ ವರ್ಗಾವಣೆ ಮಾಡುತ್ತೇವೆಂದು ಹೇಳಿದರು. ಕನಿಷ್ಟ ಪ್ರಮಾಣದ ವರ್ಗಾವಣೆ ಎಂದು ಹೇಳಿ ಗರಿಷ್ಟ ಪ್ರಮಾಣದಲ್ಲಿ ವರ್ಗಾವಣೆಯಾಗಿದೆ. ಅವರು ಸದನಕ್ಕೆ ಅಂಕಿಅಂಶಗಳನ್ನು ಕೊಡಲಿ ಎಷ್ಟು ವರ್ಗಾವಣೆ ಮಾಡಿದ್ದಾರೆ ಎಂದು. ವರ್ಗಾವಣೆಯಲ್ಲಿ ಏನೆಲ್ಲಾ ಹಗರಣವಾಗಿದೆ. ವರ್ಗಾವಣೆ ಕಳೆದ ಬಾರಿ ನಾವು ನೋಡಿದರೆ ಅತ್ಯಂತ ಗಂಭೀರವಾಗಿತ್ತು. ಮಾತನಾಡುವುದು ಒಂದು, ಮಾಡುವುದು ಒಂದು. ಕನಿಷ್ಟ ವರ್ಗಾವಣೆ ಎಂದು ಹೇಳುವುದು, ಅತ್ಯಂತ ಹೆಚ್ಚಿನ ವರ್ಗಾವಣೆಗಳನ್ನು ಇಡೀ ರಾಜ್ಯದಲ್ಲಿ ಮಾಡಿದರು. ಅದನ್ನು ಮಾಡುವಾಗ ಅದರಲ್ಲಿ ಭ್ರಷ್ಟಾಚಾರಗಳು. ಏಜೆಂಟರು, ನಿಮಗೆ ಮಿನಿಟ್ ಕೊಡಬೇಕಾದರೆ ಏಜೆಂಟ್. ಅಲ್ಲಿ ಹೋದರೆ ಏಜೆಂಟ್. ನಮ್ಮ ಪುತ್ತೂರಿನಲ್ಲಿ ಒಬ್ಬರು ಎ.ಇ. ವಾರಕ್ಕೆ ಮೊದಲು ಅಲ್ಲಿ ಹಾಜರಾದರು. ಮೂರು ದಿವಸಕ್ಕೆ ಟ್ರಾನ್ಸ್‌ಫರ್ ಆಯಿತು. ಮತ್ತೆ ನೋಡುತ್ತೇನೆ, ನಾಲ್ಕನೇ ದಿವಸಕ್ಕೆ ಪುನಃ ಅವರು ಅಲ್ಲಿಗೆ ಬಂದರು. ಬೇರೆ ದೂರದೂರಿಗೆ ಹೋಗುವಂತಹ ಅವಶ್ಯಕತೆ ಇಲ್ಲ. ಈ ರೀತಿ ಭ್ರಷ್ಟಾಚಾರಕ್ಕೆ ಅತ್ಯಂತ ಹೆಚ್ಚು ಕುಮ್ಮಕ್ಕು ಕೊಟ್ಟು ಕಳೆದ ಬಾರಿ ಗರಿಷ್ಟ ಪ್ರಮಾಣದ ವರ್ಗಾವಣೆಯಲ್ಲಿ ಈ ಸರ್ಕಾರ ಶಾಮೀಲಾಗಿದೆ ಎಂದು ನಾನು ಎಲ್ಲಿ ಬೇಕಾದರೂ ಹೇಳುವುದಕ್ಕಿಚ್ಛಿಸುತ್ತೇನೆ. ಇನ್ನು ಬೀದರ್ ಜಿಲ್ಲೆ ಪಂಚಾಯತ್ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಸರ್ಕಾರ ತನಿಖೆಗೆ ತೆಗೆದುಕೊಂಡ ನಿಲುವು ಏನು? ಇದು ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಟ್ಟಹಾಗೆ ಅಲ್ಲವೇನು? ಲೋಕಾಯುಕ್ತಕ್ಕೆ ಕೊಡುವುದು, ಬಾಕಿಯವರನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡುವುದು. ಈ ಹಗರಣಗಳಲ್ಲಿ ವಿಳಂಬ ನೀತಿಯಿಂದ ಏನಾಗುತ್ತದೆ ಎಂದರೆ ದಾಖಲೆಗಳನ್ನು ತಿದ್ದುತ್ತಾರೆ. ಆ ಅಧಿಕಾರಿಗಳು ಅವರಿಗೆ ಬೇಕಾದಂತಹ ರೀತಿಯಲ್ಲಿ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಾರೆ. ಇದರಿಂದ ಏನಾಗುತ್ತದೆಂದರೆ ಸಾಧಾರಣವಾಗಿ ಭ್ರಷ್ಟಾಚಾರಕ್ಕೆ ಪರೋಕ್ಷವಾಗಿ ಕುಮ್ಮಕ್ಕು ಕೊಡುವುದು, ಇಲ್ಲಿ ಯಾರು ಭ್ರಷ್ಟರಿರುತ್ತಾರೆ, ಅವರಿಗೆ ರಕ್ಷಣೆ ಕೊಡುವಂಥಾದ್ದು, ಈ ಸರ್ಕಾರದಲ್ಲಿ ನಿರಂತರವಾಗಿ ನಡೆಯುತ್ತಿದೆ. ಇವರು ಗೂಂಡಾಗಳಿಗೆ ಪರೋಕ್ಷವಾಗಿ ಪ್ರೋತ್ಸಾಹ ಕೊಡುವುದು. ಈ ರೀತಿಯಾಗಿ ಭ್ರಷ್ಟಾಚಾರಕ್ಕೆ ಕುಮ್ಮಕು ಕೊಡುವಂಥಾದ್ದು, ಅಬಕಾರಿ ಇಲಾಖೆಯಲ್ಲಿ ದೊಡ್ಡ ದೊಡ್ಡ ತಿಮಿಂಗಲಗಳಿಗೆ ಪರೋಕ್ಷವಾಗಿ ಅವರ ಬಡ್ಡಿಗಳನ್ನು ಮನ್ನಾ ಮಾಡುವುದು. ಈ ರೀತಿಯ ಧೋರಣೆ ಇವರದಾಗಿದೆ. ನಿಜವಾಗಿಯೂ ಇವರು ಜನರ ಸಮಸ್ಯೆಗಳನ್ನು ಪರಿಹಾರ ಮಾಡುವಂಥಾದ್ದು, ಅತ್ಯಂತ ಸುಸೂತ್ರವಾಗಿ ಆಡಳಿತವನ್ನು ತೆಗೆದುಕೊಂಡು ಹೋಗುವುದು, ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂಥಾದ್ದು, ಇದಕ್ಕೆ ಇವರು ಯಾವುದೇ ರೀತಿಯಲ್ಲಿ ಬೆಂಬಲವನ್ನು ಕೊಡುತ್ತಿಲ್ಲ. ಇವರು ಆಡಳಿತ ಸುಧಾರಣೆಯನ್ನು ಮಾಡುತ್ತೇವೆಂದು ಹೇಳುತ್ತಾರೆ, ಇವರು ಏನು ಮಾಡಿದ್ದಾರೆ?

ಇವರ ವಿಳಂಬ ನೀತಿ ಏನಿದೆ ಇದು ಆಡಳಿತ ಸುಧಾರಣೆಗೆ ಪರೋಕ್ಷವಾಗಿ ಪ್ರೋತ್ಸಾಹವನ್ನು ಕೊಡುತ್ತದೆಯೇ? ಅಥವಾ ಈ ಆಡಳಿತ ನೀತಿಗೆ ಒಂದು ರೀತಿಯಲ್ಲಿ ಕುಮ್ಮಕ್ಕು ಕೊಡುತ್ತದಾ? ಎಂಬುದನ್ನು ನೋಡಬೇಕಾಗುತ್ತದೆ. ಇವರು ಸ್ಮಾರ್ಟ್ ಕಾರ್ಡ್ ಬಗ್ಗೆ ಭಾರಿ ಪ್ರಚಾರ ಮಾಡಿದರು, ಈಗ ಇದು ಯಾರ ಬಳಿಯಲ್ಲೂ ಇಲ್ಲ. ಮೊದಲು ಎಲ್ಲರ ಕೊರಳಲ್ಲೂ ಇತ್ತು. ಈಗ ಅದರ ಸುದ್ದಿ ಇಲ್ಲ, ಮೊದಲು ಇದರ ಬಗ್ಗೆ ಅಬ್ಬರದ ಪ್ರಚಾರವಾಯಿತು. ಈಗ ಅದಕ್ಕೆ ಬಂಗಾರದ ಚೈನ್ ಹಾಕಿಕೊಂಡು ಆ ಚೈನ್ ತೆಗೆದುಹಾಕಿದ್ದಾರೋ, ಏನೋ ಅದು ನನಗೆ ಗೊತ್ತಿಲ್ಲ. ಈ ರೀತಿಯ ವ್ಯವಸ್ಥೆ ಇದೆ, ಈ ರೀತಿಯ ಪ್ರಚಾರ ಏಕೆ? ಸ್ಮಾರ್ಟ್ ಆಗಿ ಬಿಹೇವ್ ಮಾಡದಿದ್ದರೆ ಈ ಸ್ಮಾರ್ಟ್ ಕಾರ್ಡ್ ಏಕೆ? ಆದರೂ ಇರಲಿ, ಇದ್ದಾಗ ಅದನ್ನು ಸದುಪಯೋಗ ಮಾಡಿಕೊಳ್ಳದೇ ಹೋದರೆ ಇದು ಸರಿಯಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಅಧಿಕಾರಿಗಳನ್ನು ಜೊತೆಯಲ್ಲೇ ಕರೆದುಕೊಂಡು ಬಂದು ಅವರ ಕೊರಳಲ್ಲಿ ಇರುವುದನ್ನು ತೋರಿಸಿ ಎಂದರೆ ಬೇಕಾದರೆ ತೋರಿಸುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಇನಾಂದಾರ್‌ರವರು ಯಾವಾಗಲೂ ಕೊರಳಲ್ಲಿ ಹಾಕುತ್ತಿದ್ದರು, ಈಗ ಸಭೆಯಲ್ಲಿ ಜೇಬಿನಿಂದ ತೆಗೆಯುತ್ತಿದ್ದಾರೆ. ಈ ರೀತಿಯಾದ ವ್ಯವಸ್ಥೆ ಸರ್ಕಾರದಲ್ಲಿ ನಡೆಯುತ್ತದೆ. ಇವರು ಆಡಳಿತ ಸುಧಾರಣೆ ಎಂದು ಒಂದು ಆಯೋಗವನ್ನು ರಚನೆ ಮಾಡಿದರು. ಈ ಆಯೋಗದಿಂದ ಏನು ಮಾಡಿದರೆಂದರೆ ದೊಡ್ಡ ಬೆಟ್ಟವನ್ನು ಅಗೆದು ಒಂದು ಇಲಿಯನ್ನು ತೆಗೆದರು.

ಅಧ್ಯಕ್ಷರು: ಅಲ್ಲ, ಅಲ್ಲಿ ಹುಲಿ ಇಲ್ಲವೆಂದರೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ಡಿ.ವಿ.ಸದಾನಂದ ಗೌಡ: ಮಾನ್ಯ ಅಧ್ಯಕ್ಷರೇ, ಆ ಹುಲಿಗಳು ಈಗ ಎಲ್ಲಿಗೆ ಹೋಗಿವೆ ಎಂದು ಹೇಳುವಂತಹ ಅಗತ್ಯವಿಲ್ಲವೆಂದುಕೊಂಡಿದ್ದೇನೆ. ಅದನ್ನು ಈಗ ಪೂರ್ತಿ ಹೇಳುವುದಕ್ಕೆ ಹೋದರೆ ಸುಮಾರು ಕೆಲಸಗಳು ಆಗುತ್ತವೆ. ಆದುದರಿಂದ ಈಗಅದನ್ನು ಪ್ರಸ್ತಾಪ ಮಾಡುವುದು ಬೇಡ. ಇವತ್ತು ನಾಡ ಕಚೇರಿಗಳನ್ನು ರದ್ದು ಮಾಡುವಂಥಾದ್ದು, ಹುದ್ದೆಗಳನ್ನುರದ್ದು ಮಾಡುವುದು, ಇಲಾಖೆಗಳನ್ನು ವಿಲೀನಗೊಳಿಸುವುದು, ಇಷ್ಟೇ ಆಗುವಂಥಾದ್ದು, ಇದಕ್ಕೆ ಒಂದು ಆಯೋಗ ಬೇಕಾ? ಮಾನ್ಯ ಅಧ್ಯಕ್ಷರೆ, ತಾವು ಭಾರಿ ಅನುಭವವಿರುವವರು, ತಾವು ನಮ್ಮ ರಕ್ಷಣೆಗೆ ಬನ್ನಿ. ಇವರಿಗೆ ಸತ್ಯ ಸಂಗತಿ ಏನು ಎಂಬುದನ್ನು ಹೇಳಿ, ನೀವು ನಗುವಾಗ ನನ್ನ ಮನಸ್ಸಿಗೆ ಸಂತೋಷವಾಗುತ್ತದೆ. ನಿಮಗೆ ಸತ್ಯ ಸಂಗತಿಗಳು ಅರ್ಥವಾಗಿದೆ. ಈ ಹುಡುಗ ಸತ್ಯ ಸಂಗತಿಯನ್ನು ಹೇಳುತ್ತಿದ್ದಾರೆಂದು ತಮಗೆ ಅರ್ಥವಾಗುತ್ತದೆ. ಇದನ್ನು ಅವರು ಅರ್ಥ

ಮಾಡಿಕೊಳ್ಳಬೇಕು. ಆದರೆ ಇದು ಅವರ ಮನಸ್ಸಿಗೆ ಹೋಗುತ್ತಾ ಇಲ್ಲ. ಈ ರೀತಿಯಾದ ಸಣ್ಣ ಪುಟ್ಟ ಆಯೋಗದ ಶಿಫಾರಸ್ಸುಗಳು ಇವರು ಜಾರಿ ಮಾಡುತ್ತಿಲ್ಲ. ತಾವು ಈಗ ಆಯೋಗಗಳನ್ನು ಮಾಡಿದ್ದೀರಲ್ಲಾ, ಅದನ್ನು ಅನುಷ್ಠಾನ ಮಾಡುವುದಕ್ಕೆ ಇವರು ಏನು ಮಾಡುತ್ತಾರೆಂದು ಇನ್ನೊಂದು ಸಂಪುಟದ ಉಪ ಸಮಿತಿಯನ್ನು ಮಾಡುತ್ತಾರೆ. ಈ ಸಮಿತಿ ಅದೆಲ್ಲವನ್ನು ಅಧ್ಯಯನ ಮಾಡಿದ ಮೇಲೆ, ಇನ್ನೊಂದು ಅಧಿಕಾರಿಗಳ ಅಧ್ಯಯನ ಸಮಿತಿಯನ್ನು ಮಾಡುತ್ತಾರೆ. ಒಟ್ಟಿನಲ್ಲಿ ಟೈಮ್ ಹೋಗುತ್ತಾ ಇರಬೇಕು, ಈ ರೀತಿಯಾದಂತಹ ಧೋರಣೆ ಈ ಸರ್ಕಾರದಲ್ಲಿರುವಂಥಾದ್ದು ಶೋಭೆ ತರುವಂಥಾದ್ದಲ್ಲ. ಇದರ ಜೊತೆಗೆ ನಾನು ಹೇಳುವ ವಿಚಾರ ಎಲ್ಲಾ ಪಕ್ಷಗಳಲ್ಲೂ ಇದೆ, ಸ್ವಪಕ್ಷದಲ್ಲಿರುವಂತಹ ಕೆಲವು ಹಿರಿಯ ನಾಯಕರು ಇದ್ದಾರೆ. ಅವರು ಲೋಕಸಭೆಗೆ ಹೋಗುವುದಕ್ಕೆ ಆಗಲಿಲ್ಲ, ಅಂಥವರು ಇಲ್ಲಿ ಕಿರಿಕಿರಿ ಮಾಡುತ್ತಾರೆ, ಅಂಥವರನ್ನು ಸ್ವಲ್ಪ ಸಮಾಧಾನ ಮಾಡಿ ನಿನಗೊಂದು ಗೂಟದ ಕಾರು, ನಿನ್ನನ್ನು ಆಯೋಗದ ಅಧ್ಯಕ್ಷನನ್ನಾಗಿ ಮಾಡಿದ್ದೇನೆ, ಇನ್ನು ಐದು ವರ್ಷಗಳು ನಮ್ಮ ತಂಟೆಗೆ ಬರಬೇಡವೆಂದು ಅವರಿಗೆ ಸಣ್ಣ ವ್ಯವಸ್ಥೆಯನ್ನು ಮಾಡಿದ್ದಾರೆ. ಅದಕ್ಕೆ ನಾವು ಏನೂ ಹೇಳುವುದಕ್ಕೆ ಹೋಗುವುದಿಲ್ಲ, ಆದರೂ ಅವರು ಇದರ ಬಗ್ಗೆ ತಿಳಿದುಕೊಳ್ಳಬೇಕಾದದ್ದು ಏನೆಂದರೆ ಈ ಆಯೋಗದ ರಚನೆ, ಮತ್ತು ಇದರ ವರದಿ ಪೂರ್ತಿಯಾಗಿ ಕಾರ್ಯರೂಪವಾಗುತ್ತದೆಯೇ? ಇವರು ನಮ್ಮ ಗಡಿಪ್ರದೇಶಕ್ಕೆ ಒಂದು ಆಯೋಗವನ್ನು ರಚನೆ ಮಾಡಿದರು, ಆ ಆಯೋಗದ ಮಧ್ಯಂತರ ವರದಿ ಬಂದಮೇಲೆ ಇವರು ಮಧ್ಯಂತರ ವರದಿಗೆ ತಡೆಯಾಜ್ಞೆಯನ್ನು ಇವರಿಗೆ ಕೊಟ್ಟರು. ಈ ಅಧ್ಯಕ್ಷರನ್ನು ಮನೆಗೆ ಕಳುಹಿಸಿದರು, ಇವರನ್ನೇ ಈ ಆಯೋಗದಲ್ಲಿ ಏಕೆ ಮುಂದುವರೆಸಲಿಲ್ಲ? ಇವತ್ತು ಕರ್ನಾಟಕ ರಾಜ್ಯದಲ್ಲಿ ಇರುವ ಅತ್ಯಂತ ದೊಡ್ಡ ಜ್ವಲಂತ ಸಮಸ್ಯೆ ಏನು ಎಂದರೆ ಈ ಗಡಿನಾಡ ಪ್ರದೇಶಗಳಲ್ಲಿ ತೊಂದರೆಯಾಗಿದೆ. ಇಲ್ಲಿ ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಈ ರಾಜ್ಯಗಳಿಂದ ಇರುವಂತಹ ಸಮಸ್ಯೆಗಳು ನಮ್ಮ ಈ ಕರ್ನಾಟಕ ರಾಜ್ಯಕ್ಕೆ ಇರುವಂತಹ ಅತ್ಯಂತ ದೊಡ್ಡ ಜ್ವಲಂತ ಸಮಸ್ಯೆಗಳಾಗಿದೆ. ಇದಕ್ಕೆ ಅಧ್ಯಕ್ಷರಾಗಿದ್ದಂಥವರು ಇವರ ಪಾರ್ಟಿಯವರಲ್ಲ, ಇವರಿಗೆ ಉಪದ್ರವ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಅವರು ಇವರಿಗೆ ಸತ್ಯ ಸಂಗತಿಯನ್ನು ಹೇಳುವುದಕ್ಕೆ ಬಂದರು, ಈ ಸತ್ಯ ಸಂಗತಿಯನ್ನು ಹೇಳುವುದಕ್ಕೆ ಬಂದರೆ ತಾಪತ್ರಯವಾಗುತ್ತದೆ. ಇವತ್ತಿನ ಸರ್ಕಾರಕ್ಕೆ ಸತ್ಯ ಸಂಗತಿಯನ್ನು ಹೇಳುವುದಕ್ಕೆ ಬಂದರೆ ಬೇಸರವಾಗುತ್ತದೆ. ಆದುದರಿಂದ ಇವರಿಗೆ ಸಮಾಧಾನವಾಗುವ ಹಾಗೆ ವರದಿಗಳನ್ನು ಸಲ್ಲಿಸಬೇಕು. ಇದರಿಂದ ಅವರಿಗೆ ಒಳ್ಳೆಯದಾಗುತ್ತದೆ, ಇದು ಸ್ವಪಕ್ಷೀಯರನ್ನು ಅಂದರೆ ಸ್ವಲ್ಪ ದೊಡ್ಡ ದೊಡ್ಡ ನಾಯಕರುಗಳನ್ನು ಅಂದರೆ ಆಗಾಗ ತೊಂದರೆ ಮಾಡುವಂತಹ ಸದಸ್ಯರುಗಳಿಗೆ ವ್ಯವಸ್ಥೆಯನ್ನು ಮಾಡುವಂಥಾದ್ದು ಸರಿಯಲ್ಲ. ಈ ಗಡಿನಾಡ ಪ್ರದೇಶಗಳ ಆಯೋಗವನ್ನು ಏಕೆ ಅರ್ಧದಲ್ಲಿ ನಿಲ್ಲಿಸಿದರು? ಇದನ್ನು ಏಕೆ ಮುಂದುವರೆಸಲಿಲ್ಲ?

ಆದುದರಿಂದ ಇಲ್ಲಿ ಕೇವಲ ಆಯೋಗಗಳ ರಚನೆ, ಮತ್ತೆ ಅದರಿಂದ ವರದಿಗಳನ್ನು ತರುವುದು, ಮತ್ತೆ ಈ ವರದಿಗಳನ್ನು ಶೈತ್ಯಾಗಾರದಲ್ಲಿಡುವುದು, ಇದರಿಂದ ಪ್ರಯೋಜನವಾಗುವುದಿಲ್ಲ. ಇವತ್ತು ಆಯೋಗದ ವರದಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಹಿಂದೆ ಕೂಡ ಆರ್ಥಿಕ ಸುಧಾರಣೆಗಳ ಬಗ್ಗೆ ಸಾಕಷ್ಟು ಆಯೋಗಗಳು ರಚನೆಯಾಗಿದೆ. ಆ ವರದಿಗಳು ಏನಾಗಿದೆ? ಅವುಗಳಲ್ಲಿ ಏನಾದರೂ ಒಂದು ವರದಿ ಇಂಪ್ಲಿಮೆಂಟ್ ಆಗಿದೆಯಾ? ನಾವು ಇದನ್ನು ನೋಡಬೇಕಾಗುತ್ತದೆ. ಕೇವಲ ಹೊಸ ಆಯೋಗಗಳ ರಚನೆಯಿಂದ ನಾವು ಬಾರಿ ಬದಲಾವಣೆಯನ್ನು ಮಾಡುತ್ತೇವೆನ್ನುವಂತಹ ಭ್ರಾಂತಿ ಏನಾದರೂ ಇದ್ದರೆ ನಾವು ''ಕ್ರಾಂತಿ'' ಮಾಡುತ್ತೇವೆನ್ನುವಂತಹ ಭ್ರಾಂತಿ ಇವರಲ್ಲಿದ್ದರೆ ಅದನ್ನು ಬಿಟ್ಟು ಬಿಡುವುದು ಒಳ್ಳೆಯದೆಂದು ಹೇಳುತ್ತೇನೆ. ಇದರಿಂದ ಸರ್ಕಾರದ ಹಣ ದುರುಪಯೋಗವಾಗುತ್ತದೆಯೇ ಹೊರತು ಒಳ್ಳೆಯ ಕೆಲಸಗಳು ಏನು ಆಗುವುದಿಲ್ಲ, ಇದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. ಇನ್ನೊಂದು ವಿಶೇಷ ಪ್ರಸ್ತಾಪಗಳು ಈ ರಾಜ್ಯದಲ್ಲಿ ನಡೆಯುತ್ತಿರುವಂಥಾದ್ದನ್ನು ನಾವು ನೋಡುತ್ತಿದ್ದೇವೆ, ಅದೇನೆಂದರೆ ಒಂದು ರೀತಿಯಲ್ಲಿ ಕೋಮು ಪ್ರಚೋದನೆ ಮಾಡತಕ್ಕ ಅಧಿಕಾರಿಗಳು, ಸಹ ಇದ್ದಾರೆ ಇದು ತಮಗೂ ಗೊತ್ತಿರಬಹುದು. ಕರ್ನಾಟಕ ರಾಜ್ಯದಲ್ಲಿ ಮೊನ್ನೆ ನಡೆದಂತಹ ಘಟನೆ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು: ಈಗ ಅದೆಲ್ಲಾ ಏಕೆ?

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ನೀರಿನಲ್ಲಿ ಬಿದ್ದವರಿಗೆ ನಾವು ಹೇಳಿದರೆ ಅವರು ಏಳುತ್ತಾರಾ ಎಂದು ನೋಡಬೇಕು. ನಾವು ನಮ್ಮ ಜವಾಬ್ದಾರಿಯನ್ನು ಮಾಡಬೇಕು. ಇತ್ತೀಚೆಗೆ ಗುಜರಾತಿನಲ್ಲಿ ಭೂಕಂಪ ಆಯಿತು, ಇವರು ಇಲ್ಲಿ ಭೂಕಂಪ ಮಾಡುವುದಕ್ಕೆ ಹೊರಟರು. ಅಲ್ಲಿ ಒಂದು ಸಮುದಾಯದ ಮೇಲೆ ದೌರ್ಜನ್ಯ ಆಗಿದ್ದಕ್ಕೆ ಅದು ದೇವರು ಕೊಟ್ಟ ಶಿಕ್ಷೆ ಎಂದು ಹೇಳಿದರು. ಇದನ್ನೇ ಒಬ್ಬ ಸಾಮಾನ್ಯ ಮನುಷ್ಯ ಹೇಳಿದ್ದರೆ ಏನು ಮಾಡುತ್ತಿದ್ದರು? ಇವರು ಎಫ್.ಐ.ಆರ್. ದಾಖಲು ಮಾಡುವುದಕ್ಕೂ ರೆಡಿ ಇರಲಿಲ್ಲ, ಕೊನೆಗೆ ಎಲ್ಲರೂ ಪೋಲೀಸ್ ಸ್ಟೇಷನ್ ಮುಂದೆ ಧರಣಿ ಮಾಡಬೇಕಾಗಿ ಬಂತು. ಆಗ ಎಫ್.ಐ.ಆರ್. ದಾಖಲು ಆಯಿತು, ಅವರು ರಾಜೀನಾಮೆಯನ್ನು ಕೊಟ್ಟರು. ಈಗ ಇವರು ಏನು ಮಾಡಿದ್ದಾರೆ? ಅದನ್ನು ಇವರು ಮುಂದುವರೆಸಿದ್ದಾರಾ? ಮಾನ್ಯ ಮುಖ್ಯಮಂತ್ರಿಯವರು ಪತ್ರಿಕೆಗಳಲ್ಲಿ ಯಾವುದೇ ಕಾನೂನಿನ ಕ್ರಮವನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಿಕೆ ಕೊಡುತ್ತಾರೆ. ಇದು ಯಾವ ನ್ಯಾಯ? ಇದು ಇವರು ಸಾಮಾನ್ಯ ಪ್ರಜೆಗೆ ಕೊಡುವಂತಹ ರಕ್ಷಣೆಯೇ? ಬೇರೆಯವರಿಗೆ ಇದೇ ರೀತಿಯಲ್ಲಿ ಆಗಿದ್ದಿದ್ದರೆ ಇವರು ಏನು ಮಾಡುತ್ತಿದ್ದರು?

ಅವನನ್ನು ಬಂಧನ ಮಾಡಿ, ಚಿತ್ರಹಿಂಸೆಯನ್ನು ಕೊಟ್ಟು, ಬೇಕಾದಂತಹ ವ್ಯವಸ್ಥೆಯನ್ನು ಮಾಡುತ್ತಿದ್ದರು. ಕನಿಷ್ಟ ಸೌಜನ್ಯಕ್ಕಾದರೂ ಕಾನೂನು ರೀತಿಯಲ್ಲಿ ಕ್ರಮ ಜರುಗಿಸುವಂಥಾದ್ದಕ್ಕೆ ಏನು ತೊಂದರೆ ಇತ್ತು? ಎಂಬುದನ್ನು ಸದನದಲ್ಲಿ ಇವರು ಹೇಳಬೇಕು. ಅತ್ಯಂತ ಉನ್ನತವಾದಂತಹ ಸ್ಥಾನದಲ್ಲಿರುವಂತಹ ವ್ಯಕ್ತಿ, ಇಡೀ ಸಮಾಜದ ಘಾತುಕವಾದಂತಹ ವಿಚಾರವನ್ನು ಹೊರಗೆಡವುದರ ಮೂಲಕ ಸಾರ್ವಜನಿಕರಲ್ಲಿ ಕ್ಷೋಭೆ ತರುವಂತಹ ಪ್ರಯತ್ನವನ್ನು ಮಾಡಿದಂಥವರಿಗೆ ಇವತ್ತು ಇವರು ರಕ್ಷಣೆ ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಇದಕ್ಕೆ ಸರ್ಕಾರ ಉತ್ತರವನ್ನು ಕೊಡಬೇಕಾಗುತ್ತದೆ, ಈ ರೀತಿ ಗಂಭೀರ ಪರಿಸ್ಥಿತಿಗಳನ್ನು ಹೇಳಬಾರದು. ಇಲ್ಲಿ ಆಡಳಿತ ಸುಧಾರಣೆ ಮಾಡುವವರು ಏನು ಮಾಡುತ್ತಾರೆ? ಇಲ್ಲಿ ಐ.ಎ.ಎಸ್. ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡುತ್ತಾರೆ, ಮತ್ತೆ ಎರಡು ಮೂರು ದಿವಸಗಳಲ್ಲಿ ಪುನರ್ ನೇಮಕ ಮಾಡುತ್ತಾರೆ. ಈ ರೀತಿಯಾಗಿ ಇವರು ಏಕೆ ಮಾಡುತ್ತಾರೆ? ಈ ಐ.ಎ.ಎಸ್. ಅಧಿಕಾರಿಗಳು ಎಲ್ಲಿ ಇರುತ್ತಾರೆಂದು ಗೊತ್ತಿಲ್ಲ! ಇನ್ನು ಈ ಜಿಲ್ಲಾಧಿಕಾರಿಗಳ ಬಗ್ಗೆ ಹೇಳುವುದಾದರೆ ಇವರು ಜಿಲ್ಲೆಗಳನ್ನು ವಿಭಜನೆ ಮಾಡಿದ್ದಾರೆ. ದೊಡ್ಡ ದೊಡ್ಡ ಜಿಲ್ಲೆಗಳಲ್ಲಿ ಕೆಲಸ ಮಾಡುವುದಕ್ಕೆ ತೊಂದರೆಯಾಗುತ್ತದೆಂದು 7 ಜಿಲ್ಲೆಗಳನ್ನು ಹೊಸದಾಗಿ ವಿಭಜನೆಯನ್ನು ಮಾಡಿ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ನಾವು ಯಾವ ಜಿಲ್ಲೆಗೆ ಹೋದರೂ ಜಿಲ್ಲಾಧಿಕಾರಿಗಳು ಸಿಗುತ್ತಿಲ್ಲ, ನಾನು ಉದಾಹರಣೆಗೆ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಈಗ ಸಣ್ಣ ಜಿಲ್ಲೆಯಾಗಿದೆ, ಕೇವಲ ಆರು ತಾಲ್ಲೂಕುಗಳನ್ನು ಹೊಂದಿಕೊಂಡಿರುವಂತಹ ಜಿಲ್ಲೆ, ಅಲ್ಲಿ ಜಿಲ್ಲಾಧಿಕಾರಿಯವರ ಕಚೇರಿಗೆ ಹೋದರೆ ಅಲ್ಲಿ ಅವರು ಇರುವುದಿಲ್ಲ. ನಾವು ಯಾವಾಗ ಕೇಳಿದರೂ ಮಂತ್ರಿಯವರು ಬಂದಿದ್ದಾರೆ, ಸರ್ಕ್ಯೂಟ್ ಹೌಸ್‌ಗೆ ಹೋಗಿದ್ದಾರೆಂದು ಹೇಳುತ್ತಾರೆ. ಈ ಮಂತ್ರಿಗಳ ಓಡಾಟ ಕೂಡ ಹಾಗೆಯೇ ಇದೆ, ಅದಕ್ಕೆ ನಾವು ಏನು ಮಾಡುವುದು? ಇದು ನಮ್ಮ ದುರಾದೃಷ್ಟ! ಹಣೆಬರಹವಾಗಿದೆ.

ಅಧ್ಯಕ್ಷರು: ಅವರು ಕೆಲಸ ಮಾಡಬೇಕಲ್ಲಾ, ಅವರು ಓಡಾಟ ಮಾಡದಿದ್ದರೆ ಕೆಲಸ ಮಾಡಲು ಹೇಗೆ ಸಾಧ್ಯವಾಗುತ್ತದೆ?

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ಜಿಲ್ಲಾಧಿಕಾರಿಗಳು ಲಭ್ಯವಿಲ್ಲದಂತೆ ಮಾಡಿ ಇವರು ಕೆಲಸವನ್ನು ಮಾಡುವುದಾ? ಇವರು ಜನರಿಗೆ ಲಭ್ಯವಿರಬಾರದು, ಇದು ಇವರ ಆಡಳಿತದ ವೈಖರಿಯಾಗಿದೆ! ಇವರು ಕಚೇರಿಯಲ್ಲಿ ಕೇಳಿದರೆ ಮಂತ್ರಿಗಳು ಬಂದಿದ್ದಾರೆ, ಇನ್‌ಸ್ಪೆಕ್ಷನ್‌ಗೆ ಹೋಗಿದ್ದಾರೆಂದು ಹೇಳುತ್ತಾರೆ. ಇವರು ಎಲ್ಲಾ ಹೈಟೆಕ್, ಕಂಪ್ಯೂಟರ್ ಇದೆ, ಸ್ವಿಚ್ ಹಾಕಿದರೆ ಎಲ್ಲಾ ಕಾಣುತ್ತದೆ, ಇವರು ಬರದಿದ್ದರೆ ಎಲ್ಲಾ ಇದರಲ್ಲಿ ಕಾಣುತ್ತದೆ.

ಶ್ರೀ ಡಿ.ವಿ.ಸದಾನಂದಗೌಡ: ದಯವಿಟ್ಟು ಇದನ್ನು ತಿದ್ದುಕೊಳ್ಳಬೇಕು, ಒಂದೂವರೆ ವರ್ಷದಲ್ಲಿ ಆಗಿರುವ ಅನ್ಯಾಯ ಇವರನ್ನು ಯಾರೂ ಕ್ಷಮಿಸದ ಪರಿಸ್ಥಿತಿ ತಲುಪಿದೆ, ಇದಾಗಬಾರದು. ಇನ್ನು ಕೆಎಸ್‌ಆರ್‌ಟಿಸಿ ಕಾರ್ಯ ವೈಖರಿಯ ಬಗ್ಗೆ ಹೇಳುವುದಾದರೆ, ಮಾನ್ಯ ಸಾರಿಗೆ ಸಚಿವರು ನಮ್ಮೆಲ್ಲರ ಜೊತೆ ಬಹಳ ಸೌಜನ್ಯದಿಂದ ಇರುತ್ತಾರೆ, ನಮಗೆ ಬೇಕಾದ್ದನ್ನೆಲ್ಲಾ ಕೊಡುತ್ತೇವೆನ್ನುವ ಭರವಸೆಯ ಮಾತುಗಳನ್ನು ಹೇಳುತ್ತಾರೆ. ಮಂಗಳೂರು-ಬೆಂಗಳೂರು, ಬೆಂಗಳೂರು-ಮೈಸೂರಿಗೆ ಬಸ್‌ಗಳು ಹೋಗುವ ಮಾರ್ಗದಲ್ಲಿ ಕಾಫೀ ತಿಂಡಿ ತೆಗೆದುಕೊಳ್ಳಲು ಬಸ್‌ಗಳನ್ನು ನಿಲ್ಲಿಸುತ್ತಾರೆ, ಆ ಸಂಬಂಧವಾಗಿ ಇಲಾಖೆಯಿಂದ ಒಂದು ಸರ್ಕ್ಯೂಲರ್‌ನ್ನು ಹೊರಡಿಸಲಾಗಿದೆ. ಅದರ ಪ್ರಕಾರ ಯಾವ ಹೋಟಲ್ ಮುಂದೆ ಕೆಎಸ್‌ಆರ್‌ಟಿಸಿ ಚಾಲಕ ಬಸ್ ನಿಲ್ಲಿಸುತ್ತಾನೆ, ಅವನಿಗೆ ಒಂದು ಬಸ್‌ಗೆ ಐವತ್ತು ರೂಪಾಯಿಗಳನ್ನು ಕೊಡಬೇಕು, ಇನ್ನು ಈ ಸರ್ಕಾರ ಎಲ್ಲಾ ಹೋಟಲ್‌ನವರ ಹತ್ತಿರ ಐದೈದು ರೂಪಾಯಿಗಳನ್ನು ಕೊಡಿ ಎಂದು ಭಿಕ್ಷಾ ಪಾತ್ರೆ ಹಿಡಿದುಕೊಂಡು ಹೋಗುವುದು ಮಾತ್ರ ಬಾಕಿ ಇದೆ. ಇದು ಮಂತ್ರಿಗಳ ತಪ್ಪೆಂದು ನಾನು ಹೇಳುತ್ತಿಲ್ಲ, ನನ್ನ ಗಮನಕ್ಕೆ ಬಂದಂತೆ ಹಲವಾರು ಹೋಟೆಲ್‌ಗಳ ಮಾಲೀಕರು ಇವರ ಅಧಿಕಾರಿಗಳಿಗೆ ವ್ಯವಸ್ಥೆ ಮಾಡಿ ಬಸ್‌ಗಳನ್ನು ನಮ್ಮ ಹೋಟಲ್ ಮುಂದೆ ನಿಲ್ಲಿಸಬೇಕೆನ್ನುವ ವ್ಯವಸ್ಥೆಯನ್ನು ಮಾಡಿದ್ದಾರೆ, ಇದು ಕೆಎಸ್‌ಆರ್‌ಟಿಸಿಯ ವ್ಯವಸ್ಥೆಯೇ? ಸರ್ಕಾರ ಇದನ್ನು ತಕ್ಷಣ ರದ್ದು ಮಾಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಯಾವುದೇ ಹೋಟಲ್ ಮಾಲೀಕನ ಹತ್ತಿರ ಹಣ ವಸೂಲಿ ಮಾಡಿದರೆ ಅವನು ಪ್ರಯಾಣಿಕರಿಗೆ ಕೊಡುವ ತಿಂಡಿ ಪದಾರ್ಥಗಳ ಗುಣಮಟ್ಟವನ್ನು ಕಳಪೆ ಮಾಡುತ್ತಾನೆ.

ಶ್ರೀ ಸಿ.ಆರ್.ಸಗೀರ್ ಅಹಮದ್(ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಸಾರಿಗೆ ವ್ಯವಸ್ಥೆ ಉತ್ತಮವಾಗಬೇಕೆನ್ನುವುದು ಎಲ್ಲಾ ಸದಸ್ಯರ ಅಭಿಪ್ರಾಯ, ನಾಗರೀಕ ಸವಲತ್ತುಗಳನ್ನು ಸರಿಯಾಗಿ ಒದಗಿಸಿ ಕೊಡುವುದರ ಬಗ್ಗೆ ಅನೇಕರು ಪತ್ರ ಬರೆಯುವುದರ ಮುಖಾಂತರ,ಬೇಡಿಕೆ ಇಡುವುದರ ಮುಖಾಂತರ ನ್ಯೂನತೆಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ರಸ್ತೆಗಳಲ್ಲಿರುವ ಕೆಲವು ಹೋಟಲ್, ಡಾಬಗಳನ್ನು ಬೇರೆ ರಾಜ್ಯಗಳಲ್ಲಿ ಈ ನಾಗರೀಕರು ಹಾಗೂ ಪ್ರಯಾಣಿಕರಿಗೆ ಅನುಕೂಲವಾಗಲು ಗುರುತಿಸಿ ಆ ಸಾರಿಗೆ ಸಂಸ್ಥೆಗಳಿಗೆ ಸಂಬಂಧಿಸಿದ ಬಸ್‌ಗಳನ್ನು ಅಲ್ಲಿ ನಿಲ್ಲಿಸುವ ವ್ಯವಸ್ಥೆಯನ್ನು ಮಾಡುವುದರ ಜೊತೆಗೆ ಆ ಹೋಟಲ್‌ಗಳು ನಮ್ಮ ನಿರ್ವಾಹಕ ಅಥವಾ ಚಾಲಕನಿಗೆ ಇಪ್ಪತ್ತೈದು ರೂಪಾಯಿಗಳನ್ನು ಕೊಟ್ಟು ರಸೀದಿ ಪಡೆಯುವ ವ್ಯವಸ್ಥೆಯನ್ನು ನಾನು ನೋಡಿ ಬಂದಿದ್ದೇನೆ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶಾದ್ಯಂತ ಈ ವ್ಯವಸ್ಥೆ ಇದೆ. ಈ ಬಗ್ಗೆ ನಮ್ಮಲ್ಲೂ ಇದನ್ನು ಮಾಡಲು ಸಾಧ್ಯವಿದೆಯೇ ಎನ್ನುವ ಬಗ್ಗೆ ನಾವು ಸಮಾಲೋಚನೆ ಮಾಡುತ್ತಿದ್ದೇವೆ. ಹಾಗಾಗಿ ಬೆಂಗಳೂರು ಮಂಗಳೂರು ರಸ್ತೆಯಲ್ಲಿ

ಕೆಲವು ನಾಗರೀಕ ವ್ಯವಸ್ಥೆ ಇರುವ ಹೋಟಲ್‌ಗಳನ್ನು ಗುರುತಿಸಿ ಮಾದರಿಯಾಗಿ ಈ ವ್ಯವಸ್ಥೆಯನ್ನು ಕಾರ್ಯಾಚರಣೆಗೆ ತರಲಾಗುತ್ತಿದೆ, ಇನ್ನೂ ರಾಜ್ಯಾದ್ಯಂತ ಇದನ್ನು ಆರಂಭ ಮಾಡಿಲ್ಲ. ಇದಕ್ಕಾಗಿ ಕೇಂದ್ರ ಸರ್ಕಾರದ ಮಟ್ಟದಲ್ಲಿರುವ ಒಂದು ಸಂಸ್ಥೆಗೆ ಅಧಿಕಾರವನ್ನು ಕೊಟ್ಟು ಅಧ್ಯಯನ ಮಾಡಿ ರಾಜ್ಯಾದ್ಯಂತ ನಾಗರಿಕ ಸೌಲಭ್ಯವಿರುವ ಹೋಟಲ್‌ಗಳನ್ನು ಗುರುತಿಸಿ ವರದಿ ಕೊಡಲು ನಾನು ಆದೇಶ ಮಾಡಿದ್ದೇನೆ. ಮಾನ್ಯ ಸದಸ್ಯರು ಹೇಳಿದಂತೆ ನಾವು ವಿಶೇಷವಾಗಿ ಭಿಕ್ಷೆ ಬೇಡುವ ಪರಿಸ್ಥಿತಿ ಇಲ್ಲ. ಕೇಂದ್ರದವರು ದೊಡ್ಡ ತಟ್ಟೆಯನ್ನು ಹಿಡಿದರೆ, ರಾಜ್ಯದವರು ಸಣ್ಣ ತಟ್ಟೆಯನ್ನು ಹಿಡಿಯುತ್ತೇವೆ.

ಶ್ರೀ ಡಿ.ಸದಾನಂದಗೌಡ: ನಾಗರೀಕರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ತೆಗೆದುಕೊಳ್ಳುವ ಕ್ರಮದ ಬಗ್ಗೆ ನನ್ನ ಅಭ್ಯಂತರವಿಲ್ಲ, ಆದರೆ 50 ರೂಪಾಯಿಗಳನ್ನು ವಸೂಲ್ಮಾಡುವುದನ್ನು ನಿಲ್ಲಿಸಬೇಕು. ಇದರಿಂದ ಪರೋಕ್ಷವಾಗಿ ತೊಂದರೆಗಳಾಗುತ್ತಿವೆ. ನಾನು ವೈಯಕ್ತಿಕವಾಗಿ ಮಾತನಾಡುತ್ತೇನೆ, ಸದನದಲ್ಲಿ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆ ಹೋಟಲ್‌ನವರು ಶೌಚಾಲಯಗಳನ್ನು ಒದಗಿಸಬೇಕು ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಿ, ಇವರಿಗೆ 50 ರೂಪಾಯಿಗಳನ್ನು ಕೂಡ ಕೊಡಬೇಕು ಎಂದರೆ ಇದರಿಂದ ಆತ ಎಷ್ಟು ಲಾಭ ಮಾಡಬೇಕು? ಆತನಿಗೆ ವ್ಯಾಪಾರ ಇಲ್ಲದಿದ್ದರೆ ನಡೆಯುತ್ತದೆ, ಬಸ್‌ನವರು ಹೋಗುವುದರಿಂದ ಹೋಟಲ್ ಸುತ್ತಮುತ್ತ ಗಲೀಜಾಗುತ್ತದೆ. ಅದನ್ನು ಮೈಂಟೇನ್ ಮಾಡಬೇಕಾದರೆ, ಹೋಟಲ್‌ನವರು ವಿಶೇಷವಾಗಿ ಖರ್ಚು ಮಾಡಬೇಕಾಗುತ್ತದೆ. ಇಲಾಖೆಯಿಂದ ಸರ್ಕ್ಯೂಲರ್ ಕೊಡಲಾಗಿದೆ. 50 ರೂಪಾಯಿಗಳನ್ನು ವಸೂಲ್ಮಾಡುವುದನ್ನು ನಿಲ್ಲಿಸಬೇಕು, ಇದು ಅಷ್ಟು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹಮ್ಮದ್: ಬೆಂಗಳೂರು-ಮಂಗಳೂರು ಹಾಗೂ ಬೆಂಗಳೂರು-ಮೈಸೂರು ರಸ್ತೆಗಳ ನಡುವೆ ಇರುವ ನಾಗರೀಕ ಸೌಲಭ್ಯವಿರುವ ಹೋಟಲ್ ಹಾಗೂ ಡಾಬಗಳಲ್ಲಿ ಈ ವ್ಯವಸ್ಥೆಯನ್ನು ಮಾಡಿದ್ದೇವೆ. ಮಾದರಿಯಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ, ಇದು ಯಶಸ್ವಿಯಾಗಿ ನಡೆದರೆ ಮುಂದುವರೆಸುತ್ತೇವೆ, ಯಶಸ್ವಿಯಾಗಿ ನಡೆಯದಿದ್ದರೆ ನಿಲ್ಲಿಸುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಮಂತ್ರಿಗಳು ತುಮಕೂರಿನ ಬಸ್‌ಸ್ಟ್ಯಾಂಡ್ ಹೋಟಲ್‌ಗೆ ಹೋಗಿ ಊಟ ಮಾಡಲಿ. ನಮಗೆ ಹಿಂಸೆ ಕೊಡಿಸುತ್ತೀರಿ, ಅಕ್ಕಪಕ್ಕದಲ್ಲಿ ಗಲೀಜು, ಆಹಾರದಲ್ಲಿ ಹುಳ ಎಲ್ಲಾ ಇರುತ್ತದೆ. ಅವರು ನಮ್ಮನ್ನು ಮನುಷ್ಯರೆಂದು ತಿಳಿದುಕೊಂಡಿದ್ದಾರೆಯೋ ಹೇಗೋ?

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೆ, ತುಮಕೂರು ಬಸ್‌ಸ್ಟ್ಯಾಂಡ್‌ನಲ್ಲಿರುವ ಉಪಹಾರ ಮಂದಿರ ಸುಮಾರು ಒಂದೂವರೆ ವರ್ಷದಿಂದ ಬಂದ್ ಆಗಿತ್ತು. ಕಾರಣ ಅಲ್ಲಿ ನಗರಸಭೆಯವರು ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಸ್ಥಿತಿಯಲ್ಲಿರಲಿಲ್ಲ. ಈಗ ನಾವು 450 ಅಡಿಗಳ ಕೊಳವೆ ಬಾವಿಯನ್ನು ಕೊರೆದು ನೀರನ್ನು ಒದಗಿಸಿಕೊಡಲಾಗಿದೆ. ನೀರಿನ ಜೊತೆಗೆ ಉತ್ತಮವಾದ ಉಪಹಾರವನ್ನು ಒದಗಿಸಿಕೊಡುವ ವ್ಯವಸ್ಥೆಯನ್ನು ಈಗ ಮಾಡಿದ್ದೇವೆ. ಮಾನ್ಯ ಸದಸ್ಯರು ಇತ್ತೀಚೆಗೆ ಅಲ್ಲಿಗೆ ಹೋಗಿಲ್ಲವೆಂದು ಕಾಣುತ್ತದೆ. ಅವರ ಜೊತೆಗೆ ಹೋಗಿ ನಾನು ಊಟವನ್ನು ಅಲ್ಲಿ ಮಾಡುತ್ತೇನೆ, ಸುಮ್ಮನೆ ಆಪಾದನೆ ಮಾಡುವುದು ಬೇಡ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಶೇಷ ವಿಚಾರವನ್ನು ಸದನದ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ. ಈಗಿನ ಡಿಸಿ, ಅಸಿಸ್ಟೆಂಟ್ ಕಮಿಷನರ್ಸ್ ಅಧಿಕಾರಿಗಳು, ಆಶ್ರಯ ಸಮಿತಿಯಲ್ಲಿ ಮಂಜೂರಾದ ಮನೆ ಹಾಗೂ ನಿವೇಶನಗಳನ್ನು ರದ್ದು ಮಾಡುವ ಕೆಲಸವನ್ನು ಆರಂಭ ಮಾಡಿದ್ದಾರೆ. ಫಲಾನುಭವಿಯು ಅರ್ಹನಾಗಿದ್ದರೆ ಮಾತ್ರ ಆಶ್ರಯ ಸಮಿತಿಯಡಿಯಲ್ಲಿ ಸೌಲಭ್ಯ ಒದಗಿಸಿಕೊಡಲು ಸಾಧ್ಯ. ಸರ್ಕಾರದಿಂದ ನೇಮಕ ಮಾಡಿದ ನಾಲ್ಕು ಜನರಿರುತ್ತಾರೆ, ಶಾಸಕರು ಇರುತ್ತಾರೆ, ಇವರು ಪಟ್ಟಿಯನ್ನು ಕೊಟ್ಟಾದ ಮೇಲೂ ಕೂಡ ಅಧಿಕಾರಿಗಳ ಹೇಳಿಕೆಯಂತೆ ಕೊಡಬೇಕೆನ್ನುವುದು ಹಲವಾರು ಕಡೆ ನಡೆದಿದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಪುತ್ತೂರಿನಲ್ಲಿ ಸುಮಾರು ನಾನೂರು ಮನೆಗಳನ್ನು ಕಟ್ಟಲು ಒಬ್ಬನಿಗೆ ಕಾಂಟ್ರಾಕ್ಟ್ ಕೊಡಬೇಕು, ಕೊಡದಿದ್ದವರ ಮನೆಯನ್ನು ರದ್ದು ಮಾಡುತ್ತೇನೆಂದು ಡಿಸಿ ಹಾಗೂ ಎಸಿಯವರು ಜಂಟಿಯಾಗಿ ಹೇಳಿದ ಪ್ರಕರಣ ನಡೆದಿದೆ. ಈ ಬಗ್ಗೆನನಗೆ ಸರ್ಕಾರದಿಂದ ಉತ್ತರ ಬೇಕಾಗಿದೆ. ಆಶ್ರಯ ಸಮಿತಿಯಲ್ಲಿ ಯಾವುದೇ ಫಲಾನುಭವಿಯಾಗಿದ್ದರೂ ಆತನನ್ನು ರದ್ದುಪಡಿಸುವ ವ್ಯವಸ್ಥೆ ಎಸಿಯವರಿಗೆ ಕೊಡಲಾಗಿದೆಯೇ? ಪುತ್ತೂರಿನ ಎಸಿಯವರು ಮನೆ ಕಟ್ಟಿಸುವ ಕೆಲಸವನ್ನು ಯಾವುದೋ ಒಂದು ಏಜೆನ್ಸಿಗೆ ಕೊಡಬೇಕೆಂದು ಹೇಳಿದ್ದಾರೆ, ಆ ಏಜೆನ್ಸಿ ಮುಖಾಂತರ ಬೇರೆ ಕೆಲಸಗಳನ್ನು ಮಾಡಿಸುತ್ತಿದ್ದಾರೆ, ಆ ರೀತಿ ಮಾಡಲು ಎಸಿಯವರಿಗೆ ಅಧಿಕಾರವಿದೆಯೇ? ನಗರದೊಳಗಾದರೆ, ಅದನ್ನು ನೋಡಲು ಡಿಸಿಯವರಿಗೆ ಅಧಿಕಾರವಿದೆ, ಇಲ್ಲಿ ಹಾಗೆ ಇಲ್ಲ, ಇದನ್ನು ಸರಿಪಡಿಸದಿದ್ದರೆ ನಾವು ಆ ಒಂದು ಗುರಿಯನ್ನು ಮುಟ್ಟಲಾಗುವುದಿಲ್ಲ. ಈ ಒಂದೂವರೆ ವರ್ಷದಿಂದ ದಿನನಿತ್ಯ ಒಂದೊಂದು ದುರಂತವನ್ನು ಈ ಸರ್ಕಾರ ಮಾಡುತ್ತಿದೆ, ಇನ್ನೂ ದೊಡ್ಡ ದುರಂತ ಮಾಡಲು ಹೊರಟಿದ್ದಾರೋ ಏನೋ ಎನ್ನುವ ಸಂಶಯ ನನಗೆ ಬರುತ್ತಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನನಗೆ ವಿಶ್ವಾಸವಿದೆ, ಅವರು ಯಾವುದೇ ಕೆಲಸ ಮಾಡ ಬೇಕಾದರೂ ಬಹಳ ಮುತುವರ್ಜಿಯನ್ನು ವಹಿಸಿ ಕೆಲಸ ಮಾಡುತ್ತಾರೆ, ಅವರಿಗೇನು

ಅನ್ನಿಸುತ್ತದೆಯೋ ಹಾಗೆ ಮಾಡುತ್ತಾರೆ. ಆದರೆ ಸಾರ್ವಜನಿಕ ಹಿತ ಇದೆಯೋ ಎಂಬುದನ್ನು ನೋಡುವುದಿಲ್ಲ. ಅವರ ಪಕ್ಷದ ವರಿಷ್ಠ ಮಂಡಳಿಯು ಕೂಡ ಅವರ ಮೇಲೆ ಗೌರವವನ್ನು ಇಟ್ಟುಕೊಂಡಿದೆ. ಈ ಭಾರಿ ಅವರಿಗೆ ಕೇರಳ ಚುನಾವಣೆಯ ಉಸ್ತುವಾರಿಯ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಉಸ್ತುವಾರಿ ಎಂದರೆ, ಸ್ವಲ್ಪ ವಿಷಯ ಸಂಗ್ರಹ ಮಾಡಿ ಉಸ್ತುವಾರಿ ಮಾಡುವುದು. ನನಗೇನು ಅನ್ನಿಸುತ್ತಿದೆ ಎಂದರೆ, ಅವರು ಕೇರಳದ ಚುನಾವಣೆಯ ಉಸ್ತುವಾರಿಯನ್ನು ಪಡೆದುಕೊಂಡಿದ್ದರಿಂದ ಕರ್ನಾಟಕದ ಆಡಳಿತ ಯಂತ್ರದ ಮೇಲೆ ಖಂಡಿತ ದುಷ್ಪರಿಣಾಮ ಬೀರುತ್ತದೆ. ಮೊನ್ನೆ ನಡೆದ ದೊಡ್ಡ ಮೇಳದಿಂದ ದುಷ್ಪರಿಣಾಮವಾಗಿದೆ ಎಂದುಹೇಳುವುದನ್ನು ನಾನು ಕೇಳಿದ್ದೇನೆ, ಅದೇ ರೀತಿ ದುಷ್ಪರಿಣಾಮ ನಾಳೆ ಇದರಲ್ಲಿ ಆಗಬಹುದು ಎನ್ನುವ ಭಾವನೆ ನನ್ನಲ್ಲಿದೆ.

12. 10 ಪಿಎಂ

ನಾನು ಪ್ರಾರಂಭದಲ್ಲೇ ಹೇಳಿದೆ, ವರಿಷ್ಠ ಮಂಡಳಿಗೆ ಅವರ ಮೇಲೆ ವಿಶ್ವಾಸವಿದೆ, ಅವರು ಯಶಸ್ವಿಯಾಗಿ ಎಲ್ಲ ಕೆಲಸಗಳನ್ನು ಮಾಡುತ್ತಾರೆ ಎನ್ನುವ ವಿಶ್ವಾಸ ಅವರಿಗಿದೆ. ಚುನಾವಣಾ ಉಸ್ತುವಾರಿಯನ್ನು ಕೂಡ ಯಶಸ್ವಿಯಾಗಿ ಮಾಡುತ್ತಾರೆ, ಅದಕ್ಕೆ ಬೇಕಾದಂಥ ಎಲ್ಲ ವ್ಯವಸ್ಥೆಗಳನ್ನು ಇಲ್ಲಿಂದ ಹಿಡಿದುಕೊಂಡು ಹೋಗಿ ಮಾಡುತ್ತಾರೆ ಎನ್ನುವ ವಿಶ್ವಾಸವಿದೆ. ಇದರಿಂದಾಗಿ ನಮ್ಮ ರಾಜ್ಯದ ಆಡಳಿತದ ಮೇಲೆ ಮತ್ತಷ್ಟು ದುಷ್ಪರಿಣಾಮವಾಗುತ್ತದೆ ಎಂದು ಹೇಳುತ್ತೇನೆ. ನಾವು ಮುಖ್ಯಮಂತ್ರಿಯವರ ಮೇಲೆ ಆಪಾದನೆ ಮಾಡಲು ಹೋಗುವುದಿಲ್ಲ. ಆದರೆ ಮುಖ್ಯಮಂತ್ರಿಗಳು ದಯವಿಟ್ಟು ಅದಕ್ಕೆ ಅವಕಾಶ ಕೊಡದ ಹಾಗೆ ಕನಿಷ್ಠ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು, ಕರ್ನಾಟಕ ರಾಜ್ಯದಲ್ಲಿರುವಂಥ ಜ್ವಲಂತ ಸಮಸ್ಯೆಗಳ ಬಗ್ಗೆ ಗಮನ ಕೊಡಬೇಕು. ಇಲ್ಲಿರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಕರೆಂಟ್ ಇಲ್ಲ, ನೂರಾರು ಜನರು ಸಾಯುತ್ತಿದ್ದಾರೆ. ರಾಜ್ಯದಲ್ಲಿ ಇಂಥ ಸಮಸ್ಯೆಗಳಿರುವ ಈ ಸಂದರ್ಭದಲ್ಲಿ ಇಲ್ಲಿಂದ ಸಿಕ್ಕಿದ್ದನ್ನು ಕ್ರೋಢೀಕರಣ ಮಾಡಿಕೊಂಡು ಕೇರಳಕ್ಕೆ ಹೋಗಿ, ಇಲ್ಲಿಯ ರಾಜ್ಯದ ಜನರಿಗೆ ಹೆಚ್ಚಿನ ಬವಣೆಗಳನ್ನು ಕೊಡಬಾರದು. ಅವರಿಂದ ಈ ಜವಾಬ್ದಾರಿಯನ್ನು ತೆಗೆದುಕೊಳ್ಳತಕ್ಕಂಥ ಸಾಕಷ್ಟು ಜನರು ಇಲ್ಲಿದ್ದಾರೆ. ಆದಕಾರಣ, ಬೇರೆಯವರಿಗೆ ಅದನ್ನು ವಹಿಸಿಕೊಟ್ಟು, ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯದ ಜನತೆಯ ಉಸ್ತುವಾರಿಯನ್ನು ನೋಡಿಕೊಳ್ಳಲು ಜನ ಕೊಟ್ಟಿರುವ ತೀರ್ಮಾನಕ್ಕೆ ಬದ್ಧರಾಗಿರಬೇಕು ಎಂದು ಹೇಳುತ್ತೇನೆ. ಈ ರಾಜ್ಯಪಾಲರ ಭಾಷಣ ಸುಳ್ಳು ಘೋಷಣೆಗಳ ಒಂದು ಪುಸ್ತಕ. ಇದು ಈ ಮೊದಲಿಗಿಂತ ಸ್ವಲ್ಪ ದೊಡ್ಡದಾಗಿದ್ದು, 32 ಪುಟಗಳಿಂದ ಕೂಡಿದೆ. ನಾನು ಈ ರೀತಿ ಹೇಳಿದ್ದಕ್ಕೆ ಮಾನ್ಯ ಕಂದಾಯ ಸಚಿವರಿಗೆ ತುಂಬಾ ಖುಷಿಯಾಗಿದೆ. ಅವರು ನಾನು ಹೇಳಿದ ಮಾತಿಗೆ ನಗುತ್ತಾ, ಶಹಬಾಸ್‌ಗಿರಿಯನ್ನು ಕೊಡುತ್ತಾ ಹೌದೌದು ಎಂದು ಹೇಳುತ್ತಿದ್ದಾರೆ. ಕನಿಷ್ಠ, ಆ ಕಡೆ ಕುಳಿತ ನೀವಾದರೂ ನನ್ನ ಮಾತಿಗೆ ಒತ್ತು ಕೊಟ್ಟಿದ್ದೀರಿ ಎಂದು ನನಗೆ

ಸಂತೋಷವಾಗಿದೆ ಎಂದು ಹೇಳುತ್ತಾ, ಈ ರಾಜ್ಯಪಾಲರ ಭಾಷಣವನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

+ ಶ್ರೀಬಿ.ಸೋಮಶೇಖರ್(ಮಳವಳ್ಳಿ): ಮಾನ್ಯ ಸಭಾಧ್ಯಕ್ಷರೇ, ಈ ಸರ್ಕಾರದ ರಾಜ್ಯಪಾಲರ ಎರಡನೇ ಭಾಷಣವನ್ನು ಸರ್ಕಾರದವರು ಅನುಮೋದನೆಗೆ ಇಟ್ಟಿದ್ದಾರೆ. ಕಳೆದ ವರ್ಷ ಮಾರ್ಚ್ 15ನೇ ತಾರೀಖು ಈಸರ್ಕಾರ ಬಂದ ತಕ್ಷಣ ಪ್ರಥಮ ಬಾರಿಗೆ ರಾಜ್ಯಪಾಲರು ತಮ್ಮ ಭಾಷಣವನ್ನು ಮಂಡಿಸಿದರು. ಆಗ ನಾವು ಹೆಚ್ಚು ಟೀಕೆ ಮಾಡಲು ಹೋಗಲಿಲ್ಲ. ಕಾರಣವೆಂದರೆ, ಸರ್ಕಾರ ಈಗ ತಾನೇ ಬಂದಿದ್ದು, ಸುಮಾರು 2-3 ತಿಂಗಳಾಗಿದೆ, ಅದಕ್ಕೆ ಕಾಲಾವಕಾಶವನ್ನು ಕೊಡಬೇಕು, ವಿರೋಧ ಪಕ್ಷಗಳು ಟೀಕೆ ಮಾಡುವುದಕ್ಕೇ ಇವೆ ಎನ್ನುವುದನ್ನು ತೋರಿಸಬಾರದು ಎಂದು ನಾವು ಹೆಚ್ಚು ಟೀಕೆಯನ್ನು ಮಾಡಲಿಲ್ಲ. ಈ ಸರ್ಕಾರ ಬಂದು ಈಗಾಗಲೇ ಒಂದೂವರೆ ವರ್ಷವಾಗಿದೆ. ಈ ಒಂದೂವರೆ ವರ್ಷದ ಅನುಭವವನ್ನು ನಾವು ಬಿಚ್ಚಿಡತಕ್ಕಂಥ ಅವಕಾಶ ನಮಗೆ ಸಿಕ್ಕಿರತಕ್ಕಂಥಾದ್ದು ಈಗಲೇ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಆಡಳಿತ ವ್ಯವಸ್ಥೆಯನ್ನು, ಅದು ನಡೆದುಕೊಂಡು ಬಂದಂಥ ದಾರಿಯನ್ನು ಮತ್ತು ಜನರ ಮೇಲೆ ಯಾವ ರೀತಿ ಪರಿಣಾಮ ಬೀರಿದೆ ಎಂದು ಹೇಳುವ ಅವಕಾಶ ಸಿಕ್ಕಿದೆ. ಗೃಹ ಸಚಿವರು ಇಲ್ಲಿ ಕುಳಿತಿದ್ದಾರೆ. ಮೊದಲನೆಯದಾಗಿ ಅವರ ವಿಚಾರವನ್ನೇ ತೆಗೆದುಕೊಳ್ಳೋಣ. 15ನೇ ಮಾರ್ಚ್ 2000ರಂದು ಮಾಡಿದ ಭಾಷಣದಲ್ಲಿ ರಾಜ್ಯಪಾಲರು ಏನು ಹೇಳಿದ್ದಾರೆ ಎಂದರೆ,

''ಕರ್ನಾಟಕ ರಾಜ್ಯವು ಸಮಾಜದ ಎಲ್ಲ ವರ್ಗಗಳ ಸೌಹಾರ್ದಯುತ ಸಹಬಾಳ್ವೆಗೆ ಹೆಸರುವಾಸಿಯಾಗಿದೆ. ಈ ವೈವಿಧ್ಯತೆಯು ಕರ್ನಾಟಕದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳನ್ನು ಸಮೃದ್ಧಗೊಳಿಸಿ, ನಮ್ಮ ರಾಜ್ಯವು ಎಲ್ಲಾ ಜಾತಿ ಮತ್ತು ಪಂಗಡಗಳ ಸೌಹಾರ್ದತಾ ನೆಲೆವೀಡು. ಆದರೂ ಆಗೊಮ್ಮೆ, ಈಗೊಮ್ಮೆ ಸಾಮಾಜಿಕ ಶಾಂತಿಯನ್ನು ಕದಡುವ ಘಟನೆಗಳು ಸಂಭವಿಸುತ್ತವೆ. ನನ್ನ ಸರ್ಕಾರವು ಕಾನೂನು ಮತ್ತು ಶಾಂತಿ ಪಾಲನೆಗೆ ಬದ್ಧವಾಗಿದೆ. ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವ ಯಾವುದೇ ವ್ಯವಸ್ಥೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.''

ಎಂಬುದು ರಾಜ್ಯಪಾಲರ ಮೊದಲನೇ ಭಾಷಣದಲ್ಲಿ ಈ ಸರ್ಕಾರ ನಮಗೆ ಕೊಟ್ಟಂಥ ಆಶ್ವಾಸನೆ. ಆದರೆ ಅಲ್ಲಿಂದ ಇಲ್ಲಿಯವರೆಗೆ ಈ ದಿಕ್ಕಿನಲ್ಲಿ ನಡೆದಿಲ್ಲ. ನಡೆದಿರತಕ್ಕಂಥ ಘಟನೆಗಳನ್ನು ನಾವು ನೋಡಿದರೆ ಬಹಳ ದುಃಖವಾಗುತ್ತದೆ. ಈ ಸರ್ಕಾರ ಬಂದ ತಕ್ಷಣ ಶಾಂತಿ ಪಾಲನೆಯಲ್ಲಿ ವಿಫಲವಾಗಿದೆ ಎಂದು ನಾವು ಬಹಳ ನೋವಿನಿಂದ ಹೇಳಬೇಕಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ತಕ್ಷಣ

ಗುಂಡಾಗಿರಿ ಜಾಸ್ತಿಯಾಗುತ್ತದೆ, ಕೊಲೆಗಳು ಜಾಸ್ತಿಯಾಗುತ್ತವೆ, ದರೋಡೆಗಳು ಜಾಸ್ತಿಯಾಗುತ್ತವೆ ಎಂದು ಸಾರ್ವಜನಿಕರು ಹೇಳುವ ಮಾತು ಇವತ್ತು ಸಾಬೀತಾದ ಹಾಗೆ ಕಾಣಿಸುತ್ತಿದೆ. ಮೊದಲನೇ ಘಟನೆ, ಇಡೀ ಕರ್ನಾಟಕವೇ ತಲೆತಗ್ಗಿಸುವಂಥ ಘಟನೆ ಆದಂಥಾದ್ದು ಕೋಲಾರ ಜಿಲ್ಲೆ ಕಂಬಾಲಪಲ್ಲಿಯಲ್ಲಿ. ಅಲ್ಲಿ 7 ಜನ ದಲಿತರ ಸಜೀವದಹನವಾಯಿತು. ಕರ್ನಾಟಕದ ಇತಿಹಾಸದಲ್ಲಿ ಅದೊಂದು ಕರಾಳ ದಿನ. ಇತಿಹಾಸದಲ್ಲಿ ಬರೆಯತಕ್ಕಂಥ ಒಂದು ಕೆಟ್ಟ ಚರಿತ್ರೆ. ಅದಾದ ಮೇಲೆ, ಸುಮಾರು ಮೂರು ತಿಂಗಳ ಕಾಲ ಡಾ|| ರಾಜ್‌ಕುಮಾರ್‌ರವರ ಅಪಹರಣವಾಯಿತು. ಆ ಸಂದರ್ಭದಲ್ಲಿ ಅನೇಕ ರೀತಿಯ ಅನಾನುಕೂಲಗಳು ಸಾರ್ವಜನಿಕರಿಗೆ ಆದವು. ದಲಿತರಿಗೆ ರಕ್ಷಣೆ ಕಡಿಮೆಯಾಗಿದೆ ಎನ್ನುವ ಭಾವನೆ ಅನೇಕ ನಿದರ್ಶನಗಳಿಂದ ನಮಗೆ ಗೊತ್ತಾಗುತ್ತದೆ. ಕಾರಣವೇನೆಂದರೆ, ಎಷ್ಟೋ ಕಡೆ ಅವರ ಮೇಲೆ ದಬ್ಬಾಳಿಕೆ ನಡೆದಿರತಕ್ಕಂಥಾದ್ದು ಮತ್ತು ಅವರ ಕೊಲೆಗಳು ಜಾಸ್ತಿಯಾಗಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಮೊನ್ನೆ ಉತ್ತರ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಅಫ್ಜಲ್‌ಪುರದ ದೌರ್ ಗ್ರಾಮದಲ್ಲಿ ಪಂಚಾಯಿತಿಯ ಒಬ್ಬ ದಲಿತ ಸದಸ್ಯರ ಕಗ್ಗೊಲೆಯಾಯಿತು. ಅದರ ಬಗ್ಗೆ ಅಲ್ಲಿಯ ದಲಿತ ಸಂಘಟನೆಗಳು ಪ್ರತಿಭಟನೆ ಮಾಡಿದವು. ಇದುವರೆಗೆ ಅದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಒಬ್ಬ ದಲಿತ ಮಹಿಳೆಯನ್ನು ಅರೆಬೆತ್ತಲೆಗೊಳಿಸಿ, ಮೆರವಣಿಗೆಯನ್ನು ಮಾಡಿದರು. ಅದರ ಬಗ್ಗೆ ದೊಡ್ಡ ಗಲಾಟೆಯಾಗಿ, ದಲಿತ ಸಂಘಟನೆಗಳಿಂದ ಅದರ ವಿರುದ್ಧ ಪ್ರದರ್ಶನಗಳು ನಡೆದು ಪ್ರತಿಭಟನೆಯಾಯಿತು. ಕಾಗೋಡು ತಿಮ್ಮಪ್ಪನವರು ಅಲ್ಲಿಗೆ ಹೋಗಿದ್ದರು ಎಂದು ವರದಿಯಾಗಿದೆ. ಅಲ್ಲಿ ಘರ್ಷಣೆಯನ್ನು ತಡೆಗಟ್ಟುವಲ್ಲಿ ತಾವು ಪ್ರಯತ್ನ ಮಾಡಿದ್ದೀರಿ ಎಂದು ಹೇಳಿದ್ದಾರೆ.

(ಈ ಹಂತದಲ್ಲಿ ಬಿ.ಬಿ.ಶಿವಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಆಳಂದ ತಾಲ್ಲೂಕಿನ ಹೂಡಲು ಗ್ರಾಮದಲ್ಲಿ ಒಬ್ಬ ಯುವಕನ ಬರ್ಬರ ಕೊಲೆಯಾಗಿದ್ದು, ಅದು ಪೊಳ್ಳು ಘಟನೆ ಎಂದು ಆಗಿದೆ. ಬೀದರ್‌ನಲ್ಲಿ ಚರ್ಚ್ ಒಂದಕ್ಕೆ ರಕ್ಷಣೆ ಇಲ್ಲದೇ ಅಲ್ಲಿ ಲಾಠಿ ಪ್ರಹಾರ ಮತ್ತು ಅಶ್ರುವಾಯು ಪ್ರಯೋಗ ಆಗಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ನೆಲಮಂಗಲ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕೆಲವು ದಲಿತ ಸಂಘಟನೆಗಳ ಮೇಲೆ ಸವರ್ಣೀಯರು ಗೂಂಡಾಗಿರಿ ಪ್ರವೃತ್ತಿಯನ್ನು ಪ್ರದರ್ಶನ ಮಾಡಿದ್ದಾರೆ. ಮಂಡ್ಯದಲ್ಲಿ ಈಗಾಗಲೇ ಅನೇಕ ಘಟನೆಗಳು ನಡೆದಿವೆ. ಇಬ್ಬರು ಹೆಣ್ಣುಮಕ್ಕಳ ಕೊಲೆಯಾಗಿದೆ, ಇನ್ನೂ ಮುಂದುವರೆಸಿಕೊಂಡು ಬಂದಿರುವ ದಲಿತರ ಜೀತ ಪದ್ಧತಿಯ ಮೇಲೆ ಹಂಗರಹಳ್ಳಿ ಗ್ರಾಮದಲ್ಲಿ ಒಂದು ದೊಡ್ಡ ವಿವಾದವೇ ಆಯಿತು. ಅದಾದ ಮೇಲೆ ಮದ್ದೂರು ತಾಲ್ಲೂಕಿನಲ್ಲಿ ಒಂದು

ಕೊಲೆಯಾಯಿತು. ಕೆ.ಆರ್.ಪೇಟೆಯ ಗುಬ್ಬಿನಕೆರೆಯಲ್ಲಿ ಒಂದು ದೊಡ್ಡ ಘಟನೆಯಾಯಿತು. ಬೆಂಗಳೂರಿನಲ್ಲಂತೂ ಎಷ್ಟೊಂದು ಕೊಲೆಗಳು ಆಗಿವೆ ಎಂದರೆ ಕಳೆದ ಆಗಸ್ಟ್ ತಿಂಗಳಲ್ಲಿ ಸುಮಾರು 22 ದಿನಗಳಲ್ಲಿ 24 ಕೊಲೆಗಳಾಗಿವೆ ಎಂದು ವರದಿಯಾಗಿದೆ. ಕೊಲೆಯಾದವರಲ್ಲಿ ದೊಡ್ಡ ದೊಡ್ಡ ಹಿರಿಯ ನಾಗರೀಕರು, ಹೆಣ್ಣು ಮಕ್ಕಳು ಉದ್ದಿಮೆದಾರರು ಇದ್ದಾರೆ. ಇವೆಲ್ಲ ಸೇರಿ ಬೆಂಗಳೂರು ನಗರದಲ್ಲಿ ಸುಮಾರು ನೂರಾರು ಕೊಲೆಗಳು ಕೇವಲ ಒಂದೇ ವರ್ಷದಲ್ಲಿ ಆಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ದಂಡುಪಾಳ್ಯ ಗ್ಯಾಂಗ್‌ನವರಿಂದ ಈ ವರ್ಷದಲ್ಲಿಯೇ ಸುಮಾರು 150 ರಿಂದ 200ಕ್ಕೂ ಹೆಚ್ಚು ಕೊಲೆಗಳು ಆಗಿರುವಂಥಾದ್ದನ್ನು ನೋಡಿದ್ದೇವೆ. ಈ ಗ್ಯಾಂಗ್‌ನವರು ಮನೆಯಲ್ಲಿ ಯಾರಾದರೂ ಒಬ್ಬರೇ ಇದ್ದಂಥ ಸಂದರ್ಭದಲ್ಲಿ ಗ್ಯಾಂಗ್‌ನ ಹೆಣ್ಣುಮಗಳನ್ನು ಕಳುಹಿಸಿ ನೀರು ಕುಡಿಯುವ ನೆಪದಲ್ಲಿ ಬಾಗಿಲು ತೆಗೆದು ಮೇಲೆ ಗ್ಯಾಂಗ್‌ನವರು ಹೋಗಿ ಕೊಲೆ ಮಾಡಿ ದೋಚುವಂಥಾದ್ದು, ಈ ರೀತಿ ಭಂಡಾರಿ ಎನ್ನುವವರ ಪತ್ನಿಯನ್ನು ಕೊಲೆ ಮಾಡಿರತಕ್ಕಂಥಾದ್ದನ್ನು ನೋಡಿದ್ದೇವೆ. ಅದೇ ರೀತಿ 23 ವರ್ಷದ ದಿನೇಶ್ ಎನ್ನುವ ಚಾರ್ಟೆಡ್ ಅಕೌಂಟ್‌ನನ್ನು ರಾತ್ರಿ 9-30 ಗಂಟೆಯಲ್ಲಿ ಮನೆ ಬಾಗಿಲು ತೆಗೆದು ಶೂಟ್ ಮಾಡಿ ಹೊರಗೆ ಬಂದಿದ್ದಾರೆ. ಶೇಷಾದ್ರಿಪುರ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ ಸುಬ್ಬರಾಜುವಿನ ಕೊಲೆಯಾಯಿತು. ಮಂಗಳೂರಿನಲ್ಲಿ ರಕ್ಷಾಶೆಟ್ಟಿ, ಮಂಜುಳಾ ಜಮಖಂಡಿ ಹೀಗೆ ಹೇಳುತ್ತಾ ಹೋದರೆ ಸುಮಾರು ನೂರಾರು ಕೊಲೆಗಳನ್ನು ನಾವು ಬೆಂಗಳೂರಿನಲ್ಲಿ ನೋಡುತ್ತಿದ್ದೇವೆ. ಇದಕ್ಕೆಲ್ಲ ಕಾರಣವೇನೆಂದರೆ, ಕರ್ನಾಟಕದಲ್ಲಿ ಬೆಂಗಳೂರು ನಗರ ಸಿಲಿಕಾನ್ ವ್ಯಾಲಿ ಎಂದು ಪ್ರಸಿದ್ಧಿಯಾಗಿದೆ. ಸಾಫ್ಟ್‌ವೇರ್ ಕಂಪನಿ ಮಾಡುವುದಕ್ಕೆ ಮುಕ್ತ ಅವಕಾಶ ಕೊಟ್ಟಿದ್ದು ಇಲ್ಲಿ ಒಳ್ಳೆಯ ವಾತಾವರಣ ಇದೆಯೆಂದು ಹೇಳುತ್ತಿರುತ್ತಾರೆ. ಮತ್ತೊಂದು ಕಡೆ ಸೈಬರ್ ಕ್ರೈಮ್ಸ್ ಜಾಸ್ತಿಯಾಗುತ್ತಿದೆ. ಬೇರೆ ಬೇರೆ ರಾಜ್ಯಗಳಿಂದ ಕ್ರಿಮಿನಲ್ಸ್ ಬೆಂಗಳೂರಿಗೆ ಬಂದು ಬಹಳ ಸಲೀಸಾಗಿ ಎಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದಾರೆ. ದಂಡುಪಾಳ್ಯದ ಗ್ಯಾಂಗ್‌ನವರು ಮಾಡಿರುವ ಕೊಲೆಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯದ ರಚನೆ ಮಾಡಿ ಅತೀ ಶೀಘ್ರವಾಗಿ ಇತ್ಯರ್ಥ ಮಾಡಬೇಕೆಂದು ಬೆಂಗಳೂರಿನಲ್ಲಿ ಸಾರ್ವಜನಿಕರು ಅನೇಕ ಮನವಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆದರೆ ಇದುವರೆಗೆ ಸರ್ಕಾರ ವಿಶೇಷ ನ್ಯಾಯಾಲಯವನ್ನು ರಚನೆ ಮಾಡುವ ಬಗ್ಗೆ ಚಿಂತನೆ ಮಾಡಿಲ್ಲವೆಂದು ನನಗನ್ನಿಸುತ್ತದೆ. ಇನ್ನು ಕೆ.ಆರ್.ನಗರದ ಬೇರಿಯಾ ಎನ್ನುವ ಊರಿನಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ನಾಗ ಎನ್ನುವ ಒಬ್ಬ ಹುಡುಗನ ಲಾಕ್‌ಅಪ್ ಡೆತ್ ಆಯಿತು. ಈ ಲಾಕ್‌ಅಪ್ ಡೆತ್‌ಗೆ ಕಾರಣಕರ್ತರಾದ ಸಂಬಂಧಪಟ್ಟ ಇನ್ಸ್‌ಪೆಕ್ಟರ್ ಒಬ್ಬರನ್ನು ದೂರಿನ ಮೇಲೆ ಸಸ್ಪೆಂಡ್ ಮಾಡಿದರು. ಮತ್ತು ಅಲ್ಲಿಯ ದಲಿತ ಸಂಘಟನೆಗಳು ಹೋರಾಟ ಮಾಡಿ ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಕ್ರಿಮಿನಲ್ ಕೇಸ್

ಚಾರ್ಜ್‌ಶೀಟ್ ಹಾಕಬೇಕೆಂದು ಹೇಳಿದರು. ಆದರೆ ಇನ್ನೂ ಸರ್ಕಾರದ ಕಡೆಯಿಂದ ಕ್ರಮ ತೆಗೆದುಕೊಂಡಿಲ್ಲ. ಲಾಕ್‌ಅಪ್ ಡೆತ್‌ಗೆ ಕಾರಣಕರ್ತರಾದ ಒಬ್ಬ ಇನ್ಸ್‌ಪೆಕ್ಟರನ್ನು ಸರ್ಕಾರ ಏನು ಸಸ್ಪೆಂಡ್ ಮಾಡಿದೆ, ಅದೇ ಇನ್ಸ್‌ಪೆಕ್ಟರನ್ನು ಪುನಃ ಅಲ್ಲಿಗೆ ನೇಮಕ ಮಾಡತಕ್ಕಂಥ ಹುನ್ನಾರ ಸರ್ಕಾರದಲ್ಲಿ ನಡೆದಿದೆ ಎನ್ನತಕ್ಕಂಥ ಭಯ ಅಲ್ಲಿಯ ದಲಿತರಲ್ಲಿ ಹುಟ್ಟಿದೆ. ಇಂಥ ಕೆಲಸಕ್ಕೆ ಮಾನ್ಯ ಗೃಹಸಚಿವರು ಅವಕಾಶ ಕೊಡಬಾರದೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಅವರ ಹಿಂದಿನ ಭಾಷಣದಲ್ಲಿ ಮಾತನಾಡುತ್ತಾ - 'ಯಾವುದೇಸಂದರ್ಭದಲ್ಲಿ ನಾವು ಗೋಲಿಬಾರ್‌ನ್ನು ಮಾಡಿಸುವುದಿಲ್ಲ, ನಮ್ಮದು ಗೋಲಿಬಾರ್ ಸರ್ಕಾರವಲ್ಲ, ಶಾಂತಿಪಾಲನೆ ಮಾಡುತ್ತೇವೆ' ಎನ್ನತಕ್ಕಂಥ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಚಾಮರಾಜನಗರ ಜಿಲ್ಲೆಯ ಬಂಡಳ್ಳಿ ಗ್ರಾಮದಲ್ಲಿ ಕಳೆದ 2 ತಿಂಗಳ ಹಿಂದೆ ಆದಂಥ ಘಟನೆ ಏನಿದೆ ಇಲ್ಲಿ ಗೋಲಿಬಾರ್ ಮಾಡುವಂಥ ಪರಿಸ್ಥಿತಿ ಇರಲಿಲ್ಲ. ಅಲ್ಲಿಗೆ ನಮ್ಮ ಮಾನ್ಯ ಸಿಂಧ್ಯಾ ಅವರು ಹೋಗಿ ಬಂದಿದ್ದಾರೆ, ನಾನು ಅಲ್ಲಿಗೆ ಹೋಗಿದ್ದೇನೆ, ನಮ್ಮ ಪಕ್ಷದ ಅಧ್ಯಕ್ಷರು ಸಹ ಹೋಗಿದ್ದಾರೆ. ಅಲ್ಲಿ ಏನಾಗಿದೆ ಎಂದರೆ ಹಿಂದೆ ನಮ್ಮ ಸರ್ಕಾರ ಮಂಜೂರಾತಿ ಮಾಡಿದಂಥ ಆಸ್ಪತ್ರೆಯ ಉದ್ಘಾಟನೆಯನ್ನು ಈಗಾಗಲೇ ಅಲ್ಲಿಯ ಜನರೇ ಮಾಡಿಕೊಂಡು, ಆಸ್ಪತ್ರೆಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಆದರೂ ಸಹಿತ ಯಾವುದೋ ಒಂದು ರಾಜಕೀಯ ದ್ವೇಷಕ್ಕೋಸ್ಕರ ಈಗಿರತಕ್ಕಂಥ ಶಾಸಕರು ಅದನ್ನು ಉದ್ಘಾಟನೆ ಮಾಡುವಾಗ ಆ ಆಸ್ಪತ್ರೆಗೆ ಜಾಗ ಯಾರು ಕೊಟ್ಟಿದ್ದರು ಅವರು ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಹಾಕತಕ್ಕಂಥ ಸೌಜನ್ಯ ತೋರಿಸಲಿಲ್ಲವೆಂದು ಆ ಊರಿನ ಜನರು....

ಶ್ರೀ ಜಿ.ರಾಜುಗೌಡ(ಹನೂರು): ದಯವಿಟ್ಟು ಕ್ಷಮಿಸಬೇಕು. ಆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನಮ್ಮ ಸರ್ಕಾರ ಮಾಡಿರತಕ್ಕದ್ದು. ಇದಕ್ಕೂ ಮೊದಲು ಅದು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿತ್ತು. ಮೊನ್ನೆ ಕಟ್ಟಡದ ಕೆಲಸ ಮುಗಿದಾಗ ಆಹ್ವಾನ ಪತ್ರಿಕೆಯನ್ನು ಅಲ್ಲಿರುವ ಜಿಲ್ಲಾ ಪಂಚಾಯಿತಿಯವರು, ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯವರು ಮಾಡಿರತಕ್ಕದ್ದು. ಅದರಲ್ಲಿ ಎಲ್ಲಾ ಜನಪ್ರತಿನಿಧಿಗಳ ಹೆಸರನ್ನು ಹಾಕಿದ್ದಾರೆ. ಆದರೆ ಆಸ್ಪತ್ರೆ ಕಟ್ಟಡಕ್ಕೆ ನಿವೇಶನವನ್ನು ಯಾರು ಕೊಟ್ಟಿದ್ದರೋ ಅವರ ಹೆಸರು ಪ್ರಥಮತಃ ಆಹ್ವಾನ ಪತ್ರಿಕೆಯಲ್ಲಿ ಇರಬೇಕಾಗಿತ್ತೆಂದು ಪ್ರತಿಭಟನೆ ಮಾಡಿರತಕ್ಕಂಥಾದ್ದು. ಅಲ್ಲಿ ಉದ್ಘಾಟನಾ ಕಾರ್ಯಕ್ರಮ ಮಧ್ಯಾಹ್ನ 2-00 ಗಂಟೆ ಇತ್ತು. ಗೋಲಿಬಾರ್ ಆಗಿರತಕ್ಕಂಥಾದ್ದು 9-00 ಗಂಟೆಗೆ. ಇದಕ್ಕೆ ಯಾರು ಜವಾಬ್ದಾರರು? ಅಲ್ಲಿ ಜನರನ್ನು ಸೇರಿಸಿಕೊಂಡು ಯಾವುದೋ ಒಂದು ಅಕ್ರಮವನ್ನು, ಅಹಿತಕರ ಘಟನೆಯನ್ನು ಮಾಡಬೇಕೆಂಬ ಉದ್ದೇಶದಿಂದ ಇದನ್ನು ಮಾಡಲಾಗಿದೆ. ತಾವು ಇದರ ಬಗ್ಗೆ ತಪ್ಪು ತಿಳಿದುಕೊಂಡು ಮಾತನಾಡುತ್ತಿದ್ದೀರಿ. ದಯಮಾಡಿ ತಾವು ಶಾಸಕರ ಬಗ್ಗೆ ಮಾತನಾಡಬಾರದಾಗಿತ್ತು.

ಶ್ರೀ ಬಿ.ಸೋಮಶೇಖರ್: ಮಾನ್ಯ ಚೇರ್‌ಮನ್‌ರವರೆ, ನಾವು ಆ ಊರಿಗೆ ಹೋಗದೆ ಕೇವಲ ಪತ್ರಿಕೆಗಳ ವರದಿಯ ಆಧಾರದ ಮೇಲೆ ಇಲ್ಲಿ ಮಾತನಾಡುತ್ತಿದ್ದರೆ ಅವರು ಹೇಳುವುದನ್ನು ನಾನು ಒಪ್ಪುತ್ತಿದ್ದೆ. ಆದರೆ ನಾನೇ ಖುದ್ದಾಗಿ ಆ ಊರಿಗೆ ಭೇಟಿ ಕೊಟ್ಟಿದ್ದೇನೆ. ನಮ್ಮ ಪಕ್ಷದ ಇನ್ನೂ ಮೂರು ಜನ ಮುಖಂಡರು ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ನಾವು ಅಲ್ಲಿನ ವಾಸ್ತವಾಂಶ ಪರಿಸ್ಥಿತಿಯನ್ನು ಅಧ್ಯಯನ ಮಾಡಿಕೊಂಡು ಬಂದಿದ್ದೇವೆ.ಕೇವಲ ಸರ್ಕಾರವನ್ನು ದೂಷಣೆ ಮಾಡುವ ಉದ್ದೇಶದಿಂದ ನಾವು ಮಾತನಾಡುತ್ತಿಲ್ಲ. ಅಂಥ ಚಟವೂ ನಮಗಿಲ್ಲ. ಅಲ್ಲಿ ಕಟ್ಟಡವನ್ನು ಜಿಲ್ಲಾ ಪಂಚಾಯತ್‌ನವರು ಮತ್ತು ಸಾರ್ವಜನಿಕರು ಈಗಾಗಲೇ ಉದ್ಘಾಟನೆ ಮಾಡಿಬಿಟ್ಟಿದ್ದಾರೆ. ಅಲ್ಲಿ ಆಸ್ಪತ್ರೆ ನಡೆಯುತ್ತಿದೆ.

ಶ್ರೀ ಜಿ.ರಾಜುಗೌಡ: ಮಾನ್ಯ ಚೇರ್‌ಮನ್‌ರವರೆ, ದಿನಾಂಕ 19-1-2001ರಂದು ಅದು ಪ್ರಾರಂಭವಾಯಿತು. ಅದಕ್ಕೂ ಮೊದಲು ಇದು ಬಾಡಿಗೆ ಕಟ್ಟಡದಲ್ಲಿ ಇತ್ತು. ಇದಕ್ಕೆ ಸಂಬಂಧಪಟ್ಟಂತೆ ಆಗಿರುವ ರೆಸಲ್ಯೂಷನ್‌ನ್ನು ತಮಗೆ ಬೇಕಾದರೆ ಆಧಾರವಾಗಿ ಕೊಡುತ್ತೇನೆ. ಜಿಲ್ಲಾ ಪಂಚಾಯತ್ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು 19-01-2001ರಂದು ಕಟ್ಟಡದ ಪ್ರಾರಂಭೋತ್ಸವಕ್ಕೆ ಸಂಬಂಧಪಟ್ಟಂತೆ ಆಹ್ವಾನ ಪತ್ರಿಕೆಯನ್ನು ಮಾಡಿದ್ದರು. ಆದರೆ ಇದಕ್ಕೂ ಮೊದಲು ಇದು ಯಾವ ಕಟ್ಟಡದಲ್ಲಿ ಇತ್ತು ಎಂಬ ಬಗ್ಗೆ ರೆಸಲ್ಯೂಷನ್ ದಾಖಲೆಗಳನ್ನು ತಮಗೆ ಬೇಕಾದರೆ ತಂದು ತೋರಿಸುತ್ತೇನೆ. ತಾವು ಹಿಂದೆ ಆಗಿರುವುದನ್ನೆಲ್ಲ ತಿಳಿದುಕೊಳ್ಳದೆ ಹಾಗೆಲ್ಲ ಮಾತನಾಡಬಾರದು ಮಾನ್ಯ ಚೇರ್‌ಮನ್‌ರವರೆ, ತಾವು ದಯಮಾಡಿ ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಅವಕಾಶ ಮಾಡಿಕೊಟ್ಟಕ್ಕೆ ಇದಕ್ಕ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳನ್ನು ತಂದುಕೊಡುತ್ತೇನೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಚೇರ್‌ಮನ್‌ರವರೆ, ಅಲ್ಲಿ ಇಲ್ಲಿನ ಚರ್ಚೆಗಳು ವಾದವಿವಾದಗಳು ಬೇಡ. ಅಲ್ಲಿ ಸಬ್ ಇನ್ಸ್‌ಪೆಕ್ಟರ್ ಗೋಲಿಬಾರ್ ಮಾಡುವಂಥ ಪರಿಸ್ಥಿತಿ ಇರಲಿಲ್ಲ. ಸೇರಿದಂಥ ಸಾವಿರಾರು ಜನರು ಸದರಿ ಸ್ಥಳದಿಂದ ಬಿಟ್ಟುಹೋದ ಮೇಲೆ, ಅಲ್ಲಿ ಒಂದು ಕಡೆ ಬಸ್‌ಸ್ಟಾಪ್‌ನಲ್ಲಿ 40-50 ಜನರು ಇದ್ದಾಗ ಅಂಥ ಕಡೆ ಹೋಗಿ ವಾಟರ್‌ಮೆನ್ ಯಾರು ಇದ್ದರೋ ಅವನ ಹತ್ತಿರ ಬೀಗದ ಕೀ ಏನಿತ್ತೊ ಅದನ್ನು ತೆಗೆದುಕೊಂಡು ಬಾ ಎಂದು ಹೇಳಿದಾಗ.....

ಶ್ರೀ ಜಿ.ರಾಜುಗೌಡ: 19-01-2001ರ ಮಧ್ಯಾಹ್ನ 2-00 ಗಂಟೆಗೆ ಉದ್ಘಾಟನಾ ಕಾರ್ಯಕ್ರಮವಿತ್ತು. ಪೋಲೀಸ್‌ನವರು ನಮ್ಮ ಹತ್ತಿರ ಬಂದು ಕಾರ್ಯಕ್ರಮಕ್ಕೆ ಹೋಗುವುದು ಬೇಡ ಎಂದು ಹೇಳಿದರು. ಆದ್ದರಿಂದ ನಾವು ಹೋಗಲಿಲ್ಲ. ಗೋಲಿಬಾರ್ ಆಗಿರುವುದು ರಾತ್ರಿ 9-00 ಗಂಟೆಯಲ್ಲಿ. ಅಲ್ಲಿ ಸಭೆ ನಡೆಯುತ್ತಿತ್ತೆ?

ಕಾಂಗ್ರೆಸ್ ಕಾರ್ಯಕರ್ತರು ಅಲ್ಲಿಗೆ ಹೋಗಿದ್ದರೇ? ಶಾಸಕರು ಹೋಗಿದ್ದರೇ? ಯಾರೂ ಹೋಗಿರಲಿಲ್ಲ. ಆದರೂ ಗೋಲಿಬಾರ್ ಏಕೆ ಆಯಿತು? ಅಲ್ಲಿ ರಾತ್ರಿ 9-00 ಗಂಟೆಯಲ್ಲಿ ಏಕೆ ಜನರು ಸೇರಿದ್ದರು? ಯಾರನ್ನು ಕೊಲೆ ಮಾಡಬೇಕೆಂದು ಜನರನ್ನು ಸೇರಿಸಿದ್ದರು? ತಾವು ದಯಮಾಡಿ ಇದನ್ನು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಬಿ.ಸೋಮಶೇಖರ್: ಮಾನ್ಯ ಚೇರ್‌ಮನ್‌ರವರೆ, ಮಾನ್ಯ ಸದಸ್ಯರು ಅವರ ವಾದವನ್ನು ಮಂಡಿಸಿದರು. ನಮ್ಮ, ಜನರ ಒತ್ತಾಯದ ಮೇರೆಗೆ ಸರ್ಕಾರವು ಈಗಾಗಲೇ ಇದರ ಬಗ್ಗೆ ನ್ಯಾಯಾಂಗ ತನಿಖೆಗೆ ಭರವಸೆ ನೀಡಿದೆ. ಮಾನ್ಯ ಶಾಸಕರು ನ್ಯಾಯಾಂಗ ತನಿಖೆಯಲ್ಲಿ ಅವರ ವಾದವನ್ನು ಮಂಡಿಸಲಿ. ಜನರು ಸಹ ಅವರ ವಾದವೇನಿದೆ ಅದನ್ನು ಮಂಡಿಸಲಿ. ಸರ್ಕಾರ ಏನು ನ್ಯಾಯಾಂಗ ತನಿಖೆ ಮಾಡುವುದಾಗಿ ಭರವಸೆ ನೀಡಿದೆ ಅದನ್ನು ತಕ್ಷಣವೇ ಮಾಡಬೇಕೆಂಬುದು ನಮ್ಮ ಒತ್ತಾಯವಾಗಿದೆ. ಈಗಾಗಲೇ ಅಪಘಾತಗಳು ಜಾಸ್ತಿಯಾಗುತ್ತಿವೆ. ಮೊನ್ನೆ ಮಳವಳ್ಳಿಯಲ್ಲಿ ಟೆಂಪೋ ಆಟೋರಿಕ್ಷಾ ನಡುವೆ ಅಪಘಾತವಾಗಿ ಮೂರು ಜನರು ಸತ್ತಿದ್ದಾರೆ. ಇತ್ತೀಚೆಗೆ ಚಿತ್ರದುರ್ಗದಲ್ಲಿ ಕೆರೆಗೆ ಬಸ್ಸು ಬಿದ್ದು ಸುಮಾರು 40-50 ಜನ ಮೃತಪಟ್ಟಿರುವ ಉದಾಹರಣೆ ಇದೆ. ಹೀಗೆ ದಿನೇ ದಿನೇ ಅಪಘಾತಗಳು ಜಾಸ್ತಿಯಾಗುತ್ತಿವೆ. ಈ ರೀತಿ ಅಪಘಾತಗಳು ಜಾಸ್ತಿಯಾಗಲು ಕಾರಣಗಳೇನು? ಇದಕ್ಕೆ ಪರಿಹಾರವೇನು? ಎಂಬ ಬಗ್ಗೆ ಚಿಂತನೆ ನಡೆದಿಲ್ಲ. ಕಳೆದ ಒಂದೂವರೆ ವರ್ಷದಿಂದಲೂ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾಗಲೀ, ಗೃಹಸಚಿವರಾಗಲೀ ಚರ್ಚೆಯನ್ನು ಮಾಡಿ ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನ ಮಾಡಿಲ್ಲವೆಂದು ನಾವು ಆರೋಪವನ್ನು ಮಾಡಿದ್ದೇವೆ. ನನ್ನ ದೃಷ್ಟಿಯಲ್ಲಿ ಕಾನೂನು ಸುವ್ಯವಸ್ಥೆ ಅಸ್ತವ್ಯಸ್ತಗೊಳ್ಳಲು ಇಲಾಖೆಯಲ್ಲಿರುವ ಭ್ರಷ್ಟ ಅಧಿಕಾರಿಗಳಿಗೆ ಮನ್ನಣೆ ಸಿಗುತ್ತಿರುವುದೇ ಕಾರಣವಾಗಿದೆ. ಇವರಿಗೆ ಮನ್ನಣೆ ಸಿಗುತ್ತಿರುವ ವಾತಾವರಣವಿರುವುದರಿಂದ, ಈ ಒಂದು ಘಟನೆ ನಡೆಯುತ್ತಿದೆ. ನಿಮಗೆ ನಿಜವಾಗಿಯೂ ಶಾಂತಿಪಾಲನೆ ಮಾಡಬೇಕೆಂದಿದ್ದರೆ, ಸುವ್ಯವಸ್ಥೆ ಕಾಪಾಡಬೇಕಾಗಿದ್ದರೆ, ರಾಜಕೀಯ ಇಚ್ಛಾಶಕ್ತಿ ಇದ್ದರೆ, ಸ್ವಲ್ಪಮಟ್ಟಿಗೆ ಯಾರ ಮೇಲೆ ಭ್ರಷ್ಟಾಚಾರ ಆಪಾದನೆ ಇದೆ ಅವರನ್ನು ಆಯಕಟ್ಟಿನ ಜಾಗಗಳಿಂದ ತೆಗೆದು ಬೇರೆ ಕಡೆಗೆ ಹಾಕುವ ಕೆಲಸ ಮಾಡದಿದ್ದರೆ, ಈ ಕೆಲಸ ನಿರಂತರವಾಗಿ ನಡೆಯುತ್ತಿರುತ್ತದೆ. ಕಾರಣವೇನೆಂದರೆ, ಇಂಥ ಅಧಿಕಾರಿಗಳು ನಕ್ಸಲೈಟ್, ದರೋಡೆಕೋರರ, ಕೊಲೆಗಾರರ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿರುವುದನ್ನು ನಾವು ಕೇಳಿದ್ದೇವೆ. ಅಂಥವರನ್ನೆ ಆಯಕಟ್ಟಿನ ಜಾಗಗಳಿಗೆ ಹಾಕುವುದಾದರೆ ನೀವು ಶಾಂತಿಪಾಲನೆಯನ್ನು ಕಾಪಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಮೊನ್ನೆ ತಾನೆ ಬೆಂಗಳೂರಿನಲ್ಲಿ ಎಐಸಿಸಿ ವಿಶೇಷ ಅಧಿವೇಶನವನ್ನು ತಾವು ನಡೆಸಿದಿರಿ. ಆ ಅಧಿವೇಶನಕ್ಕೆ ಮೊದಲು

ತಾವು, ನಮ್ಮ ಅಧಿವೇಶನ ಬಹಳ ಸರಳವಾಗಿರುತ್ತದೆ, ಲೋ-ಕಿ ಪ್ರೊಫೈಲ್ ಆಗಿರುತ್ತದೆಂದು ಹೇಳಿದ್ದೀರಿ. ಆದರೆ, ಅಲ್ಲಿ ನಡೆದ ರೀತಿ ನೋಡಿದರೆ ಸಾರ್ವಜನಿಕರು, ಏನು ಇಷ್ಟೊಂದು ಸರಳವಾಗಿ ನಡೆಸಿದ್ದಾರೆ, ಇಷ್ಟೊಂದು ಬಡತನದಿಂದ ನಡೆದಿರುವ ಅಧಿವೇಶನವಿದು, ಯಾವುದೇ ಪಕ್ಷದವರು ಈ ರೀತಿ ಮಾಡಿಲ್ಲವೆಂದು ಹೇಳುತ್ತಾರೆ. ಏಕೆಂದರೆ, ಬಿಜಾಪುರದಿಂದ ಜೋಳವನ್ನು ವಸೂಲಿ ಮಾಡಿಕೊಂಡು ತಂದಿರಿ, ಮಠಗಳಲ್ಲಿ ಸ್ವಾಮೀಜಿಗಳು ದವಸಧಾನ್ಯಗಳನ್ನು ಏನು ಮಾಡುತ್ತಾರೋ ಆ ರೀತಿ ತಂದಿರಿ, ಭಿಕ್ಷೆ ಮಾಡಿ ತಂದಿರಿ. ಕೋಲಾರದಿಂದ ಹಣ್ಣು ತರಕಾರಿ ತರಿಸಿದಿರಿ. ಶಾಸಕರುಗಳಿಂದ, ಕಾರ್ಯಕರ್ತರಿಂದ ಹಣವನ್ನು ಕಲೆಕ್ಟ್ ಮಾಡಿದಿರಿ. ಅದಕ್ಕೆ 50,000 ರೂ ಅಥವಾ 1,00,000ರೂಪಾಯಿಗಳನ್ನು ಖರ್ಚು ಮಾಡಿರಬಹುದು ಅಥವಾ 25 ರಿಂದ 30 ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದು ಪ್ರೇಕ್ಷಕರು ನೋಡಿ ತೀರ್ಮಾನ ಮಾಡಿದ್ದಾರೆ. ಅದು ಪತ್ರಿಕೆಗಳಲ್ಲಿ ಮತ್ತು ದೂರದರ್ಶನದಲ್ಲೂ ಬಂದಿದೆ. ಅವರು ಏಟನ್ನು ತಿಂದುಕೊಂಡು ಬಂದಿದ್ದಾರೆ. ಲೋ ಪ್ರೊಫೈಲ್ ಆಗಿದ್ದಿದ್ದರೆ ಅವರಿಗೆ ಏಕೆ ಏಟು ಹೊಡೆಯಬೇಕಿತ್ತು? ನಮ್ಮದು ತೆರೆದ ಪುಸ್ತಕದ ಹಾಗೆ, ಸರಳವಾಗಿ ಮಾಡಿದ್ದೇವೆ, ಹಿಟ್ಟು, ಉಪ್ಪುಸಾರು ಬಿಟ್ಟರೆ, ಚಿತ್ರಾನ್ನ, ಮೊಸರನ್ನ ಮಾತ್ರ ಹಂಚಿದ್ದೇವೆ, ನೋಡಿಕೊಂಡು ಹೋಗಿ ಎಂದು ಹೇಳಬಹುದಾಗಿತ್ತು. ಇದಕ್ಕೆ ಎಷ್ಟು ಹಣ ಖರ್ಚಾಗಿದೆ? ಸರ್ಕಾರದವರು ಇದನ್ನು ಸಾರ್ವಜನಿಕವಾಗಿ ಹೇಳಬೇಕಾಗುತ್ತದೆ. ಎಷ್ಟು ಹಣ ಖರ್ಚಾಗಿದೆ. ಈ ಹಣ ಎಲ್ಲೆಲ್ಲಿಂದ ಬಂತು?

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ ಸಚಿವರು): ಹಿಂದೆ 1961ನೇ ಇಸವಿಯಲ್ಲಿ ಇಲ್ಲಿ ಅಧಿವೇಶನ ನಡೆದಿತ್ತು. ಸಂಜೀವರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ದಿವಂಗತ ವೀರಣ್ಣಗೌಡರು ಅಧ್ಯಕ್ಷರಾಗಿದ್ದರು. 'ನೆನಪುಗಳು' ಎಂಬ ಅವರ ಪುಸ್ತಕವಿದೆ, ಅವರು ಅದರಲ್ಲಿ ಆ ಅಧಿವೇಶನಕ್ಕೆ 21 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿತ್ತೆಂಬುದನ್ನು ಪ್ರಸ್ತಾಪಿಸಿದ್ದಾರೆ. ಪ್ಲೀನರಿ ಸೆಷನ್ ಅಂದರೆ ಕೇವಲ ಒಂದೆರಡು ಸಾವಿರ ಜನರು ಬರುವುದಿಲ್ಲ. ಅಂದೇ 21 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರಬೇಕಾದರೆ, ಅದರ ವ್ಯವಸ್ಥೆ ಮಾಡಬೇಕಾಗಿದ್ದರೆ ಎಷ್ಟು ಕಷ್ಟವಾಗುತ್ತದೆ? ಇಂದು ಒಂದು ರೂಪಾಯಿ ಬೆಲೆ ಎಷ್ಟಿದೆ? ನಿಮಗೆ ಲೆಕ್ಕ ಹಾಕುವುದಕ್ಕೆ ಬರುವುದಿಲ್ಲವೆ?

ಶ್ರೀ ಬಿ.ಸೋಮಶೇಖರ್: ನಮ್ಮ ತಕರಾರೇನಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್: ತಕರಾರಿಲ್ಲವೆಂದರೆ, ಈ ಸಭೆಯಲ್ಲೇಕೆ ಅದನ್ನು ಪ್ರಸ್ತಾಪಿಸಬೇಕಿತ್ತು?

ಶ್ರೀ ಬಿ.ಸೋಮಶೇಖರ್: 100 ಕೋಟಿ ಖರ್ಚು ಮಾಡಿದ್ದರೆ, ಅಥವಾ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಹೇಳಿ?

ಶ್ರೀ ಕೆ.ಹೆಚ್.ರಂಗನಾಥ್: ಅದು ಸಭೆಗೆ ಸಂಬಂಧಪಟ್ಟಿದ್ದೆ?

ಶ್ರೀ ಬಿ.ಸೋಮಶೇಖರ್: ಸಾರ್ವಜನಿಕ ಹಣವದು, ಎಲ್ಲಿಂದ, ಹೇಗೆ ಬಂತು?

ಶ್ರೀ ಕೆ.ಹೆಚ್.ರಂಗನಾಥ್: ನಾವು ಅಪರಾಧ ಮಾಡಿ ಕಲೆಕ್ಟ್ ಮಾಡಿದ್ದರೆ ಹೇಳಿ,

SRI B.SOMASHEKAR: I am going to charge; how you have collected and you have to justify your actions.

ಶ್ರೀ ಕೆ.ಹೆಚ್.ರಂಗನಾಥ್: ಸ್ವಾಮೀಜಿಗಳ ತರಹ ಜೋಳವನ್ನು ಭಿಕ್ಷೆ ಎತ್ತಿಕೊಂಡು ಬಂದಿದ್ದೀರೆಂದು ಹೇಳಿದಿರಲ್ಲ.

ಶ್ರೀ ಬಿ.ಸೋಮಶೇಖರ್: ಈ ರೀತಿ ಭಿಕ್ಷೆ ಮಾಡಿ ತಂದಿದ್ದೇವೆ, ತಮ್ಮ ಕಾರ್ಯ ಕರ್ತರಿಂದ ಕಲೆಕ್ಟ್ ಮಾಡಿದ್ದೇವೆಂದು ಹೇಳಿ. ನಮಗೆ ಬಂದಿರುವ ಸುದ್ದಿ ಪ್ರಕಾರ, ಈ ವಿಚಾರದಲ್ಲಿ ಪ್ರತಿಯೊಂದು ಇಲಾಖಾಧಿಕಾರಿಗಳಿಗೆ ಟಾರ್ಗೆಟ್ ಫಿಕ್ಸ್ ಮಾಡಿದ್ದಾರೆ. ಇದನ್ನು ನಾನು ಹೇಳುತ್ತಿಲ್ಲ. ನಿಮ್ಮ ಅಧಿಕಾರಿಗಳು ಹೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಎಲ್ಲಾ ಪೊಲಿಟಿಕಲ್ ಪಾರ್ಟೀಸ್ ಏನು ಮಾಡುತ್ತಾರೆಯೋ ಹಾಗೆ, ನೀವು ಹೇಗೆ ಮಾಡಿದ್ದೀರಿ? ಅಧಿಕಾರಿಗಳ ಹತ್ತಿರ ಕಲೆಕ್ಟ್ ಮಾಡಿದ್ದೀರಾ?

ಶ್ರೀ ಬಿ.ಸೋಮಶೇಖರ್: ನಾವು 5 ವರ್ಷಗಳಲ್ಲಿ ಅಧಿಕಾರಿಗಳ ಹತ್ತಿರ ಕಲೆಕ್ಟ್ ಮಾಡಿ ಈ ರೀತಿ ಅಧಿವೇಶನ ಮಾಡಿಲ್ಲ. ಆ ರೀತಿ ಮಾಡಿದ್ದಿದ್ದರೆ, ತೋರಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಎಲ್ಲ ಪೊಲಿಟಿಕಲ್ ಪಾರ್ಟಿಯವರು ಯಾವ ರೀತಿಯಾಗಿ ಬೇರೆಯವರ ಹತ್ತಿರ ಚಂದಾ ವಸೂಲಿ ಮಾಡಿ ಮಾಡುತ್ತಾರೆಯೋ, ಅದೇ ರೀತಿ ಇವರೂ ಮಾಡುತ್ತಾರೆ. ನೀವು ಹೇಳುವ ಹಾಗೆ, ಒಂದು ಉದಾಹರಣೆ ಕೊಡಿ ನೋಡೋಣ.

ಶ್ರೀ ಎಸ್.ಎಸ್.ಪಾಟೀಲ್: ತೆಹಲ್ಕಾ ಹಗರಣವೇನಿದೆ, ಅದರಲ್ಲಿ ಅವರು ಹಣವನ್ನು ಪಾರ್ಟಿಗೆಂದೇ ತೆಗೆದುಕೊಂಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಧಿವೇಶನ ಮಾಡುವುದು ಒಂದು ಹಗರಣವೆ?

ಶ್ರೀ ಬಿ.ಸೋಮಶೇಖರ್: ನೀವು ಅಧಿವೇಶನ ಮಾಡುವುದು ನಿಮ್ಮ ಪಕ್ಷದ ಕಾರ್ಯಕ್ರಮ. ನಾವು ಅದಕ್ಕೆ ಅಡ್ಡಿ ಬರುವುದಕ್ಕಾಗುವುದಿಲ್ಲ. ನಿಮ್ಮ ಪಕ್ಷದಲ್ಲಿ ನಮ್ಮಂಥವರು ಒಂದು ದಿನವೂ ಇರುವುದಕ್ಕಾಗುವುದಿಲ್ಲ. ನಿಮ್ಮ ಪಕ್ಷದ ಸಂಸ್ಕೃತಿಯೇ ಬೇರೆ, ನಮ್ಮ ಸಂಸ್ಕೃತಿಯೇ ಬೇರೆ. ಅಧಿವೇಶನ ಮಾಡುವುದು ನಿಮ್ಮ ಹಕ್ಕು, ಮಾಡಿಕೊಳ್ಳಿ, ಆದರೆ, ಇಲ್ಲಿ ನಡೆದಿರುವ ವಿಧಾನ, ಯಾವ ರೀತಿ ಖರ್ಚಾಗಿದೆ? ಇದಕ್ಕೆ ಹಣ ಎಲ್ಲಿಂದ ಬಂತು? ಸಹಕಾರ ಕೊಟ್ಟಿದ್ದೀರೆಂದು ನಿಮ್ಮ ಅಧ್ಯಕ್ಷರಿಗೆ, ಮುಖ್ಯಮಂತ್ರಿಗಳಿಗೆ ಕಂಗ್ರಾಚ್ಯುಲೇಟ್ ಮಾಡಿ ಪತ್ರ ಬರೆದಿದ್ದಾರೆ. ಆ ಅಧಿವೇಶನಕ್ಕೆ ಯಾವ ರೀತಿಯಾಗಿ ಸರ್ಕಾರದಿಂದ ಸಹಕಾರ ಸಿಕ್ಕಿದೆ? ಅದನ್ನೆಲ್ಲಾ ನಾವು ತಿಳಿಯಬೇಕಾಗಿದೆ. ನೀವು ಅದನ್ನು ಹೇಳಿದರೆ ನಮ್ಮದೇನಿಲ್ಲ. ನಮಗೆ ಬಂದಿರುವ ಸುದ್ದಿ ಪ್ರಕಾರ, ಎಷ್ಟು ಕೋಟಿ ರೂಪಾಯಿಗಳನ್ನು ಸಂಗ್ರಹಿಸಲಾಗಿದೆ ಎಂಬ ಬಗ್ಗೆ ಎಷ್ಟೋ ಜನ ಅಧಿಕಾರಿಗಳು ತಿಳಿಸಿದ್ದಾರೆ. ಅವರ ಹೆಸರನ್ನು ನಿಮಗೆ ಹೇಳುವುದಕ್ಕಾಗುವುದಿಲ್ಲ. ಪ್ರತಿಯೊಂದು ಇಲಾಖೆಗಳಿಗೆ ಪ್ರತಿಯೊಂದು ತಾಲ್ಲೂಕಿನಲ್ಲಿ ಇಷ್ಟಿಷ್ಟು ಹಣವನ್ನು ಫಿಕ್ಸ್ ಮಾಡಿರುವ ಬಗ್ಗೆ ಹೇಳಿದ್ದಾರೆ. ಇದನ್ನು ತಾವು ನಿರಾಕರಿಸಿದರೆ, ನಿರಾಕರಿಸಿ. ಆದರೆ, ಸಾರ್ವಜನಿಕರಿಗೆ ಗೊತ್ತಾಗಲಿ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು): ಇವರ ಭಾಷಣವನ್ನು ಯಾರಾದರೂ ಕೇಳಿದರೆ, ಸರ್ಕಾರದವರು ಅಧಿವೇಶನ ನಡೆಸಿದರು, ನಡೆಸಿದ ಕಾರ್ಯಕ್ರಮದಲ್ಲಿ ಪ್ರತಿ ಅಧಿಕಾರಿಯಿಂದ ಇಂತಿಷ್ಟೆಂದು ಹೇಳಿ ವಸೂಲಿ ಮಾಡಿದರು ಎಂದು ಯಾವುದನ್ನು ನೆನೆಸಿಕೊಂಡು ಹೇಳುತ್ತಿದ್ದಾರೆಯೋ ನನಗೆ ಗೊತ್ತಿಲ್ಲ. ಈ ಸರ್ಕಾರದ ಮುಖ್ಯಸ್ಥನಾಗಿ, ಈ ಸರ್ಕಾರದಲ್ಲಿ ಮುಂದೆ ಕುಳಿತಿರುವವರ ಪರವಾಗಿ ಇಂಥ ಬೇಜವಾಬ್ದಾರಿಯುತ ಆಪಾದನೆಗಳನ್ನು ನಮ್ಮ ಅಧಿಕಾರಿಗಳ ಮೇಲೆ ಮಾಡಬಾರದೆಂದು ಖಂಡತುಂಡವಾಗಿ ಹೇಳುತ್ತೇನೆ. ಕಾಂಗ್ರೆಸ್ ಸಂಸ್ಥೆ ನಿನ್ನೆ ಹುಟ್ಟಿದ್ದಲ್ಲ, 115 ವರ್ಷಗಳ ಹಿಂದೆ ಸ್ಥಾಪಿತವಾಗಿದೆ. ಅವರೊಂದು ಅಧಿವೇಶನ ಮಾಡ ಬೇಕಾಗಿದ್ದರೆ ಅಧಿಕಾರಿಗಳ ಹತ್ತಿರ ಕೈಯೊಡ್ಡಬೇಕಾಗಿಲ್ಲ. ಅದಕ್ಕೆ ಹಣ ಕೊಡುವ ಜನರು ಬೇರೆ ಇದ್ದಾರೆ, ಅವರ ವರ್ಗ ಬೇರೆ ಇದೆ. ಆ ವರ್ಗದ ಮೇಲೆ ಕೊಡುತ್ತಾರೆ. ಆದರೆ, ಅಧಿವೇಶನ ನಡೆಸಿರುವವರು ಕೆಪಿಸಿಸಿಯವರು, ಕೆಪಿಸಿಸಿಯವರು ನಿಮಗೆ ಬದ್ಧರಾಗಿರಬೇಕೆ? ಕಾಂಗ್ರೆಸ್ ಪಕ್ಷ ಟೂರಿಂಗ್ ಟಾಕೀಸ್ ಅಲ್ಲ.

ಶ್ರೀ ಬಿ.ಸೋಮಶೇಖರ್: ಕಾಂಗ್ರೆಸ್ ಬಗ್ಗೆ ನನಗೆ ಗೊತ್ತು. 115 ವರ್ಷಗಳ ಇತಿಹಾಸ ಅದಕ್ಕಿದೆ. ಆ ಪಕ್ಷದ ಬಗ್ಗೆ ನಾನು ಹಗುರವಾಗಿ ಮಾತನಾಡುತ್ತಿಲ್ಲ.

ಶ್ರೀ ಜಿ.ರಾಜುಗೌಡ: ಆ ಪಕ್ಷಕ್ಕೆ ಒಂದು ದಿನವೂ ಬರುವುದಿಲ್ಲವೆಂದು ಹೇಳಿದಿರಿ.

ಶ್ರೀ ಬಿ.ಸೋಮಶೇಖರ್: ಕಾಂಗ್ರೆಸ್ ಇತಿಹಾಸ ನನಗೆ ಗೊತ್ತಿದೆ. 1969ನೇ ಇಸವಿಯವರೆಗೆ ಯಾವ ರೀತಿ ಇತ್ತು? ಎಂಬ ಬಗ್ಗೆ ಇತಿಹಾಸ ತಿಳಿದುಕೊಂಡಿದ್ದೇನೆ. 1969ರ ನಂತರ ಕಾಂಗ್ರೆಸ್ಸಿನ ದೃಷ್ಟಿಕೋನ ಯಾವ ರೀತಿ ಹೋಗಿದೆ, ಏನೇನು ಬೆಳವಣಿಗೆಯಾಗಿದೆ? ಯಾವ್ಯಾವ ರೀತಿ ಸಂಸ್ಕಾರಗಳು ಹುಟ್ಟಿಕೊಂಡು ಬಂದಿದೆ ಎಂದು ನನಗೆ ಗೊತ್ತಿದೆ. ಈ ಒಂದು ಆಪಾದನೆ ಬಗ್ಗೆ ನಾನು ಹಗುರವಾಗಿ ಮಾತನಾಡುತ್ತಿಲ್ಲ.

12.40 ಪಿಎಂ

ಇದು ಜನಜನಿತವಾದ ಮಾತಾಗಿರುವುದರಿಂದ ವಿರೋಧ ಪಕ್ಷದಲ್ಲಿರುವವರು ಈ ರೀತಿಯ ದೂರುಗಳು ಬಂದಾಗ ನಾವುಗಳು ಹೇಳಬೇಕಾಗುತ್ತದೆ. ಇವತ್ತು ಎಷ್ಟು ಹಣ ಖರ್ಚಾಗಿದೆ? ತಾವು .ಬೇರೆ ಬೇರೆ ರೂಪದಲ್ಲಿ ಹಣ ಬಂತು ಎಂದು ಹೇಳಿದಿರಿ, ಯಾರ್‍ಯಾರು ಎಷ್ಟೆಷ್ಟು ಕೊಟ್ಟಿದ್ದಾರೆ, ಯಾವ ಅಬಕಾರಿ ಗುತ್ತಿಗೆದಾರರು ಕೊಟ್ಟಿದ್ದಾರೆ, ಇದನ್ನೆಲ್ಲಾ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಚುನಾವಣಾ ಆಯೋಗದವರು ಎಲ್ಲಾ ರಾಜಕೀಯ ಪಕ್ಷಗಳ ಅಕೌಂಟ್ಸ್ ನೋಡುವುದು, ನೋಂದಾವಣೆ ಮಾಡುವುದು, ಇತ್ಯಾದಿಗಳನ್ನು ಏನು ಮಾಡುತ್ತಾರೆ, ಆ ಅಧಿಕಾರವನ್ನು ಬಹುಶಃ ಇವರೇ ವಹಿಸಿಕೊಂಡರೆ ನಾವು ಇವರಿಗೆ ತಂದು ಸಬ್‌ಮಿಟ್ ಮಾಡುತ್ತೇವೆ.

ಶ್ರೀ ಬಿ.ಸೋಮಶೇಖರ್: ನಿಮಗೆ ಬಂದಂಥ ದೂರನ್ನು ನೀವು ಯಾವ ರೀತಿ ನಿವಾರಣೆ ಮಾಡುತ್ತೀರಿ ಅದು ನಿಮಗೆ ಬಿಟ್ಟಂಥ ವಿಚಾರ. ಅಲ್ಲಿ ನಮ್ಮ ಮುಖ್ಯಮಂತ್ರಿಗಳು ಹಾಗೂ ಕೇಂದ್ರದ ನಾಯಕರುಗಳು ಕೆಲವು ನಿರ್ಣಯಗಳನ್ನು ಮಾಡಿದರು. ತಾವು ಏನು ನೀತಿ ನಿಯಮಗಳನ್ನು ಹೇಳಿದ್ದಿರೋ ಆ ರೀತಿ ನಮ್ಮ ರಾಜ್ಯದ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಬೀರುತ್ತದೆ, ನಮ್ಮ ರಾಜ್ಯದ ಜನತೆಯ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಬೀರುತ್ತದೆ ಎಂಬುದನ್ನು ಹೇಳಬೇಕು. ಒಂದು ಕಡೆ ಎನ್‌ಡಿಎ ಸರ್ಕಾರ, ಡಬ್ಲ್ಯೂಟಿಓ-ನ ಸಂಸ್ಥೆಯಡಿಯಲ್ಲಿರುವ ಒಳ್ಳೆಯ ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕು, ಕೃಷಿಯ ಮೇಲೆ ಹೆಚ್ಚಿನ ಬಂಡವಾಳವನ್ನು ಹೂಡುವುದರ ಜೊತೆಗೆ ಕೃಷಿಯ ಉತ್ಪನ್ನವನ್ನು ಜಾಸ್ತಿ ಮಾಡಿಕೊಳ್ಳಬೇಕಾಗುತ್ತದೆಂಬುದು ಡಬ್ಲ್ಯೂಟಿಓನ ನೀತಿ. ಇದು ಎನ್‌ಡಿಎ ಸರ್ಕಾರದ ನೀತಿಯಾಗಿದ್ದು ಇದನ್ನು ತಾವು ಒಪ್ಪಿದ್ದೀರಿ.

ಛೇರ್ಮನ್: ತಾವು ಹಿರಿಯ ಸದಸ್ಯರು ಹಾಗೂ ಮಂತ್ರಿಗಳಾಗಿ ಕೆಲಸ ಮಾಡಿದಂಥವರು, ನಾವು ಈಗ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುತ್ತಿರುವಾಗ ಅದಕ್ಕೆ ಸ್ವಲ್ಪ ಸೀಮಿತವಾಗಿಟ್ಟುಕೊಂಡು ಮಾತನಾಡಿದರೆ ಚೆನ್ನಾಗಿರುತ್ತದೆ, ಪಾರ್ಟಿಗಳ ಮತ್ತು ಪಾರ್ಟಿಗಳ ವ್ಯವಹಾರದ ಬಗ್ಗೆ ಚರ್ಚೆ

ಮಾಡುವುದಕ್ಕೆ ಬೇರೆ ಯಾವುದಾದರೂ ವ್ಯವಸ್ಥೆ ಮಾಡಿಕೊಂಡು ಚರ್ಚೆ ಮಾಡೋಣ.

ಶ್ರೀ ಬಿ.ಸೋಮಶೇಖರ್: ರಾಜ್ಯಪಾಲರ ಭಾಷಣವೆಂದರೆ ಒಂದು ಇಲಾಖೆಯ ಮೇಲೆ ಚರ್ಚೆ ಅಲ್ಲ, ಆ ಡಬ್ಲ್ಯೂಟಿಓ ಒಪ್ಪಂದ ಹಾಗೂ ಅದರ ಕಾರ್ಯಕ್ರಮಗಳು ಇವೆಲ್ಲವನ್ನು ಚರ್ಚೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಾರಿ "Anything and everything can be discussed under the sun in Governor's Address". ಎಂದು ಹೇಳಿದ್ದಾರೆ. ನಾನು ವಿಚಾರ ಇಲ್ಲದೇ ಇರತಕ್ಕಂಥಾದ್ದನ್ನು ಏನೂ ಹೇಳಿಲ್ಲ.

ಶ್ರೀ ಡಿ.ವಿ.ಸದಾನಂದಗೌಡ: ನಮ್ಮ ಕಾನೂನು ಸಚಿವರು ಕಳೆದ ಬಾರಿ ಒಂದು ಮಾತು ಹೇಳಿದ್ದಾರೆ, ರಾಜ್ಯಪಾಲರ ಭಾಷಣದ ಮೇಲೆ Anything under the sun can be discussed ಎಂದು ಹೇಳಿದ್ದಾರೆ.

ಛೇರ್ಮನ್: ಮಾನ್ಯ ಕಾನೂನು ಸಚಿವರು ಹೇಳಿರಬಹುದು, ಆದರೆ ಅವರು ಹೇಳಿದ್ದಾರೆಂದು ಉಪಯೋಗಿಸಿಕೊಂಡು ಎಲ್ಲಾ ವಿಚಾರಗಳನ್ನು ಹೇಳುವುದು ಸರಿಯಲ್ಲ. ಅವರು ಹೇಳಿದ್ದಾರೆಂದು ಏನು ಬೇಕಾದರೂ ಮಾತನಾಡಬಹುದು ಎಂದರೆ ಹೇಗೆ? ಇದು ಸದಸ್ಯರಿಗೆ ಬಿಟ್ಟಂಥ ವಿಚಾರ.

ಶ್ರೀ ಡಿ.ಬಿ.ಚಂದ್ರೇಗೌಡ: ನಾನು ಈಗಲೂ I stand by that statement ಅದರ ಅರ್ಥ ರಾಜ್ಯ ಸರ್ಕಾರಕ್ಕೆ ಸೀಮಿತವಾಗಿರುವ ಸಮಸ್ಯೆಗಳು, ಪಕ್ಷದ್ದಲ್ಲ, ಕಾಂಗ್ರೆಸ್ ಪಕ್ಷದ್ದು, ಬಿಜೆಪಿ ಪಕ್ಷದ್ದು, ಜನತಾದಳ ಪಕ್ಷದ್ದು, ಅದನ್ನು ಹೊರಗಡೆ ಚರ್ಚೆ ಮಾಡೋಣ. 'Under the sun' means, with reference to the administration and the Government.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ನನ್ನದೊಂದು ಕ್ರಿಯಾಲೋಪ, ಏನೆಂದರೆ, ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುತ್ತಿದ್ದಾರೆ ಬಹಳ ಸಂತೋಷ. ನಾವು ಅವರ ಮಾತುಗಳನ್ನು ಕೇಳುತ್ತಿದ್ದೇವೆ. ನನಗೇನು ಅನುಮಾನ ಎಂದರೆ, ಮಾನ್ಯ ಸದಸ್ಯರು ಮಾತನಾಡಬೇಕಾದರೆ, ಕಾಂಗ್ರೆಸ್ ಅಧಿವೇಶನದಲ್ಲಿ ಏನು ಚರ್ಚೆ ಆಗಿದೆ ಎನ್ನುವ ವಿಷಯವನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದಾರೆ. I would like to know under what provision of rules, he raises that. Rule 20 is Scope of Discussion, in Chapter V.

On such day or days or parts of any day, the House

shall be at liberty to discuss the matters referred to in such Address on a Motion of Thanks moved by a Member and seconded by another member.

Only the matters which are referred to in the Governor's Address. Of course we can discuss. But this is not the subject within the purview of the Governor's Address. I do not think the Member can drag this matter for discussion.

ದಯಮಾಡಿ ತಾವು ಇದರ ಬಗ್ಗೆ ಆದೇಶ ಕೊಡಿ.

ಛೇರ್ಮನ್: ಪಾರ್ಟಿಯ ವಿಚಾರ ಬೇಡ, ದಯಮಾಡಿ ವಿಷಯಕ್ಕೆ ಬನ್ನಿ.

ಶ್ರೀ ಬಿ.ಸೋಮಶೇಖರ್: ಎಐಸಿಸಿ ಅಧಿವೇಶನದಿಂದ ನಮ್ಮ ರಾಜ್ಯದ ಜನತೆಯ ಮೇಲೆ ಏನು ಪರಿಣಾಮವಾಗಿದೆ ಎಂದು ಚರ್ಚೆ ಮಾಡಬಾರದೆ? ಹಾಗಾದರೆ ಕೆಎಸ್‌ಟಿಡಿಸಿ-ಯ ಒಂದು ಸ್ಟಾಲ್ ಅನ್ನು ಅಲ್ಲಿ ಪ್ರಾರಂಭಿಸಿದರು, ಇದು ಸರ್ಕಾರದ ಸಂಸ್ಥೆಯಲ್ಲವೇ? ಅಲ್ಲಿ ಏಕೆ ಹಾಕಿದಿರಿ? ಅಲ್ಲಿ ಏನು ನಡೆಯಿತು ಅದನ್ನು ಇಲ್ಲಿ ಚರ್ಚಿಸುವುದಕ್ಕೆ ಆಗುವುದಿಲ್ಲವೇ?

ಶ್ರೀ ಡಿ.ಬಿ.ಚಂದ್ರೇಗೌಡ: ಅಲ್ಲಿಗೆ ರಾಷ್ಟ್ರದ ಅನೇಕ ನಾಯಕರುಗಳು ಬಂದಿರುವಾಗ ನಮ್ಮದು ಎಷ್ಟು ಪ್ರೊಗ್ರೇಸ್ಸಿವ್ ಆಗಿದೆ ಎಂದು ಹಾಕುವುದು ಬೇಡವೆ? ನಮ್ಮಷ್ಟಕ್ಕೆ ನಾವೇ ಕಪ್ಪೆಗೂಡಲ್ಲಿ ಚರ್ಚೆ ಮಾಡುವುದಾ?

ಶ್ರೀ ಬಿ.ಸೋಮಶೇಖರ್: ಹಾಗಾದರೆ ಅದನ್ನು ಇಲ್ಲಿ ಚರ್ಚಿಸುವುದು ಬೇಡವೇ? ಆ ಸ್ಟಾಲ್ ಹಾಕುವುದಕ್ಕೆ ಎಷ್ಟು ಖರ್ಚಾಯಿತು? ಅಲ್ಲಿ ಏನೇನು ವ್ಯವಸ್ಥೆಯಾಗಿತ್ತು? ಹಣ ಎಲ್ಲಿಂದ ಬಂತು? ಅದು ಸಾರ್ವಜನಿಕರ ಹಣ.

ಶ್ರೀ ಡಿ.ಬಿ.ಚಂದ್ರೇಗೌಡ: ಕೆಪಿಸಿಸಿ ಅಧ್ಯಕ್ಷರಿಗೆ ಪತ್ರ ಬರೆಯಿರಿ, ಅವರು ಉತ್ತರ ಕೊಡುತ್ತಾರೆ, ನಮ್ಮ ಸರ್ಕಾರಕ್ಕೆ ಏನೂ ಸಂಬಂಧವಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಕೆಪಿಸಿಸಿ ಅಧ್ಯಕ್ಷರು ಹೇಳಿದ್ದರಿಂದ ಅವರು ಆ ಪೆಂಡಾಲ್ ಅನ್ನು ಹಾಕಿದ್ದಾರೆಯೇ? ಹಾಗಾದರೆ ನಾಳೆ ಬಿಜೆಪಿ ಮತ್ತು ಜನತಾದಳ ಅಧ್ಯಕ್ಷರು ಹೇಳುತ್ತಾರೆ, ಆಗ ಅವರು ಪೆಂಡಾಲ್ ಹಾಕುತ್ತಾರೆಯೇ? ತಾವು ಆಡಳಿತ ನಡೆಸಿರುವವರು ಸುಮ್ಮನೆ ಏನೋ ಹೇಳಬೇಡಿ, ನೇರವಾಗಿ ಸರ್ಕಾರದವರು ಆದೇಶ

ಮಾಡಿದ್ದರಿಂದ ಅವರು ಅಲ್ಲಿಗೆ ಹೋಗಿದ್ದಾರೆ.

ಶ್ರೀ ಡಿ.ಬಿ.ಚಂದ್ರೇಗೌಡ: ಬಿಜೆಪಿ ಅಧ್ಯಕ್ಷರದ್ದು ಎಲ್ಲಾ ಟ್ರಾನ್ಸ್‌ಪರೆನ್ಸಿ, ಎಲ್ಲಾ ಡಾಟ್ ಕಾಮ್‌ನಲ್ಲಿ ಬರುತ್ತದೆ. ನಮಗೆ ಗೊತ್ತಿಲ್ಲ ಅವರು ಹೇಳಬೇಕು.

ಶ್ರೀ ಡಿ.ವಿ.ಸದಾನಂದಗೌಡ: ಎಲ್ಲಾ ವಿಚಾರಗಳನ್ನು ಪ್ರಸ್ತಾಪಿಸುವಂಥ ಅವಶ್ಯಕತೆ ಇಲ್ಲ, ಅದು ಡಾಟ್ ಕಾಮ್ ಇರಬಹುದು, ಟ್ರಾನ್ಸ್‌ಪರೆನ್ಸಿ ಇರಬಹುದು, ಅಲ್ಲಿಗೆ ಹೋಗಬೇಕಾಗಿಲ್ಲ. ಬೀದರ್‌ನಲ್ಲಿ ಗೊತ್ತಾಗಿದೆ, ನಿಮ್ಮ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಅಧಿಕಾರಿಗಳನ್ನು ಕೂರಿಸಿ 25 ಸಾವಿರ ಕಲೆಕ್ಟ್ ಮಾಡುವುದು ಬೀದರ್‌ನಲ್ಲಿ ನಡೆದಿರುವಾಗ ಅಲ್ಲಿಗೆ ಏಕೆ ನೀವು ಹೋಗುತ್ತೀರಿ? ಇದೇ ಟ್ರಾನ್ಸ್‌ಪರೆನ್ಸಿನಾ?

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ಕಮಿಷನ್ ತೆಗೆದುಕೊಂಡು ಬಾಕ್ಸ್‌ಗೆ ಹಾಕುವುದು ಇದು ದಾಖಲೆ....

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್: ಈ ಸಲ ಚುನಾವಣೆಯಲ್ಲಿ ಗೆದ್ದವರಿಗಿಂತ ಮಾನ್ಯ ಚಂದ್ರೇಗೌಡರು, **he will be more matured**,ಎಂದು ಕೊಂಡಿದ್ದೆ, **he is behaving like a First Time M.L.A. I am really worried; I am really surprised. (interruption) What transparency..** ಅವರು ಮಾತನಾಡುವಾಗ ಕೆಪಿಸಿಸಿ ಬಗ್ಗೆ ಮಾತನಾಡಬೇಡಿ ಎಂದವರು ಈಗ ನೀವೇ ಬಿಜೆಪಿಯ ಬಗ್ಗೆ ಮಾತನಾಡಿದರೆ ಹೇಗೆ? **What is this?**

ಶ್ರೀ ಡಿ.ಬಿ.ಚಂದ್ರೇಗೌಡ: ನಾನು ಬಿಜೆಪಿಯ ಬಗ್ಗೆ ಮಾತನಾಡಲಿಲ್ಲ, ಟ್ರಾನ್ಸ್‌ಪರೆನ್ಸಿ ಬಗ್ಗೆ ಮಾತನಾಡಿದೆ.....

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್: ನಾವು ಇಲ್ಲಿ ಕಿವಿ ಮೇಲೆ ಹೂವು ಇಟ್ಟುಕೊಂಡು ಕುಳಿತಿಲ್ಲ, ಕಿವಿಯನ್ನು ಸರಿಯಾಗಿ ಬಿಟ್ಟುಕೊಂಡು ಕುಳಿತ್ತಿದ್ದೇವೆ. **Behave like a matured man. You are a Parliamentary Affairs Minister!**

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ನನಗೂ ಕಳೆದ ಸುಮಾರು 33 ವರ್ಷಗಳಿಂದಲೂ

ಮೆಚ್ಯೂರಿಟಿ ಎನ್ನುವುದು ಇದೆ.

Sri S.Suresh Kumar: That you should exihibit. ಬರೀ ಹೇಳುವುದರಿಂದ ಅದು ಆಗುವುದಿಲ್ಲ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ನೀವು ಆ ವಿಚಾರ ಹೇಳುವುದನ್ನು ಬಿಟ್ಟುಬಿಡಿ. ನಾವು ಹೇಳುತ್ತಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್: ನಾವೆಲ್ಲಿ ಹೇಳುತ್ತಿದ್ದೇವೆ?

ಶ್ರೀ ಡಿ.ವಿ.ಎಸ್.ಸದಾನಂದಗೌಡ: ಅವರ ಜೊತೆ ಮಾತನಾಡುತ್ತಿದ್ದಾರೆ. ನಮ್ಮ ಜೊತೆ ಏಕೆ ಮಾತನಾಡಿದಿರಿ?

ಶ್ರೀ ಡಿ.ಬಿ.ಚಂದ್ರೇಗೌಡ: ವಸ್ತುಸ್ಥಿತಿಯನ್ನು ಹೇಳಿದೆ.

ಶ್ರೀ ಡಿ.ವಿ.ಎಸ್.ಸದಾನಂದಗೌಡ: ವಸ್ತು ಸ್ಥಿತಿಯನ್ನು ನಾನು ಹೇಳಲೆ?

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ಸತ್ಯ ಹೇಳಿದರೆ ಸ್ವಲ್ಪ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ಡಿ.ವಿ.ಸದಾನಂದಗೌಡ: ಯಾವುದು ಸತ್ಯ, ಮೊನ್ನೆ ಆ ಸೂಟ್‌ಕೇಸ್ ಮಾಜಿ ಪ್ರಧಾನಿ ಎಲ್ಲಿದ್ದರು? ಅಧಿವೇಶನದ ಮುಂದೆ ಇದ್ದರಲ್ಲ ಅವರ ಬಗ್ಗೆ ಏಕೆ ಮಾತನಾಡಲಿಲ್ಲ?

(ಗೊಂದಲ)

ಛೇರ್ಮನ್: ನೋಡಿ ಚರ್ಚೆ ಬೇರೆ ದಾರಿಗೆ ಹೋಗುತ್ತಿದೆ, ಇದರ ಆವಶ್ಯಕತೆ ಇಲ್ಲ,

(ಗೊಂದಲ)

ಛೇರ್ಮನ್: ಮಾನ್ಯ ಮುಖ್ಯಮಂತ್ರಿಗಳು 2-30ಕ್ಕೆ ಉತ್ತರ ಕೊಡುವವರು ಇದ್ದಾರೆ, ಅನೇಕ ಸದಸ್ಯರು ಇಲ್ಲಿ ಮಾತನಾಡಲು ಪಟ್ಟಿ ಕಳುಹಿಸಿದ್ದೀರಿ, ಮಧ್ಯೆ ಮಧ್ಯೆ ಈ ರೀತಿ ಗೊಂದಲ ಮಾಡಿದರೆ ಸಮಯ ಹಾಳಾಗುತ್ತದೆ. ಇದರಿಂದಾಗಿ

ಮಾತನಾಡಬಯಸಿರುವವರಿಗೆ ಅವಕಾಶ ಸಿಗುವುದಿಲ್ಲ, ಆದ್ದರಿಂದ 2-30ರ ಒಳಗೆ ಚರ್ಚೆ ಮುಗಿಯಬೇಕು. ಏಕೆಂದರೆ ಲಂಚ್‌ಬ್ರೇಕ್ ಇಲ್ಲ, ಆದ್ದರಿಂದ ದಯಮಾಡಿ ಸೀಮಿತವಾಗಿ ಮಾತನಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎನ್.ಸಂಪಂಗಿ: ನಮಗೆ ಅದೇನೊ ಡಾಟ್ ಕಾಮ್ ಅದು ಅರ್ಥವಾಗುತ್ತಿಲ್ಲ, ಅದಕ್ಕೆ ತಮ್ಮಲ್ಲಿ ನನ್ನ ಮನವಿ ಏನೆಂದರೆ, ಅದೇನೋ ತೆಹಲ್ಕಾ ಡಾಟ್ ಕಾಮ್ ಎನ್ನುವ ಏನು ಸಿನಿಮಾ ಇದೆ ಅದನ್ನು ತಮ್ಮ ಮೂಲಕ ನಮಗೆಲ್ಲರಿಗೂ ತೋರಿಸಿದರೆ ನಾವು ಕೂಡ ಅದನ್ನು ನೋಡುವುದಕ್ಕೆ ಅನುಕೂಲವಾಗುತ್ತದೆ.

ಛೇರ್ಮನ್: ಮಾನ್ಯ ಸಂಪಂಗಿಯವರ ಸಲಹೆ ಬಗ್ಗೆ ಯೋಚಿಸಿ, ವ್ಯವಸ್ಥೆ ಮಾಡೋಣ.

ಶ್ರೀ ಬಿ.ಸೋಮಶೇಖರ್: ನಾನು ಅನ್-ಪಾರ್ಲಿಮೆಂಟರಿ ಶಬ್ದವನ್ನು ಉಪಯೋಗಿಸಿದಾಗ ಮಾತ್ರ ಇಂಟರ್‌ಫಿಯರ್ ಆಗಬೇಕು. ಮಧ್ಯೆ ಮಧ್ಯೆ ಇಂಟರ್‌ಫಿಯರ್ ಆದಾಗ ನಮಗೆ ಸ್ವಲ್ಪ ಕಷ್ಟವಾಗುತ್ತದೆ. ತಾವು ಮಾಹಿತಿ-ತಂತ್ರಜ್ಞಾನ, ಟ್ರಾನ್ಸಪರೆನ್ಸಿ ಆಕ್ಟ್, ರೈಟ್ ಟು ಇನ್‌ಫರ್ಮೇಷನ್ ಆಕ್ಟ್ ತಂದಿರಿ. ನಾವು ಅದನ್ನು ಅಪ್ರಿಷಿಯೇಟ್ ಮಾಡಿದೆವು. ಟ್ರಾನ್ಸಪರೆನ್ಸಿ ಇಟ್ಟುಕೊಂಡಿರುವವರು ಪಾರದರ್ಶಕತೆಗೆ ಬಹಳ ಮಹತ್ವ ಕೊಡುವವರು ಈ ವಿಚಾರದಲ್ಲಿ ಪಾರದರ್ಶಕತೆಯನ್ನು ತೋರಿಸಿ ಎಂದು ನಾನು ಹೇಳುತ್ತೇನೆ. ಇದು ಸಾರ್ವಜನಿಕರಿಗೆ ಸಂಬಂಧಪಟ್ಟ ವಿಚಾರ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅದಕ್ಕೂ ಸರ್ಕಾರಕ್ಕೂ ಯಾವ ಸಂಬಂಧವೂ ಇಲ್ಲ. ಪಕ್ಷದ ವಿಚಾರವನ್ನು ಪಕ್ಷದ ವೇದಿಕೆಗೆ ಬಂದರೆ ತಿಳಿಸುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್: ಸರ್ಕಾರದಿಂದ ಖರ್ಚಾಗಿರಬಾರದು, ಅದಕ್ಕೆ ಪಾರ್ಟಿಯಿಂದ ಖರ್ಚು ಮಾಡಿರಬೇಕು. ಸರ್ಕಾರದ ಯಾವ ಇಲಾಖೆಯ ಹಣವದು? ಅದರ ಬಗ್ಗೆ ಹೇಳಿಕೆ ಕೊಡಿ. ಹಣ ಖರ್ಚಾಗಿದೆ. ನಾವು ಅದರ ಬಗ್ಗೆ ವಿವರ ತರಿಸುತ್ತೇವೆ.

ಶ್ರೀ ಯು.ಆರ್.ಸಭಾಪತಿ: ಹಣ ಬಿದ್ದಿದೆ ಎನ್ನುತ್ತಾರೆ? ಎಲ್ಲಿ ಬಿದ್ದಿದೆ? ಹೀಗೆ ವೇಗ್ ಆಗಿ ಹೇಳಿದರೇನು ಪ್ರಯೋಜನ? ನಿರ್ದಿಷ್ಟವಾಗಿ ಸರ್ಕಾರ ಇಂಥ ಇಲಾಖೆಯಿಂದ ಎಷ್ಟು ಹಣ ಒದಗಿಸಿಕೊಟ್ಟಿದೆ ಎಂದು ಹೇಳಿದರೆ ಹೇಳಲಿ.

ಶ್ರೀ ಬಿ.ಸೋಮಶೇಖರ್: ಒಂದೆಡೆ ಎನ್‌ಡಿಎ ಸರ್ಕಾರವನ್ನು ಟೀಕಿಸುತ್ತೀರಿ. ಮತ್ತೊಂದೆಡೆ ಎನ್‌ಎಡಿ ಸರ್ಕಾರದು ಪಾಲಿಸಿಯನ್ನು ಒಪ್ಪಿಕೊಳ್ಳುತ್ತೀರಿ. ಕೃಷಿ ಉತ್ಪಾದನೆಯನ್ನು ಜಾಸ್ತಿ ಮಾಡಬೇಕು, ಬಂಡವಾಳ ಹೂಡಿಕೆಯನ್ನು ಜಾಸ್ತಿ ಮಾಡಬೇಕೆಂದು ಡಬ್ಲ್ಯುಟಿಓ ತಿಳಿಸುತ್ತದೆ. ನಮ್ಮ ಪಾಲಿಸಿಯೇ ಕೇಂದ್ರ ಸರ್ಕಾರದ್ದೂ ಅದೇ ಇದೆ. ಮಲ್ಟಿನ್ಯಾಷನಲ್ ಕಂಪನಿಗಳಿಗೆ ನಮ್ಮ ರೆಡ್‌ಕಾರ್ಪೆಟ್ ಹಾಸುವ ಕಾರ್ಯಕ್ರಮವಿದೆ. ಪ್ರೈವೇಟೈಜೇಷನ್, ಗ್ಲೋಬಲೈಜೇಷನ್ ಮತ್ತು ಲಿಬರಲೈಜೇಷನ್ ಎನ್ನುತ್ತಾರೆ. ಇದರಲ್ಲಿ ಯಾವ್ಯಾವ ವರ್ಗಗಳಿಗೆ ಅನುಕೂಲವಾಗುತ್ತದೆನ್ನುವುದನ್ನು ತಾವು ಬೇರ್ಪಡಿಸಬೇಕಾಗುತ್ತದೆ. ಒಂದೆಡೆ ಸಣ್ಣ ರೈತರು, ಮಧ್ಯಮ ವರ್ಗ ರೈತರಿಗೆ ಅನುಕೂಲವಾಗಬೇಕು, ಅವರ ಹಿತವನ್ನು ಕಾಪಾಡಿಕೊಳ್ಳಬೇಕು. ಮತ್ತೊಂದೆಡೆ ಕಾರ್ಪೋರೇಟ್ ಅಗ್ರಿಕಲ್ಚರ್ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಈಗ ನಿಮ್ಮ ಪಕ್ಷದ ನಿಲುವೇನಿದೆ? ಕಾರ್ಪೋರೇಟ್ ಅಗ್ರಿಕಲ್ಚರ್‌ಗೆ ನಾವು ಅವಕಾಶ ಕೊಡಬಾರದು ಎಂಬ ನಕಾರಾತ್ಮಕವಾದ ನೀತಿ ಇದೆ. ಇಲ್ಲಿನ ಮುಖ್ಯಮಂತ್ರಿಗಳು ಬಯೋ ಮತ್ತು ಇನ್‌ಫರ್ಮೇಷನ್ ಟೆಕ್ನಾಲಜಿ ಎಂದು ಹೇಳಿಕೊಂಡು ಬರುತ್ತಿದ್ದಾರೆ. ಬಯೋ ಟೆಕ್ನಾಲಜಿ ಎನ್ನುವುದರಿಂದ ಯಾವ ವರ್ಗದವರಿಗೆ ಅನುಕೂಲವಾಗುತ್ತದೆ? ಬಯೋ ಟೆಕ್ನಾಲಜಿ ಮಧ್ಯಮ ವರ್ಗದ, ಸಣ್ಣ ರೈತರು ಮಾಡುವ ಕೆಲಸವೇ ಎಂದು ನಾನು ಹೇಳಿದ್ದೇನೆ. ಈಗಾಗಲೇ ನೀವು ಮಾನ್ಸಾಂಟೋ ಮತ್ತು ಮಹಾರಾಷ್ಟ್ರದ ಮೈಕೋ ಬಗ್ಗೆ ಜಂಟಿ ಒಪ್ಪಂದವನ್ನು ಮಾಡಿಕೊಂಡು ಹತ್ತಿ ಬೆಳೆಗೆ ಒಪ್ಪಿಗೆ ಕೊಟ್ಟಿದ್ದೀರಿ. ಅದರ ದುಷ್ಪರಿಣಾಮದ ಬಗ್ಗೆ ರೈತ ಸಂಘಟನೆಗಳು ಹೇಳಿವೆ. ಅದೇನಾದರೂ ಅನುಷ್ಠಾನಕ್ಕೆ ಬಂದರೆ ಅದು ನಮ್ಮ ಸಣ್ಣ ರೈತರ ಮೇಲೆ ಯಾವ ರೀತಿ ದುಷ್ಪರಿಣಾಮ ಬೀರಬಹುದು? ಬೇರೆ ಬೇರೆ ಕ್ಷೇತ್ರಗಳಲ್ಲಿ ಬಹು ರಾಷ್ಟ್ರೀಯ ಕಂಪನಿಗಳು ಬರಬಹುದೆಂಬ ಭಯ ನಮ್ಮ ರೈತರನ್ನು ಕಾಡುತ್ತಿದೆ. ಅದರ ಬಗ್ಗೆ ನೀವು ಸ್ಪಷ್ಟ ನಿಲುವನ್ನು ತೆಗೆದುಕೊಳ್ಳಬೇಕು? ರಾಷ್ಟ್ರೀಯ ಪಕ್ಷದ ನಿಲುವಿನಲ್ಲಿ ಹೋಗುತ್ತೀರೋ, ಬಯೋ ಟೆಕ್ನಾಲಜಿ, ಅದಕ್ಕೆ ವಿರುದ್ಧ ನೀತಿಯನ್ನು ಅನುಸರಿಸಿಕೊಂಡು ಹೋಗುತ್ತೀರೋ ಎಂದು ನಾನು ಕೇಳುತ್ತೇನೆ. ಡಬ್ಲ್ಯುಟಿಓ ಸೆಲ್ ವರದಿ ಏನು ಕೊಟ್ಟಿದೆ ಅದರಲ್ಲಿಯೂ ಸಹ ಇಂದು ಕಾರ್ಪೋರೇಟೈಜೇಷನ್ ಆಫ್ ಅಗ್ರಿಕಲ್ಚರ್‌ಗೆ ಹೆಚ್ಚಿಗೆ ಮಹತ್ವ ಕೊಡಬೇಕೆಂದಿದೆ. ಈಗಾಗಲೇ ಆ ವರದಿಯನ್ನು ನಿಮ್ಮ ಪಕ್ಷದವರು ಹೊಗಳಿದ್ದಾರೆ. ಮಾನ್ಯ ಬಲರಾಂ ಜಾಖಡ್ ಇರಬಹುದು, ಮತ್ತೊಬ್ಬರಿರಬಹುದು, ಇನ್ನೊಂದು ಪಕ್ಷದ ನಾಯಕರು, ಸಣ್ಣ ಮತ್ತು ಅತಿ ಸಣ್ಣ ಮಧ್ಯಮ ವರ್ಗದ ರೈತರಿಗೆ ಹೆಚ್ಚು ಅವಕಾಶ ಕೊಡಬೇಕೆಂದು ಹೇಳಿದ್ದಾರೆ. ಇವೆರಡೂ ದ್ವಂದ್ವ ನೀತಿಯಾಗುತ್ತದೆ. ಇದರ ಬಗ್ಗೆ ತಾವು ಸ್ಪಷ್ಟ ನಿಲುವು ತೆಗೆದುಕೊಳ್ಳಬೇಕು. ಆಡಳಿತ ಸುಧಾರಣೆ ಬಗ್ಗೆ ಸಮಿತಿ ರಚಿಸಿದ್ದೀರಿ. ಆಡಳಿತದಲ್ಲಿ ಬಿಗಿ, ಪಾರದರ್ಶಕತೆ, ದಕ್ಷತೆ ಬರಬೇಕಾದರೆ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ತಾವು ಹೇಳಿದ್ದೀರಿ, ಆ ಒಂದು ಚಿಂತನೆಯನ್ನು ನಾವು ಸ್ವಾಗತಿಸಿದ್ದೇವೆ.

ಆ ದಿಕ್ಕಿನಲ್ಲಿ ಒಂದು ಸಮಿತಿ ರಚಿಸಿದ್ದೀರಿ. ಆದರೆ, ಆಡಳಿತದಲ್ಲಿ ಇಲ್ಲಿಯವರೆಗೆ ಏನು ನಡೆಯುತ್ತಿದೆ? ಎಲ್ಲಾ ಇಲಾಖೆಗಳ ಕಾರ್ಯ ವೈಖರಿ ನೋಡಿದಾಗ, ಯಾವುದೇ ಇಲಾಖೆಯ ಕಛೇರಿಯಲ್ಲಾಗಲಿ ಪೋಲೀಸ್ ಸ್ಟೇಷನ್‌ಗಳಲ್ಲಾಗಲಿ, ತಾಲ್ಲೂಕು ಪಂಚಾಯತಿಯಲ್ಲಾಗಲಿ, ಕೆಇಬಿಯಲ್ಲಾಗಲಿ ಇಂದು ಸಂಪೂರ್ಣವಾಗಿ ಆಡಳಿತ ಕುಸಿದು ಬಿದ್ದಿದೆ. ಸಾರ್ವಜನಿಕರಿಗೆ, ಇಂದು ದುಡ್ಡು ಕೊಡದೆ ಯಾವುದೂ ಕೆಲಸವಾಗುತ್ತಿಲ್ಲ. ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ಪ್ರಾಮಾಣಿಕ ಸರ್ಕಾರ ಕೊಟ್ಟಿದ್ದೇವೆಂದು ನಾವೂ ಹೇಳುವುದಿಲ್ಲ. ವಾಸ್ತವಾಂಶವೇನಿದೆ, ಯಾವುದೇ ಕೆಲಸವಾಗಬೇಕಾದರೆ ದುಡ್ಡಿಲ್ಲದೆ ಆಗುತ್ತಿಲ್ಲ. ಸರ್ಕಾರದ ಹಿತ ಕೊನೆಯ ಆದ್ಯತೆಯಾಗಿ, ವೈಯಕ್ತಿಕ ಹಿತ ಮೊದಲನೆಯ ಆದ್ಯತೆ ಎಂಬ ಭಾವನೆ ಇಂದು ಸಾರ್ವಜನಿಕರಲ್ಲಿ ಬರುತ್ತಿದೆ. ಇಂದು ಆ ದಿಕ್ಕಿನಲ್ಲಿ ತೀವ್ರವಾದ ಬದಲಾವಣೆಗಳಾಗಬೇಕಾಗಿದೆ. ಸರ್ಕಾರ ಸಾರ್ವಜನಿಕರ ವಿಚಾರದಲ್ಲಿ ಗಮನಹರಿಸಬೇಕಾಗಿದೆ. ಮಾನ್ಯ ಚಂದ್ರೇಗೌಡರು ಇಂದು ಕಾನೂನು ಮಂತ್ರಿಗಳಾಗಿದ್ದಾರೆ. ಸರ್ಕಾರದ ಹಿತವಿರುವ ಕೇಸುಗಳಿವೆ. ಯಾವುದೋ ಒಂದು ಸ್ಕೂಲ್ ಕಟ್ಟಡದ ಜಾಗವಿರಬಹುದು, ದೇವಸ್ಥಾನಕ್ಕೆ ಕೊಟ್ಟ ಜಾಗವೀರಬಹುದು, ಸ್ಮಶಾನಕ್ಕೆ ಕೊಟ್ಟ ಜಾಗವಿರಬಹುದು ಬೇರೊಂದಕ್ಕೆ ಕೊಟ್ಟ ಜಾಗವಿರಬಹುದು, ಅದಕ್ಕೆ ಯಾರೋ ಒಬ್ಬ ಇಂಜಂಕ್ಷನ್ ತರುತ್ತಾನೆ ಅಥವಾ ಯಾವುದೇ ಒಂದು ಪ್ರಕರಣದಲ್ಲಿ ಹೈಕೋರ್ಟಿನಿಂದ ಸ್ಟೇ ತರುತ್ತಾನೆ. ಎಷ್ಟರಮಟ್ಟಿಗೆ ಇಂದು ಈ ಕೇಸುಗಳನ್ನು ತೀವ್ರವಾಗಿ ಇತ್ಯರ್ಥ ಮಾಡಿದ ನಿದರ್ಶನಗಳಿವೆ? ಈ ವ್ಯವಸ್ಥೆ ಎಷ್ಟು ಕೆಟ್ಟಿದೆ ಎಂದರೆ, ಇಂದು ನಮ್ಮ ಅಧಿಕಾರಿಗಳು ಸಾರ್ವಜನಿಕರ ಹಿತವೆಂದರೆ ಅದಕ್ಕೆ ಕೊನೆಯ ಆದ್ಯತೆ ಕೊಡುತ್ತಾರೆ. They will only attend to individual interest. They will take least interest as far as public interest is concerned. ಶೇ.50ರಷ್ಟು ಸಮಸ್ಯೆಗಳು ಕೋರ್ಟಿನಲ್ಲಿ ನಿಂತುಹೋಗಿವೆ. ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ನಿಮ್ಮ ಒಂದೇ ಕಾಲದಲ್ಲಿ ಇವು ಹುಟ್ಟಿಕೊಂಡಿವೆ ಎಂದು ನಾನು ಹೇಳುತ್ತಿಲ್ಲ. ಉದಾಹರಣೆಗೆ ಕಂದಾಯ ಇಲಾಖೆಯಲ್ಲಿ ಇಂದು ಮೂರು ಲಕ್ಷ ಎಕರೆ ಸರ್‌ಪ್ಲಸ್ ಲ್ಯಾಂಡ್ ಅನ್ನು ವಿತರಣೆ ಮಾಡಬೇಕಾಗಿದೆ. 1,23,000 ಎಕರೆ ವಿತರಣೆಯಾಗಿದೆ. ಉಳಿದೆಲ್ಲಾ ಕೇಸು ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ಅದನ್ನು ಬಿಡುಗಡೆ ಮಾಡದೆ ಬಡವರಿಗೆ ಜಮೀನುಗಳನ್ನು ಹಂಚಲಾಗುವುದಿಲ್ಲ. ಅದೇ ರೀತಿ, ಅವರಿಗೆ ಜಮೀನು ಕೊಡಬೇಕಾದರೆ ಹೈಕೋರ್ಟಿನಲ್ಲಿ ಇಂಜಂಕ್ಷನ್ ತಂದರೆ, ಆ ಇಂಜಂಕ್ಷನ್ ವೆಕೇಟ್ ಮಾಡುವುದಕ್ಕಾಗುವುದಿಲ್ಲ, ಗ್ರೌಂಡ್ಸ್ ಇರುವುದಿಲ್ಲ. ಅಧಿಕಾರಿಗಳು, ಕೇಸ್ ಕೋರ್ಟಿನಲ್ಲಿದೆ ಎನ್ನುತ್ತಾರೆ. ಶೇ.50ರಷ್ಟು ಅಭಿವೃದ್ಧಿ ಕೆಲಸಗಳು ಕೋರ್ಟಿನಲ್ಲಿ ನಿಂತುಹೋಗಿವೆ. ಕಾರಣವೇನೆಂದರೆ, ಕೋರ್ಟಿನಲ್ಲಿರುವ ಒಂದು ಕೇಸಿಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸರ್ಕಾರಿ ವಕೀಲರಿಗೆ ಸ್ಟೇಟ್‌ಮೆಂಟ್ಸ್ ಆಫ್ ಅಬ್ಜಕ್ಷನ್ಸ್ ಆಗಲಿ ಹೈಕೋರ್ಟಿನಲ್ಲಿ ಅಥವಾ ಲೋವರ್ ಕೋರ್ಟ್‌ಗಳಿಗಾಗಲಿ

ಯಾರು ಸಹಕಾರ ಕೊಡುವುದಿಲ್ಲ. ವಕೀಲರುಗಳನ್ನು ಹೋಗಿ ನೋಡುವುದಿಲ್ಲ, ಆ ಕೇಸ್ ಬಗ್ಗೆ ಕ್ರಮವನ್ನು ಕೈಗೊಳ್ಳುವುದಿಲ್ಲ. ಇನ್ನೊಂದು ದುಃಖದ ಪರಿಸ್ಥಿತಿ ಏನೆಂದರೆ, ನೀವು ನೇಮಕ ಮಾಡಿರುವ ಕೆಲವು ವಕೀಲರುಗಳು ನಾನು ಎಲ್ಲಾ ವಕೀಲರುಗಳು ಎಂದು ಹೇಳುವುದಿಲ್ಲ. ಕೆಲವು ವಕೀಲರುಗಳು ಖಾಸಗಿ ವ್ಯಕ್ತಿಗಳ ಜೊತೆಯಲ್ಲಿ ಶ್ಯಾಮೀಲಾಗಿ ಸರ್ಕಾರದ ಹಿತವನ್ನು ಬಲಿ ಕೊಟ್ಟಿರುವುದು ಸಾವಿರಾರು ಉದಾಹರಣೆಗಳು ಇವೆ. ಅದರ ಬಗ್ಗೆ ಏನಾದರೂ ಕ್ರಮ ಕೈಗೊಳ್ಳುವುದಕ್ಕಾಗಿದೆಯೇ? ಇನ್ನುವರೆಗೆ ಆಗಿರುವುದಿಲ್ಲ. ಇದೊಂದು ದೊಡ್ಡ ತಲೆನೋವು ಆಗಿರುವಂಥದ್ದನ್ನು ನಾವು ನೋಡಿರುತ್ತೇವೆ. ಸಾವಿರಾರು ಕೋಟಿ ರೂಪಾಯಿಗಳು ಇರುವಂಥಾದ್ದರ ಬಗ್ಗೆ ಹೋಗಿ ಕೋರ್ಟಿನಿಂದ ಸ್ಟೇ ತಂದಿರುತ್ತಾರೆ. ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ, ವೆಕೇಟ್ ಮಾಡಿಸುವುದಿಲ್ಲ, ಅದರ ಹಣವನ್ನು ಸರ್ಕಾರಕ್ಕೆ ತೋರಿಸುವುದಿಲ್ಲ, ಆ ಒಂದು ಕೆಲಸವಾಗಿದೆ. ಆದ್ದರಿಂದ ಅಧಿಕಾರಿಗಳು ಯಾವ ಒಂದು ದೃಷ್ಟಿಕೋನವನ್ನು ಇಟ್ಟುಕೊಂಡಿದ್ದಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇನ್ನೊಂದು, ಭೂಸ್ವಾಧೀನ ಕೇಸ್‌ಗಳಲ್ಲಿ ಇವತ್ತು ಸರ್ಕಾರಿ ಬೊಕ್ಕಸದಿಂದ ನೂರಾರು ಕೋಟಿ ರೂಪಾಯಿಗಳು ಪೋಲಾಗುತ್ತಿರುವುದನ್ನು ನಾವು ನೋಡಿರುತ್ತೇವೆ. ಯಾವುದೋ ಒಂದು ಯೋಜನೆಗೆ ಜಮೀನು ಸ್ವಾಧೀನವಾಗುತ್ತದೆ. ಅವಾರ್ಡ್ ಪಾಸ್ ಆಗತಕ್ಕಂಥದ್ದರಲ್ಲಿ ಕೆಲವು ಜನ ವಕೀಲರು, ಭೂಸ್ವಾಧೀನಾಧಿಕಾರಿಗಳು ಮತ್ತು ಲ್ಯಾಂಡ್ ಲಾರ್ಡ್‌ಗಳು-ಇವರೆಲ್ಲರೂ ಶ್ಯಾಮೀಲಾಗಿ ಮಾರುಕಟ್ಟೆಯ ದರಕ್ಕಿಂತ ಹೆಚ್ಚಾಗಿ ಅವಾರ್ಡ್‌ನ್ನು ಪಾಸ್ ಮಾಡಿರುವುದನ್ನು ನಾವು ನೋಡಿದ್ದೇವೆ. ಲೋವರ್ ಕೋರ್ಟ್‌ಗಳಲ್ಲಿ ಅವಾರ್ಡ್ ಪಾಸ್ ಮಾಡುತ್ತಾರೆ, ಎಷ್ಟೋ ಕಡೆ ವಕೀಲರು ಖಾಸಗಿ ಜಮೀನುದಾರರು ಮತ್ತು ಅಧಿಕಾರಿಗಳು ಶ್ಯಾಮೀಲಾಗಿ ನೂರಾರು ಕೋಟಿ ರೂಪಾಯಿಗಳು ಸರ್ಕಾರದ ಬೊಕ್ಕಸಕ್ಕೆ ಲಾಸ್ ಆಗಿರುವುದನ್ನು ನಾವು ನೋಡಿದ್ದೇವೆ. ಇದರ ಬಗ್ಗೆ ನಿಮ್ಮ ಇಲಾಖೆಯಿಂದ ಅಪೀಲ್ ಹಾಕುವುದನ್ನು ನಾವು ಎಷ್ಟೋ ಸಂದರ್ಭಗಳಲ್ಲಿ ನೋಡಿರುವುದಿಲ್ಲ. ಅಪೀಲ್ ಹಾಕಬೇಕಾದಂಥ ಒಂದು ಕೇಸ್ ಇದ್ದರೂ ಕೂಡ ಎಷ್ಟೋ ಕಡೆ ಅಪೀಲ್ ಬೇಕಾಗಿಲ್ಲವೆಂದು ಹಾಕದಿರುವುದನ್ನು ನಾವು ನೋಡಿದ್ದೇವೆ. ಹೀಗಾಗಿ ಎಷ್ಟೋ ಭೂಸ್ವಾಧೀನ ಕೇಸ್‌ಗಳಲ್ಲಿ ಸರ್ಕಾರಕ್ಕೆ ನಷ್ಟವಾಗಿರುವುದನ್ನು ನಾವು ನೋಡಿದ್ದೇವೆ. ಮಂಗಳೂರಿನಲ್ಲಿರುವ ಒಂದು ಕೇಸ್ ಬಗ್ಗೆ ಪತ್ರಿಕೆಯಲ್ಲಿ ಕೂಡ ವರದಿಯಾಗಿದೆ. ಪಾಣೆ ಮಂಗಳೂರಿನಲ್ಲಿರುವ ಜಮೀನಿಗೆ ಕೇಂದ್ರ ಸರ್ಕಾರದ ನ್ಯಾಷನಲ್ ಹೈವೆಯಿಂದ ಸುಮಾರು 1990ನೇ ಸಾಲಿನಲ್ಲಿ 33 ಲಕ್ಷ ರೂಪಾಯಿಗಳಿಗೆ 40 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಪ್ರಸ್ತಾವನೆಗೆ ಕೇಂದ್ರ ಸರ್ಕಾರದವರು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಸುಮಾರು 10-15 ಜನರು ಕೋರ್ಟಿಗೆ ಹೋಗಿರುತ್ತಾರೆ. ಅದಕ್ಕೆ ಕೋರ್ಟಿನವರು ಏನು ಹೇಳಿದ್ದಾರೆಂದರೆ, ಒಂದು ಕೋಟಿ ಎಪ್ಪತ್ತಾರು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಬೇಕು ಹಾಗೂ

ಒಂದು ಎಕರೆ ಜಮೀನಿಗೆ 4 ಲಕ್ಷ 82 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ಕೋರ್ಟಿನಿಂದ ಆದೇಶವನ್ನು ಮಾಡಿರುತ್ತಾರೆ. ಅದರಂತೆ ಬೇರೆಯವರು ಕೂಡ ಕೋರ್ಟಿಗೆ ಹೋದಾಗ ಅದರಂತೆ ಪರಿಹಾರವನ್ನು ಕೊಡಬೇಕಾಗುತ್ತದೆ. ಇದನ್ನು ಮಾಡಿದಾಗ ಸುಮಾರು 10 ಕೋಟಿ ರೂಪಾಯಿಗಳಷ್ಟು ಸರ್ಕಾರಕ್ಕೆ ಬರುತ್ತದೆ. 1999ನೇ ಮಾರ್ಚ್ ತಿಂಗಳಲ್ಲಿ ಲೋಕೋಪಯೋಗಿ ಇಲಾಖೆಯವರು ಅಪೀಲ್ ಹಾಕಬೇಕೆಂದು ಕಾನೂನು ಇಲಾಖೆಗೆ ಬರೆದರೂ ಕೂಡ ಅದಕ್ಕೆ ಅಪೀಲ್ ಬೇಡವೆಂದು ಯಾರು ಹೇಳಿದವರು? ಅದರ ಬಗ್ಗೆ ವಿಚಾರಣೆಯಾಗಬೇಕು. ಸರ್ಕಾರಕ್ಕೆ ಇವತ್ತು 10 ಕೋಟಿ ರೂಪಾಯಿಗಳು ನಷ್ಟವಾಗಿದೆ. ಅದಕ್ಕೆ ಅಪೀಲ್ ಹಾಕಬೇಕೆಂದು 1999ನೇ ಸಾಲಿನಲ್ಲಿ ಯಾವ ಸರ್ಕಾರವೇ ಇರಲಿ ಅದರ ಬಗ್ಗೆ ನನಗೆ ಬೇಕಾಗಿಲ್ಲ, ಏಕೆ ಅಪೀಲ್ ಹಾಕಲಿಲ್ಲ ಎನ್ನುವ ಬಗ್ಗೆ ವರದಿ ಕೊಡಬೇಕು. ಅಪೀಲ್ ಹಾಕಿದರೂ ಕೂಡ ಇವತ್ತು ಹೈಕೋರ್ಟಿನಲ್ಲಿ ಎಂಟರ್‌ಟೇನ್‌ಮೆಂಟ್ ಮಾಡುತ್ತಿಲ್ಲ. ಇದಕ್ಕೆ ಬೇರೆ ಬೇರೆ ಕಾರಣವಿದೆ. ಭ್ರಷ್ಟಾಚಾರದ ವಿರುದ್ಧವಾಗಿ ಒಂದು ಸಮರವನ್ನು ಸಾರುತ್ತೇನೆಂದು ಮುಖ್ಯಮಂತ್ರಿಗಳ ಒಂದು ಹೇಳಿಕೆ ಇದೆ. ಭ್ರಷ್ಟಾಚಾರವನ್ನು ಸಹಿಸಿಕೊಳ್ಳುವುದಿಲ್ಲವೆನ್ನುವ ಧರ್ಮಯುದ್ಧವನ್ನು ಸಾರುತ್ತೇನೆಂದು ಹೇಳಿದ್ದಾರೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಛೇರ್‌ಮನ್‌ರೆ, ಅಪೀಲ್ ಹಾಕದಿರುವ ಬಗ್ಗೆ ಪ್ರಸ್ತಾಪವನ್ನು ಮಾಡುತ್ತಿದ್ದಾರೆ. ತಾವು ಒಂದು ಮುಖವನ್ನು ಮಾತ್ರ ಇಟ್ಟಿರುತ್ತೀರಿ. 1986ನೇ ಸಾಲಿನಿಂದ ಸುಮಾರು 14-15 ವರ್ಷಗಳ ಕಾಲ ಪರಿಹಾರಕ್ಕಾಗಿ ಬೀದಿ ಬೀದಿ ಹಾಗೂ ಕೋರ್ಟಿಗೆ ಅಲೆದಿದ್ದಾರೆ. ಅದರ ಬಗ್ಗೆ ಇನ್ನುವರೆಗೆ ತೀರ್ಮಾನವಾಗಿಲ್ಲ, ಅವರು ಮತ್ತೆ ಅಪೀಲ್ ಹಾಕಬೇಕು. ಸರ್ಕಾರದ ಹಣದಿಂದ ಅಪೀಲ್ ಹಾಕುವುದಕ್ಕೆ ಏನೂ ತೊಂದರೆಯಿಲ್ಲ. ಖಾಸಗಿಯ ಒಬ್ಬ ಮನುಷ್ಯನು ಸುಪ್ರೀಂಕೋರ್ಟಿಗೆ ಹೋಗಿ ಒಂದು ಕೇಸ್‌ನ್ನು ನಿಕಾಲೆ ಮಾಡುವುದಕ್ಕೆ ಬೇಕಾದ ಪರಿಣಾಮದ ಪರಿಸ್ಥಿತಿಯನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕು. ಕೆಲವು ವಿಚಾರಗಳಲ್ಲಿ ನಾನು ಕಾನೂನು ಮಂತ್ರಿಯಾಗಿ ಸ್ಪಷ್ಟವಾಗಿ ಹೇಳುತ್ತೇನೆ. ರೈತರ ಪರವಾಗಿ ಅಡಿಷನ್ ಆದ ಕೇಸ್‌ಗಳು ಏನಿವೆ ಬಹುತೇಕ ಕೇಸ್‌ಗಳಲ್ಲಿ ಅಪೀಲ್ ಹಾಕುವುದನ್ನು ಬೇಡವೆಂದು ನಾನು ತೀರ್ಮಾನ ಮಾಡಿದ್ದೇನೆ. ನಾವು ಒಂದು ಮಿತಿಯನ್ನು ಇಟ್ಟುಕೊಂಡಿದ್ದೇವೆ. 10,20 ಅಥವಾ 40 ಸಾವಿರವರೆಗೆ, ಹೆಚ್ಚಿಗೆ ಒಂದು ಎಕರೆಗೆ ಕೊಡಿ ಎಂದು 10 ವರ್ಷಗಳವರೆಗೆ ಕೋರ್ಟಿಗೆ ಅಲೆದಿದ್ದರೂ ಏನು ಇತ್ಯರ್ಥವಾಗದಿದ್ದಾಗ, 'ಸ್ವಾಮಿ ಕೈಮುಗಿಯುತ್ತೇವೆ, ಏನಾದರೂ ಮಾಡಿ, ಎಷ್ಟು ಬೇಕಾದರೂ ಒಂದೇ ಸಲಕ್ಕೆ ಕೊಟ್ಟು ಬಿಡಿ' ಎಂದು ರೈತರು ಕೇಳಿದಾಗ ಮತ್ತೆ ಏಕೆ ಅಪೀಲ್ ಹಾಕಬೇಕೆಂದು ಕೇಳುತ್ತೇನೆ. ಒಂದು ಸ್ಪೆಸಿಫಿಕ್ಕಾಗಿ ಉದಾಹರಣೆ ಹೇಳಿದ್ದೇನೆ. ಇದರ ಬಗ್ಗೆ ತಾವು ಪರೀಕ್ಷೆ ಮಾಡಿ.

ಶ್ರೀ ಬಿ.ಪಿ.ಪೂಜಾರ್(ಬಾಗಲಕೋಟೆ): ಮಾನ್ಯ ಛೇರಮನ್‌ರೆ, ಮಾನ್ಯ ಕಾನೂನು ಮಂತ್ರಿಗಳು ಒಂದು ವಿಚಾರವನ್ನು ಹೇಳಿದರು. ಆಲಮಟ್ಟಿ ಜಲಾಶಯದಡಿಯಲ್ಲಿ ಸುಮಾರು 30 ಲಕ್ಷ ಎಕರೆಯಷ್ಟು ಜಮೀನುಗಳು ಒಂದು ವರ್ಷದಿಂದ ಅವಾರ್ಡ್ ಕಾಣದೆ ಇನ್ನು ಹಾಗೆ ಉಳಿದಿವೆ. ಇನ್ನುವರೆಗೆ ವ್ಯಾಲ್ಯೂಯೇಶನ್ ಏನು ಬದಲಾವಣೆ ಮಾಡಿರುವುದಿಲ್ಲ. ಕೇಸ್‌ಗಳು ಪೆಂಡಿಂಗ್ ಇರುವುದರಿಂದ ತಾವು ಅದರ ಬಗ್ಗೆ ಸ್ವಲ್ಪ ಗಮನವನ್ನು ಹರಿಸಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ:ಆಲಮಟ್ಟಿ ಜಲಾಶಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅವಾರ್ಡ್ ಆದ ಸಾವಿರಾರು ಕೇಸ್‌ಗಳು ಅಪೀಲ್ ಹೋಗಿವೆ. ಇನ್ನು ಕೆಲವರು ವಕೀಲರು ಅವರು ತೀರ್ಮಾನ ಮಾಡಿರತಕ್ಕಂಥಾದ್ದು ಉಂಟು.

(ಗೊಂದಲ)

ಛೇರ್ಮನ್: ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವವರು ಇನ್ನೂ ಇರುವುದರಿಂದ ಅವರಿಗೆ ಸಮಯ ಸಿಗುವುದಿಲ್ಲ. ಈಗ ಉಳಿದಿರುವುದು ಒಂದು ಗಂಟೆ ಸಮಯ ಮಾತ್ರ 2-30ಕ್ಕೆ ಎಲ್ಲರೂ ಮಾತನಾಡುವುದನ್ನು ಮುಗಿಸಬೇಕು. ಆಗ ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಪ್ರಾರಂಭ ಮಾಡುತ್ತಾರೆ. ಊಟಕ್ಕೆ ಇವತ್ತು ಬಿಡುವು ಇರುವುದಿಲ್ಲ, ಮಾನ್ಯ ಸೋಮಶೇಖರವರು ಇನ್ನು 5 ನಿಮಿಷ ಮಾತನಾಡಿದರೆ ಒಂದು ಗಂಟೆಯಾಗುತ್ತದೆ.

ಶ್ರೀ ಬಿ.ಸೋಮಶೇಖರ್: ಮಧ್ಯದಲ್ಲಿ ಎಲ್ಲರೂ ಮಾತನಾಡಿದ್ದಾರೆ, ನನಗೆ ಎಲ್ಲಿ ಒಂದು ಗಂಟೆಯಾಗುತ್ತದೆ?

ಛೇರ್ಮನ್: ಅದಕ್ಕಾಗಿ ನಾನು ಹೇಳುವುದು ಮಧ್ಯದಲ್ಲಿ ತಾವು ಅವಕಾಶವನ್ನು ಕೊಡದೆ ಮಾತನಾಡಿ, ತಾವು ಯೀಲ್ಡ್ ಆಗಬೇಡಿ.

ಶ್ರೀ ಸಿ.ಭೈರೇಗೌಡ(ವೇಮಗಲ್): ಮಾನ್ಯ ಛೇರ್ಮನ್‌ರೆ, ರೈತರ ವಿಚಾರದಲ್ಲಿ ಒಂದು ಅವಾರ್ಡ್ ಆದಮೇಲೆ ಅಪೀಲ್ ಹೋಗತಕ್ಕಂಥದ್ದು ಸರ್ಕಾರ ಸರಿಯಲ್ಲವೆಂದು ಸುಪ್ರೀಂಕೋರ್ಟ್‌ವರೆಗೆ ರೈತರು ಅಥವಾ ಸಾಮಾನ್ಯ ಜನರು ಹೋಗಬೇಕಾದರೆ ಏನು ಕಷ್ಟ ಇದೆ ಎಂದು ಹೇಳಿದಿರಿ. ನನ್ನ ಕ್ಷೇತ್ರದಲ್ಲಿ ನಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ ಕೃಷಿಗೆ ಸಂಬಂಧಪಟ್ಟಂಥ ಜಮೀನನ್ನು ವಶಪಡಿಸಿಕೊಂಡರು. ಅಲ್ಲಿ ಎರಡು-ಮೂರು ಜನರು ಕೋರ್ಟಿಗೆ ಹೋದರು. ನೀವು ಏನು ನಿಮ್ಮ ಭಾವನೆಯನ್ನು ವ್ಯಕ್ತಪಡಿಸಿರುತ್ತೀರೆಂದರೆ, ಆ ಕಡತದಲ್ಲಿ ನಾನು ಇದೇ ಬರವಣಿಗೆಯನ್ನು ಇಟ್ಟಿರುತ್ತೇನೆ. ಆದ್ದರಿಂದ ಇವರು ಅಪೀಲ್ ಹಾಕಬೇಕೆಂದು ಹೈಕೋರ್ಟ್‌ಗೆ ಹೇಳಿದರು, ಅದನ್ನು ವಾಪಸ್ಸು ತರಿಸಿದ್ದೇವೆ. ಸರ್ಕಾರದ ಆಜ್ಞೆಯಾಗಿಲ್ಲವೆನ್ನುವ ಒಂದು ಕುಂಟು ನೆಪವನ್ನು

ಹೇಳಿ, ಅಪೀಲ್ ಹಾಕಿ ಇವತ್ತು ನೀವು ರೈತರನ್ನು ಹೈಕೋರ್ಟಿನ ಬಾಗಿಲಿಗೆ ಹೋಗಿ ನಿಲ್ಲಿಸಿರುತ್ತೀರಿ. ನೀವು ಹೇಳುವುದೊಂದು ಇನ್ನೊಂದು ಮಾಡುವುದಕ್ಕೆ ಹೋಗಬೇಡಿ, ಇದನ್ನು ಮಾಡಿದ್ದು ನಿಮ್ಮ ಸರ್ಕಾರ ಸ್ವಾಮಿ.

ಶ್ರೀ ಡಿ.ಬಿ.ಚಂದ್ರೇಗೌಡ: ನಿಮಗೆ ರೈತರ ಬಗ್ಗೆ ಎಷ್ಟು ಕಾಳಜಿ ಇದೆಯೋ ಅಷ್ಟೆ ಕಾಳಜಿ ನಮಗೂ ಕೂಡ ಇದೆ. ಅದು ನಿಮಗೆ ತಪ್ಪು ಎಂದರೆ ಅದರ ಬಗ್ಗೆ ಚರ್ಚೆ ಮಾಡುವುದು ಬಿಡೋಣ. ಮನಸ್ಸಿನಲ್ಲಿ ಅಂತಹ ಒಂದು ಭಾವನೆಯನ್ನು ಇಟ್ಟುಕೊಂಡರೆ ಸಾಧ್ಯವಾದಷ್ಟು ತಪ್ಪಿಸಬಹುದು. ಮೊದಲು ಆ ಕೇಸ್‌ನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ?

ಶ್ರೀ ಸಿ.ಬೈರೇಗೌಡ: ನಾನು ನಿಮಗೆ ಬರೆಯುತ್ತೇನೆ, ನೀವು ಅಪೀಲ್‌ನ್ನು ಹಾಕಿ ಇವತ್ತು ರೈತರನ್ನು ಗೋಳಾಡಿಸುತ್ತಿದ್ದೀರಿ. ಆ ಕೆಲಸವನ್ನು ಮಾಡಬೇಡಿ, ದಯಮಾಡಿ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಬಿ.ಸೋಮಶೇಖರ್: ನಾನು ಏತಕ್ಕಾಗಿ ಹೇಳುತ್ತಿದ್ದೇನೆ, ರೈತರಿಗೆ ಸಿಗುವುದಾದರೆ ನಮಗೆ ಸಂಪೂರ್ಣ ಸಂತೋಷವಿದೆ. ಈ ಹಣ ರೈತರಿಗೆ ಹೋಗುವುದಿಲ್ಲ, ಆ ಹಣವನ್ನು ಗ್ರ್ಯಾಂಡ್ ಅಲೋಯನ್ಸ್ ಇದೆ, ಅವರು ಹಂಚಿಕೊಳ್ಳುತ್ತಾರೆ. ಸರ್ಕಾರಕ್ಕೂ ಹಣ ಉಳಿಯುವುದಿಲ್ಲ, ರೈತರಿಗೂ ಸಿಗುವುದಿಲ್ಲ ಈ ರೀತಿ ಒಂದು ಪರಿಸ್ಥಿತಿ ಇರುವುದರಿಂದ ಅದಕ್ಕೆ ಅವಕಾಶವನ್ನು ಕೊಡಬಾರದು. ನಾನು ಕಂದಾಯ ಇಲಾಖೆಯ ಮಂತ್ರಿಯಾಗಿ ಕೆಲಸವನ್ನು ಮಾಡಿರುತ್ತೇನೆ.

1. 10 ಪಿಎಂ

ಎಷ್ಟೋ ವಿಚಾರಗಳು ಇಲಾಖೆಗೆ ಗೊತ್ತೆ ಇರುವುದಿಲ್ಲ. ನಿಮ್ಮ ಇಲಾಖೆಯವರು ತೀರ್ಮಾನ ತೆಗೆದುಕೊಳ್ಳುತ್ತಾರೆ. **The administrative department has to say whether this case is a fit case for going on an appeal or it is not a fit case for going on an appeal** ಎಂದು ಅವರು ಹೇಳಬೇಕಾಗುತ್ತದೆ. ಅವರು ಹಾಗೆ ಹೇಳದೆ, ತಮ್ಮ ಕಾಲದಲ್ಲಿ ಏನು ಮಾಡುತ್ತಾರೆ. ಡಿಪಿಎಆರ್‌ನವರ ಅಭಿಪ್ರಾಯವಿಲ್ಲದೆ ನಿಮ್ಮದೇ ಆದ ಅಭಿಪ್ರಾಯಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕೆ ಅವಕಾಶ ಕೊಡಬಾರದು.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಶೇಖರ್‌ರವರು ಕಂದಾಯ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ನಿಮ್ಮದೇ ಆದ ಒಂದು ಲೀಗಲ್ ಸೆಲ್ ಇದೆ, ಅವರೇನು ಮಾಡುತ್ತಾರೆ?

They don't bother even to look at the files. ಸ್ಟೇಟ್‌ಅವೆ ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸುತ್ತಾರೆ.

ಶ್ರೀ ಬಿ.ಸೋಮಶೇಖರ್: ನಾನು ಇಲ್ಲವೆಂದು ಹೇಳಲಿಲ್ಲ. I am not pointing only lacuna of the Law Department. I am equally concerned about the lethargic attitude of the officers. ಆಫೀಸರ್ಸ್ ಯಾವುದೇ ಕೇಸ್ ಬಂದಾಗ ಅದನ್ನು ಪ್ಯಾರಾವೈಸ್ ರಿಮಾರ್ಕ್ಸ್ ಮಾಡದೆ, ಪ್ಯಾರಾವೈಸ್ ರಿಮಾರ್ಕ್ಸ್ ಕೊಡುವುದಿಲ್ಲ, ಕೊಡುವಾಗ ಅಧಿಕಾರಿಗಳು ಸಹ ನೋಡುವುದಿಲ್ಲ. ಯಾರೋ ಒಬ್ಬ ಕ್ಲಾರ್ಕ್ ತಯಾರು ಮಾಡುತ್ತಾನೆ. ಅದನ್ನು ಕೊಟ್ಟು ಕಳುಹಿಸುವಾಗ ಸರಿಯಾದ ಮಾಹಿತಿ ಕೊಡುವುದಿಲ್ಲ. ತಪ್ಪು ಇದೆ, ಅದರ ಬಗ್ಗೆ ನಾನು ಹೇಳುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ನಮ್ಮ ಸರ್ಕಾರ ಭ್ರಷ್ಟಾಚಾರವನ್ನು ಯಾವುದೇ ರೀತಿಯಲ್ಲಿ ಸಹಿಸಿಕೊಳ್ಳುವುದಿಲ್ಲ; ಅದರ ವಿರುದ್ಧ ಧರ್ಮಯುದ್ಧ ಸಾರಿದ್ದೇವೆಂದು ಹೇಳಿದರು. ಬಹಳ ಸಂತೋಷ. ಮುಖ್ಯಮಂತ್ರಿಗಳ ಯೋಚನೆಗಳು, ಅವರ ಥಿಂಕಿಂಗ್ ನೋಡಿದರೆ ಬಹಳ ಸಂತೋಷವಾಗುತ್ತದೆ. ಅವರ ಯೋಚನೆಗಳು ಅದ್ಭುತವಾದುದು. ಬಹಳ ಅದ್ಭುತವಾದ ಚಿಂತನೆಗಳು, ಅಭಿಪ್ರಾಯಗಳು ಇದೆ. ವಿಜನ್ ಇದೆ ಎಲ್ಲಾ ಇದೆ. ಆದರೆ ಆಡಳಿತದಲ್ಲಿ ಅದಕ್ಕೆ ವಿರುದ್ಧವಾಗಿ ಕಾಣಿಸುತ್ತಿದೆ. ಮುಖ್ಯಮಂತ್ರಿಗಳ ಹೇಳಿಕೆಗಳು ಪತ್ರಿಕೆಗಳಲ್ಲಿ ಬರುತ್ತಿದೆ. ಅವರು ಏನು ಘೋಷಣೆ ಮಾಡುತ್ತಿದ್ದಾರೆ. ಅದೇರೀತಿ ಕೆಳಗಡೆ ನಡೆದುಕೊಂಡು ಹೋದರೆ ಮಾತ್ರ I will be the first person to congratulate him. ಆದರೆ ವಾಸ್ತವಾಂಶ ಬೇರೆ ಇದೆ. ಭ್ರಷ್ಟಾಚಾರದ ವಿರುದ್ಧವಾಗಿ ಅಥವಾ ನೀವೇನು ಹೇಳಿಕೆ ಕೊಟ್ಟಿದ್ದೀರಿ ಅದರ ಪರವಾಗಿ ಕ್ರಮ ತೆಗೆದುಕೊಂಡರೆ ಸಂತೋಷಪಡುತ್ತಿದ್ದೆ. ನಿಮ್ಮ ಒಂದು ವರ್ಷದ ಸಾಧನೆಯಲ್ಲಿ ಏನು ಹೇಳಿದ್ದೀರಿ? ನಮ್ಮದು ಜವಾಬ್ದಾರಿಯುತ ಪಾರದರ್ಶಕ ಮತ್ತು ಸ್ಪಂದನೀಯ ಆಡಳಿತವೆಂದು ಇದನ್ನು ಯಾವಾಗಲೂ ಹೇಳುತ್ತಿದ್ದೀರಿ. It is a responsive and transparent government ಎಂದು ಹೇಳುತ್ತಿದ್ದೀರಿ. ಜವಾಬ್ದಾರಿಯುತವೆಂದರೆ one has to take the responsibility whether he is an officer or a minister or Chief Minister. He has to own the responsibility and he is accountable to that particular department. ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ, ಒಬ್ಬ ಐಎಎಸ್ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದೀರಿ. It is within the powers of the Chief Minister. But what was the necessity to discuss this in the cabinet? How long he was kept under suspension? Similar action should have

been used in other cases also. ಸಾವಿರಾರು ಜನ ಅಧಿಕಾರಿಗಳು ಬೇರೆ ಬೇರೆ ಇಲಾಖೆಗಳಲ್ಲಿ ಸಸ್ಪೆಂಡ್ ಆಗಿದ್ದಾರೆ. ಸಸ್ಪೆಂಡ್ ಆದವರನ್ನು ಆರು ತಿಂಗಳೊಳಗೆ ವಿಚಾರಣೆ ಮಾಡಬೇಕೆಂದು ಇದೆ. ಆರು ತಿಂಗಳಿನಲ್ಲಿ ವಿಚಾರಣೆ ಮಾಡದಿದ್ದರೆ ಅವರನ್ನು ರೀ-ಇನ್‌ಸ್ಟೇಟ್ ಮಾಡಬೇಕೆಂದು ನಿಯಮವಿದೆ. ಎಷ್ಟು ಜನ ಸಸ್ಪೆಂಡ್ ಆಗಿರತಕ್ಕ ಅಧಿಕಾರಿಗಳನ್ನು ಆರು ತಿಂಗಳಾದ ಮೇಲೆ ರೀ-ಇನ್‌ಸ್ಟೇಟ್ ಮಾಡಿದ್ದೀರಿ? ಎರಡು ಮೂರು ವರ್ಷಗಳಾದರೂ ರೀ-ಇನ್‌ಸ್ಟೇಟ್ ಆಗಲಿಲ್ಲ. ಆದರೆ ಒಬ್ಬ ಅಧಿಕಾರಿಯನ್ನು ಅವರು ತಪ್ಪು ಮಾಡಿದ್ದಾರೆಂದು ನಿಮ್ಮ ಸರ್ಕಾರಕ್ಕೆ ಗೊತ್ತಾದ ಮೇಲೆ ಸಸ್ಪೆಂಡ್ ಮಾಡಿ ರಿಲೀವ್ ಮಾಡದೆ ಮತ್ತೆ ಕೇವಲ ಏಂಟು ದಿವಸಗಳಲ್ಲಿ ರೀ-ಇನ್‌ಸ್ಟೇಟ್ ಮಾಡಿರತಕ್ಕದ್ದು ಆ ಸಬ್ಜೆಕ್ಟ್ ಕ್ಯಾಬಿನೆಟ್‌ನಲ್ಲಿ ಡಿಸ್‌ಕಷನ್ ಆಗುತ್ತದೆಂದರೆ ಇದು ಜವಾಬ್ದಾರಿಯುತ ತೀರ್ಮಾನವೇ ಎಂದು ನಾನು ಕೇಳಬೇಕಾಗುತ್ತದೆ. It need not go to the cabinet at all. It is the prerogative of the Chief Minister. ಒಂದು ದಿನವಾದರೂ ರಿಲೀವ್ ಮಾಡದೆ ಅಧಿಕಾರಿಗಳ ಒತ್ತಡಕ್ಕೆ ಹೆದರಿ ಬ್ಯುರೋಕ್ರಸಿಯ ಹಿಡಿತ ಏನಿದೆ ಅದಕ್ಕೆ ಹೆದರಿ ಒಂದು ದಿನವಾದರೂ ರಿಲೀವ್ ಮಾಡದೆ ಮುಖ್ಯಮಂತ್ರಿಗಳು ತಾವೇ ತೆಗೆದುಕೊಂಡಿರತಕ್ಕ ತೀರ್ಮಾನವನ್ನು ಇಡೀ ಕ್ಯಾಬಿನೆಟ್ ಮುಂದೆ ಹಾಕಿದರು. ಇದೇ ವಿಚಾರವನ್ನು ಮುಖ್ಯಮಂತ್ರಿಗಳು ಬೇರೆ ಬೇರೆ ಇಲಾಖೆಗಳಲ್ಲಿ ಅವರೇ ಮಾಡಿರತಕ್ಕದ್ದು ಇದೆ. ಈವೊಂದು ಭ್ರಷ್ಟಾಚಾರದ ಸಮರದ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಂಡ್ಯ ಜಿಲ್ಲೆ ಸೇರಿದಂತೆ ಮೈಷುಗರ್ ಸಾರಾಯಿ ಅವ್ಯವಹಾರದ ಬಗ್ಗೆ ತಮ್ಮ ಗಮನಕ್ಕೆ ವಿಷಯವನ್ನು ತಂದಿದ್ದೇವೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಸುಮಾರು 10- 12 ಕೋಟಿ ರೂಪಾಯಿಗಳಷ್ಟು ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ ಸಾರಾಯಿ ಮಾರಾಟದಿಂದ ಎಂದು ತಿಳಿದ ಮೇಲೆ ಅದು ಚಿಕ್ಕಮಗಳೂರು ಜಿಲ್ಲೆ ಇರಬಹುದು, ಮಂಡ್ಯ ಇರಬಹುದು ಅಥವಾ ಮೈಸೂರು ಇರಬಹುದು ಈ ಭಾಗದಲ್ಲಿ ಸಾರಾಯಿ ತಯಾರು ಮಾಡತಕ್ಕ ಗುತ್ತಿಗೆ ಮೈಷುಗರ್‌ಗೆ ಇದೆ. ಮೈಷುಗರ್‌ನಿಂದ ಸಾರಾಯಿ ತೆಗೆದುಕೊಂಡು ಹೋಗಿ ಮಾರಾಟ ಮಾಡತಕ್ಕ ವಿಷಯದಲ್ಲಿ ಮೈಷುಗರ್‌ನಲ್ಲಿ ಸಾರಾಯಿ ಉತ್ಪಾದನೆಯಾಗದೆ ಬೇರೆ ಕಡೆ ಸೆಕೆಂಡ್ಸ್ ಉತ್ಪಾದನೆಯಾಗಿ ಮಾರಾಟವಾಗಿರುವುದರಿಂದ ಒಟ್ಟು ರಾಜ್ಯದ ಬೊಕ್ಕಸಕ್ಕೆ ವಾರ್ಷಿಕ 760 ಕೋಟಿ ರೂಪಾಯಿಗಳಷ್ಟು ನಷ್ಟವುಂಟಾಗಿದೆ. ಅದು 8 ವರ್ಷಗಳಲ್ಲಿ ಸುಮಾರು 6179 ನಷ್ಟವಾಗಿದೆಯೆಂದು ವರದಿ-ಬಂತು. ಇದು ದೊಡ್ಡ ಭ್ರಷ್ಟಾಚಾರವೆಂದು ತಿಳಿದು ಅಂದಿನ ಸರ್ಕಾರ ಇದನ್ನು ಸಿಓಡಿ ಎನ್‌ಕ್ವಾಯರಿಗೆ ಒಪ್ಪಿಸಿತು. ಸಿಓಡಿಯವರು ಎನ್‌ಕ್ವಾಯರಿ ಮಾಡಿದ್ದಾರೆ. ಅವರು ವರದಿಯನ್ನು ಕೊಟ್ಟು ತಕ್ಷಣ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರು. ಅಂದಿನ ವಿರೋಧಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆವೊತ್ತು ಏನು ಹೇಳಿದರು? ಇದರ ಬಗ್ಗೆ ಸಿಓಡಿ

ಎನ್‌ಕ್ವಾಯರಿಯಾಗಬೇಕು, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಸತ್ಯಾಸತ್ಯತೆ ಹೊರಗಡೆ ಬರಬೇಕೆಂದು ಹೇಳಿದರು. ಆದರೆ ಈ ಸರ್ಕಾರ ಬಂದು ಒಂದೂವರೆ ವರ್ಷಗಳಾಗಿದೆ. ಸಿಓಡಿ ಇಲಾಖೆ ಅವರ ಕೈಯಲ್ಲೇ ಇದೆ. ಆ ವರದಿ ಏನಾಗಿದೆ ಎಂಬುದು ಗೊತ್ತಿಲ್ಲ. ಅದರ ಬಗ್ಗೆ ಸಂಶಯ ಬರುತ್ತಿದೆ. ಆ ವಿಚಾರವನ್ನು ಹಾಗೆಯೇ ಕೋಲ್ಡ್ ಸ್ಟೋರೇಜ್‌ನಲ್ಲಿಡಲಾಗಿದೆಯೆಂದು ತಿಳಿದು ಬಂದಿದೆ. ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಈ ರೀತಿಯಾಗಿದೆಯೆಂದು ತಿಳಿದು ಬಂದಮೇಲೆ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರದ ಬಗ್ಗೆ ತನಿಖೆ ಮಾಡಲು ನಮ್ಮ ಸರ್ಕಾರ ಆರ್ಡರ್ ಮಾಡಿದರೆ ಆ ವರದಿಯನ್ನು ತರಿಸಿ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂದರೆ ಏನು ಅಭಿಪ್ರಾಯ ಬರುತ್ತದೆ? ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧಪಕ್ಷದ ನಾಯಕರ ಸ್ಥಾನದಲ್ಲಿ ಕುಳಿತು ಹೇಳಿದ್ದಾರೆ. ಈಗ ಅದರ ಬಗ್ಗೆ ಏನಾಯಿತೆಂದು ಅವರು ಹೇಳಬೇಕು. ಕೆಲವು ಮುನಿಸಿಪಾಲಿಟಿಗಳಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಆಗಿರುವುದು ನಮ್ಮ ಗಮನಕ್ಕೆ ಬಂದಿದೆ. ಯಲಹಂಕ ಮುನಿಸಿಪಾಲಿಟಿಯಲ್ಲಿ 101 ಕೋಟಿ 14 ಲಕ್ಷ ರೂಪಾಯಿಗಳನ್ನು 2000-2001ನೇ ಸಾಲಿನಲ್ಲಿ ಆಯವ್ಯಯ ಇಟ್ಟರು. ಆದರೆ 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದಕ್ಕೆ ಯಾವುದೇ ಕಾಮಗಾರಿಯನ್ನು ತೆಗೆದುಕೊಳ್ಳಬೇಕಾದರೆ ಟೆಂಡರ್ ಕರೆದಿಲ್ಲ. ಯಾವುದೇ ವಿಧಿ ವಿಧಾನಗಳನ್ನು ಅನುಸರಿಸಿಲ್ಲ. ಅದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಯಲಹಂಕ ಮುನಿಸಿಪಾಲಿಟಿಯ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಸಿಓಡಿ ಎನ್‌ಕ್ವಾಯರಿಗೆ ಆರ್ಡರ್ ಮಾಡಬೇಕು. ಯಾರು ಮಿಸ್ ಅಪ್ರೋಪ್ರಿಯೇಷನ್ ಮಾಡಿದ್ದಾರೆ ಅವರ ಕಡೆಯಿಂದ ಆ ಹಣವನ್ನು ವಸೂಲಿ ಮಾಡಿ ಅವರುಗಳ ಮೇಲೆ ಕೇಸು ಹಾಕಬೇಕು. ಹಿಂದೆ ಸಿಓಡಿ ಎನ್‌ಕ್ವಾಯರಿ ಆಗಿ ವರದಿ ಕೊಟ್ಟಿದ್ದರೂ ಕೂಡ ಆ ವರದಿಯನ್ನು ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅದೇರೀತಿ ಕೆಂಗೇರಿ ಮುನಿಸಿಪಾಲಿಟಿಯಲ್ಲಿ ಒಂದೂವರೆ ಕೋಟಿ ರೂಪಾಯಿಗಳ ಅವ್ಯವಹಾರ ಆಗಿರುವುದಕ್ಕೆ ಇಲಾಖೆಯವರೇ ವಿಚಾರಣೆ ಮಾಡಿದ್ದಾರೆ, ವಿಚಾರಣೆಯಾಗಿ ವರದಿ ಬಂದಿದ್ದರೂ ಏನು ಕ್ರಮ ತೆಗೆದುಕೊಂಡಿಲ್ಲ. ಸಿಓಡಿ ಎನ್‌ಕ್ವಾಯರಿ ವರದಿ ಬಂದಿದ್ದರೂ ಯಾವುದೇ ಕ್ರಮ ಇಲ್ಲ. ರಾಯಚೂರಿನಲ್ಲಿ ಒಂದೂವರೆಯಿಂದ ಎರಡು ಕೋಟಿ ರೂಪಾಯಿಗಳ ಅವ್ಯವಹಾರ ಮಾಡಿದ್ದಾರೆ. ಹಣ ಖರ್ಚು ಮಾಡಿ ಆದಮೇಲೆ ರೆಸಲ್ಯೂಷನ್ ಮಾಡಿ ರ್‍ಯಾಟಿಫೈ ಮಾಡಿಕೊಂಡಿದ್ದಾರೆ. ಆ ವರದಿ ಸರ್ಕಾರಕ್ಕೆ ಬಂದಿದ್ದರೂ ಕೂಡ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಇದು ಏನು ತೋರಿಸುತ್ತದೆಂದರೆ, ಧರ್ಮಯುದ್ಧ ಸಾರಿದವರು ಎಲ್ಲಾ ವಿಚಾರಗಳು ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಒಂದು ಕ್ರಮ ತೆಗೆದುಕೊಳ್ಳದಿದ್ದರೆ ಏನಾಗುತ್ತದೆ? ಇದು ನನಗೆ ಸಂಶಯ ಬರುತ್ತಿದೆ. ಅಧಿಕಾರಿಗಳ ಮೇಲೆ ಸರ್ಕಾರ ಬಿಗಿಯಿಲ್ಲ.

ಅಧಿಕಾರಿಗಳಿಗೆ ಸರ್ಕಾರದ ಬಗ್ಗೆ ಯಾವುದೇ ಭಯವಿಲ್ಲ. ಕಾರಣ ಏನೆಂದರೆ ಈವೊಂದು ಭ್ರಷ್ಟಾಚಾರಕ್ಕೆ ಪುರಸ್ಕಾರ ಸಿಗುತ್ತಿದೆಯೆಂದು ಸಿಗ್ನಲ್ ಹೋದಾಗ, ಭ್ರಷ್ಟಾಚಾರವನ್ನು ಮಾಡಿದವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ಭಾವನೆ ಬಂದಾಗ ಅದು ಲೀಲಾಜಾಲವಾಗಿ ನಡೆಯುತ್ತಿರುತ್ತದೆ. ಅದಕ್ಕೆ ಯಾವುದೇ ರೀತಿಯಾದ ಕಡಿವಾಣವನ್ನು ಹಾಕಿಲ್ಲವೆಂದು ನನ್ನ ವಾದ. ಅದರ ಬಗ್ಗೆ ಏನು ಹೇಳುತ್ತೀರಿ ಅದನ್ನು ಇಲ್ಲಿ ಹೇಳಬೇಕು. ನಮ್ಮ ಸರ್ಕಾರ ಒಳ್ಳೊಳ್ಳೆಯ ತೀರ್ಮಾನ ಮಾಡಿರತಕ್ಕದ್ದರ ಬಗ್ಗೆ ಅದಕ್ಕೆ ತದ್ವಿರುದ್ಧವಾದ ಕ್ರಮ ತೆಗೆದುಕೊಂಡಿರುವುದನ್ನು ಹೇಳುತ್ತೇನೆ.

ಛೇರ್ಮನ್: ಮಾನ್ಯ ಸೋಮಶೇಖರ್‌ರವರು ಇನ್ನು ಐದು ನಿಮಿಷದಲ್ಲಿ ಮುಗಿಸುತ್ತೀರಾ?

ಶ್ರೀ ಬಿ.ಸೋಮಶೇಖರ್: ನನಗೆ ಇನ್ನೂ ಅರ್ಧಗಂಟೆ ಸಮಯ ಬೇಕು.

ಛೇರ್ಮನ್: ಮಾನ್ಯ ಮುಖ್ಯಮಂತ್ರಿಗಳು 2.30ಕ್ಕೆ ಉತ್ತರ ಕೊಡಬೇಕಾಗಿದೆ. ಮಾತನಾಡುವವರು ಬಹಳ ಜನ ಪಟ್ಟಿ ಕಳುಹಿಸುತ್ತಿದ್ದಾರೆ. ಸಮಯವನ್ನು ನೀವೇ ಅಡ್ಜೆಸ್ಟ್ ಮಾಡಿಕೊಳ್ಳಿ.

ಶ್ರೀ ಬಿ.ಸೋಮಶೇಖರ್: ಈ ಸರ್ಕಾರ ಖಾಸಗಿ ಶಿಕ್ಷಣ ಮಂಡಳಿಗಳಿಗೆ ಅನೇಕ ರೀತಿಯಲ್ಲಿ ಮಣಿದಿರತಕ್ಕಂಥ ನಿದರ್ಶನಗಳನ್ನು ನಾವು ಕಾಣುತ್ತಿದ್ದೇವೆ. ಒಂದು ಹಂತದಲ್ಲಿ ಖಾಸಗಿ ಶಿಕ್ಷಣ ಮಾಲೀಕರ ವಕಾಲತ್ತು ವಹಿಸಿಕೊಂಡು ಇವತ್ತು ಎ.ಐ.ಟಿ.ಇ.ಸಿ.ಗಳಿಗೆ ಹೋಗಿದ್ದಾರೆ. ಮ್ಯಾನೇಜ್‌ಮೆಂಟ್‌ನವರು ಹೋಗತಕ್ಕಂಥ ಕೆಲಸವನ್ನು ಸರ್ಕಾರವೇ ಮಾಡಿ ಹೆಚ್ಚಿನ ಒಂದು ಪ್ರವೇಶಾವಕಾಶವನ್ನು ತೆಗೆದುಕೊಟ್ಟು ಸಿವಿಲ್ ಕೋರ್ಸ್‌ಗಳು ಮತ್ತು ಬೇರೆ ಕೋರ್ಸುಗಳನ್ನು ಕನ್ವರ್ಟ್‌ಮಾಡಿ ಟೀಚರ್ಸ್ ಇಲ್ಲದೇ ಇದ್ದರೂ ಅದಕ್ಕೆ ಮಂಜೂರಾತಿಯನ್ನು ತೆಗೆದುಕೊಂಡು ಬಂದಿರತಕ್ಕದ್ದನ್ನು ಕೂಡ ನಾವು ನೋಡಿದ್ದೇವೆ. ಇದರ ಜೊತೆಗೆ ನಾವು ಒಂದು ಹೊಸ ತಿದ್ದುಪಡಿಯನ್ನು ತಂದಿದ್ದೆವು. ಅದೇನೆಂದರೆ ಸಿ.ಇ.ಟಿ.ಯಲ್ಲಿ ಮೊದಲನೇ ವರ್ಷಕ್ಕೆ ಪ್ರವೇಶವಾಗುತ್ತದೆ. ಎರಡನೇ ವರ್ಷಕ್ಕೆ ಸೇರಬೇಕಾದರೆ ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಬೇರೆ ಬೇರೆ ಒಳ್ಳೆಯ ಕೋರ್ಸುಗಳಿಗೆ ಬಹಳ ಬೇಡಿಕೆ ಇದೆ. ಮೊದಲನೇ ವರ್ಷದಲ್ಲಿ ಪ್ರವೇಶ ಸಿಗದೇ ಇರತಕ್ಕಂಥವರಿಗೆ ಎರಡನೇ ವರ್ಷದಲ್ಲಿ ಖಾಲಿಯಾದಂಥ ಜಾಗಗಳಿಗೆ ಸೇರಲಿಕ್ಕೆ ಕೆಲವರಿಗೆ ಅವಕಾಶ ಇದೆ. ಅದಕ್ಕೆನಾವು ಒಂದು ನಿಯಮಾವಳಿಯನ್ನು ರಚನೆ ಮಾಡಿದ್ದೆವು. ಅದೇನೆಂದರೆ ಎರಡನೇ ವರ್ಷಕ್ಕೆ ಸೇರಬೇಕಾದರೆ ಅವನಿಗೆ ಮೆರಿಟ್ ಇರಬೇಕು. ವೇಕೆನ್ಸಿಗಳನ್ನು ಅಡ್ವರ್ಟೈಸ್‌ಮೆಂಟ್ ಮಾಡಬೇಕು ಮತ್ತು ಒಂದು

ವಾರದಲ್ಲಿ ಆ ವೇಕೆನ್ಸಿಗಳನ್ನು ಫಿಲ್‌ಅಪ್ ಮಾಡಬೇಕು ಎನ್ನತಕ್ಕದ್ದು ಇದೆ. ಆ ಜವಾಬ್ದಾರಿಯನ್ನು ನಮ್ಮ ಇಂಜಿನಿಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲ್‌ಗಳಿಗೆ ಕೊಡಬೇಕು ಎನ್ನತಕ್ಕಂಥ ಆದೇಶವನ್ನು 2- 12- 1996ರಲ್ಲಿ ನಾವು ಹೊರಡಿಸಿದ್ದೇವೆ. ಈ ಒಂದು ಆದೇಶದ ವಿರುದ್ಧವಾಗಿ ಇವತ್ತು ಸಾವಿರಾರು ಪ್ರವೇಶಗಳಿಗೆ ಅವಕಾಶ ಆಗಿದೆ. ಎರಡನೇ ವರ್ಷದಲ್ಲಿ ಎಷ್ಟು ವೇಕೆನ್ಸಿಗಳು ಇವೆ, ಅಷ್ಟು ಮಾತ್ರವಲ್ಲದೆ ಸಾವಿರಾರು ವೇಕೆನ್ಸಿಗಳನ್ನು ತುಂಬಿ ಇವತ್ತು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಆಗಿರತಕ್ಕಂಥಾದ್ದು ಇದೆ. ಸರ್ಕಾರ ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇವತ್ತು ಮ್ಯಾನೇಜ್‌ಮೆಂಟ್‌ನವರ ಮೇಲೆ ಕಡಿವಾಣ ಇಲ್ಲ, ಬಡ ಹುಡುಗರಿಗೆ ಯಾವುದೇ ರೀತಿಯ ರಕ್ಷಣೆ ಸಿಗುತ್ತಿಲ್ಲ. ಉದ್ದೇಶಪೂರ್ವಕವಾಗಿ ಕೆಲವರು ಮೊದಲನೇ ವರ್ಷದ ಹುಡುಗರನ್ನು ಫೇಲ್ ಮಾಡತಕ್ಕಂಥ ಸಂದರ್ಭ ಇದೆ. ಇದರ ಉದ್ದೇಶ ಎರಡನೇ ವರ್ಷದಲ್ಲಿ ವೇಕೆನ್ಸಿಗಳು ಆಗಲಿ ಎಂಬುದಾಗಿದೆ....

ಶ್ರೀ ಎಸ್.ಸುರೇಶ್‌ಕುಮಾರ್: ಒಂದು ನಿಮಿಷ. ಶಿಕ್ಷಣ ಸಚಿವರಾದ ಮಾನ್ಯ ವಿಶ್ವನಾಥ್‌ರವರು ಇಲ್ಲಿ ಇದ್ದಾರೆ. ಬಹಳ ಗಂಭೀರವಾದ ಒಂದು ಸಮಸ್ಯೆಯನ್ನು ಬಹಳ ಆತಂಕದಿಂದ ತಮ್ಮ ಮುಂದೆ ಇಡಬೇಕೆಂದು ಇದ್ದೇನೆ. ಇವತ್ತು ತಮಗೆ ಗೊತ್ತು, ಹುಡುಗರು ಬಹಳ ಚೆನ್ನಾಗಿ ಓದಬೇಕೆಂದು ಬಯಸುತ್ತಿದ್ದಾರೆ. ಅವರು ಅವರದ್ದೇ ಆದ ಒಂದು ಗುರಿಯನ್ನು ಇಟ್ಟು ಕೊಂಡಿರುತ್ತಾರೆ. ಐ.ಟಿ.ಗೋ, ಮೆಡಿಕಲ್‌ಗೋ ಸೇರಬೇಕೆಂದು ಅವರ ಉದ್ದೇಶ ಇರುತ್ತದೆ. ನಿನ್ನೆ ದಿವಸ ಸುಮಾರು ಎಂಟು-ಹತ್ತು ಪೋಷಕರು ಮತ್ತು ಮಕ್ಕಳು ನನ್ನಲ್ಲಿಗೆ ಬಂದು ತಮ್ಮ ಆತಂಕವನ್ನು ಹೇಳಿಕೊಂಡಿದ್ದಾರೆ. ಎಸ್.ಎಸ್.ಎಲ್.ಸಿ. ಪ್ರಶ್ನೆ ಪತ್ರಿಕೆಗಳು ಇವತ್ತು ಒಂದು ಸಾವಿರ - ಸಾವಿರದ ಮುನ್ನೂರು ರೂಪಾಯಿಗಳಿಗೆ ಮಾರಾಟಕ್ಕೆ ಇವೆ ಎಂದರೆ ಚೆನ್ನಾಗಿ ಒಂದು ವರ್ಷ ಓದಿದವರ ಕತೆಯೇನು? ಸಚಿವರೇನೋ ಮೈಸೂರಿನಲ್ಲಿ ಉತ್ತರ ಕೊಟ್ಟಿದ್ದಾರೆ. ಇವತ್ತು ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯಲ್ಲಿ ಪ್ರಶ್ನೆ ಪತ್ರಿಕೆಯನ್ನು ಹಾಕಿದ್ದಾರೆ. ಉದಯವೋ ಯಾವುದೋ ಒಂದು ಖಾಸಗಿ ಟಿ.ವಿ. ಚಾನಲ್‌ನವರು ಈ ಪ್ರಶ್ನೆಗಳು ಯಾವುದು ಎಂದು ಹಾಕುತ್ತಾರೆ. ಪ್ರತಿವರ್ಷ ಇದು ರಿಪೀಟ್ ಆಗುತ್ತಾ ಹೋದರೆ, ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ, ಈ ಸರ್ಕಾರ, ಆ ಸರ್ಕಾರ ಅಂತ ಅಲ್ಲ , ಈ ಪ್ರಶ್ನೆ ಪತ್ರಿಕೆಗಳನ್ನು ಲೀಕ್ ಮಾಡಿ ಸಂಪಾದಿಸುವುದು ಮತ್ತು ಪ್ರತಿಭಾವಂತ ಹುಡುಗರ ಜೀವನ ಹಾಳು ಮಾಡುವವರು ಏನಿದ್ದಾರೆ ಅವರ ದಂಧೆ ನಡೆಯುತ್ತಲೇ ಹೋಗಬೇಕೆ? ಅಥವಾ ನೀವು ಸರ್ಟಿಫಿಕೇಟ್ ಕೊಟ್ಟು 'ಇಲ್ಲ, ಲಿಕೇಜ್ ಇಲ್ಲ, ಈ ಪೇಪರ್ ಬೇರೆ, ಆ ಪೇಪರ್ ಬೇರೆ' ಎಂದು ಬಿಟ್ಟು ತಿಪ್ಪೆ ಸಾರಿಸಿದರೆ ಅದು ಸರಿಯಲ್ಲ. ಪ್ರತಿಭಾವಂತ ಹುಡುಗರು ಕಣ್ಣಲ್ಲಿ ಎಣ್ಣೆ ಇಟ್ಟುಕೊಂಡು ಓದುತ್ತಾರೆ. ಹಿಂದಿನ ದಿವಸ ಪೇಪರ್ ಸಿಕ್ಕಿತು ಎಂದು ಓದಿಬಿಟ್ಟು ಅವರು ಬರೆದು ಅವರೇನೋ ಪಾಸಾದರೆ ಇವರಿಗೆ ಮತ್ತು ಅವರಿಗೆ

ತಾಳಮೇಳ ಮಾಡುವುದಕ್ಕೆ ಆಗುತ್ತದೆಯೇ? ಇದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಾ ನಾನೇನೂ ರೀ ಎಕ್ಸಾಮ್ ಮಾಡಿ ಅಂತ ಕೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಕಾಪಿಯಿಂಗ್ ಎಷ್ಟು ಕೆಟ್ಟ ದಂಧೆ ಇದೆಯೋ ಪೇಪರ್‌ಗಳನ್ನು ಮಾರುವುದು ಕೂಡ ಅಷ್ಟೇ ಕೆಟ್ಟು ದಂಧೆಯಾಗಿದೆ. ಇದರ ಬಗ್ಗೆ ಸರ್ಕಾರ ಈ ಐ.ಟಿ. ಯುಗದಲ್ಲಿ ಕಠಿಣವಾದ ನಿಲುವು ತೆಗೆದುಕೊಳ್ಳದೇ ಇದ್ದರೆ, ಹೊಸ ವಿಧಾನವನ್ನು ಏನಾದರೂ ಅನುಸರಿಸದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಮತ್ತೆ ನಾವು ಇದೇ ತರಹ ಮಾಡುತ್ತೇವೆ, ಹಿಂದಿನ ದಿವಸ ಬಂಡಲ್ ಕಳಿಸಿಬಿಡುತ್ತೇವೆ, ಅವರು ಆಮೇಲೆ ಸೈನ್ ಮಾಡಿಬಿಟ್ಟು ಬಿಚ್ಚುತ್ತಾರೆ ಎಂದರೆ ಅದು ಆಗಬಾರದು. ಇದನ್ನುಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಪ್ರತಿಭಾವಂತ ವಿದ್ಯಾರ್ಥಿಗಳ ಮತ್ತು ಪೋಷಕರ ಪರವಾಗಿ ಈ ಸಮಸ್ಯೆಯನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಸಲಹೆ ಕೊಡಿ.

ಶ್ರೀ ಎಸ್.ಸುರೇಶ್ ಕುಮಾರ್: ನಾನು ಐ.ಟಿ. ಎಂದು ಹೇಳಿದೆ ಅಂತ ತಾವು ಹಾಸ್ಯ ಮಾಡಬೇಡಿ.

ಶ್ರೀ ಎಸ್.ಎಂ.ಕೃಷ್ಣ:ನಾನು ಅವರಿಗೆ ಏನು ಹೇಳಿದ್ದು ಎಂದರೆ ಸಲ್ಯೂಶನ್ ಅವರು ಹೇಳಿದ್ದಾರೆ, ಐ.ಟಿ. ಉಪಯೋಗಿಸಿ ಎಂದು ಹೇಳಿದ್ದಾರೆ.

ಶ್ರೀ ಎಸ್.ಸುರೇಶ್ ಕುಮಾರ್: ಸರ್ಕಾರ-

ಶ್ರೀ ಎಚ್.ವಿಶ್ವನಾಥ್(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮಂತ್ರಿ): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಆತಂಕವನ್ನು ನಾನು ಬಲ್ಲೆ. ಬಹುಶಃ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಅತ್ಯಂತ ಕಠಿಣವಾದ ಕ್ರಮಗಳಿಂದ, ನಿಲುವುಗಳಿಂದ ಅದನ್ನು ನಾವು ಮಾಡುತ್ತಿದ್ದೇವೆ. ಕೆಲವು ಮಾಫಿಯಾಗಳು ಸೇರಿಕೊಂಡು, ಕೆಲವು ಜೆರಾಕ್ಸ್ ಅಂಗಡಿಗಳವರು ಸೇರಿಕೊಂಡು ಸುಮ್ಮನೆ ಮಾಡಲ್ ಕ್ವೆಶ್ಚನ್‌ಪೇಪರ್ ಅಂಥಾದ್ದನ್ನು ಕಾಪಿ ಹಾಕಿ ಹಂಚುವಂಥಾದ್ದು ಇದೆ. ಆದರೆ ಇವತ್ತು ಪರೀಕ್ಷೆ ಏನು ಆಗುತ್ತಿದೆ ಆ ಕ್ವೆಶ್ಚನ್ ಪೇಪರ್‌ಗೂ ಅದಕ್ಕೂ ಟ್ಯಾಲಿ ಮಾಡಿದಾಗ ಅದು ಇರುವುದಿಲ್ಲ. ಒಂದೆರಡು ಪ್ರಶ್ನೆಗಳು ಸಹಜವಾಗಿ ಇರುತ್ತವೆ. ಆದರೆ ಯಾವ ಪತ್ರಿಕೆ ಕೂಡ ಲೀಕ್ ಅಂತ ಆಗಿಲ್ಲ, ಎಲ್ಲಿಯೂ ಲೀಕ್ ಆಗಿಲ್ಲ. ಇದರ ಜೊತೆಗೆ ಕಾಪಿಯಿಂಗ್ ಕೂಡ ಅಷ್ಟೇನೆ. ಸುಮಾರು ಐದು ನೂರಕ್ಕೂ ಮೀರಿ ಪರೀಕ್ಷಾ ಕೇಂದ್ರಗಳನ್ನು ಸೂಕ್ಷ್ಮ ವಲಯಗಳು ಅಂತ ಹೇಳಿ ಅಲ್ಲಿ ವಿಡಿಯೋಗ್ರಾಫಿಯನ್ನು ಫಿಕ್ಸ್‌ಅಪ್ ಮಾಡತಕ್ಕದ್ದನ್ನು ನಾವು ಮಾಡಿದ್ದೇವೆ, ಮತ್ತು ಎಲ್ಲ ರೀತಿಯ ಸರ್ಚ್‌ನಿಂದ ಇವತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ನಾವು ಮಾಡುತ್ತಿದ್ದೇವೆ. ಪೋಷಕರಾಗಲೀ, ಸಾರ್ವಜನಿಕರಾಗಲೀ, ಚುನಾಯಿತ

ಪ್ರತಿನಿಧಿಗಳಾಗಲೀ ಯಾವ ಆತಂಕಕ್ಕೂ ಕೂಡ ಎಡೆ ಇಲ್ಲ. ದಯವಿಟ್ಟು ನಾನು ಈ ಸದನದ ಮೂಲಕ ನಾಡಿನ ಪೋಷಕ ಸಮುದಾಯದಲ್ಲಿ ವಿನಂತಿ ಮಾಡುತ್ತಿದ್ದೇನೆ, ಯಾರೂ ಕೂಡ ಆತಂಕ ಪಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಎಸ್.ಸುರೇಶ್ ಕುಮಾರ್:ನಿಮ್ಮ ಪ್ರಕಾರ ಪೇಪರ್ ಲೀಕೇಜ್ ಆಗಿಲ್ಲ. ಸೋಮವಾರದ ಪೇಪರ್‌ನ್ನು ನಾನು ನಾಳೆ ತಂದುಕೊಟ್ಟರೆ?

ಶ್ರೀ ಎಚ್.ವಿಶ್ವನಾಥ್: ಯಾವ ಸೋಮವಾರ?

ಶ್ರೀ ಸುರೇಶ್‌ಕುಮಾರ್: ಸೋಮವಾರ ಯಾವುದು ಇದೆಯೆಂದು ಗೊತ್ತಿಲ್ಲ. ನಾನು ತಂದು ಕೊಟ್ಟರೆ?

ಶ್ರೀ ಎಚ್.ವಿಶ್ವನಾಥ್: ತನ್ನಿ.

ಶ್ರೀ ಎಸ್.ಸುರೇಶ್‌ಕುಮಾರ್: ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ? (ಸೋಮವಾರದ ಪೇಪರ್‌ನ್ನು ನಾನು ನಾಳೆ ತಂದುಕೊಟ್ಟರೆ ಇವತ್ತು ನೀವು ಇಷ್ಟು ವಿಶ್ವಾಸದಿಂದ ಆಗಿಲ್ಲ ಎಂದಮೇಲೆ ನೈತಿಕ ಜವಾಬ್ದಾರಿಯನ್ನು ನೀವು ಹೊರುತ್ತೀರಾ?

ಶ್ರೀ ಎಚ್.ವಿಶ್ವನಾಥ್: ನೀವು ತನ್ನಿ, ಪ್ರೊಡ್ಯೂಸ್ ಮಾಡಿ.

ಶ್ರೀ ಎಸ್.ಸುರೇಶ್‌ಕುಮಾರ್: ನೀವೇನು ಮಾಡುತ್ತೀರಿ, ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಚ್.ವಿಶ್ವನಾಥ್: ನೀವು ಪ್ರೊಡ್ಯೂಸ್ ಮಾಡಿ. ನೀವು ಪ್ರೊಡ್ಯೂಸ್ ಮಾಡಿಯಾದ ಮೇಲೆ ತಾನೇ ಕ್ರಮ ತೆಗೆದುಕೊಳ್ಳುವುದು? ತಾವು ಪ್ರೊಡ್ಯೂಸ್ ಮಾಡಿ.

ಶ್ರೀ ಎಸ್.ಸುರೇಶಕುಮಾರ್: ಆಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆವಾಗ ನೀವು ನಾವು ಸೇರಿ ನಾವು ಯಾವ ಕ್ರಮ ಜರುಗಿಸಬೇಕೆಂದು ತೀರ್ಮಾನ ಮಾಡುತ್ತೀರೋ ಅದೇ ರೀತಿಯಾಗಿ ಮಾಡೋಣ.

ಶ್ರೀ ಎಸ್.ಸುರೇಶ್‌ಕುಮಾರ್: ಆಯಿತು ಓ.ಕೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿ): ಮಾನ್ಯ ಶಿಕ್ಷಣ ಸಚಿವರಿಗೆ ನಾನು ನಿಮ್ಮ ಜತೆಯಲ್ಲಿ ಒಂದು ಸಲಹೆ ಕೊಡುತ್ತೇನೆ. ಓಲ್ಡ್ ಮೆಥಡ್ಸ್ ಏನಿವೆ ಅದನ್ನು ನಾವು ಅಬಾಂಡನ್ - we will have to go into the new developments in the field, so that ಪ್ರಶ್ನೆ ಪತ್ರಿಕೆಗಳು ಬಯಲಾಗದೇ ಇರತಕ್ಕಂಥ ರೀತಿಯಲ್ಲಿ

ಆಧುನಿಕವಾಗಿ ಏನು ವ್ಯವಸ್ಥೆಗಳು ವಿಧಾನಗಳು ಇವೆ ಆ ವಿಧಾನಗಳನ್ನು ಮುಂದಿನ ವರ್ಷದಲ್ಲಿಯಾದರೂ ಅಳವಡಿಸಲಿಕ್ಕೆ ನಮ್ಮ ಐ.ಟಿ. ಟಾಸ್ಕ್‌ಫೋರ್ಸ್‌ನವರ ಜತೆಯಲ್ಲಿ ನಾವು ಅನುಸಂಧಾನ ಮಾಡಿ ಅದರ ಬಗ್ಗೆ ಒಂದು ವ್ಯವಸ್ಥಿತವಾದಂಥ ಕಾರ್ಯರೂಪವನ್ನು, ಕಾರ್ಯತಂತ್ರವನ್ನು ರೂಪಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಛೇರ್ಮನ್: ತಾವು ಸ್ವಲ್ಪಶೀಘ್ರವಾಗಿ ಮುಗಿಸಬೇಕು. ಇನ್ನೂ ತುಂಬ ಜನ ಮಾತನಾಡುವವರು ಇದ್ದಾರೆ. ಸಮಯವನ್ನು ತಾವೇ ನಿಗದಿಪಡಿಸಿಕೊಳ್ಳಿ.

ಶ್ರೀ ಬಿ.ಸೋಮಶೇಖರ್: ಆಯಿತು, ಮುಗಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಹೋದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕ್ಷೇತ್ರದ ಆಶ್ರಯ ಸಮಿತಿ ಬಗ್ಗೆ ಮಾತನಾಡಿ ನನ್ನನ್ನು ಎಂಬರಾಸ್ ಮಾಡಬೇಕು ಎಂದು ಇರಿಸುಮುರಿಸು ಮಾಡತಕ್ಕಂಥ ಮಾತು ಹೇಳಿದರು. ಮಳವಳ್ಳಿಯಲ್ಲಿ ಆಶ್ರಯ ಸಮಿತಿ ಸೋಮಶೇಖರ್ ಅವರ ಕಾಲದಲ್ಲಿ ಆಗಿಲ್ಲ, ಅವರು ಇನ್ನೂ ಪಟ್ಟಿ ಕೊಟ್ಟಿಲ್ಲವೆಂದು ಹೇಳಿದರು. ಈಗ ಮುಖ್ಯಮಂತ್ರಿಗಳು ದಯವಿಟ್ಟು ಕೇಳಬೇಕು. ಮಂಡ್ಯದಲ್ಲಿ ಮೂಡಾದ ವಿಷಯ ಇದೆ. 1999ರಲ್ಲಿ ಸುಮಾರು 2700 ಸೈಟುಗಳನ್ನು ಹಂಚಬೇಕೆಂದು ಲೇಔಟ್ ಮಾಡಿದರು. ಅದಕ್ಕೆ ಐದು ಕೋಟಿ ರೂಪಾಯಿಗಳ ಸಾಲವನ್ನು ಸ್ಟೇಟ್ ಬ್ಯಾಂಕಿನಿಂದ ತೆಗೆದುಕೊಂಡು ಬಂದಿದ್ದೂ ಆಯಿತು. ಒಟ್ಟು ಲೇಔಟ್‌ಗೆ 26 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನಿವೇಶನರಹಿತರು ಇವತ್ತು ಹಣ ಕೊಟ್ಟು ಲಕ್ಷಾಂತರ ರೂಪಾಯಿಗಳು ಇದೆ. ಆದರೆ ಸೈಟುಗಳನ್ನು ಇವತ್ತಿನವರೆಗೂ ವಿತರಣೆ ಮಾಡಿಲ್ಲ. ಏಕೆ ವಿತರಣೆ ಮಾಡಿಲ್ಲವೆಂದರೆ ಕಮಿಟಿ ಇನ್ನೂ ಆಗಿಲ್ಲ. ಆ ಕಮಿಟಿ ಆಗದೇ ಇದ್ದರೆ ವಿತರಣೆ ಮಾಡುವುದಕ್ಕೆ ಆಗುವುದಿಲ್ಲ. ಆ ಲೇಔಟ್‌ಗೋಸ್ಕರ ಹಣ ಸಂಗ್ರಹವಾಗಿದ್ದು ಜನರು ಒಂದು ವರ್ಷದಿಂದ ಕಾಯುತ್ತಿದ್ದಾರೆ. ಇನ್ನೂ ಸೈಟುಗಳನ್ನು ವಿತರಣೆ ಮಾಡಿಲ್ಲ. ಇದಕ್ಕೆ ಕಾರಣಕರ್ತರು ಯಾರಾಗಿದ್ದಾರೆ? ಬ್ಯಾಂಕ್‌ನವರು ಇವತ್ತು 60 ಲಕ್ಷ ರೂಪಾಯಿಗಳಷ್ಟು ಬಡ್ಡಿ ಕಟ್ಟಬೇಕೆಂದು ಹೇಳಿನೋಟೀಸ್ ಕಳಿಸಿದ್ದಾರೆ. ಬ್ಯಾಂಕಿನವರು ಏನಾದರೂ ಇದು ಎನ್.ಪಿ.ಎ. ಅಂತ ಡಿಕ್ಲೇರ್ ಮಾಡಿದರೆ ಬೇರೆ ಯಾವುದೇ ಕಡೆಯಿಂದ ಯಾವುದೇ ರೂಪದಲ್ಲಿ ಹಣ ಬರುವುದಿಲ್ಲ. ಆವತ್ತು ಮುಖ್ಯಮಂತ್ರಿಗಳು ನನ್ನನ್ನು ಟೀಕೆ ಮಾಡಿದಂಥವರು; ಮಂಡ್ಯದೊಳಗೆ ಈಗಾಗಲೇ 26 ಕೋಟಿ ರೂಪಾಯಿಗಳು ಖರ್ಚಾಗಿದೆ. ಇನ್ನೂ ಏಕೆ ವಿತರಣೆ ಮಾಡಿಲ್ಲ?

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಸೋಮಶೇಖರ್ ಅವರನ್ನು ನಾನು ಟೀಕೆ ಮಾಡಲಿಲ್ಲ. ಒಂದು ಉದಾಹರಣೆಯನ್ನು ಕೊಟ್ಟೆ. ಏಕೆಂದರೆ ಫಲಾನುಭವಿಗಳನ್ನು ಗುರುತಿಸತಕ್ಕಂಥಾದ್ದರಲ್ಲಿ ನಮ್ಮ ಶಾಸನಸಭಾ ಸದಸ್ಯರ ಜವಾಬ್ದಾರಿ ಇದೆ. ಈಗ ಕೆಲವು ಕ್ಷೇತ್ರಗಳಲ್ಲಿ ಸಂಪೂರ್ಣ ಪಟ್ಟಿ ಬರದೇ ಇರುವುದರಿಂದ ನಾವು ಮನೆ ಕೊಡತಕ್ಕಂಥ

ಕೆಲಸವನ್ನು ಮುಂದುವರೆಸುವುದಕ್ಕೆ ಸಾಧ್ಯವಾಗಿಲ್ಲ. ಉದಾಹರಣೆಗೆ ಮಂಡ್ಯ ಜಿಲ್ಲಾಧಿಕಾರಿಗಳಿಂದ ನಮಗೆ ಬಂದಿರತಕ್ಕಂಥ ಮಾಹಿತಿ ಏನೆಂದರೆ ಮಾನ್ಯ ಗೌರವಾನ್ವಿತ ಸದಸ್ಯರಾದಂಥ ಸೋಮಶೇಖರ್ ಅವರಿಂದ ಇನ್ನೂ ಪಟ್ಟಿ ಬಂದಿಲ್ಲ ಎಂದು. ಅದನ್ನು ನಮೂದಿಸಿದ್ದೇನೆ ಹೊರತು ನಾನು ನಿಮ್ಮನ್ನು ಟೀಕೆ ಮಾಡಲಿಲ್ಲ. ಯಾವತ್ತೂ ನಾನು ನಿಮ್ಮನ್ನು ಟೀಕೆ ಮಾಡುವುದಿಲ್ಲ.

ಶ್ರೀ ಬಿ.ಸೋಮಶೇಖರ್: ನಮ್ಮ ಹಾಗೆ ನೇರವಾಗಿ ಮಾತನಾಡುವವರಲ್ಲ ತಾವು. ನಿಮ್ಮ ಬುದ್ಧಿ ನಮಗೆ ಬರುವುದಿಲ್ಲ. ಏಕೆಂದರೆ ಬಹಳ ಸೊಫೆಸ್ಟಿಕೇಟೆಡ್ ಆಗಿ ಬಹಳ ಸರ್‌ಕ್ಯಾಸ್ಟಿಕ್ ಆಗಿ ನೀವು ಮಾತನಾಡುತ್ತೀರಿ.

ಶ್ರೀ ಎಸ್.ಎಂ.ಕೃಷ್ಣ:ನನಗೂ sarcasmಗೂ ಏಕೆ ನೆಂಟಸ್ತನ ತಂದಿಡುತ್ತೀರೋ ಗೊತ್ತಿಲ್ಲ. ನಾನು ಹೇಳಿದ್ದು ಏನೆಂದರೆ,ಜಿಲ್ಲಾಧಿಕಾರಿಗಳು ನಮ್ಮ ಸರ್ಕಾರಕ್ಕೆ ಪತ್ರಬರೆದರು. ಆ ಪತ್ರದ ಬಗ್ಗೆ ಹೇಳಿ ಒಂದು ಉದಾಹರಣೆಗೋಸ್ಕರ ತಮ್ಮ ಹೆಸರನ್ನುಸೂಚಿಸಿದೆ. ಏಕೆಂದರೆ ನೀವು ಹಿಂದೆ ಕಂದಾಯ ಮಂತ್ರಿಗಳಾಗಿದ್ದವರು. ಆದ್ದರಿಂದ ನಿಮ್ಮ ಹೆಸರನ್ನು ಸೂಚಿಸದೆ ನಾನು ಬೇರೆಯವರ ಹೆಸರನ್ನು ಏಕೆ ಸೂಚಿಸಲಿ? ಆದ್ದರಿಂದ ಸೂಚಿಸಿದೆನೇ ಹೊರತು ಟೀಕೆ ಮಾಡಬೇಕು ಎನ್ನತಕ್ಕಂಥ ಮನೋಭಾವನೆಯಿಂದ ಅಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ:ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಮಾನ್ಯ ಸಭಾನಾಯಕರನ್ನು ಒತ್ತಾಯ ಮಾಡುತ್ತೇನೆ. ಇಲ್ಲಿ ಅನೇಕ ಬಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಈಗ ಅವರು ಉದಾಹರಣೆಯನ್ನು ಕೊಟ್ಟರು. ಪಕ್ಕದ ಕ್ಷೇತ್ರ ಎಂದು ಪ್ರೀತಿಯಿಂದ ಕೊಟ್ಟಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಬೇರೆ ಕಡೆಯೂ ಇದೇ ಸಮಸ್ಯೆ ಇದೆ. ಈಗ ಫಲಾನುಭವಿಗಳ ಪಟ್ಟಿಯನ್ನು ನಾವೇನು ಮಾಡಿದ್ದೇವೆ, ಮಾನ್ಯ ವಸತಿ ಸಚಿವರು ಒಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ, ಆ ಸುತ್ತೋಲೆ ಪ್ರಕಾರವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಮೆಜಾರಿಟಿ ಒಪೀನಿಯನ್ ಪ್ರಕಾರವಾಗಿ ಆಯ್ಕೆ ಮಾಡಬೇಕೆಂಬುದನ್ನು ಇತ್ತೀಚೆಗೆ ಕಳುಹಿಸಿದ್ದಾರೆ. ನಾವು ಆಶ್ರಯ ಸಮಿತಿಯ ಅಧ್ಯಕ್ಷರುಗಳಾಗಿ, ಏನು ಫಲಾನುಭವಿಗಳ ಪಟ್ಟಿಯನ್ನು ಮಾಡಿ ಈಗಾಗಲೇ ಅಲ್ಲಿಯ ಎಕ್ಸಿಕ್ಯುಟಿವ್ ಆಫೀಸರುಗಳಿಗೆ ಕೊಟ್ಟಿದ್ದೇವೆ. ಅಲ್ಲಿಯ ಸದಸ್ಯರು ಏನು ಮಾಡುತ್ತಿದ್ದರೆಂದರೆ, ಮತ್ತೆ ಮೀಟಿಂಗ್ ಕರೆಯಿರಿ, ಮೆಜಾರಿಟಿ ಒಪೀನಿಯನ್ ಪ್ರಕಾರ ಆಗಬೇಕು ಎಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಎಲ್ಲಾ ವಿರೋಧಪಕ್ಷದವರೂ ಸರ್ಕಾರದಲ್ಲಿ ಮನವಿ ಮಾಡಿಕೊಂಡಿದ್ದೇವೆ. ತಾವು ದಯವಿಟ್ಟು ಆ ಮೆಜಾರಿಟಿ ಎನ್ನುವ ಶಬ್ದವನ್ನು ತೆಗೆದುಹಾಕಿ. ಸರ್ವಾನುಮತದಿಂದ ಎಂದು ಹೇಳಿ. ಗ್ರಾಮ ಪಂಚಾಯ್ತಿಗಳಲ್ಲಿ ಗ್ರಾಮ ಸಭೆ ಆಗಬೇಕು. ತಮಗೂ ಗೊತ್ತಿದೆ, ಈ ಗ್ರಾಮಸಭೆಯಲ್ಲಿ

ಪ್ರಾಕ್ಟಿಕಲಿ ಆಗಿ ಸಾಧ್ಯವಾಗುವುದಿಲ್ಲ. ಒಂದು ಹೋಬಳಿಗೆ 5 ಸಾವಿರ ಅಪ್ಲಿಕೇಷನ್ಸ್ ಬರುತ್ತವೆ. ಯಾವ ರೀತಿ ನೂರು ಜನರನ್ನು ಆಯ್ಕೆ ಮಾಡುವುದು? ಇದು ಯಾರಿಗೆ ತಾನೆ ಆಗುತ್ತದೆ. ಅದರಿಂದ, ನಾವು ಆಶ್ರಯ ಸಮಿತಿ ಅಧ್ಯಕ್ಷರಾಗಿ ಇರುವುದು ಬೇಡ ಎನ್ನುವುದಾದಲ್ಲಿ ನಮ್ಮದೇನೂ ತಕರಾರು ಇಲ್ಲ. ತಾವು ಮನಸ್ಸಿನಲ್ಲಿ ಬಹಳ ದೊಡ್ಡ ವಿಚಾರಗಳನ್ನು ಇಟ್ಟುಕೊಂಡಿದ್ದೀರಿ. consensus ತೆಗೆದುಕೊಳ್ಳಬೇಕು, ನ್ಯಾಷನಲ್ ಕಾನ್‌ಸೆನ್ಸಸ್ ಕೊಡಬೇಕು, ಚರ್ಚೆಯಾಗಬೇಕು. ಡಬ್ಲ್ಯು.ಟಿ.ಓ. ಬಗ್ಗೆ ಚರ್ಚೆಯಾಗಬೇಕು. ಮತ್ತು ಪವರ್ ಸೆಕ್ಟಾರಿನಲ್ಲಿ ಚರ್ಚೆಯಾಗಬೇಕು ಎಂಬುದನ್ನೆಲ್ಲಾ ಹೇಳುತ್ತಾ ಇದ್ದೀರಿ. ಡಿಬೇಟ್ ಮಾಡೋಣ, ಕಾನ್‌ಸೆನ್ಸ್‌ಸ್‌ಗೆ ಬರೋಣ ಎಂದು ಹೇಳುತ್ತಿದ್ದೀರಿ. ಈ ವಿಚಾರದಲ್ಲಿ ಏಕೆ ಸ್ವಾಮಿ ಕಾನ್‌ಸೆನ್ಸ್‌ಸ್‌ಗೆ ತೆಗೆದುಹಾಕಿದೆ. ದಯವಿಟ್ಟು ನಾನು ಈಗಲೂ ಒತ್ತಾಯ ಮಾಡುತ್ತಿದ್ದೇನೆ. ನಾನು ಕಲಾಪ ಸಲಹಾ ಸಮಿತಿಯ ಸಭೆಯಲ್ಲೂ ಹಲವಾರು ಬಾರಿ ಹೇಳಿದ್ದೇನೆ. ''ಮೆಜಾರಿಟಿ'' ಎಂಬ ಶಬ್ದವನ್ನು ತೆಗೆದುಹಾಕಿ. ನಿಮಗೆ ಅದರಿಂದ ಏನೂ ತೊಂದರೆಯಾಗುವುದಿಲ್ಲ. ಹಿಂದೆ ಕಾನ್‌ಸೆನ್ಸ್‌ಸ್ ಎಂದು ಇತ್ತು. ನಾನು ಪರಿಪರಿಯಾಗಿ ಕೇಳಿಕೊಂಡಿದ್ದೇನೆ. ಗೃಹಸಚಿವರಿಗೆ ಹೇಳಿದ್ದೇನೆ, ಸಂಸದೀಯ ಸಚಿವರಿಗೆ ಹೇಳಿದ್ದೇನೆ. ಇದಕ್ಕೆ ಅಧ್ಯಕ್ಷರು ಸಹಿತ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ತಾವು ದಯವಿಟ್ಟು ಅದನ್ನು ಪರಿಶೀಲನೆ ಮಾಡಿ. ಈ ವಿಷಯದಲ್ಲಿ ನಮ್ಮ ಕಾಲ, ನಿಮ್ಮ ಕಾಲ ಎನ್ನುವುದು ಬೇಡ. ನಾವು ಕೆಟ್ಟದ್ದನ್ನು ಮಾಡಿದ್ದರೆ, ಅದನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ನಾನು ಹೇಳುವುದಿಲ್ಲ. ಕಾನ್‌ಸೆನ್ಸ್‌ಸ್ ಬಗ್ಗೆ ಇವತ್ತು ದೇಶದ ಪರಿಸ್ಥಿತಿ ಏನಿದೆ? ಅದನ್ನು ಯೋಚನೆ ಮಾಡಿ. ಬರೀ ಯಾವುದೋ ಒಂದು ಕ್ಷೇತ್ರದ್ದು ತೆಗೆದುಕೊಂಡು ಏಕೆ ಮಾಡುತ್ತೀರಿ? ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಆ ಮೆಜಾರಿಟಿ ಎನ್ನತಕ್ಕಂಥಾದ್ದನ್ನು ತೆಗೆಯಿರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದನ್ನು ಹೇಗೆ ಸರಿಪಡಿಸಬೇಕೋ ನೋಡೋಣ. ತಾವು ಹಿಂದೆ ನಮ್ಮನ್ನೇ ಚೇರ್ಮನ್‌ಗಿರಿಯಿಂದ ತೆಗೆದು ಹಾಕಿದ್ದಿರಿ. ಧರಣಿ ಮಾಡಿದ ಮೇಲೆ ಮತ್ತೆ ಸೇರಿಸಿಕೊಂಡಿದ್ದೇವೆ. ನೀವು ಮೆಜಾರಿಟಿ ಎನ್ನುವ ಪದಕ್ಕೆ ಇಷ್ಟು ಹೇಳಿ, ನಮ್ಮನ್ನು ಕೈ ಬಿಟ್ಟಿದ್ದೀರಿ ಎಂದು ಹೇಳುತ್ತೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನೇನು ಟೀಕೆ ಮಾಡಿದ್ದೇನೆ. ನಾನು ಮತ್ತು ನಮ್ಮ ಪಕ್ಷ ಆಶ್ರಯ ವಿಚಾರದಲ್ಲಿ, ಮನೆಗಳನ್ನು ಕಟ್ಟತಕ್ಕ ವಿಚಾರದಲ್ಲಿ ತಾವೇನು 11 ಲಕ್ಷ ಮನೆಗಳನ್ನು ಕಟ್ಟಬೇಕೆಂದು ಹೊರಟಿದ್ದೀರಿ. ಹಣಕಾಸಿನ ವ್ಯವಸ್ಥೆಯನ್ನು ಮಾಡಿದ್ದೀರಿ, ಅದಕ್ಕೊಂದು ನಿಗಮವನ್ನು ಮಾಡಿದ್ದೀರಿ. ಇದನ್ನೆಲ್ಲಾ ನಾವು ಸ್ವಾಗತ ಮಾಡಿದ್ದೇವೆ. ಈ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಾ ಇದೆ ಎಂದು ಹೇಳಿದ್ದೇವೆ. ನಮ್ಮಿಂದ ಇನ್ನೇನು ಬಯಸುತ್ತೀರಿ? ನೀವು ಸಹಕಾರ ಬೇಕು ಎಂದು ಹೇಳುತ್ತೀರಿ, ನಿಮ್ಮ ಪಕ್ಷದ

ಕಾರ್ಯಕರ್ತರಿಗೂ, ನಿಮ್ಮ ಪಾರ್ಟಿ ಬಗ್ಗೆ ಅಭಿಮಾನ ಇದ್ದೇ ಇರುತ್ತದೆ. ಅದೇ ರೀತಿ ನಮಗೂ ಇದ್ದೇ ಇರುತ್ತದೆ. ಏನೋ ಒಂದು ಕಡೆ ಇಂತಹ ವಿಚಾರಗಳಲ್ಲಿ ಹೊಂದಾಣಿಕೆ ಎಂಬುದು ಬರಬೇಕಾಗುತ್ತದೆ. ಅದರಿಂದಾಗಿ ಈ ಸಂದರ್ಭದಲ್ಲಿ ನಾನು ಒತ್ತಾಯಪೂರ್ವಕವಾಗಿ ಮಾತನಾಡಿದ್ದೇನೆ. ಸ್ವಾಮಿ, ಚಾಮರಾಜನಗರ ವಿಚಾರದಲ್ಲಿ ನೀವು ದಯವಿಟ್ಟು ಪೋಲೀಸ್ ಇಲಾಖೆಯ ವತಿಯಿಂದ ಗುಪ್ತ ವರದಿಯನ್ನು ತರಿಸಿಕೊಳ್ಳಿ. ಅಲ್ಲಿ ಏನೇನು ಆಗುತ್ತಿದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಎಂ.ಮಹದೇವ್: ನೀವು ಅಲ್ಲಿಯ ಅಭಿವೃದ್ಧಿ ಬಗ್ಗೆ ಗಮನ ಕೊಡದೇ, ಬೆಳಿಗ್ಗೆ ಎದ್ದು ರಾಜಕೀಯ ಮಾಡುತ್ತಾ ಕುಳಿತುಕೊಂಡರೆ ಅದರಿಂದ ಏನು ಪ್ರಯೋಜನ? ನೀವು ಅದರ ಬಗ್ಗೆ ಚಿಂತನೆ ಮಾಡಬೇಕು. ಸರ್ಕಾರದ ಕಾರ್ಯಕ್ರಮಗಳನ್ನು ನಾವು ಅನುಷ್ಠಾನಗೊಳಿಸುವುದು ಬೇಡವೇ?

-ಗೊಂದಲ-

ಚೇರ್ಮನ್: ನೋಡಿ, ದಿಕ್ಕು ಬದಲಾಯಿಸುತ್ತಾ ಇದೆ. ದಯಮಾಡಿ ಕುಳಿತುಕೊಳ್ಳಿ, ತಾವು ಬೇಗ ಮುಗಿಸಿ. ಈ ರೀತಿಯಾದರೆ ಬೇರೆ ಯಾರಿಗೂ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ಅವರೇ ಕೊನೆಯವರೆಗೆ ಮಾತನಾಡಬಹುದು. ಅದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ. 3 ಗಂಟೆಗೆ ಸರ್ಕಾರದಿಂದ ಉತ್ತರ ಪ್ರಾರಂಭವಾಗುತ್ತದೆ. ಆಮೇಲೆ ನೀವು ಹೇಗೆ ಮಾತನಾಡುತ್ತೀರಿ? ಬೇರೆಯವರು ಮಧ್ಯೆ ಪ್ರವೇಶ ಮಾಡಿದರೆ, ಅವರು ಹೇಗೆ ಮಾತನಾಡಲಿಕ್ಕಾಗುತ್ತದೆ? ಮಧ್ಯೆ ಯಾವ ಸದಸ್ಯರೂ ಪ್ರವೇಶ ಮಾಡಬೇಡಿ, ಕುಳಿತುಕೊಳ್ಳಿ.

ಶ್ರೀ ಬಿ.ಸೋಮಶೇಖರ್: ವಿರೋಧ ಪಕ್ಷದ ಸದಸ್ಯರುಗಳಿಗೆ ಆಡಳಿತಾತ್ಮಕವಾಗಿ, ರಾಜಕೀಯವಾಗಿ ಬಹಳ ತೊಂದರೆಗಳು ಇರುತ್ತವೆ ಎಂಬ ವಿಚಾರವಾಗಿ ಎಲ್ಲವನ್ನೂ ನಾವು ಮುಖ್ಯಮಂತ್ರಿಗಳಿಗೆ ಹೇಳುವುದಕ್ಕಾಗುವುದಿಲ್ಲ. ನಾನು ಏಕೆ ಇನ್ನೂ ಫೈನಲೈಸ್ ಮಾಡುವುದಕ್ಕಾಗಿಲ್ಲ, ಅದಕ್ಕೆ ನಿಮ್ಮ ಸದಸ್ಯರಿಂದ ಸಹಕಾರ ಸಿಕ್ಕಿದೆಯೇ ಇಲ್ಲವೇ, ಅಧಿಕಾರಿಗಳಿಂದ ಸಿಕ್ಕಿದೆಯೇ ಇಲ್ಲವೇ ಎಂಬ ನೋವನ್ನು ತಮಗೆ ಹೇಳಬೇಕಾಗುತ್ತದೆ. ನಾವೇನು ಯಾವತ್ತೂ ಮಾಡಬಾರದೆಂದು ಅಲ್ಲ. ಎಷ್ಟೋಸಾರಿ ನಿಮ್ಮ ಸದಸ್ಯರುಗಳು ಸಹಕಾರ ಕೊಡುವುದಿಲ್ಲ. ನಾವು ಸರಿಯಾದಂಥ ಪಟ್ಟಿ ತಯಾರು ಮಾಡಿದರೂ ಅದಕ್ಕೆ ವಿರೋಧ ಮಾಡುತ್ತಾರೆ. ಅಧಿಕಾರಿಗಳು ಕೆಲವರ ಹತ್ತಿರ ಹಣ ತೆಗೆದುಕೊಳ್ಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಏನಾದರೊಂದು ವ್ಯವಸ್ಥಿತವಾಗಿ ಬದಲಾವಣೆಯಾಗಬೇಕು. ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಅದಕ್ಕೆ, ಮುಖ್ಯಮಂತ್ರಿಗಳು ಇವತ್ತು ನಾವೇನು ವಿಚಾರ ಎತ್ತಿದ್ದೇವೆ, ಅದರ ಬಗ್ಗೆ ಅವರು ಸ್ಪಷ್ಟವಾದಂಥ ನಿಲುವು ಕೊಡಬೇಕು.

-ಗೊಂದಲ-

ಚೇರ್ಮನ್: ಮತ್ತೆ ಡೈವರ್ಷನ್ ಆಗುತ್ತದೆ. ಇದರಿಂದ ಬೇರೆ ಯಾರಿಗೂ ಮಾತನಾಡಲಿಕ್ಕೆ ಅವಕಾಶ ಸಿಗುವುದಿಲ್ಲ. ಅದಕ್ಕಾಗಿ ನೀವು ಚೇರ್ಮನರನ್ನು ಜವಾಬ್ದಾರರನ್ನಾಗಿ ಮಾಡಬಾರದು

ಶ್ರೀ ಎ.ಆರ್.ಕೃಷ್ಣಮೂರ್ತಿ: ಇದುವರೆಗೆ ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ಮತ್ತು ನಮ್ಮ ನಾಯಕರಾದಂಥ ಮಾನ್ಯ ಸಿಂಧ್ಯರವರು ವಿಷಯವನ್ನು ಪ್ರಸ್ತಾಪ ಮಾಡಿದರು. ಈ ಆಶ್ರಯದ ವಿಚಾರದಲ್ಲಿ ಸರ್ಕಾರ ಮೊದಲು ಸುತ್ತೋಲೆಯನ್ನು ಹೊರಡಿಸಿ, ನಂತರ ಬದಲಿ ಸುತ್ತೋಲೆಗಳಲ್ಲಿ ಈ ಮೆಜಾರಿಟಿ ಎಂಬ ಪದವನ್ನು ಉಪಯೋಗಿಸಿದ್ದಾರೆ. ಅದಕ್ಕೆ ಪೂರಕವಾಗಿಯೇ ನಾನು ಸಮಿತಿಯ ಅಧ್ಯಕ್ಷನಾಗಿ ಅಲ್ಲಿ ತೀರ್ಮಾನ ತೆಗೆದುಕೊಂಡಿದ್ದೇನೆ. ಆ ಮೆಜಾರಿಟಿ ವೋಟ್ ಮೇಲೆಯೇ.

ಚೇರ್ಮನ್: ಆ ಆಶ್ರಯ ಯೋಜನೆ ಬಗ್ಗೆ ಇಲ್ಲಿ ಹಲವಾರು ಬಾರಿ ಚರ್ಚೆಯಾದಾಗ ಅದನ್ನೇ ಪ್ರತ್ಯೇಕವಾಗಿ ಒಂದು ಕಡೆ ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತೇನೆಂದು ಅಧ್ಯಕ್ಷರು ಅವತ್ತೇ ಹೇಳಿದ್ದಾರೆ. ಆಗ, ಸಮಯವನ್ನು ತೆಗೆದುಕೊಂಡು ಕೂಲಂಕುಷವಾಗಿ ಚರ್ಚೆ ಮಾಡೋಣ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಸರ್ಕಾರ ಹೊಸದಾಗಿ ಏನು ಸುತ್ತೋಲೆ ಹೊರಡಿಸಿದೆ, ಅದರ ಆಧಾರದ ಮೇಲೆ, ಮೆಜಾರಿಟಿ ವೋಟಿನ ಮೇಲೆ ತೀರ್ಮಾನ ಮಾಡಿದರೂ ಕೂಡ, ಸರ್ಕಾರ ಅದನ್ನು ಸ್ಟೇ ಮಾಡಿರತಕ್ಕ ಉದಾಹರಣೆ ನಮ್ಮ ಕ್ಷೇತ್ರದಲ್ಲಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಆ ಕಡತವನ್ನು ತರಿಸಿಕೊಂಡು ಅದರ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕು ಮತ್ತು ನ್ಯಾಯ ದೊರಕಿಸಿಕೊಡಬೇಕೆಂದು ನಾನು ಅವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಸೋಮಶೇಖರ್: ಏಕೆಂದರೆ, ಇಲ್ಲಿ ಆಡಳಿತಾತ್ಮಕವಾಗಿ ಬಹಳ ಸಮಸ್ಯೆಗಳು ಬರುತ್ತವೆ. ಉದಾಹರಣೆಗಾಗಿ ಈ ಸರ್ಕಾರದಲ್ಲಿ ಒಂದು ಯೋಜನೆಯನ್ನು ತಂದಿದ್ದಾರೆ. ಸ್ವಚ್ಛ ಗ್ರಾಮ, ಒಂದು ತಾಲ್ಲೂಕಿನಲ್ಲಿ ನಾಲ್ಕೈದು ಗ್ರಾಮಗಳನ್ನು ತೆಗೆದುಕೊಂಡು 20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥಾದ್ದು. ಅದರಲ್ಲಿ ಎಷ್ಟು ದುಡ್ಡು ಬಿಡುಗಡೆ ಮಾಡಿದ್ದೀರಿ ಎಂಬುದು ನಮಗೆ ಗೊತ್ತಿಲ್ಲ. ಮುಖ್ಯಮಂತ್ರಿಗಳು ಚಿಕ್ಕಬಳ್ಳಾಪುರದಲ್ಲಿ ಹೋಗಿ, ಅಧಿಕೃತವಾಗಿ ಉದ್ಘಾಟನೆ ಮಾಡಿ ಬಂದಿದ್ದಾರೆ. ನಾವು ಪತ್ರಿಕೆಯಲ್ಲಿ ಇದನ್ನು ನೋಡಿದೆವು. ಆದರೆ, ನನಗೆ ಗೊತ್ತಾದ ಪ್ರಕಾರ, ಆ ಊರಿನಲ್ಲಿ ಇನ್ನೂ ಆ ಕೆಲಸವೇ ಶುರುವಾಗಿಲ್ಲ. ಕಿತ್ತಾಟ, ಯಾವ

ಕಂಟ್ರಾಕ್ಟರುಗಳಿಗೆ ಕೊಡಬೇಕು, ಆ ಗ್ರಾಮ ಪಂಚಾಯ್ತಿ ಸದಸ್ಯರುಗಳ ವಿಚಾರ ಏನು? ಹೀಗಾಗಿ ಅಲ್ಲಿ ಇನ್ನೂ ಕೆಲಸವೇ ಶುರುವಾಗಿಲ್ಲ. ಇಂತಹ ಒಂದು ಆಡಳಿತಾತ್ಮಕ ಸಮಸ್ಯೆಗಳು.

ಶ್ರೀ ಎಸ್.ಎಂ.ಕೃಷ್ಣ: ಕಿತ್ತಾಟ ಯಾವಾಗ ಬರುತ್ತದೆಂದು ಹೇಳಿದರೆ, ಟೆಂಡರ್ ವ್ಯವಸ್ಥೆ ಇಲ್ಲದೇ ಇದ್ದಂಥ ಕಾಲದಲ್ಲಿ ಬರುತ್ತಿತ್ತು. ಅಂದರೆ, ಅದು ನಿಮ್ಮ ಕಾಲದಲ್ಲಿ. ಈಗ ಟೆಂಡರ್ ವ್ಯವಸ್ಥೆ ಜಾರಿಗೆ ಬಂದಿದೆ ತಾನೆ. ಆದ್ದರಿಂದ, ಕಿತ್ತಾಟದ ಪ್ರಶ್ನೆಯೇ ಇಲ್ಲ. ಲೋಯೆಸ್ಟ್ ಟೆಂಡರ್ ಯಾರಿದ್ದಾನೋ ಅವನು, ಆ ಕೆಲಸವನ್ನು ಮಾಡುತ್ತಾನೆ.

ಶ್ರೀ ಬಿ.ಸೋಮಶೇಖರ್: ಗ್ರಾಮ ಪಂಚಾಯ್ತಿ ಸದಸ್ಯರುಗಳಲ್ಲೂ ಮತ್ತು ಜಿಲ್ಲಾ ಪಂಚಾಯ್ತಿ ಸದಸ್ಯರುಗಳಲ್ಲಿ ಯಾವ ಊರು ತೆಗೆದುಕೊಳ್ಳಬೇಕೆಂಬ ಬಗ್ಗೆಯೂ ಕಿತ್ತಾಟ ಆಗಿದೆ.

ಶ್ರೀ ಎಸ್.ಎಂ.ಕೃಷ್ಣ: ಇವತ್ತು ನಮ್ಮ ರಾಜ್ಯದಲ್ಲಿ 56 ಸಾವಿರ ಹಳ್ಳಿಗಳು ಇವೆ. ಅದರಲ್ಲಿ ಈ ವರ್ಷ ನಾವು ತೆಗೆದುಕೊಂಡಿರುವುದು ಎರಡು ಸಾವಿರ ಸ್ವಚ್ಛ ಗ್ರಾಮಗಳು. ಸ್ವಾಭಾವಿಕವಾಗಿ ಆ ಕಿತ್ತಾಟ ಇರುತ್ತದೆ. ಅದರ ಬಗ್ಗೆ ನೀವು ಮಾತನಾಡುತ್ತಿದ್ದರೆ, ನನ್ನ ಕಾಳಜಿ ಇಲ್ಲ.

ಶ್ರೀ ಬಿ.ಸೋಮಶೇಖರ್: ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ವಿಷಯವಾಗಿ ನಮ್ಮ ಮಹಂತೇಶ ಕೌಜಲಗಿಯವರು ಬಹಳ ಒಳ್ಳೆಯ ವಿಚಾರಗಳನ್ನು ಹೇಳಿದರು. ಎಷ್ಟೋ ಗ್ರಾಮ ಪಂಚಾಯ್ತಿಗಳು ಕಂಟ್ರಾಕ್ಟರುಗಳ ಮುಖಾಂತರ, 2 ಲಕ್ಷ ರೂಪಾಯಿಗಳನ್ನು ತುಂಬಿಸಿ, ಅವರಿಗೇ ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ.

ಶ್ರೀ ಎಸ್.ಎಂ.ಕೃಷ್ಣ: ಟೆಂಡರ್ ಕರೆಯದೇ ಇದ್ದರೆ,ಅವನು ಜೈಲಿಗೆ ಹೋಗಬೇಕಲ್ಲ ಸ್ವಾಮಿ. ನಾವು ಅವರನ್ನು ಜೈಲಿಗೆ ಹಾಕುತ್ತೇವೆ. ಆದ್ದರಿಂದ ಎರಡು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು, ಟೆಂಡರ್ ಕರೆಯದೇ ಯಾವ ಅಧಿಕಾರಿ ಕೆಲಸ ಕೊಡುತ್ತಾನೆ, ಅವನು ಜೈಲಿಗೆ ಹೋಗುತ್ತಾನೆ. ಮಾನ್ಯ ಮಲ್ಲಿಕಾರ್ಜುನ್‌ರವರು ಹೇಳಿದ್ದನ್ನೂ ಒಪ್ಪೋಣ. ಏನೆಂದರೆ, ಯಾವುದೋ ಒಂದು ಹಳ್ಳಿ, ಆ ಹಳ್ಳಿಯಲ್ಲಿ ಒಂದು ಕೆಲಸ. ಅದು ಸುಮಾರು 10 ಲಕ್ಷ ರೂಪಾಯಿಗಳ ಕೆಲಸ. ಅದಕ್ಕೆ ಅವರು 10 ಪರ್ಸೆಂಟ್ ತುಂಬಬೇಕು. ಸ್ವಚ್ಛಗ್ರಾಮಕ್ಕೆ ಕ್ವಾಲಿಫೈ ಆಗಬೇಕಾದರೆ, 10 ಪರ್ಸೆಂಟ್ ತುಂಬಬೇಕು. ಅದರಿಂದ, ಅವನಿಂದ ಹಣ ತೆಗೆದುಕೊಂಡು, ಅದನ್ನು ಆ ಸ್ವಚ್ಛ ಗ್ರಾಮಕ್ಕೆ ಡಿಪಾಸಿಟ್ ಮಾಡಿ, ಅನಂತರ ಟೆಂಡರ್ ಕರೆದು, ಆ ಟೆಂಡರಿನಲ್ಲಿ ಅವನು ಲೋಯೆಸ್ಟ್ ಬಿಡ್ಡರ್ ಆಗಿದ್ದರೆ, ಅವನಿಗೆ ಸೇರುತ್ತದೆ. ಅವನು ಲೋಯೆಸ್ಟ್ ಬಿಡ್ಡರ್

ಆಗದೇ ಹೋದರೆ, ಆ ಅಧಿಕಾರಿ ಜೈಲಿಗೆ ಹೋಗಬೇಕಾಗುತ್ತದೆ.

(ಈ ಸಂದರ್ಭದಲ್ಲಿ ಸಭಾಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪನವರು ಆಗಮಿಸಿ, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಡಿ.ವಿ.ಸದಾನಂದಗೌಡ: ಕೆಲವು ಭಾಗಗಳಲ್ಲಿ ಕಾಂಟ್ರಾಕ್ಟರುಗಳೇ ಹೊಂದಾಣಿಕೆ ಮಾಡಿಕೊಂಡು, ಅವರೇ ಇಂಟರ್‌ನಲ್‌ಹೊಂದಾಣಿಕೆ ಮಾಡಿಕೊಂಡು, ಕೆಲವೇ ಜನ ಟೆಂಡರುಗಳನ್ನು ಹಾಕಿ, ಅವರೇ ತೆಗೆದುಕೊಂಡು ಮಾಡಿಕೊಂಡು ಹೋಗುತ್ತಿದ್ದಾರೆ. ಈ ಕೆಲಸಗಳು ಆಗುತ್ತಾ ಇವೆ, ಆಗುತ್ತಿಲ್ಲವೆಂದಲ್ಲ. ಈಗ ನಿಮ್ಮ ಆಕ್ಟ್ ಬಂದಮೇಲೆ ಇವು ಕಡಿಮೆಯಾಗುತ್ತಾ ಇವೆ. ಆದರೂ ಕೂಡ ಕೆಲವು ಕಡೆಗಳಲ್ಲಿ ಕಾಂಟ್ರಾಕ್ಟರುಗಳು ಅವರಷ್ಟಕ್ಕೇ ಹೊಂದಾಣಿಕೆ ಮಾಡಿಕೊಂಡು, ಇಂಥಾದ್ದಕ್ಕೆ ನೀನು ಟೆಂಡರ್ ಹಾಕಬೇಕು, ಇಂಥಾದ್ದಕ್ಕೆ ನಾನು ಟೆಂಡರ್ ಹಾಕುತ್ತೇನೆಂದು ಅಡ್ಜೆಸ್ಟ್‌ಮೆಂಟ್ ಮಾಡಿಕೊಂಡು, ಮಾಡುತ್ತಿರುವುದು ನಡೆದಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ.

1-40 ಪಿ.ಎಂ

ಶ್ರೀ ಎಸ್.ಎಂ.ಕೃಷ್ಣ: ಅದಕ್ಕೆ ಪರ್ಯಾಯ ಏನು ಇದೆ ಹೇಳಿ. ಈಗ ನಮ್ಮ ಬುದ್ಧಿವಂತಿಕೆಗೆ ಕಂಡು ಬಂದ ರೀತಿಯಲ್ಲಿ ನಾವು ಒಂದು ವ್ಯವಸ್ಥೆಯನ್ನು ಜಾರಿಗೆ ತರಲಿಕ್ಕೆ ಪ್ರಯತ್ನ ಪಡುತ್ತಿದ್ದೇವೆ, ಅದಕ್ಕೆ ತಮ್ಮ ಸಹಕಾರವನ್ನು ಕೇಳುತ್ತಿದ್ದೇವೆ. ಇದನ್ನು ಉತ್ತಮ ಪಡಿಸಲಿಕ್ಕೆ ಇದನ್ನು ಇನ್ನೂ ಎಫೆಕ್ಟೀವ್ ಮಾಡಲಿಕ್ಕೆ ತಮ್ಮಿಂದ ಯಾವುದಾದರೂ ಮಾರ್ಗದರ್ಶನ ಸಿಕ್ಕಿದರೆ ಆ ಮಾರ್ಗದರ್ಶನವನ್ನು ಸರ್ಕಾರ ಖಂಡಿತವಾಗಿ ಆಲೋಚನೆ ಮಾಡುತ್ತದೆ. ಕೇವಲ ಒಂದಲ್ಲ, ದೊಡ್ಡ ದೊಡ್ಡ ಕಾಮಗಾರಿಗಳಲ್ಲಿ ಕೂಡ ಕೆಲವು ಸಮಯ ಕಂಟ್ರಾಕ್ಟರ್ಸ್ ಮಾತನಾಡಿಕೊಂಡು ನಾವು ಯಾರೂ ಒಂದು ರೇಟಿಗೆ ಮೀರಿ ಹಾಕುವುದಿಲ್ಲ ಎಂದು ಹೇಳಿದಾಗ ರೀ-ಟೆಂಡರ್ ಮಾಡಿದಂತಹ ನಿದರ್ಶನಗಳು ಇವೆ. ಅದನ್ನೇ ನಾವು ಈ ಗ್ರಾಮ ಪಂಚಾಯತಿಗಳಲ್ಲಿ ಜಾರಿಗೆ ತರಬಹುದು. ಆದರೆ ಒಂದು ತೊಂದರೆ ಏನಾಗಬಹುದು ಅಂದರೆ, ಇದರಿಂದ ಕೆಲಸಕಾರ್ಯಗಳು ನಿಧಾನವಾಗುತ್ತವೆ ಎನ್ನುವಂತಹ ಒಂದೇ ಒಂದು ನಮಗಿರತಕ್ಕಂಥ ಅಕ್ಯುಪೇಷನಲ್.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ಕೋಲಾರದ ಜಿಲ್ಲಾ ಪಂಚಾಯತ್ ಬಿಲ್ಡಿಂಗ್ ಮೇಲೆ 8 ಲಕ್ಷ ರೂಪಾಯಿಗಳ ಒಂದು ಬಿಲ್ಡಿಂಗ್ ಕಟ್ಟುತ್ತಿದ್ದಾರೆ. ಅದಕ್ಕೆ ಟೆಂಡರ್ ಕರೆದಿಲ್ಲ. ನೀವು ಆ ಸಿ.ಇ.ಒ.ರವರನ್ನು ಜೈಲಿಗೆ ಹಾಕುತ್ತೀರಾ?

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ಅವನು ಆ ರೀತಿ ಮಾಡಿದ್ದರೆ ಅವನನ್ನು ವಿಚಾರಣೆ ಮಾಡಿ ಟೆಂಡರ್ ಕರೆಯದೆ ಅವನು ವ್ಯವಹಾರ ಮಾಡಿದ್ದರೆ ಟ್ರೈಯಲ್

ಆಗಬೇಕು, ನಾವು ಸುಮ್ಮನೆ ಜೈಲಿಗೆ ಹಾಕುವುದಕ್ಕೆ ಆಗುವುದಿಲ್ಲ. ಅವನನ್ನು ವಿಚಾರಣೆ ಮಾಡಿಸುತ್ತೇನೆ. ಅವನು ನನ್ನ ಸ್ವಂತ ಸಂಬಂಧಿ ಇರಲಿ, ನನ್ನ ವಿರೋಧಿ ಇರಲಿ, ಈ ಪಾರದರ್ಶಕತೆಯ ಆಕ್ಟ್ ಪರವಾಗಿ ಅವನು ಆ ಪಾರದರ್ಶಕತೆಯ ಆಕ್ಟ್‌ನ್ನು ವೈಲೇಟ್ ಮಾಡಿದಂತಹ ಯಾವುದೇ ನಿದರ್ಶನ ನನಗೆ ಬರೆದುಕೊಡಿ,ಅವನ ಮೇಲೆ ವಿಚಾರಣೆ ಮಾಡಿ ಅವನನ್ನು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸುವಂತಹ ಭರವಸೆಯನ್ನು ನಾನು ಈ ಸದನಕ್ಕೆ ಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಸೋಮಶೇಖರ್‌ರವರೇ ತಾವು ಬೇಗ ಮುಗಿಸಿ. ತಾವು ಕೇಳಿದ್ದು 20 ನಿಮಿಷ. ಈಗ ಒಂದೂವರೆ ಗಂಟೆ ಆಗಿದೆ, ಬೇಗ ಮುಗಿಸಿ.

ಶ್ರೀ ಬಿ.ಸೋಮಶೇಖರ್:ಮಾನ್ಯ ಅಧ್ಯಕ್ಷರೇ,ನಾನು ಕಂದಾಯ ಇಲಾಖೆ ಬಗ್ಗೆ ಮಾತನಾಡಲಿಲ್ಲ. ಇನ್ನೂ ಸ್ವಲ್ಪ ಅವಕಾಶ ಕೊಡಿ ಬೇಗ ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾವೇನು ಬೇಡಿಕೆ ಇಟ್ಟಿದ್ದೇವೆ, ಆಶ್ರಯ ಸಮಿತಿಗಳಲ್ಲಿ ಅನಾನುಕೂಲವಾಗುತ್ತಿದೆ. ಇದರಿಂದ ವಿರೋಧಪಕ್ಷದಲ್ಲಿರುವವರು ಸರಿಯಾಗಿ ತೀರ್ಮಾನ ಮಾಡುವುದಕ್ಕೆ ಆಗುತ್ತಿಲ್ಲ, ನನ್ನಲ್ಲಿ ವಿಳಂಬವಾಗುವುದಕ್ಕೆ ಇದೊಂದು ಕಾರಣ. ನಾನು ತಮಗೆ ಅದನ್ನೆಲ್ಲಾ ಹೇಳುವುದಕ್ಕೆ ಆಗಿಲ್ಲ. ಆದ್ದರಿಂದ ಈ ಬಗ್ಗೆ ಒಂದು ಆಶ್ವಾಸನೆಯನ್ನು ಕೊಡಬೇಕು, ಮೆಜಾರಿಟಿ ಎನ್ನುವುದನ್ನು ಬಿಟ್ಟು ಕಾನ್‌ಸೆನ್ಸ್ ಅಂತ ಮಾಡಿ ಕೊಟ್ಟರೆ ಎಲ್ಲರಿಗೂ ಅನುಕೂಲವಾಗುತ್ತದೆ. ಆ ಬಗ್ಗೆ ತಾವು ಹೇಳಬೇಕು. ಮಾನ್ಯ ಕಂದಾಯ ಇಲಾಖಾ ಮಂತ್ರಿಗಳು ಒಂದೂವರೆ ವರ್ಷದಿಂದ ಕಂದಾಯ ಇಲಾಖೆಯನ್ನು ನಡೆಸಿಕೊಂಡು ಬಂದಿದ್ದೀರಿ. ನಾನು ಸಹ ಒಂದೂವರೆ ವರ್ಷ ಕಂದಾಯ ಮಂತ್ರಿಯಾಗಿದ್ದೆ. ತಮ್ಮ ಕಾಲದಲ್ಲಿ ಯಾವುದಾದರೂ ಹೊಸ ಹೊಸ ಯೋಜನೆಗಳು ಬಂದಿವೆಯೇ ಅಂತ ನೋಡಿದರೆ ಯಾವುದೂ ಕಾಣುತ್ತಿಲ್ಲ. ಹೊಸ ಕಾರ್ಯಕ್ರಮ ಮಾಡದಿದ್ದರೆ ಹೋಗಲಿ ನಾವು ಕೆಲವು ಜನಪರವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವು, ಅವುಗಳನ್ನುಅನುಷ್ಠಾನ ಮಾಡುತ್ತಿದ್ದೀರಾ? ಒಬ್ಬರೋ, ಇಬ್ಬರಿಗೂ ಅನುಕೂಲವಾಗುವಂತಿದ್ದರೆ ಅದನ್ನು ಮಾಡುವುದು ಬೇಡ. ಅಥವಾ ಯಾರೋ ಒಬ್ಬ ಕಂಟ್ರಾಕ್ಟರ್‌ಗೆ ಅನುಕೂಲವಾಗುವುದೋ, ಅಥವಾ ಒಬ್ಬ ಲ್ಯಾಂಡ್ ಲಾರ್ಡ್‌ಗೆ ಅನುಕೂಲವಾಗುವಂತಿದ್ದರೆ ಅದನ್ನು ಮಾಡಬೇಡಿ. ಆದರೆ ಇಡೀ ಕರ್ನಾಟಕ ರಾಜ್ಯದ ಜನತೆಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತಂದಿದ್ದೀರಿ ಅಂತ ಹೇಳಿದರೆ ಬಹುಶಃ ಬಹಳ ದುಃಖವಾಗುತ್ತದೆ. ತಾವು ಬಹಳ ಹಿರಿಯ ಮಂತ್ರಿಗಳು, ತಮ್ಮ ಮೇಲೆ ನನಗೆ ಗೌರವವಿದೆ. ಆದರೆ ತಾವು ಮಾಡಿರತಕ್ಕಂಥ ಕೆಲಸ ಯಾವುದೆಂದರೆ ಡಿ-ನೋಟಿಫೈ ಮಾಡಿರತಕ್ಕಂಥ ಕೆಲಸಗಳು ಆಗಿವೆ. ಕಾನೂನಿಗೆ ವಿರುದ್ಧವಾಗಿ ಡೀ-ನೋಟಿಫೈ

ಮಾಡುವಂತಹ ಕೆಲಸಗಳು ಆಗಿವೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಮಾನ್ಯ ಕಂದಾಯ ಸಚಿವರು): ಯಾವುದು ಹೇಳಿ.

ಶ್ರೀ ಬಿ.ಸೋಮಶೇಖರ್: ನಮ್ಮ ಕಾಲದಲ್ಲಿ ಐ.ಟಿ.ಐ. ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯನ್ನು ಒಪ್ಪಿರಲಿಲ್ಲ. ಅದನ್ನು ಇವತ್ತು ತಾವು ಡೀ-ನೋಟಿಫಿಕೇಶನ್ ಮಾಡಬೇಕು ಅಂತ ಹೇಳಿದ್ದೀರಿ. ಕೆಂಗೇರಿಯಲ್ಲಿ ಒಬ್ಬ ಸ್ವಾಮೀಜಿ ಅನಧಿಕೃತವಾಗಿ ಇಟ್ಟುಕೊಂಡಿದ್ದಾರೆ. ಈ ಬಗ್ಗೆ ಹೈಕೋರ್ಟಿನ ಡಿವಿಜನ್ ಬೇಂಚ್ ತಿರ್ಮಾನ ಇದೆ. ಇವರಿಗೆ ಡೀ-ನೋಟಿಫೈ ಮಾಡಬಾರದು ಅಂತ. ನನ್ನ ಕಾಲದಲ್ಲಿ ನನ್ನ ಮೇಲೆ ಎಷ್ಟೇ ಒತ್ತಡ ಬಂದರೂ ನಾನು ಕೊಟ್ಟಿರಲಿಲ್ಲ. ಇವತ್ತು ತಾವು ಹೈಕೋರ್ಟಿನ ತೀರ್ಮಾನದ ವಿರುದ್ಧವಾಗಿ ಆರ್ಡರ್ ಮಾಡಿದ್ದೀರಿ. ಓಂಕಾರೇಶ್ವರ ಸ್ವಾಮೀಜಿ ಮಠ, ಅದು ಬಹಳ ಫ್ರಾಡ್, ಒತ್ತುವರಿ ಮಾಡಿಕೊಂಡು ಕಾಂಪೌಂಡ್ ಹಾಕಿ ಕೊಂಡಿದ್ದಾರೆ. ಮತ್ತೆ ಬಿ.ಡಿ.ಎ.ನಲ್ಲಿ ಸರ್ವೆ ನಂಬರು 25 ಅಂಜನಾಪುರ, ಆರ್.ಎಂ.ಇ. ಪಕ್ಕ. ಇದು ಬಹಳ ಬೆಲೆ ಬಾಳುವಂತಹ ಜಮೀನು. ಸುಮಾರು ಎರಡೂವರೆ ಎಕರೆ ಜಮೀನು ಇದು ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುತ್ತದೆ. ಆ ಜಮೀನನ್ನು ಬಿ ಡಿ ಎ ನವರು ತೆಗೆದುಕೊಂಡು ಪ್ರೊಸೀಡಿಂಗ್ಸ್ ಆಗಿ ಸುಮಾರು 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅವರು ಲೇ-ಔಟ್ ಮಾಡಿದ್ದಾರೆ. ಚರಂಡಿ ಕೆಲಸ ಮಾಡಿದ್ದಾರೆ. ರಸ್ತೆ ಮಾಡಿದ್ದಾರೆ. ಎಲ್ಲಾ ಕೆಲಸ ಮಾಡಿದ ಮೇಲೆ ತಾವು ಡೀ-ನೋಟಿಫೀಕೇಶನ್ ಮಾಡಿದರೆ ಹೇಗೆ? ಇದು ಪಾರದರ್ಶಕವಾದ ಕೆಲಸ. ಮತ್ತೆ ಪ್ರೈವೇಟ್ ಸರ್ವೆಯರ್ಸ್‌ನ್ನು ನೇಮಕ ಮಾಡುವ ಬಗ್ಗೆ ನಾನು ಕಳೆದ ಒಂದೂವರೆ ವರ್ಷಗಳಿಂದ ಕೇಳುತ್ತಲೇ ಬಂದಿದ್ದೇನೆ. ನಾನು ಇದ್ದಾಗ ಈ ಬಗ್ಗೆ ಒಂದು ಕಾನೂನಿಗೆ ತಿದ್ದುಪಡಿಯನ್ನು ತಂದು ಮಾಡಿದ್ದೆವು. ಅದು ಬಹಳ ಉಪಯೋಗವಾಗುವಂತಹ ತಿದ್ದುಪಡಿ. ಅದನ್ನು ಏನು ಮಾಡಿದ್ದೀರೋ ಗೊತ್ತಿಲ್ಲ. ಈ ಬಗ್ಗೆ ಕೆಲವರು ಕೋರ್ಟಿಗೆ ಹೋಗಿ ಏಕೆ ಇನ್ನೂ ಮಾಡಿಲ್ಲ ಎಂದು ಪ್ರಶ್ನೆ ಮಾಡಿದ ಮೇಲೆ ಈಗ ಮಾಡುತ್ತಿದ್ದೀರಿ. ಆಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜಮೀನನ್ನು ಮಾರಾಟ ಮಾಡುವುದಕ್ಕೆ ನಮ್ಮ ಕಾಲದಲ್ಲಿ ಅವಕಾಶ ಕೊಡುತ್ತಿರಲಿಲ್ಲ. ಅದನ್ನು ಇವತ್ತು ಬಹಳ ದಾರಾಳವಾಗಿ ಮಾರಾಟ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದಾರೆ. ನಮ್ಮ ಕಾಲದಲ್ಲಿ ಏನೇನು ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದೆವು ಅದು ರಿಜಿಸ್ಟ್ರೇಷನ್ ಇರಬಹುದು, ಆ ಬಗ್ಗೆ ನಾಮಫಲಕ ಮೇಲೆ ಹಾಕಬೇಕು ಎನ್ನುವ ತಿದ್ದುಪಡಿಯನ್ನು ತಂದಿದ್ದೆವು, ಗೈಡೆನ್ಸ್ ವ್ಯಾಲ್ಯು ಬಗ್ಗೆ ಆಯಾಯಾ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿದ್ದೆವು, ಅದರ ಬಗ್ಗೆ ತಮ್ಮ ಕಾಲದಲ್ಲಿ ಏನೂ ಕಾರ್ಯಕ್ರಮ ಆಗುತ್ತಿಲ್ಲ. ಮತ್ತೆ ಕಂಪ್ಯೂಟರೈಜೇಶನ್ ಕೆಲಸಗಳು ಹಾಗೆ ಇವೆ. ಮತ್ತೇ ಲ್ಯಾಂಡ್ ಗ್ರ್ಯಾಂಟ್ ಕಮಿಟಿಗಳು

ಇನ್ನೂ ಆಗಿಲ್ಲ. ಎರಡು ಲಕ್ಷ ಕೇಸ್‌ಗಳು ಕೋರ್ಟಿನಲ್ಲಿ ಇವೆ, ಅವುಗಳನ್ನು ಬಿಡುಗಡೆ ಮಾಡುವಂತಹ ಕೆಲಸಗಳು ಆಗಿಲ್ಲ. ಮತ್ತೇ ಬಡವರು ಸರ್ಕಾರಿ ಜಮೀನುಗಳಲ್ಲಿ ಏನು ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅದನ್ನು ಅಧಿಕೃತ ಮಾಡಬೇಕೆಂದು ಹೇಳಿ ನಾವು ಸೆಕ್ಷನ್ 94(ಸಿ) ಅಂತ ಹೇಳಿ ತಿದ್ದುಪಡಿಯನ್ನು ತಂದೆವು. ಆಗ ಇಡೀ ಸದನ ಆ ತಿದ್ದುಪಡಿಯನ್ನು ಸ್ವಾಗತ ಮಾಡಿತು. ಒಂದೊಂದು ತಾಲ್ಲೂಕಿನಲ್ಲಿ ಸುಮಾರು 4-5 ಸಾವಿರ ಜನ ಬಡವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅವರು ಇವತ್ತು ಒಂದು ಅರ್ಜಿ ಹಾಕಬೇಕೆಂದು ಮಾಡಿದ್ದೇವೆ, ಇವತ್ತು ಅರ್ಜಿಗಳನ್ನು ಹಾಕುತ್ತಿದ್ದಾರೆ. ಆ ಬಗ್ಗೆ ಇನ್ನೂ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಮತ್ತೆ ಬಡವರು ಏನು ಬಗರ್‌ಹುಕ್ಕುಂ ಸಾಗುವಳಿ ಮಾಡುತ್ತಿದ್ದರು ಅದನ್ನು ಸಕ್ರಮಗೊಳಿಸುವ ಕೆಲಸ ಆಗುತ್ತಿಲ್ಲ. ಈ ಎಲ್ಲಾ ಕೆಲಸಗಳನ್ನು ತಾವು ಮಾಡಬೇಕು ಎಂದು ಹೇಳಿ ನಾನು ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ.ಚನ್ನಿಗಪ್ಪ(ಕೊರಟಗೆರೆ): ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಎಲ್ಲಾ ಇಲಾಖೆಗಳ ವಿಚಾರವನ್ನು ಒಂದು ಕನ್ನಡಿ ರೂಪದಲ್ಲಿ ರಾಜ್ಯಪಾಲರ ಮೂಲಕ ರಾಜ್ಯದ ಜನತೆಗೆ ತಿಳಿಸಿದ್ದಾರೆ. ಆ ಬಗ್ಗೆ ನಾನು ಅಭಿನಂದನೆಗಳನ್ನು ಹೇಳುತ್ತಾ, ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ಹಗರಣಗಳಲ್ಲಿ ಸಿಕ್ಕಿಹಾಕಿಕೊಂಡಿದೆ. ಮೊಟ್ಟಮೊದಲನೆಯದಾಗಿ ವೀರಪ್ಪನ್ ರಾಜಕುಮಾರ್ ಅವರನ್ನು ಅಪಹರಿಸಿದ ನಂತರ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ನಾವು ಯೋಚನೆ ಮಾಡಿದಾಗ ವೀರಪ್ಪನ್ ಒಬ್ಬ ದಂತಚೋರ ಮತ್ತು ಕೊಲೆಗಡುಕ ಎನ್ನುವ ವಿಚಾರ ಗೊತ್ತಿದ್ದರೂ ಸಹ ಸರ್ಕಾರದವರು ರಾಜಕುಮಾರ್ ಅವರಿಗೆ ರಕ್ಷಣೆ ಕೊಡುವ ವಿಚಾರದಲ್ಲಿ ವಿಫಲರಾಗಿದ್ದಾರೆ. ಈ ದಿನಗಳಲ್ಲಿ ಸರ್ಕಾರ ಸುಮಾರು 130 ದಿನ ಯಾವುದೇ ಸರ್ಕಾರದ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಆಗಲಿಲ್ಲ. ಅದಕ್ಕೆ ಕಾರಣವೇನೆಂದರೆ, ಇವೊತ್ತು ಪೋಲೀಸ್ ಇಲಾಖೆಯವರು ಕೊಟ್ಟಂಥ ರಕ್ಷಣೆಯು ಏನು ವಿಫಲವಾಯಿತು, ಅದರ ಬಗ್ಗೆ ಸರಕಾರದವರು ಯಾವ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಯವರು ಆ ವಿಚಾರದಲ್ಲಿ ಬಹಳ ಸಾಹಸಪಟ್ಟು ಮಾಡಿದಂಥ ಕಾರ್ಯವೈಖರಿಯನ್ನು ನಾನು ಶ್ಲಾಘಿಸುತ್ತೇನೆ. ತದನಂತರ ವೀರಪ್ಪನ್‌ನನ್ನು ಹಿಡಿಯುತ್ತೇವೆ, ಬಿಡುವುದಿಲ್ಲ ಎಂದು ಪ್ರೆಸ್‌ನಲ್ಲಿ ಹೇಳಿದರು. ಡಾ:ರಾಜ್‌ಕುಮಾರ್‌ರವರ ಬಿಡುಗಡೆಯಾದ ತತ್‌ಕ್ಷಣ ಲಾ-ಅಂಡ್ ಆರ್ಡರ್‌ಮೈಂಟೇನ್ ಮಾಡುತ್ತೇವೆ, ಇನ್ನು ಮುಂದೆ ಇಂಥ ಪ್ರಕರಣಗಳು ಆಗಲು ಬಿಡುವುದಿಲ್ಲ ಎಂಬ ಮಾತನ್ನು ಕೂಡ ಹೇಳಿದ್ದರು. ಅದಾದ ನಂತರ ಪೋಲೀಸ್ ಇಲಾಖೆಯ ವತಿಯಿಂದ ಒಂದೇ ಒಂದು ಮಾತನ್ನು ಕೂಡ ಯಾರೂ ಹೇಳಿಲ್ಲ.

ವೀರಪ್ಪನ್ ಎಲ್ಲಿದ್ದಾನೆ? ಅವನ ಸಹಚರರು ಯಾರು? ಎಲ್ಲಿದ್ದಾರೆ? ಏನು ಮಾಡುತ್ತಿದ್ದಾರೆ? ಎಂಬಿತ್ಯಾದಿ ವಿಚಾರಗಳನ್ನು ಸರಕಾರದವರು ತಿಳಿಸಿಲ್ಲ. ಇವೊತ್ತಿಗೂ ಆ ವಿಚಾರವು ಗೊಂದಲಮಯವಾದ ಸ್ಥಿತಿಯಲ್ಲಿದೆ. ಜನರು ಇವೊತ್ತು ಭಯಭೀತರಾಗಿದ್ದಾರೆ. ಮಲೆಮಹದೇಶ್ವರ ಬೆಟ್ಟಕ್ಕೆ ಹೋಗಲು ಕೂಡ ಜನರು ಹೆದರುತ್ತಿದ್ದಾರೆ. ಜನರಲ್ಲಿ ಒಂದು ರೀತಿಯ ಭಯಭೀತಿಯ ವಾತಾವರಣ ಸೃಷ್ಟಿಯಾಗಿದ್ದು ಆ ವಿಚಾರದಲ್ಲಿ ಸರಕಾರದವರು ಸಂಪೂರ್ಣವಾಗಿ ವಿಫಲರಾಗಿದ್ದಾರೆಂದು ಹೇಳಬಯಸುತ್ತೇನೆ. ಲಾ ಅಂಡ್ ಆರ್ಡರ್ ಪರಿಸ್ಥಿತಿಯು ಚೆನ್ನಾಗಿಲ್ಲ. ರಾಜ್ಯದಲ್ಲಿ ಶಾಸಕರುಗಳ ಕೊಲೆ ಸರಮಾಲೆಯಂತಾಗಿದೆ. ಯಾವುದೇ ಸರಕಾರಗಳಲ್ಲಿಯೂ ಶಾಸಕರುಗಳ ಕೊಲೆ ಈ ರೀತಿಯಾಗಿ ನಡೆದಿಲ್ಲ. ರಾಜಕೀಯ ಕ್ಷೇತ್ರದಲ್ಲಿರುವವರು ಇಂದು ಹೆದರಿಕೊಂಡು ಇರಬೇಕಾಗಿದೆ. ಶಾಸಕ ವಸಂತ ಅಸ್ನೋಟಿಕರ್‌ರವರ ಕೊಲೆ ನಡೆಯಿತು. ವೆಂಕಟೇಶಪ್ಪರವರ ಇನ್ನೂ ಅನೇಕರ ಕೊಲೆಯಾಯಿತು……

ಶ್ರೀ ಎಸ್.ಎಂ.ಕೃಷ್ಣ: ವೆಂಕಟೇಶ್‌ರವರ ಕೊಲೆಯಾಗಿಲ್ಲ, ಅವರನ್ನು ಬೇಗನೆ ಕಳುಹಿಸಬೇಡಿ.

(ಸಭೆಯಲ್ಲಿ ನಗು)

ಶ್ರೀ ಸಿ.ಚೆನ್ನಿಗಪ್ಪ: ಕ್ಷಮಿಸಬೇಕು. ಅವರ ಕೊಲೆಯಾಗಿಲ್ಲ, ಕೊಲೆಗೆ ಯತ್ನವನ್ನು ದುಷ್ಕರ್ಮಿಗಳು ಮಾಡಿದರು. ಹಾಗಾದರೆ ಪೋಲೀಸ್ ಇಲಾಖೆಯು ಸುಮ್ಮನೆ ಕುಳಿತಿದೆಯೇ? ರಾಜ್ಯದಲ್ಲಿ ಅಪಹರಣಗಳು ಆಗುತ್ತಲೇ ಇವೆ. ದೊಡ್ಡ ದೊಡ್ಡ ವ್ಯಕ್ತಿಗಳ ಅಪಹರಣ ಮಾಡಿ ಹಣ ತೆಗೆದುಕೊಳ್ಳುವ ಪರಿಸ್ಥಿತಿಯು ಇವೊತ್ತು ನಿರ್ಮಾಣವಾಗಿದೆ. ಇದು ನಮ್ಮಲ್ಲಿನ ಲಾ ಅಂಡ್ ಆರ್ಡರ್ ಪರಿಸ್ಥಿತಿ ಅಲ್ಲವೇ? ಹಿಂದೆ ಯಾವುದೇ ಸರಕಾರಗಳಲ್ಲಿ ಇರದಿದ್ದ ಲಾ ಅಂಡ್ ಆರ್ಡರ್ ಪರಿಸ್ಥಿತಿಯು ಈ ಸರಕಾರದ ಕಾಲದಲ್ಲಿ ಉಂಟಾಗಿದೆ ಎಂದು ಹೇಳಬಯಸುತ್ತೇನೆ. ಎಷ್ಟು ಹದಗೆಟ್ಟ ಲಾ ಅಂಡ್ ರ್ಡರ್ ಪರಿಸ್ಥಿತಿ ಅಂದರೆ, ಚರ್ಚುಗಳ ಮೇಲೆ ಹಲ್ಲೆ, ಮಕ್ಕಳ ಅಪಹರಣಗಳು, ಆಗಾಗ ನಡೆಯುತ್ತಿರುವ ಕೊಲೆಗಳು ಮುಂತಾಗಿ ಎಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡಾಗ ಕಾನೂನು ಸುವ್ಯವಸ್ಥೆಯನ್ನು ಸರಕಾರದವರು ಹತೋಟಿಯಲ್ಲಿಡಲು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂದು ಕೇಳಬಯಸುತ್ತೇನೆ. ರಾಜ್ಯದ ಜನತೆಯನ್ನು ಶಾಂತಿ ಸಮಾಧಾದಲ್ಲಿಡಲು ಯಾವ ಕ್ರಮವನ್ನು ಸರಕಾರದವರು ತೆಗೆದುಕೊಂಡಿದ್ದಾರೆ?

ಇನ್ನು ಕಂಬಾಲಪಲ್ಲಿಯ ಬಗ್ಗೆ ಹೇಳುವುದಾದರೆ ಅಲ್ಲಿ ಸಾಮೂಹಿಕ ಕೊಲೆಗಳಾದವು.

ಸರಕಾರದವರು ಪ್ರಕರಣವನ್ನು ಸಿಬಿಐನವರಿಗೆ ವಹಿಸಿಬಿಟ್ಟರು. ತದನಂತರ ಸರಕಾರದವರು ಅಲ್ಲಿ ಜರುಗಿಸಿದ ಕ್ರಮಗಳೇನು? ಸುಮ್ಮನೆ ಕೊಲೆಗಳಾದವು, ತನಿಖೆಗೆ ಒಪ್ಪಿಸಿದ್ದೇವೆ ಎಂದು ಕುಳಿತುಕೊಳ್ಳುವುದೇ? ಸರಕಾರದವರು ತೆಗೆದುಕೊಂಡ ಕ್ರಮಗಳೇನು ಎಂದು ಜನರಿಗೆ ಗೊತ್ತಾಗಬೇಕು. ದುಷ್ಕರ್ಮಿಗಳು ಏನು ಬೇಕಾದರೂ ಮಾಡಿದರೆ ನಡೆಯುತ್ತದೆ ಎಂಬ ಭಾವನೆ ಬರುವಂತಾಗಲು ಅವಕಾಶ ಮಾಡಿಕೊಡಬಾರದು. ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವಲ್ಲಿ ಸರಕಾರದವರು ನೂರಕ್ಕೆ ಎಪ್ಪತ್ತು ಭಾಗದಷ್ಟು ಕೂಡ ಸಫಲರಾಗಿಲ್ಲವೆಂದು ಹೇಳಲಿಚ್ಛಿಸುತ್ತೇನೆ. ಸರಕಾರದವರು ರಾಜ್ಯಪಾಲರ ಮುಖಾಂತರ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವಲ್ಲಿ ಯಶಸ್ವಿಯಾಗಿದ್ದೇವೆಂದು ಹೇಳಿಸಿದ್ದಾರೆ. ನಿಜಕ್ಕೂ ಸರಕಾರದವರು ಆ ದಿಶೆಯಲ್ಲಿ ಯಶಸ್ವಿಯಾಗಿಲ್ಲವೆಂದು ಹೇಳಬಯಸುತ್ತೇನೆ. ಇತ್ತೀಚೆಗೆ ಮಾನ್ಯ ಸದಸ್ಯರಾದ ಮಾಳಗಿಯವರ ಕೊಲೆ ಪ್ರಯತ್ನವು ನಡೆಯಿತು ಆ ಬಗ್ಗೆ ಯಾವ ಕ್ರಮವನ್ನು ಜರುಗಿಸಲಾಗಿದೆ? ಇನ್ನು ಯಾವುದೇ ಒಬ್ಬ ಶಾಸಕರ ರಕ್ಷಣೆಯ ಬಗ್ಗೆ ಸರಕಾರದ ಕ್ರಮಗಳೇನು? ಸನ್ಮಾನ್ಯ ಮುಖ್ಯಮಂತ್ರಿಯವರು ಬಾಯಲ್ಲಿ ಹೇಳುವ ಎಲ್ಲಾ ಸಾಧನೆಗಳನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳುವಂತಾಗಿದ್ದರೂ ಕೂಡ ಪ್ರಾಕ್ಟಿಕಲ್ ಆಗಿ ಸಾಧನೆಗಳು ಏನೂ ಇಲ್ಲವೆಂದು ಹೇಳಬೇಕಾಗುತ್ತದೆ. ಇನ್ನು ಮುಂದಾದರೂ ಹಾಗೆ ಆಗದಿರಲಿ ಎಂದು ನಾನು ವಿನಂತಿಸಿಕೊಳ್ಳುತ್ತೇನೆ. ಇಂಥ ಘಟನೆಗಳು ಕಂಬಾಲಪಲ್ಲಿಯಲ್ಲಿ, ಮಂಡ್ಯದಲ್ಲಿ, ಚೆನ್ನಪಟ್ಟಣದಲ್ಲಿ, ಮುಂತಾದ ಕಡೆಗಳಲ್ಲಿ ಎಲ್ಲಿಯೇ ಆಗಿರಬಹುದು, ಅದನ್ನು ಸಮರ್ಥ ರೀತಿಯಲ್ಲಿ ನಿಭಾಯಿಸುವಂತಿರಬೇಕು. ದಂಡುಪಾಳ್ಯದ ದುಷ್ಕರ್ಮಿಗಳ ಒಂದು ಗ್ಯಾಂಗ್‌ನವರು ಸುಮಾರು 150 ಕೊಲೆಗಳನ್ನು ಮಾಡಿರುವುದಾಗಿ ತಿಳಿದು ಬರುತ್ತದೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಚೆನ್ನಿಗಪ್ಪನವರ ಸರಕಾರದ ಅವಧಿಯಲ್ಲಿಯೇ ದಂಡುಪಾಳ್ಯದವರ ಅಪರಾಧಗಳು ಹೆಚ್ಚಾಗಿದ್ದುದು. ಈಗ ನಮ್ಮ ಸರಕಾರವು ಆಡಳಿತಕ್ಕೆ ಬಂದ ಮೇಲೆ ಅವರನ್ನು ಹಿಡಿದಿದ್ದಾರೆ.

ಶ್ರೀ ಸಿ.ಚೆನ್ನಿಗಪ್ಪ: ದಂಡುಪಾಳ್ಯದ ಗ್ಯಾಂಗ್‌ನವರು ಕೊಲೆಗಳ ಸರಮಾಲೆಯನ್ನು ನಡೆಸಿದರು. ಯಾವ ಸರಕಾರದಲ್ಲಿಯೇ ಇರಲಿ, ಇಂಥ ಘೋರ ಅಪರಾಧಗಳು ಆಗಬಾರದು. ಸರಕಾರದವರು ರಾಜ್ಯಪಾಲರ ಭಾಷಣದಲ್ಲಿ ಹೇಳಿದಂತೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲಿ ಎಂದು ನಮ್ಮ ಬೇಡಿಕೆಯಾಗಿದೆ. ನಿನ್ನೆ ನಡೆದಂಥ ಮಂಡ್ಯ ತಾಲ್ಲೂಕಿನ ಒಂದು ಪ್ರಕರಣವು ಮುಂತಾಗಿ ಅನೇಕ ಪ್ರಕರಣಗಳನ್ನು ನೋಡಿದಾಗ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಬಗ್ಗೆ ಹೆಚ್ಚು ಗೌರವವಿಲ್ಲ ಎಂದು ಭಾವಿಸುವಂತಾಗಿದೆ. ಅಂತೆಯೇ ಸರಕಾರವರು ಯಶಸ್ವಿಯಾಗಿ ಕಂಟ್ರೋಲ್‌ನ್ನು

ಹೊಂದಿಲ್ಲವೆಂದು ಹೇಳಬಯಸುತ್ತೇನೆ. ಹಾಗೆಯೇ ರಾಜ್ಯದಲ್ಲಿ ಚರ್ಚ್‌ಗಳನ್ನು ಸುಟ್ಟರು, ಬಾಂಬ್ ಹಾಕಿದರು, ಅಲ್ಪಸಂಖ್ಯಾತ ಜನರಲ್ಲಿ ಭಯಭೀತಿ ಹುಟ್ಟಿಸುವ ವಾತಾವರಣ ಉಂಟಾಯಿತು. ಈ ಬಗ್ಗೆ ಸರಕಾರದವರು ಯಾವ ಪರಿಣಾಮಕಾರಿ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ? ಎಫ್‌ಐಆರ್ ಹಾಕಿದರು ಕೇಸ್ ಹಾಕಿದರು, ಅಲ್ಲಿಗೇ ಮುಗಿಯಿತು. ಅದನ್ನು ಸೂಕ್ತ ರೀತಿಯಲ್ಲಿ ತನಿಖೆ ಮಾಡಿ ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸಿದಾಗ ಮಾತ್ರ ಜನರಲ್ಲಿ ಸರಕಾರದವರು ಕಾನೂನು ಸುವ್ಯವಸ್ಥೆಯನ್ನು ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆ ಎಂಬ ಭಾವನೆ ಬರುತ್ತದೆ. ಹಾಗೆ ಸರಕಾರದವರು ನಡೆದುಕೊಂಡಿಲ್ಲ. ಇಂಥ ಪ್ರಕರಣಗಳು ಹಾಗೆಯೇ ಮುಚ್ಚಿ ಹೋಗುತ್ತಾ ಇವೆ. ಹೀಗಾದರೆ ಇನ್ನೂ ಹೆಚ್ಚಿನ ಅಪರಾಧಗಳು ನಡೆಯಲು ದಾರಿ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಇನ್ನು ಮುಂದಾದರೂ ಮಾನ್ಯ ಗೃಹಸಚಿವರು ಕಾನೂನು ಸುವ್ಯವಸ್ಥೆಯ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡು ರಾಜ್ಯದ ಜನರಿಗೆ ನೆಮ್ಮದಿಯ ವಾತಾವರಣವನ್ನು ಸೃಷ್ಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ(ಮಾನ್ಯ ಮುಖ್ಯಮಂತ್ರಿಯವರು): ಕೇಸ್‌ಗಳನ್ನು ಹಿಡಿದು ತನಿಖೆ ಮಾಡಿದರೆ ಅದು ಮಾನ್ಯ ಸದಸ್ಯರ ಡಿಕ್ಷನರಿಯ ಪ್ರಕಾರ ಮುಚ್ಚಿ ಹಾಕಿದರು ಎಂದು ಅರ್ಥ ಬರುತ್ತದೆಯೆಂದು ಕಾಣುತ್ತದೆ. ಚರ್ಚ್‌ಗಳಲ್ಲಿ ಬಾಂಬ್ ಹಾಕಿದ ಪ್ರಕರಣಗಳು ನಡೆದುವಲ್ಲ, ಚರ್ಚ್‌ಗಳಿಗೆ ಬಾಂಬ್ ಹಾಕಿದವರನ್ನು ನಾವು ಹಿಡಿದಿದ್ದೇವೆಯಲ್ಲವೇ? ಹಿಡಿದಿದ್ದೇವೆ. ಹೀಗೆ ಹಿಡಿದ ಮೇಲೆ ಮುಂದೆ ಅವರನ್ನು ನೇಣಿಗೆ ಹಾಕಿಬಿಡುವುದೇ? ಇಂಥ ವಿಚಾರಗಳ ಬಗ್ಗೆ ಕೋರ್ಟ್ ಮುಂದೆ ಹೋಗಬೇಕಲ್ಲವೇ? ಕೋರ್ಟ್‌ನಲ್ಲಿ ದಾಖಲು ಮಾಡಿದ್ದೇವೆ, ಚಾರ್ಜ್‌ಶೀಟ್ ಫೈಲ್ ಮಾಡಿದ್ದೇವೆ. ಯಾರು ಬಾಂಬ್ ಹಾಕಿದ್ದಾರೆ ಆ ಅಕ್ಯುಸ್ಡ್, ಜೈಲ್‌ನಲ್ಲಿದ್ದಾರೆ. ತಾವುಗಳು ಬೇಕಾದರೆ ಅವರನ್ನು ಹೋಗಿ ನೋಡಿಕೊಂಡು ಬರಲು ಪರವಾನಿಗೆಯನ್ನು ಕೊಡುತ್ತೇವೆ. ಆಗ ತಮಗೆ ಅವರು ಜೈಲ್‌ನಲ್ಲಿ ಇದ್ದಾರೋ ಇಲ್ಲವೋ ಎಂದು ಗೊತ್ತಾಗುತ್ತದೆ. ಅದನ್ನು ಬಿಟ್ಟು ಕೇಸ್‌ಗಳನ್ನು ಮುಚ್ಚಿ ಹಾಕಿಬಿಟ್ಟಿದ್ದಾರೆ ಎಂದು ಹೇಳುತ್ತಿದ್ದರೆ ಅದರ ಅರ್ಥ ಏನು?

ಶ್ರೀ ಸಿ.ಚೆನ್ನಿಗಪ್ಪ: ತಾವುಗಳು ಅಂಥವರನ್ನು ಜೈಲಿಗೆ ಹಾಕಿರುವುದು ಒಂದು ವಿಚಾರ. ಇನ್ನು ಮುಂದೆಯೂ ಅಂಥ ಪ್ರಕರಣಗಳು ಜರುಗದಂತೆ ತಮ್ಮ ಕಾರ್ಯಕ್ರಮಗಳೇನು? ಆ ಪ್ರಕರಣದಲ್ಲಿ ಇನ್ನೂ ಅನೇಕ ಅಪರಾಧಿಗಳು ಉಳಿದುಕೊಂಡಿದ್ದಾರೆ. ಸರಕಾರದವರು ಎಲ್ಲರನ್ನೂ ಬಂಧಿಸಿಲ್ಲ. ಆ ಬಗ್ಗೆ ತಮ್ಮ ಸರ್ಕಾರದ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸನ್ಮಾನ್ಯ ಗೃಹಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಚೆನ್ನಿಗಪ್ಪನವರಿಗೆ ಪೋಲೀಸ್ ಇಲಾಖೆಯ ಬಗ್ಗೆ ಹೆಚ್ಚು ಮಾಹಿತಿಗಳು ಇವೆ ಎಂಬ ವಿಚಾರ ನನಗೆ ಗೊತ್ತಿದೆ. ಅವರು ಪೋಲೀಸ್ ಇಲಾಖೆಯವರನ್ನೇ ಕೇಳಿ ಎಲ್ಲಾ

ವಿಷಯಗಳನ್ನು ತಿಳಿದು ಕೊಳ್ಳಬಹುದು. ದಂಡುಪಾಳ್ಯ ಗ್ಯಾಂಗ್‌ನ್ನು ನಾವು ಬಂಧಿಸಿದ್ದೇವೆ. ಆ ಗ್ಯಾಂಗ್ ಇವೊತ್ತು ಹುಟ್ಟಿಕೊಂಡಿರುವುದೇ? ಅವರು ಎಷ್ಟು ವರ್ಷಗಳಿಂದ ಅನೇಕ ಕೊಲೆಗಳನ್ನು ಮಾಡಿಕೊಂಡು ಬಂದಿದ್ದರೂ ಹಿಡಿಯಲು ಸಾಧ್ಯವಾಗಲಿಲ್ಲ. ಈಗ ಅವರನ್ನು ನಮ್ಮ ಸರಕಾರದ ಅವಧಿಯಲ್ಲಿ ಬಂಧಿಸಿಲ್ಲವೇ? ಬಂಧಿಸಿದ್ದೇವೆ. ಹಾಗೆಯೇ ಚರ್ಚ್‌ಗಳಲ್ಲಿ ಬಾಂಬ್ ಸ್ಫೋಟವನ್ನು ಮಾಡಿದಂಥ ದುಷ್ಕರ್ಮಿಗಳನ್ನು ನಾವೇ ಬಂಧಿಸಿದ್ದೇವೆ. ಸ್ಟ್ಯಾಂಪ್ ಡ್ಯೂಟಿಯ ವಿಚಾರದಲ್ಲಿ ಅಪರಾಧಿಗಳು ಹತ್ತಾರು ವರ್ಷಗಳಿಂದ ಅವ್ಯವಹಾರವನ್ನು ಮಾಡುತ್ತಾ ಬಂದಿದ್ದವರನ್ನು ಕಂಡು ಹಿಡಿದು ಅವರ ಮೇಲೆ ಕ್ರಮವನ್ನು ಜರುಗಿಸಿದವರು ನಾವು. ಜಾಲಿ ನೋಟ್‌ಗಳನ್ನು, ಕರೆನ್ಸಿಯನ್ನು ಮಾಡಿ ಚಲಾವಣೆ ಮಾಡುತ್ತಿದ್ದವರನ್ನು ಪತ್ತೆ ಹಚ್ಚಿ ಚಾರ್ಜ್‌ಶೀಟ್ ಮಾಡಿದ್ದು ನಾವು. ಹೀಗೆ ಅನೇಕ ಗ್ಯಾಂಗ್‌ಗಳನ್ನು ಕಂಡು ಹಿಡಿದು ಕ್ರಮ ಜರುಗಿಸಿದವರು ನಾವಾಗಿದ್ದರೂ ಏನೂ ಮಾಡಿಲ್ಲವೆಂದು ಹೇಳುತ್ತಿದ್ದೀರಲ್ಲ? ಅದು ಸರಿಯೇ? 100 ಪ್ರಕರಣಗಳಲ್ಲಿ 99 ಪ್ರಕರಣಗಳನ್ನು ಪತ್ತೆ ಮಾಡಿ ಚಾರ್ಜ್‌ಶೀಟ್ ಫೈಲ್ ಮಾಡಿದ್ದೇವೆ. ಐದಾರು ವರ್ಷಗಳಿಂದ ಮುಚ್ಚಿಹೋಗಿದ್ದ ಪ್ರಕರಣಗಳು ನಮ್ಮ ತನಿಖೆಯಿಂದಾಗಿ ಹೊರಗೆ ಬರುತ್ತಿವೆ. ಇದನ್ನೆಲ್ಲಾ ನಾನು ತಮಗೆ ಏಕೆ ಹೇಳುತ್ತಿದ್ದೇನೆ ಅಂದರೆ ತಮಗೆ ಇಲಾಖೆಯ ವಿಚಾರದಲ್ಲಿ ಹೆಚ್ಚಿನ ಮಾಹಿತಿಗಳು ಇವೆ. ಇಂಥ ಅನುಭವಗಳುಳ್ಳ ತಾವುಗಳು ಕೂಡ ಹೀಗೆ ಮಾತನಾಡಿದರೆ ನನ್ನ ಗತಿ ಏನಾಗಬೇಕು? ಬೇರೆಯವರು ನನ್ನ ರಕ್ಷಣೆಗೆ ಬಾರದಿದ್ದರೂ ತಾವುಗಳಾದರೂ ನನ್ನ ರಕ್ಷಣೆಗೆ ಬರುವುದು ಬೇಡವೇ?

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ಮಾತನಾಡುವಾಗ ಪೋಲೀಸ್ ಇಲಾಖೆಯಲ್ಲಿ ಯಾರನ್ನೆಲ್ಲಾ ಹಿಡಿದಿದ್ದಾರೆ ಎಂಬುದಾಗಿ ವಿವರವಾಗಿ ಹೇಳಿದ್ದೇನೆ.

ಶ್ರೀ ಸಿ.ಚೆನ್ನಿಗಪ್ಪ:ನನ್ನ ಪ್ರಶ್ನೆ ಇಷ್ಟೇ .... ಕಾನೂನು ಸುವ್ಯವಸ್ಥೆಯನ್ನು ಸರಕಾರದವರು ಚೆನ್ನಾಗಿ ಕಾಪಾಡಿಕೊಂಡು ಬರಬೇಕು. ಆಗ ಯಾವ ಸಮಸ್ಯೆಗಳು ಉದ್ಭವವಾಗುವುದಿಲ್ಲ. ಕೆಲವು ವಿಚಾರಗಳನ್ನು ಚೆನ್ನಾಗಿ ನಿರ್ವಹಿಸಿದ್ದಾರೆ ಎಂಬ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಇವೊತ್ತು ಬೆಂಗಳೂರು ನಗರದಲ್ಲಿ ೨೨ ದಿವಸಗಳಲ್ಲಿ ೨೪ ಕೊಲೆಗಳು ನಡೆದಿದ್ದಾವೆ. ಅದು ಹೇಗೆ ನಡೆಯಿತು? ಕೆಲವರನ್ನು ಹಿಡಿದಿದ್ದೀರಿ, ಜೈಲಿಗೆ ಹಾಕಿದ್ದೀರಿ, ಕೇಸ್ ಹಾಕಿದ್ದೀರಿ ಎಂಬ ಪ್ರಶ್ನೆ ಬೇರೆ. ಇಂಥ ಪ್ರಕರಣಗಳು ಮುಂದೆ ಹೆಚ್ಚದಂತೆ, ಆಗದಂತೆ ಸರಕಾರದವರ ಕ್ರಮಗಳೇನು? ಪೋಲೀಸ್ ಇಲಾಖೆಯಲ್ಲಿ ವರ್ಗಾವಣೆ ಮಾಡುವ ವಿಚಾರವನ್ನು ತೆಗೆದುಕೊಳ್ಳಿ. ಉದಾಹರಣೆಗೆ ನೆಲಮಂಗಲದಲ್ಲಿನ ಡಿವೈಎಸ್‌ಪಿಯವರನ್ನು ವರ್ಗಾವಣೆ ಮಾಡಿದರು. ಅವರನ್ನು

ವರ್ಗ ಮಾಡಿ ಎಂದು ನಾನು ಮತ್ತು ಮಾನ್ಯ ಶ್ರೀ ಅಂಜನಮೂರ್ತಿಯವರು ಪತ್ರವನ್ನು ಕೊಟ್ಟಿದ್ದೇವೆ. ಅದರಂತೆ ವರ್ಗಾವಣೆ ಮಾಡಿದ್ದರೂ ಕೂಡ ಇನ್ನೂ ಅವರನ್ನು ರಿಲೀವ್ ಮಾಡಿಲ್ಲ. ಇದರ ಅರ್ಥ ಏನು ಬರುತ್ತದೆ? ಆದ್ದರಿಂದ ಸರಕಾರದವರು ಏನೂ ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಮಾಡುವ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ಮಾಡಬೇಕೆಂದು ಹೇಳುತ್ತಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ರೈತರ ಬಗ್ಗೆ, ಬಡವರ ಬಗ್ಗೆ, ಕಾರ್ಮಿಕರ ಬಗ್ಗೆ, ಕೃಷಿಕರ ಬಗ್ಗೆ, ಬಹಳಷ್ಟು ವ್ಯಾಖ್ಯಾನವನ್ನು ತಮ್ಮದೇ ಆದ ರೀತಿಯಲ್ಲಿ ಮಾಡಿದ್ದಾರೆ. ಈ ವಿಚಾರದಲ್ಲಿ ರೈತವರ್ಗದವರನ್ನು ಬಹಳ ಚೆನ್ನಾಗಿ ಯಾಮಾರಿಸಿ ಬಿಟ್ಟಿದ್ದಾರೆ. ಸರಕಾರದವರು ಈ ರೀತಿಯಲ್ಲಿ ಆಶ್ವಾಸನೆಗಳನ್ನು ಕೊಟ್ಟ ಮೇಲೆ ಕೋಲಾರ ಜಿಲ್ಲೆಯ ಇಬ್ಬರು ರೈತರುಗಳು ಆತ್ಮಹತ್ಯೆ ಮಾಡಿಕೊಂಡರು. ನಮ್ಮ ರಾಜ್ಯದಲ್ಲಿ ಶೇಕಡ ೭೦ರಷ್ಟು ರೈತರುಗಳಿದ್ದಾರೆ. ಅವರು ಈ ಮಟ್ಟಕ್ಕೆ ಬಂದರೆ ಹೇಗೆ? ಹಾಗಾದರೆ ಸರಕಾರದವರು ರೈತರ ಬಗ್ಗೆ ಎಷ್ಟರಮಟ್ಟಿಗೆ ಸ್ಪಂದಿಸಿದ್ದಾರೆ? ರೈತರುಗಳು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆಯನ್ನು ಸರಕಾರದವರು ಸಿಗುವಂತೆ ಮಾಡಿದ್ದಾರೆಯೇ? ರೈತರುಗಳ ಸಾಲದ ಬಡ್ಡಿ ಮನ್ನ ಮಾಡುವ ವಿಚಾರದಲ್ಲಿ ಸರಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ? ರೈತರಿಗೆ ಯಾವ ರೀತಿಯಲ್ಲಿ ಸಹಾಯವನ್ನು ಮಾಡಿದ್ದಾರೆಂಬುದನ್ನು ತಿಳಿಸಬೇಕೆಂದು ಒತ್ತಾಯಿಸುತ್ತೇನೆ. ಬೆಳೆಗಳ ಖರೀದಿ ಕೇಂದ್ರವೆಂದು ಸರಕಾರದವರು ಮಾಡಿದ್ದಾರೆ. ಅದರ ಮೂಲಕ ಕೋಟ್ಯಾಂತರ ಟನ್‌ಗಳಷ್ಟು ರೈತರ ಉತ್ಪನ್ನಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಇದನ್ನು ನಂಬಿದ ರೈತರುಗಳು ಟ್ರ್ಯಾಕ್ಟರ್‌ಗಳಲ್ಲಿ ತುಂಬಿಸಿಕೊಂಡು ದೂರದ ಊರುಗಳಿಂದ ಬಂದು ಕೇಂದ್ರಗಳ ಹತ್ತಿರ ನಿಲ್ಲಿಸಿಕೊಂಡಿದ್ದಾರೆ. ಅಲ್ಲಿ ಅವರನ್ನು ಕೇಳುವವರೇ ಇಲ್ಲ. ಅಲ್ಲಿ ಕೇವಲ ಏಜಂಟ್‌ಗಳು ಕಾರುಬಾರು ಮಾಡುತ್ತಿದ್ದಾರೆ. ರೈತರು ತಂದ ಆಲೂಗಡ್ಡೆಯನ್ನು ಮಾರಲು ಒಂದು ವಾರ ಬೇಕಾದೀತು. ಹಾಗಾದರೆ ರೈತರು ಬಾಡಿಗೆಗೆ ತಂದ ಟ್ರ್ಯಾಕ್ಟರ್‌ಗಳ ಬಾಡಿಗೆ ಎಷ್ಟಾಗುತ್ತದೆ ಎಂದು ವಿಚಾರ ಮಾಡುವುದು ಬೇಡವೇ? ದಿನಕ್ಕೆ ೩೦೦ ರೂಪಾಯಿಗಳು ಅಂದರೆ ಒಂದು ವಾರಕ್ಕೆ ೨೧೦೦ ರೂಪಾಯಿಗಳಾದವು. ಈ ನಷ್ಟವನ್ನು ಯಾರು ಭರಿಸಿಕೊಡುತ್ತಾರೆ? ಅವನಿಗೆ ಬೆಳೆ ಬೆಳೆಯಲು ಖರ್ಚಾಗಿರುವುದು 12 ಸಾವಿರ ರೂಪಾಯಿಗಳು. ಅಲ್ಲಿಗೆ ಒಂದು ಟ್ರ್ಯಾಕ್ಟರ್‌ಗೆ 7 ಸಾವಿರ ರೂಪಾಯಿಗಳ ಲಾಸ್ ಮಾಡಿಕೊಂಡು ಮನೆಗೆ ಹೋದರೆ ಈ ಸರ್ಕಾರ ರೈತರಿಗೆ ಏನು ಮಾಡಿತು? ಭಾಷಣದಲ್ಲಿ ಮಾತ್ರ, ಅವರಿಗೆ ಸಂಪೂರ್ಣ ಬೆಲೆ ಕೊಟ್ಟಿದ್ದೇವೆ, ಅವರಿಗೆ ಖರೀದಿ ಕೇಂದ್ರ ಮಾಡಿದ್ದೇವೆ ಅಂತ ಹೇಳುತ್ತಾರೆ. ಯಾವುದೂ ಇಲ್ಲ, ಕೋಲ್ಡ್ ಸ್ಟೋರೇಜ್, ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದೆ ಅಂತ ಹೇಳಿಕೊಳ್ಳುತ್ತಾರಲ್ಲ ಎಲ್ಲಾದರೂ ಅನುಕೂಲವಾಗಿದೆಯಾ? ಉದಾಹರಣೆ ಅವರು ತೋರಿಸಲಿ. ರೈತರ ಮಕ್ಕಳಿಗೆ ಉದ್ಯೋಗ ಒದಗಿಸುವ ವಿಚಾರ. ಅದು ಇಲ್ಲ, ರೈತರಿಗಾಗಿ ಕನಿಷ್ಠ ಸೌಜನ್ಯವೂ

ಸರ್ಕಾರದಲ್ಲಿಲ್ಲ. ಇನ್ನು ಡಬ್ಲುಟಿಒ, ಅದು ದೊಡ್ಡ ಪಿಡುಗು. ಆದರಿಂದ ರೈತರು ಹಾಳಾಗಿಹೋದರು. ಪ್ರಾಕ್ಟಿಕಲಾಗಿ ರೈತರಿಗೆ ಅನುಕೂಲವಾಗಬೇಕು, ನಾವು ಹೆಚ್ಚು ಬೆಳೆಯಬೇಕು, ಒಳ್ಳೆಯ ಮಾರ್ಕೆಟ್ ಕೊಡಬೇಕು, ರೈತರಿಗೆ ಬೇಕಾದ್ದೆಲ್ಲವನ್ನೂ ವೈಜ್ಞಾನಿಕವಾಗಿ ಸರ್ಕಾರ ಒದಗಿಸಬೇಕು. ಅದಿಲ್ಲ, ಅದರಲ್ಲಿ ಫೇಲಾಗಿಬಿಟ್ಟು ರೈತರಿಗೆ ಮಾಡುತ್ತೇವೆ ಮಾಡುತ್ತೇವೆ ಅಂತ ಹೇಳುವುದಷ್ಟೇ.

ಶ್ರೀ ಸಿ.ಬಿ.ಸುರೇಶ್‌ಬಾಬು(ಚಿಕ್ಕನಾಯ್ಕನಹಳ್ಳಿ): ಮಾನ್ಯ ಅಧ್ಯಕ್ಷರೇ, ಇವತ್ತು ತುಮಕೂರು ಜಿಲ್ಲೆಯಲ್ಲಿ ನಿನ್ನೆಯೇನೋ ಚೀಫ್ ಎಕ್ಸಿಕ್ಯುಟಿವ್ ಆಫೀಸರ್.... ಇವತ್ತು ತುಮಕೂರು ಜಿಲ್ಲೆಯಲ್ಲಿ ಯಾರೂ ಕೆಲಸ ಮಾಡುತ್ತಿಲ್ಲ, ನೌಕರರೆಲ್ಲ ಸ್ಟ್ರೈಕ್ ಮಾಡುತ್ತಿದ್ದಾರೆ. ಸರ್ಕಾರ ಅಲ್ಲಿಗೆ ಹೋಗಿ ಏನಾದರೂ ಒಂದು....

ಅಧ್ಯಕ್ಷರು: ಈಗ ಶೂನ್ಯವೇಳೆ ಇಲ್ಲ,

ಶ್ರೀ ಸಿ.ಚೆನ್ನಿಗಪ್ಪ: ಇಲ್ಲಿ ಏನು ಮಾತನಾಡಿದರೂ ಸರ್ಕಾರ ಕ್ರಮ ಕೈಗೊಳ್ಳುವುದಿಲ್ಲ, ಗಮನ ಸೆಳೆಯುವ ಸೂಚನೆ, ಅರ್ಧ ಗಂಟೆ ಚರ್ಚೆ ಕೊಟ್ಟಿರಿ. ನಾವೆಲ್ಲ ಹಳ್ಳಿಯಿಂದ ಬಂದ ಶಾಸಕರು, ಬೆಂಗಳೂರಿನಿಂದ ಬಂದವರು ಐದಾರು ಮಂದಿ ಮಾತ್ರ. ಹಳ್ಳಿಯ ರೈತರ ಮಕ್ಕಳಿಗಾಗಿ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದೆ ಆ ಪ್ರಕಾರ ನಡೆಯಬೇಕು. ಇಲ್ಲದಿದ್ದರೆ ಇದು ರಾಜ್ಯಪಾಲರು ಮಾಡಿದ ವಾಂತಿ ಎಂದು ನಾನು ಹೇಳುತ್ತೇನೆ. ರೈತ ಮಿತ್ರ ಕೇಂದ್ರ ಅಂತ ಹೇಳಿದರು, ಎಲ್ಲೂ ಆ ಕೇಂದ್ರಗಳಿಲ್ಲ, ನನ್ನ ಹೋಬಳಿಯಲ್ಲಿತ್ತು, ಎಎಒಗಳಿದ್ದರು, ಅವರಿಗೆ ಪ್ರಮೋಶನ್ ಕೊಟ್ಟರು, ಕೃಷಿ ವಿವಿಗಳಲ್ಲಿ 15 ಸಾವಿರ ಎಂಎಸ್‌ಸಿ ಎಜಿಗಳಿದ್ದಾರೆ, ಮೊನ್ನೆ ಅವರೆಲ್ಲ ಸ್ಟ್ರೈಕ್ ಮಾಡಿದರು. ಅವರಿಗೆಲ್ಲ ನೇಮಕಾತಿ ಕೊಡಲು ಇವರ ಕೈಲಿ ಆಗಲಿಲ್ಲ, ಪ್ರಮೋಶನ್ ಕೊಟ್ಟರು ಅವನು ಎಎಒ ಆಗಿ ಎರಡು ವರ್ಷ ಆಗಿರಲಿಲ್ಲ, ಅಂಥವರಿಗೆಲ್ಲ ಪ್ರಮೋಶನ್ ಕೊಟ್ಟರು ಇಂಥ ಅನ್ಯಾಯಗಳನ್ನು ಮಾಡುತ್ತಾ, ರೈತರಿಗೆ ಅಷ್ಟು ಮಾಡುತ್ತೇವೆ, ಇಷ್ಟು ಮಾಡುತ್ತೇವೆ ಎನ್ನುವುದು ನಿಜವಾಗಿ ಸತ್ಯಕ್ಕೆ ಹತ್ತಿರವಾದ ವಿಚಾರವಲ್ಲ. ಅದೇರೀತಿ ದಲ್ಲಾಳಿಗಳ ವಿಚಾರ. ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ತರಕಾರಿ ಮಾರ್ಕೆಟ್ ಮಾಡಿದ್ದಾರೆ ಅಲ್ಲಿ ಎಪಿಎಂಸಿಯವರ ಕಂಟ್ರೋಲ್ ಇಲ್ಲ. 100 ರೂ.ತರಕಾರಿ ಮಾರಿದರೆ 10 ರೂ.ಕಮಿಶನ್ ಹಿಡಿದು 90 ರೂ ಕೈಗೆ ಕೊಡುತ್ತಾರೆ. ರೈತರ ಪಾಪ ಕಷ್ಟಪಟ್ಟು ಬೆಳೆದು ಲಾರಿ ಬಾಡಿಗೆ ಕೊಟ್ಟು ಗೊಬ್ಬರ ನೀರು ಹಾಕಿ ಬೆಳೆದರೆ ನೂರು ರೂ. ಬರುವುದು, ಹತ್ತು ನಿಮಿಷಕ್ಕೆ 10 ರೂ.ಕಮಿಶನ್.

ಶ್ರೀ ಎಂ.ಮಲ್ಲಿಕಾರ್ಜುನಖರ್ಗೆ (ಗೃಹಸಚಿವರು): ಕಳೆದ ಸರ್ಕಾರ ಅದಕ್ಕೆ ಒಂದು ಬಿಲ್ ಇಂಟರ್‌ಡ್ಯೂಸ್ ಮಾಡಿತ್ತು, ಮಧ್ಯವರ್ತಿಗಳಿಗೆ ಅವಕಾಶ ಮಾಡಿಕೊಡಬಾರದು

ಅಂತ. ಆಗ ಮಾಮನಿ ಮತ್ತು ಕೆಲವು ಜನ ಸೇರಿ ತಿದ್ದುಪಡಿಯನ್ನೇ ವಿತ್‌ಡ್ರಾ ಮಾಡಿಸಿಬಿಟ್ಟರು. ಅದು ಬಂದಿದ್ದರೆ ಒಳ್ಳೆಯದಾಗುತ್ತಿತ್ತು. ಆ ಕಡೆಯಿಂದ ನಾವೆಲ್ಲ ಬೆಂಬಲಿಸಿದೆವು. ಆದ್ದರಿಂದ ಎಲ್ಲರೂ ರೈತರಿಗೆ, ಸಾರ್ವಜನಿಕರಿಗೆ ಅನುಕೂಲವಾಗುವುದು ಎಂದು ಒಗ್ಗಟ್ಟಾಗಿ ಬಂದರೆ ಸರಿ, ಒಂದು ವರ್ಗಕ್ಕೆ ಇದು ಅನಾನುಕೂಲವಾಗುತ್ತದೆ. ಎಂಬ ಭಾವನೆ ಮಾಡಿದರೆ ಕಷ್ಟವಾಗುತ್ತದೆ.

ಶ್ರೀ ಸಿ.ಬಿ.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ಎಲ್ಲ ಸರ್ಕಾರಿ ಕಚೇರಿಗಳಿಗೆ ಬೀಗ ಹಾಕಿದ್ದಾರೆ, ಯಾರೂ ಕೆಲಸ ಮಾಡುತ್ತಿಲ್ಲ.

ಅಧ್ಯಕ್ಷರು: ಮಧ್ಯದಲ್ಲಿ ನಾನು ಅಲೋ ಮಾಡಲು ಬರುವುದಿಲ್ಲ, ಈಗ ನೋಟೀಸ್ ಕೊಟ್ಟಿದ್ದೀರಿ, ಸರ್ಕಾರಕ್ಕೆ ಅದನ್ನು ಕಳಿಸಿಕೊಟ್ಟಿದ್ದೇನೆ. ಮುಖ್ಯಮಂತ್ರಿಗಳು ಉತ್ತರಿಸುವಾಗ ಕೇಳಿ.

ಶ್ರೀ ಸಿ.ಚೆನ್ನಿಗಪ್ಪ: ಎಣ್ಣೆಬೀಜ, ಹತ್ತಿ, ಆಹಾರಧಾನ್ಯಗಳನ್ನು ಹೆಚ್ಚಿಗೆ ಬೆಳೆಯಬೇಕೆಂಬ ಗುರಿ ಇಟ್ಟುಕೊಂಡಿದೆ. ರೈತರೂ ಕಷ್ಟಪಟ್ಟು ಬೆಳೆಯುತ್ತಾರೆ, ದೇವರು ಅವರಿಗೆ ಆಶೀರ್ವಾದ ಮಾಡೇ ಮಾಡುತ್ತಾನೆ. ಆದರೆ ರೇಟ್ ಫಿಕ್ಸ್ ಮಾಡುವಾಗ ಸರ್ಕಾರ, ದಲ್ಲಾಳಿಗಳನ್ನು ಇಟ್ಟುಕೊಳ್ಳುವರು. ಇನ್ನೊಂದು ವಿಚಾರ, ರೈತರ ಹಸುವಿನ ಹಾಲಿನ ಲೀಟರ್ ಬೆಲೆ 8.50ರೂ. ಅದೇ ಫ್ಯಾಕ್ಟರಿಯಿಂದ ಒಂದು ಬಾಟಲ್‌ನಲ್ಲಿ ನೀರು ತುಂಬಿ ಅದನ್ನು 13 ರೂ.ಗೆ ಮಾರುತ್ತಾರೆ. ಅಸಂಘಟಿತರಾದ ರೈತರು ಬೆಳೆದದ್ದಕ್ಕೆ ಉತ್ತಮ ಬೆಲೆ ಸಿಗದೇ ಹೋದರೆ ರೈತರ ಮಕ್ಕಳು ಬೀದಿಗೆ ಬರುತ್ತಾರೆ. ಇವತ್ತು ರೈತರ ಮಕ್ಕಳಿಗೆ ನೌಕರಿ ಇಲ್ಲ, ಬೆಲೆ ವಿಷಯದಲ್ಲಿ ದ್ರೋಹ ಆಗಿದೆ, ಹಳ್ಳಿಗರಿಗೆ ಶಿಕ್ಷಣದಲ್ಲಿ ದ್ರೋಹವಾಗಿದೆ. ಎಲ್ಲವನ್ನೂ ಬೆಂಗಳೂರು, ಬಾಂಬೆ, ದೆಲ್ಲಿ ಮಕ್ಕಳಿಗೇ ಮಾಡುವುದಲ್ಲ, ಅವರನ್ನೂ ಇಟ್ಟುಕೊಂಡು ಹಳ್ಳಿಯವರ ಅಭಿವೃದ್ಧಿಗೋಸ್ಕರ, ಅವರು ಬೆಳೆದ ಬೆಳೆಗೆ ಬೆಂಬಲ ಬೆಲೆಯನ್ನು ಸರ್ಕಾರ ಸೂಚನೆ ಮಾಡಬೇಕು. ಆ ಬೆಲೆ ಪಟ್ಟಿಯನ್ನು ಹೋಬಳಿ ಹೆಡ್‌ಕ್ವಾಟ್ರರ್ಸ್‌ನಲ್ಲಿ ಬೋರ್ಡ್ ಹಾಕಿಸಿದರೆ ಆಗ ರೈತರಿಗೆ ಮಾಹಿತಿ ಸಿಗುತ್ತದೆ, ಅವರು ಮೋಸ ಹೋಗುವುದಿಲ್ಲ, ಇಲ್ಲದೇ ಹೋದರೆ ಜೋಳದ ಬೆಲೆ 440 ರೂ. ಇದ್ದರೆ ಅದನ್ನು 300 ರೂ.ಗೆ ಕೊಳ್ಳುತ್ತಾರೆ, ಅದೇ ಒಂದು ಪಹಣಿ ಹಾಕಿಸಿಕೊಂಡು ಹೋಗಿ 450ಕ್ಕೆ ಮಾರುತ್ತಾರೆ ಅಂತಹ ಅನ್ಯಾಯ ನಡೆಯುತ್ತಿದೆ.

ಇನ್ನು ಅರಣ್ಯ ವಿಚಾರ ಹೇಳಿದರು, ನಾವು ಮರುಭೂಮಿಯನ್ನು ವನ ಮಾಡುತ್ತೇವೆ, ಸಾಮಾಜಿಕ ಅರಣ್ಯ ಹೆಚ್ಚಿಗೆ ಬೆಳೆಸುತ್ತೇವೆ ಅಂತ ಈ ಭಾಷಣದಲ್ಲಿ ಹೇಳಿದ್ದಾರೆ, ಒಪ್ಪಬೇಕಾದ ವಿಚಾರ. ಮಲೆನಾಡಿನಲ್ಲಿ ಇವತ್ತು ಪಂಚತಾರಾ ಹೋಟೆಲ್ ಕಟ್ಟಲು ಪರ್ಮಿಶನ್ ಕೊಟ್ಟಿದ್ದಾರೆ. ಶ್ರೀಮಂತರ ಮೋಜಿಗಾಗಿ ಅರಣ್ಯ ಭೂಮಿಯನ್ನು ಪರಿವರ್ತಿಸಿ ಪರ್ಮಿಶನ್ ಕೊಟ್ಟಿದ್ದಾರೆ. ಇದರಿಂದ ಅರಣ್ಯ ಅಭಿವೃದ್ಧಿಯಾಗುವುದೇ?

ಅದೇರೀತಿ ತುಂಗಾನದಿಯ ಮೂಲ ಗಂಗಡಿಕಲ್ಲು ಎಂಬಲ್ಲಿ ಕಬ್ಬಿಣದ ಅದಿರಿನ ಗಣಿ ಸ್ಥಾಪಿಸಲು ಹೊರಟಿದ್ದಾರೆ. ಅದೇನಾದರೂ ಮಾಡಿದರೆ ಆ ತುಂಗಾ ನದಿಯೆಲ್ಲ ಬತ್ತಿಹೋಗಿ ಅಲ್ಲಿನ ಸಾವಿರಾರು ರೈತ ಕುಟುಂಬಗಳು ಹಾಳಾಗುವುವು. ಇದು ನಿಜವಾಗಿ ಉತ್ತಮ ಕ್ರಮವಲ್ಲ, ಭಾಷಣದಲ್ಲಿ ಹೇಳಿರುವುದು ಸರಿಯಲ್ಲ ಜನಕ್ಕೆ ಮಾಡಿರುವ ಮೋಸವೆಂದು ಹೇಳಲು ಬಯಸುತ್ತೇನೆ. ಅದೇ ರೀತಿ ಶಿಕ್ಷಣ. ಪದವಿಪೂರ್ವ ಖಾಸಗಿ ಕಾಲೇಜುಗಳದು, ಒಂದು ತಿಂಗಳ ಹಿಂದೆ ಗಲಾಟೆ ಆಯಿತು. ಅವರ ಅನುದಾನದಲ್ಲಿ 15 ಪರ್ಸೆಂಟ್ ಖೋತಾ ಮಾಡುತ್ತೇವೆ ಅಂದರು. ಅದರಿಂದ ಬಡವರ ಮಕ್ಕಳಿಗೆ ಸಾಮಾಜಿಕ ನ್ಯಾಯ ಸಿಗುತ್ತದಾ? ವಿದ್ಯಾಭ್ಯಾಸ ಮಾಡುವುದಕ್ಕೆ ಆಗುತ್ತದಾ? ಫೀಜು ಕೊಡಲು ಆಗುತ್ತದಾ? ಅವರೇನು ಮಾಡುತ್ತಾರೆ? ಆ 15 ಪರ್ಸೆಂಟ್ ಬಾಬ್ತು ಮಕ್ಕಳಿಂದ ಫೀಜು ವಸೂಲು ಮಾಡಿಕೊಳ್ಳುತ್ತಾರೆ. 100 ರೂಪಾಯಿ ಬದಲು 200 ರೂಪಾಯಿ ವಸೂಲು ಮಾಡಿಕೊಳ್ಳುತ್ತಾರೆ, ಆದ್ದರಿಂದ ಆ ಬರ್ಡನ್ ಯಾರಿಗೆ? ಸರ್ಕಾರದ ಧ್ಯೇಯವೇನೋ ಒಪ್ಪಬೇಕಾದ್ದೇ. ಆದರೆ ಪೊಲಿಟಿಕಲ್ ಆಗಿ ಮಾಡಬೇಕಾದದ್ದೇನು? 15 ಪರ್ಸೆಂಟ್ ಏಕೆ ಕಟ್ ಮಾಡಬೇಕಾಗಿತ್ತು? ಅದನ್ನು ವಾಪಸ್ ಪಡೆದಿದ್ದಾರೆ, ಅದು ಒಳ್ಳೆಯ ವಿಚಾರ. ಇನ್ನು ಪರಿಶಿಷ್ಟ ಜಾತಿ ಪಂಗಡಗಳ ಹಾಸ್ಟೆಲ್ ನಮ್ಮಲ್ಲಿವೆ. ಹಿಂದಿನಿಂದ ಅದನ್ನೆಲ್ಲ ಉತ್ತಮವಾಗಿ ಮಾಡಿಕೊಟ್ಟಿದ್ದಾರೆ. ಈ ಸರ್ಕಾರ ಸೂಪರ್‌ವಿಷನ್ ಮಾಡುತ್ತಿದೆ, ಇಲ್ಲ ಅಂತಲ್ಲ, ಅಲ್ಲಿನ ಪರಿಸ್ಥಿತಿ ನೋಡಿದರೆ, ಇವತ್ತು ಅವರು ಹಾಕಿಕೊಂಡ ಬಟ್ಟೆ ಇರಬಹುದು, ಊಟ ಇರಬಹುದು, ಕಟ್ಟಡ ಇರಬಹುದು, ಇಲ್ಲ, ನೂರಕ್ಕೆ 20 ಪರ್ಸೆಂಟ್ ಸರಿಯಾಗಿ ಅಲ್ಲಿ ಮೇಂಟೇನ್ ಆಗುತ್ತಿಲ್ಲ. ಇವತ್ತು ರಾಜ್ಯದ ಮೂಲೆ ಮೂಲೆಗಳಲ್ಲಿರುವ ಪರಿಶಿಷ್ಟ ಜಾತಿ ಪಂಗಡಗಳ ಹಾಸ್ಟೆಲ್‌ಗಳಿಗೆ ಮಾನ್ಯ ಖರ್ಗೆಯವರು ಹೋಗಬೇಕು. ಅವಕ್ಕೆ ಬಣ್ಣ ಹೊಡೆದಿಲ್ಲ, ಸರಿಯಾದ ಬೆಡ್‌ಶೀಟ್ ಕೊಟ್ಟಿಲ್ಲ, ಮಲಗಿಕೊಳ್ಳಲು ಒಂದು ಚಾಪೆಯೂ ಸರಿಯಿಲ್ಲದ ಮಟ್ಟದಲ್ಲಿ ಇವತ್ತು ಹಾಸ್ಟೆಲ್ ನಡೀತಿವೆ. ಆದ್ದರಿಂದ ಪರಿಶಿಷ್ಟ ಜಾತಿ ಮಕ್ಕಳಿಗೆ ನಾವು ಚೆನ್ನಾಗಿ ಅನುಕೂಲ ಮಾಡಿದ್ದೇವೆಂಬ ಮಾತಿನಲ್ಲಿ ಸುಳ್ಳು, ವಂಚನೆ ಇದೆ. ಅದೇರೀತಿ ಗ್ರಾಮೀಣ ಪ್ರದೇಶದಲ್ಲಿ ರೈತರಿಗಾಗಿ ಕಂಪ್ಯೂಟರ್ ಸ್ಥಾಪಿಸುತ್ತೇವೆ ಎನ್ನುತ್ತಾರೆ. ಆಯಿತು, ಮಾಹಿತಿ ತಂತ್ರಜ್ಞಾನದ ಯುಗ ಎನ್ನುತ್ತೇವೆ, ಒಪ್ಪಬೇಕಾದ ವಿಚಾರವೇ. ಆದರೆ ನಮ್ಮ ರೈತರೆಲ್ಲ ವಿದ್ಯಾವಂತರಾಗಿದ್ದಾರಾ? ಅವರಿಗೆ ಕಂಪ್ಯೂಟರ್ ಶಿಕ್ಷಣ ಆಗಿದೆಯಾ? ಹಾಗಾಗಿದ್ದರೆ ಪರವಾಗಿಲ್ಲ, ಅಥವಾ ಕಂಪ್ಯೂಟರ್ ತರಬೇತಿ ಆಗಿದ್ದರೂ ಪರವಾಗಿಲ್ಲ. ನಮ್ಮಲ್ಲಿ ಪ್ರೈಮರಿ ಶಿಕ್ಷಣ ನೀಡಲು ಮೇಸ್ಟ್ರುಗಳೇ ಗತಿಯಿಲ್ಲ. ಸರಿಯಾಗಿ ಶಾಲೆಗಳಿಲ್ಲ, ಇಂತಹ ಕಾಲದಲ್ಲಿ ನಾವು ಕಂಪ್ಯೂಟರೀಕರಣ ಮಾಡಿದರೆ ಅದು ಸಾಧುವಾ? ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು ಅಂತ ಹಳ್ಳಿ ಕಡೆ ಗಾದೆ ಹೇಳುತ್ತಾರೆ. ರೈತರಿಗೆ ಹೊಟ್ಟೆಗೆ ಊಟ ಇಲ್ಲ, ಅವರು ಬೆಳೆದದ್ದಕ್ಕೆ ಸರಿಯಾದ ಬೆಲೆ ಇಲ್ಲ.

2.10 ಪಿಎಂ

ಅವರ ಬೆಳೆಗೆ ಸರಿಯಾದ ಗೊಬ್ಬರ ಕೊಡುವ ಹಾಗೆ ಇಲ್ಲ. ಅವರಿಗೆ ಬೇಕಾದ ಪರಿಕರ ಕೊಡುವ ಹಾಗೆ ಇಲ್ಲ. ಅವರಿಗೆ ಎಜುಕೇಷನ್ ಇಲ್ಲ. ಈ ರೀತಿ ಇರುವಾಗ ಅವರಿಗೆ ಕಂಪ್ಯೂಟರೀಕರಣ ಮಾಡುತ್ತೇವೆ, ಅದರಿಂದ ಎಲ್ಲರಿಗೂ ಅನುಕೂಲವಾಗುತ್ತೆ ಎಂದು ಹೇಳುವುದು ಸೂಕ್ತವಲ್ಲ. ಎಲ್ಲಾ ರಾಷ್ಟ್ರಗಳಿಗೂ ಹೋಲಿಕೆ ಮಾಡಿ ನೋಡಿದಾಗ ವಿಶ್ವ ವ್ಯಾಪಾರದಲ್ಲಿ ನಮ್ಮ ದೇಶ 0.005 ಆ ಮಟ್ಟದಲ್ಲಿದ್ದೇವೆ. ಆ ರೀತಿ ಬರುವುದಕ್ಕೆ ಸಾಧ್ಯವಿಲ್ಲ. ಕಾರಣ ಆ ಎಲ್ಲಾ ದೇಶಗಳು ಮುಂದುವರಿದ ದೇಶಗಳಾಗಿವೆ. ತಂತ್ರಜ್ಞಾನದಲ್ಲಾಗಲಿ, ವ್ಯವಸಾಯದಲ್ಲಾಗಬಹುದು, ಆಧುನಿಕತೆಯಲ್ಲಾಗಬಹುದು, ಟ್ರಾನ್ಸ್‌ಪೋರ್ಟ್, ಕಮ್ಯುನಿಕೇಷನ್ ಪ್ರತಿಯೊಂದರಲ್ಲೂ ಅವರು ನೂರಕ್ಕೆ ನೂರರಷ್ಟು ಮುಟ್ಟಿವೆ. ನಮಗೆ ಇದು ಇನ್ನೂ ಸಾಧ್ಯವಾಗಿಲ್ಲ. ಉದಾಹರಣೆಗೆ ಶ್ರೀರಾಂಪುರ ಕೊಳಗೇರಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ, ಇವತ್ತು ಯಾವುದೇ ಸರ್ಕಾರಗಳಿರಬಹುದು, ಇವತ್ತಿಗೂ ಅವರಿಗೆ ಗುಡಿಸಲನ್ನು ತೆಗೆದು ಮನೆಯನ್ನು ಕೊಡಲಿಕ್ಕಾಗಿಲ್ಲ. ತಾವೇನೋ ಸ್ವಚ್ಛಗ್ರಾಮ ಮಾಡುತ್ತೇವೆಂದು ಹೇಳುತ್ತೀರಿ. ಶ್ರೀರಾಂಪುರಕ್ಕೆ ಹೋಗಿ ನೋಡಿದರೆ ಸ್ವಚ್ಛಗ್ರಾಮ ಗೊತ್ತಾಗುತ್ತದೆ. ಮೈಸೂರು ರಸ್ತೆಯಲ್ಲಿ ಹರಿಯುವ ಮೋರಿ ನೀರು ನೋಡಿದರೆ ಇದು ಸ್ವಚ್ಛಗ್ರಾಮದ ಲಕ್ಷಣವೇ? ಈ ರೀತಿ ಹೇಳಿ ಯಾವುದೇ ಸರ್ಕಾರ ತಪ್ಪುದಾರಿಗೆ ಜನರನ್ನು ಎಳೆಯಬಾರದೆಂದು ಹೇಳುತ್ತೇನೆ. ಕಂಪ್ಯೂಟರ್ ನಮ್ಮ ರಾಜ್ಯಕ್ಕೆ ಇರಬೇಕು, ಬೇಡ ಎಂದು ಹೇಳುವುದಿಲ್ಲ. ನಮ್ಮ ಸಾಧನೆಯ ಮೇಲೆ ಕಂಪ್ಯೂಟರ್ ಮಾಡುವುದನ್ನು ಬಿಟ್ಟರೆ ಎಲ್ಲಾ ವಿಚಾರಗಳಲ್ಲೂ ಸಾಧನೆ ಮಾಡದೆ ಮಾಡುವುದು ಉಚಿತವಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕೆಪಿಟಿಸಿಎಲ್‌ನ್ನು ಮಾಡಿದರು. ನಿನ್ನೆತಾನೆ ಹತ್ತು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಅಲ್ಲಿ ಇವತ್ತು ಹಗರಣಗಳ ಸರಮಾಲೆಯಾಗಿದೆ. ಹಳ್ಳಿ ಕಡೆ ನೋಡಿದರೆ ರಾತ್ರಿ ಹತ್ತು ಗಂಟೆಗೆ ಕರೆಂಟ್ ಹೋದರೆ ಬೆಳಿಗ್ಗೆ ಆರು ಗಂಟೆಯವರೆಗೂ ಕರೆಂಟ್ ಬರುವುದೇ ಇಲ್ಲ. ತುಮಕೂರಿನಲ್ಲಿ ಇಂಜಿನಿಯರೊಬ್ಬರನ್ನು ಕೇಳಿದಾಗ ಅವರು ಹೇಳುತ್ತಾರೆ, ಪವರ್ ಇಲ್ಲ, ನಮಗೆ ಆಫ್ ಮಾಡಿ ಎಂದು ಹೇಳಿ ಇನ್ಸ್‌ಟ್ರಕ್ಷನ್‌ನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ರಾತ್ರಿ ಅದನ್ನು ಆಫ್ ಮಾಡಿ ಬೆಳಿಗ್ಗೆಫ್ಲಕ್ಟ್ಯುಯೇಷನ್ ಸರಿ ಮಾಡಿಕೊಂಡು ಎರಡು ಗಂಟೆ ಮೂರು ಗಂಟೆಗಳ ಕಾಲ ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ ಎಂದು ಹೇಳುತ್ತಾರೆ. ಅದು ಬಂದರೂ ಆಫ್ ಕರೆಂಟೇ. ಆಗ ಮೋಟಾರುಗಳು ಸುಡುತ್ತವೆ. ಕೆಪಿಟಿಸಿಎಲ್‌ನಲ್ಲಿ ಮೂರು ನೂರು ರೂಪಾಯಿಗಳಿಗೆ ಆರು ನೂರು ರೂಪಾಯಿಗಳನ್ನು ಹಾಕುತ್ತಾರೆ. ರೈತರಿಗೆ ಹೆಚ್ಚಿಗೆ ಅನುಕೂಲ ಮಾಡುತ್ತೇವೆಂದು ಹೇಳಿ ಜನರ ಹತ್ತಿರ ವೋಟನ್ನು ತೆಗೆದುಕೊಂಡು ಬಂದುಬಿಟ್ಟರು. ರಾತ್ರಿ ಹೊತ್ತು ಆರು ಗಂಟೆಯಿಂದ

ಒಂಭತ್ತು ಗಂಟೆಯವರೆಗೆ ಲೈಟ್ ಉರಿಯುವುದನ್ನು ನೋಡಿದರೆ ಮಕ್ಕಳಿಗೆ ಕಣ್ಣೇ ಕಾಣುವುದಿಲ್ಲ.

ಅಧ್ಯಕ್ಷರು: ಮೊನ್ನೆ ತಾವು ಕೆಇಬಿ ಬಗ್ಗೆ ಮಾತನಾಡಿದರಲ್ಲ. ಮತ್ತೆ ಏಕೆ ರಿಪೀಟ್ ಮಾಡುತ್ತೀರಿ?

ಶ್ರೀ ಸಿ.ಚೆನ್ನಿಗಪ್ಪ: ರಾಜ್ಯಪಾಲರ ಭಾಷಣದಲ್ಲಿ ಕೆಇಬಿ ಬಗ್ಗೆ ಪ್ರಸ್ತಾಪ ಮಾಡಿದ್ದಾರಲ್ಲ.

ಅಧ್ಯಕ್ಷರು: ಹಾಗಿದ್ದರೆ ಮೊನ್ನೆ ಆ ಸಬ್ಜೆಕ್ಟ್‌ನ್ನು ಏಕೆ ತರಬೇಕಾಗಿತ್ತು?

ಶ್ರೀ ಸಿ.ಚನ್ನಿಗಪ್ಪ: ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಕು. ರೈತರ ವಿಚಾರ ಇದರಲ್ಲಿದೆ. ರಾತ್ರಿ ಹೊತ್ತು ಕೊಡುವ ಕರೆಂಟಿನಲ್ಲಿ ಉತ್ತಮವಾಗಿ ಕಾಣುವ ರೀತಿಯಲ್ಲಿ ಪವರನ್ನು ಕೊಡುವ ವ್ಯವಸ್ಥೆಯಾಗಬೇಕು. ರೈತರ ಪಂಪ್‌ಸೆಟ್ಟಿಗೂ ಯಾವುದೇ ರೀತಿಯಲ್ಲಿ ದರವನ್ನು ಜಾಸ್ತಿ ಮಾಡಬಾರದೆಂದು ಹೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದೀರಿ, ಅದು ಅತ್ಯುತ್ತಮವಾದ ವಿಚಾರವಲ್ಲ. ಏಕೆಂದರೆ ಆ ರೀತಿ ತಾವು ಕೆಲಸ ಮಾಡಿಲ್ಲ. ದಿನನಿತ್ಯ ಹೇಳಿಕೆಗಳನ್ನು ಕೊಡುತ್ತೀರಿ. ಮತ್ತೆ ಅದು ಪತ್ರಿಕೆಯಲ್ಲಿ ಬರುತ್ತದೆ. ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಹೇಳುತ್ತೀರಿ. ಆರೋಗ್ಯ ಇಲಾಖೆ, ಟ್ರಾನ್ಸ್‌ಪೋರ್ಟ್, ಕಮ್ಯುನಿಕೇಷನ್ ಹೀಗೆ ಎಲ್ಲಾ ಇಲಾಖೆಗಳ ಬಗ್ಗೆ ಹೇಳುತ್ತೀರಿ. ಆದರೆ 20 ರಿಂದ 30 ಪರ್‌ಸೆಂಟ್ ಅಷ್ಟು ಸಾಧ್ಯವಾಗಿರುವುದನ್ನು ಬಿಟ್ಟರೆ ನೂರಕ್ಕೆ ನೂರು ಆಗಿಲ್ಲ. ರಾಜ್ಯಪಾಲರು ಮಾಡಿದ ಭಾಷಣದಲ್ಲಿ ಸರ್ಕಾರ ಏನು ಅವರಿಂದ ಓದಿಸಿದೆ, ಇದು ಹಸೀ ಸುಳ್ಳಿನ ಒಂದು ಪುಸ್ತಕ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿದೇಶದಿಂದ 12 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ತರುತ್ತೇವೆಂದು ಹೇಳುತ್ತಾರೆ. ಆಯಿತು, ತಂದು ಅದನ್ನು ಡೆವಲಪ್‌ಮೆಂಟ್ ಮಾಡಬೇಕು. ನಿಮಗೆ ಅದನ್ನು ತೀರಿಸುವುದಕ್ಕೆ ಸೋರ್ಸ್ ಏನಿದೆ ಎಂದು ಹೇಳಿದ್ದೀರಾ? ಯಾವ ರೀತಿ ಸಾಲವನ್ನು ಮರುಪಾವತಿ ಮಾಡುತ್ತೇವೆಂದು ಹೇಳಿದ್ದೀರಾ? ಒಬ್ಬ ಮನುಷ್ಯ ಸಾಲ ಮಾಡಿದ ಮೇಲೆ ನೈತಿಕವಾಗಿ ಅವನಿಗೆ ಅಷ್ಟೊಂದು ಶಕ್ತಿ ಇರುವುದಿಲ್ಲ. ನಾವೇ ಸಾಲ ಮಾಡುತ್ತೇವೆಂದು ಇಟ್ಟುಕೊಳ್ಳಿ, ಸಾಲ ಮಾಡಿದಮೇಲೆ ಮಾತನಾಡುವುದಕ್ಕೆ ಶಕ್ತಿ ಬರುವುದಿಲ್ಲ. ನಮ್ಮ ಮನೆಯ ವ್ಯವಸ್ಥೆಯನ್ನು ನೋಡಿಕೊಂಡು ನಾವು ಸಾಲವನ್ನು ಮಾಡಬೇಕಾಗುತ್ತದೆ. ಮೊನ್ನೆ ನಾವು ಯಾವುದೋ ಒಂದು ಹಳ್ಳಿಗೆ ಹೋದಾಗ ಅಲ್ಲೊಂದು ಕಂಪ್ಯೂಟರನ್ನು ಇಟ್ಟಿದ್ದರು. ಆ ಕಂಪ್ಯೂಟರನ್ನು ಕುರ್ಚಿ ಹಾಕಿಕೊಳ್ಳುವುದಕ್ಕೆ ಅದನ್ನು ಇಟ್ಟುಕೊಂಡಿದ್ದಾರೆ. ಕೇವಲ ಮೂರು ವರ್ಷಗಳಲ್ಲಿ ಆ ಕಂಪ್ಯೂಟರ್ ಯಾವ ಕೆಲಸವನ್ನೂ ಮಾಡುವುದಿಲ್ಲ. ಜನರಿಗೆ ಆಸಕ್ತಿ

ಇಲ್ಲ. ಆ ಮಟ್ಟಕ್ಕೆ ನಮ್ಮ ಜನರು ಇನ್ನೂ ಬೆಳೆದಿಲ್ಲ. ಆ ರೀತಿ ವಿಚಾರ ಇರುವಾಗ ಸರ್ಕಾರ ಸಾಲ ಮಾಡುವುದಕ್ಕೆ ಹೊರಟರೆ ನಿಜವಾಗಿಯೂ ಸರ್ಕಾರಕ್ಕೆ ಶೋಭೆ ತರತಕ್ಕದ್ದಲ್ಲವೆಂದು ಹೇಳಿ ಈ ರೀತಿ ಎಲ್ಲಾ ವಿಚಾರವನ್ನು ನೋಡಲಾಗಿ ರಾಜ್ಯಪಾಲರ ಭಾಷಣವನ್ನು ಚೆನ್ನಾಗಿ ಮಾಡಿದ್ದಾರೆ. ಇದು ಎಷ್ಟರಮಟ್ಟಿಗಿದೆ ಎಂದರೆ ಪ್ರಾಕ್ಟಿಕಲ್ ಆಗಿ ಸಕ್ಕರೆ ಲೇಪಿತ ವಿಷ ಮಾತ್ರೆ ಎಂದು ಏನು ಕರೆಯುತ್ತೇವೆ, ಆ ಪ್ರಕಾರ ಇವರು ಕೆಲಸ ಮಾಡಿದ್ದಾರೆ. ಇದು ರಾಜ್ಯದ ಜನರಿಗೆ ಮಾಡಿರುವ ದ್ರೋಹ ಎನ್ನುವ ಮಾತನ್ನು ಹೇಳುತ್ತಾ ನನಗೆ ಅವಕಾಶ ಕೊಟ್ಟ ತಮಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ ಮಾನ್ಯ ಚನ್ನಿಗಪ್ಪನವರು ಮಾತನಾಡುವಾಗ ತಾವು ಹೇಳಿದಿರಿ, ಪವರ್ ಸೆಕ್ಟಾರ್ ಬಗ್ಗೆ ಮಾತನಾಡುವಾಗ ಇದರ ಬಗ್ಗೆ ಮೊನ್ನೆ ಚರ್ಚೆಯಾಗಿದೆ, ಈಗ ಬೇಡ ಎಂದು ತಾವು ಹೇಳಿದಿರಿ. ಆದರೆ ಮೊನ್ನೆ ದಿವಸ ಏನು ಹೇಳಿದರು ಎಂದರೆ any-thing between the sky and us ನೀವು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ಮಾಡುವಾಗ ಮಾತನಾಡಬಹುದು ಇವತ್ತು ಬೇಡ ಎಂದು ತಾವು ಹೇಳಿದ್ದೀರಿ.

ಅಧ್ಯಕ್ಷರು: ಇಲ್ಲ. ದಯವಿಟ್ಟು ಕ್ಷಮಿಸಿ. ಮೊನ್ನೆ ಅವರು ಕೆಇಬಿ ಮೇಲೆ ಮಾತನಾಡಿದ್ದಾರೆ. ಮತ್ತೆ ಅದನ್ನೇ ಅವರು ರಿಪೀಟ್ ಮಾಡುತ್ತಿದ್ದಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಆದರಿಂದ ಅಂದು ನಾವ್ಯಾರು ಮಾತನಾಡಲಿಲ್ಲ.

ಅಧ್ಯಕ್ಷರು: ನೀವಲ್ಲ. ನಾನು ಅವರ ಬಗ್ಗೆ ಹೇಳಿದ್ದು. ನಿಮ್ಮ ಬಗ್ಗೆ ಹೇಳಿಲ್ಲ. ಯಾರು ಮೊನ್ನೆ ಕೆಇಬಿ ಮೇಲೆ ಮಾತನಾಡಿದ್ದರೋ ಅವರಿಗೆ ಡೋಂಟ್ ರಿಪೀಟ್ ಎಂದು ಹೇಳಿದ್ದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನಾನು ಏಕೆ ಹೇಳುತ್ತಿದ್ದೇನೆಂದರೆ ನಾನು ಆಗಲೇ ಹೇಳಿದೆ.

ಅಧ್ಯಕ್ಷರು: ಮೊನ್ನೆ ನೀವು ಮಾತನಾಡದಿದ್ದರೆ ಈಗ ಕೆಇಬಿ ಬಗ್ಗೆ ಮಾತನಾಡಿ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಕೃಷಿ ಬಗ್ಗೆ ಮಾತನಾಡಿದಾಗ ಅದಕ್ಕೆ ನಮಗೆ ಸರಿಯಾದ ಉತ್ತರ ಸಿಗಲಿಲ್ಲ. ಇವತ್ತೂ ಅಷ್ಟೇ We are fulfilling the Constitutional obligation ನಾವೇನು ಕರ್ತವ್ಯವನ್ನು ಮಾಡಬೇಕಾಗಿದೆ,

ಅದನ್ನು ಮಾಡುವುದನ್ನು ಬಿಟ್ಟರೆ ನಾವು ಸರ್ಕಾರದಿಂದ ಏನನ್ನು ಅಪೇಕ್ಷೆ ಮಾಡುವುದಿಲ್ಲ. ಕಾರಣ ಇವತ್ತು ಬೆಳಿಗ್ಗೆಯಿಂದ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಹೊತ್ತು ಇದ್ದರು. ಹಿರಿಯ ಸಚಿವರಾದ ಖರ್ಗೆಯವರು ಇದ್ದಾರೆ. ಇವತ್ತು ಏನಾಗಿದೆ ಎಂದರೆ ನಾವು ನ್ಯಾಯಾಂಗದವರು ಶಾಸಕಾಂಗಕ್ಕೆ ಅಪಮಾನ ಮಾಡಿದ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಮೊನ್ನೆ ಮಾನ್ಯ ರಾಮಯ್ಯನವರು ಇದರ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿದ್ದರು. ಇಡೀ ಸದನ ಒಂದೇ ಸ್ವರದಿಂದ ಹೇಳಿತ್ತು. ಅವರು ತಪ್ಪನ್ನು ಮಾಡಿದ್ದಾರೆಂದು. ನಾನು ಅದರ ಬಗ್ಗೆ ಇವತ್ತು ಚರ್ಚೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ತಮ್ಮ ಮುಂದೆ ಮಾನ್ಯ ಗುರುಸ್ವಾಮಿಯವರು, ಕೃಷ್ಣಮೂರ್ತಿಯವರು ಅನೇಕ ಸಲ ಹೇಳಿದ್ದಾರೆ. ನಾನು ಸಹಾ ತಮಗೆ ಪತ್ರವನ್ನು ಕೊಟ್ಟಿದ್ದೇನೆ. ಶಾಸಾಕಾಂಗದಿಂದಲೇ ಶಾಸಕಾಂಗಕ್ಕೆ ಅಪಮಾನ ಆದದ್ದರ ಬಗ್ಗೆ ನಾನು ಹೇಳಿದ್ದೇನೆ. ಅದರ ಬಗ್ಗೆ ತಾವು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಒಂದು ಸಮಯವನ್ನು ಕೊಡಿಸುತ್ತೇನೆಂದು ಹೇಳಿದ್ದೀರಿ. ಅಲ್ಲಿ ತಾವು ಚರ್ಚೆಯನ್ನು ಮಾಡಬಹುದು ಎಂದು ಹೇಳಿದ್ದೀರಿ. ಆದರೆ ಇವತ್ತಿನವರೆಗೂ ನಮಗೆ ಸಮಯ ಸಿಕ್ಕಲಿಲ್ಲ. ನಾನು ಒಂದು ಉದಾಹರಣೆಯನ್ನು ಕೊಟ್ಟು ಇವತ್ತು ಚರ್ಚೆಯನ್ನು ಪ್ರಾರಂಭ ಮಾಡುತ್ತೇನೆ. ಇವತ್ತು ನಾನು ಪುನಃ ಹಿಂದಿನ ವಿಷಯವನ್ನು ತೆಗೆಯಲಿಕ್ಕೆ ಹೋಗುವುದಿಲ್ಲ. ಮಾನ್ಯ ಲೋಕಸಭಾ ಸದಸ್ಯರುಗಳಿಗೆ ಕೊಟ್ಟಂಥ ಸವಲತ್ತುಗಳ ಬಗ್ಗೆ ಮಾತನಾಡಿದರೆ ಅದು ಸಬ್‌ಜ್ಯುಡೀಸ್ ಆಗುತ್ತದೆ. ಅದು ಕೋರ್ಟಿನಲ್ಲಿದೆ. ಆದರೆ ಅವರು ಸರ್ಕಾರಿ ಇಲಾಖೆಗೆ ಗೊತ್ತಿಲ್ಲದೇ ಶಾಸಕರನ್ನು ಕರೆಯದೇ ಕಾರ್ಯಕ್ರಮವನ್ನು ಮಾಡಿ ಫೋಟೋವನ್ನು ಪತ್ರಿಕೆಯಲ್ಲಿ ಹಾಕಿಸಿಕೊಳ್ಳುತ್ತಾರೆ. ಅದರಲ್ಲಿ ಶಾಸಕರ ಹೆಸರು ಇಲ್ಲ. ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನನಗೆ ಅರ್ಥವಾಗಿಲ್ಲ. ಈಗ ನಾವು ನೇರವಾಗಿ ಯುದ್ಧಕ್ಕೆ ಇಳಿಯಬೇಕಾ ಅಥವಾ ತಾವೇನಾದರೂ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುತ್ತೀರಾ?

ಅಧ್ಯಕ್ಷರು: ಸಿಕ್ಕಾಪಟ್ಟೆ ಆಗಿದೆ. ನನಗೆ ಗೊತ್ತು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಗ್ರಾಮೀಣ ಇಲಾಖೆಯಲ್ಲಿ ಅನೇಕ ಕಾರ್ಯಕ್ರಮಗಳಾಗಿರುವಂಥಾದ್ದು. ಅದರ ಮೇಲೆ ಹೇಳಿಕೆಯನ್ನು ಕೊಡುತ್ತಾರೆ. ಅಶಕ್ತರ ಕೂಗಿಗೆ ಸ್ಪಂದಿಸಬೇಕು. ನಾವು ಈಗ ಅಶಕ್ತರು. ನಮ್ಮ ಕೂಗಿಗೆ ತಾವು ಸ್ಪಂದಿಸಬೇಕಾಗುತ್ತದೆ. ಅಧ್ಯಕ್ಷರೇ. ಇದರ ಬಗ್ಗೆ ಪುನಃ ಪುನಃ ಹೇಳಿದರೆ ಇವರ್‍ಯಾಕೆ ಸ್ವಂತ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ, ಅದಲ್ಲ. ಇದರ ಬಗ್ಗೆ ಅನೇಕ ಮಂದಿ ಶಾಸಕರು ನನ್ನ ಹತ್ತಿರ ಹೇಳಿದ್ದಾರೆ. ಪಕ್ಷಭೇದವನ್ನು ಮರೆತು ಈ ಸಮಸ್ಯೆ ನಮ್ಮ ಕ್ಷೇತ್ರದಲ್ಲೂ ಇದೆ ಎಂದು ಹೇಳಿದ್ದಾರೆ. ತಾವು ಈ ಒಂದು ಸಮಸ್ಯೆಗೆ ಪರಿಹಾರವನ್ನು

ಕಂಡುಹಿಡಿಯದಿದ್ದರೆ ಶಾಸಕಾಂಗದಲ್ಲಿಯೇ ಒಬ್ಬರ ಮೇಲೆ ಒಬ್ಬರು ಭಿನ್ನಾಭಿಪ್ರಾಯದಿಂದ ಹೋರಾಟವನ್ನು ಮಾಡತಕ್ಕ ಪರಿಸ್ಥಿತಿ ನಿರ್ಮಾಣವಾಗಬಹುದು. ಅದಕ್ಕೋಸ್ಕರ ತಾವು ಈ ಒಂದು ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಬೇಕೆಂದು ಹೇಳುತ್ತೇನೆ. ಇವತ್ತು ಆ ವಿಷಯವನ್ನು ತಮ್ಮ ತೀರ್ಮಾನಕ್ಕೇ ಬಿಡುತ್ತೇನೆ. ಯಾವತ್ತು ತಾವು ದಿನವನ್ನು ನಿಗದಿಪಡಿಸುತ್ತೀರೋ ಅವತ್ತು ನಾವೆಲ್ಲರೂ ಬರುತ್ತೇವೆ. ಇಲ್ಲದಿದ್ದರೆ ಮುಂದಿನ ಅಧಿವೇಶನದಲ್ಲಿ ಪುನಃ ಇದೇ ವಿಷಯವನ್ನು ಚರ್ಚೆ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಬಹುದು. ನಾವು ಬೇರೆ ನ್ಯಾಯಾಂಗ ಅಥವಾ ಕಾರ್ಯಾಂಗದ ಬಗ್ಗೆ ಚರ್ಚೆಯನ್ನು ಮಾಡುವಾಗ ಶಾಸಕಾಂಗದಲ್ಲಿ ನಾವು ವ್ಯವಸ್ಥೆಯನ್ನು ಸರಿ ಮಾಡಿಕೊಳ್ಳದಿದ್ದರೆ ಮಾನ್ಯ ಸದಾನಂದಗೌಡರು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಪುತ್ತೂರಿನಲ್ಲಿ ಲೋಕಸಭಾ ಸದಸ್ಯರು ಕಿತಾಪತಿಯನ್ನು ಮಾಡಿದ್ದಕ್ಕೆ ಅವರು ಬಸ್ ಸ್ಟಾಂಡಿನಲ್ಲಿ ಇರಲು ಕಂಬಳಿಯನ್ನು ಕೊಡುತ್ತೇವೆ, ಅಲ್ಲಿ ಮಲಗಿ ಎಂದು ಸದಾನಂದಗೌಡರು ಹೇಳಿಕೆಯನ್ನು ಕೊಟ್ಟಿದ್ದರು. ಇದರ ಬಗ್ಗೆ ನಾವು ನೋವಿನಿಂದ ಹೇಳುತ್ತಿದ್ದೇವೆ. ಇದು ಮುಂದುವರಿಯಬಾರದು. ಈಗ ನಾವು ಇಲಾಖೆಗಳ ಬಗ್ಗೆ ಮಾತನಾಡಲು ಪ್ರಾರಂಭಿಸುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಇದೊಂದು ಗಂಭೀರವಾದ ಪ್ರಶ್ನೆ. ತಾವು ದಯವಿಟ್ಟು ನಮ್ಮ ರಕ್ಷಣೆಗೆ ಬರಲೇಬೇಕು. ಏಕೆಂದರೆ ಈ ಭಾಗದಲ್ಲಿ ಶಾಸಕರ ರಕ್ಷಣೆಗೆ ಇರತಕ್ಕವರು ನೀವು. ಬಹುಶಃ ಇದು ಖರ್ಗೆಯವರಿಗೆ ಗೊತ್ತಿರಬಹುದು. ಲೋಕಸಭಾ ಸದಸ್ಯರಿಗೆ ಒಂದು ನಿಧಿ ಸಿಗುತ್ತದೆ. ಆ ನಿಧಿಯನ್ನು ಏನು ಮಾಡುತ್ತಾರೆಂದು ಹೇಳಿದರೆ ಎಲ್ಲಿ ಹಾಕಬೇಕು ಎಂದೇನೂ ಇಲ್ಲ. ಅವರಿಗೆ ಯಾವ ಒಂದು ಶಾಸಕರ ಮೇಲೆ ಅವರು ವಿರೋಧವನ್ನು ವ್ಯಕ್ತಪಡಿಸಬೇಕೋ ಆ ಶಾಸಕರ ಕ್ಷೇತ್ರದಲ್ಲಿ ಅದನ್ನು ತಂದುಹಾಕಿ ಅವರೇ ಉದ್ಘಾಟನೆ ಮಾಡುವುದು, ಮತ್ತೆ ಆ ಶಾಸಕರನ್ನು ಕರೆಯುವುದಿಲ್ಲ. ಈ ರೀತಿ ಕೆಲಸಗಳು ಇಡೀ ಭಾಗದಲ್ಲಿ ಆಗುತ್ತಿವೆ. ತುಂಬಾ ಆಗುತ್ತಿದೆ. ಎಲ್ಲಿಯವರೆಗೆ ಅಂದರೆ ಅವರ ಕ್ಷೇತ್ರದಲ್ಲಿ ಮಾತ್ರವಲ್ಲ, ಇನ್ನೊಂದು ಕ್ಷೇತ್ರಕ್ಕೂ ಅವರು ತಮ್ಮ ಕ್ಷೇತ್ರ ಬಿಟ್ಟು ಹೋಗುತ್ತಾರೆ. ನನ್ನ ಕ್ಷೇತ್ರಕ್ಕೂ ಅವರ ಕ್ಷೇತ್ರದ ಲೋಕಸಭಾ ಸದಸ್ಯರು ಸಾಕಷ್ಟು ಬಾರಿ ಸಮಿತಿ ಮಾಡಿದ್ದಾರೆ. ನಾವು ಅದನ್ನು ತೀವ್ರವಾಗಿ ಪ್ರತಿಭಟನೆ ಮಾಡಿದ್ದೇವೆ, ನಮ್ಮನ್ನು ನೋಡಿಕೊಂಡಿದ್ದಾರೆ. ಆದರೆ ಅವರ ಕ್ಷೇತ್ರದಲ್ಲಿ ಹಾಗೆ ಆದಾಗ ತುಂಬಾ ತೊಂದರೆ ಆಗುತ್ತದೆ. ತಾವು ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕು. ಒಂದು ದಿವಸ ಇದರ ಬಗ್ಗೆ ಎಲ್ಲ ನೊಂದ ಶಾಸಕರನ್ನು ಕರೆಯಬೇಕು ಮತ್ತು ಅದರ ಬಗ್ಗೆ ಚಿಂತನೆ ಆಗಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಇದು ಕೇವಲ ನನ್ನ ಸಮಸ್ಯೆ ಅಲ್ಲ. ಈಗ ಕಾಂಗ್ರೆಸ್

ಸದಸ್ಯರ ಸಮಸ್ಯೆ ಕೇಳಿ. ಅದು ಮೊನ್ನೆ ಮಂಗಳೂರಿನ ಸರ್ಕ್ಯೂಟ್ ಹೌಸ್‌ನಲ್ಲಿ ಗಲಾಟೆ ಆದಂತಹದು ಇರಬಹುದು. ಉಡುಪಿಯ ಶಾಸಕರ ಸಮಸ್ಯೆ ಇರಬಹುದು, ಕಾಪು ಶಾಸಕರದ್ದು ಇರಬಹುದು. ಈಗ ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ನಾನು ಅದರ ಬಗ್ಗೆ ಹೇಳುತ್ತೇನೆ. Translation of values in the public life is what politics is. ನಾವು ಅದನ್ನು ಪಾಲನೆ ಮಾಡದೇ ಇದ್ದರೆ ಬೇರೆಯವರಿಗೆ ಉಪದೇಶವನ್ನು ಹೇಳಲಿಕ್ಕೆ ಆಗುವುದಿಲ್ಲ. ನಮ್ಮಲ್ಲಿ ಕಾಪುವಿನಲ್ಲಿ ಒಂದು ಕಾರ್ಯಕ್ರಮ ಆಯಿತು. ಅದರ ಲೋಕಸಭಾ ಸದಸ್ಯರ ಹೆಸರನ್ನು ಇಟ್ಟು ಒಂದು ನಗರ ಎಂದು ಉದ್ಘಾಟನೆಗೆ ಲೋಕಸಭಾ ಸದಸ್ಯರು ಹೋಗುತ್ತಾರೆ. ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಯಾರೆಂದರೆ who is connected with the underworld. ನಾನು ಆ ಇನ್‌ವಿಟೇಷನ್ ಅನ್ನು ಸದನದಲ್ಲಿ ತಂದು ತೋರಿಸುತ್ತೇನೆ. ಮಾನ್ಯ ಖರ್ಗೆಯವರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ತಾವು ಇನ್‌ಫಾರ್ಮೇಷನ್ ತರಿಸಿಕೊಳ್ಳಿ. ಕೆಲವು ಸಲ ನಮಗೆ ಯಾರ‍್ಯಾರು ಯಾವ ಮಟ್ಟಕ್ಕೆ ಇದ್ದಾರೆ ಎಂದು ಗೊತ್ತಾಗುವುದಿಲ್ಲ. ಅಂಡರ್‌ವರ್ಲ್ಡ್‌ನಲ್ಲಿ ಕನೆಕ್ಷನ್ ಇದೆಯೋ ಅಥವಾ ಬೇರೆ ಯಾವುದರಲ್ಲಿ ಇದೆಯೋ ಎಂದು ನಮಗೆ ಗೊತ್ತಾಗುವುದಿಲ್ಲ. I want you to get the information from intelligence ನಮ್ಮ ಒಟ್ಟಿಗೆ ಯಾರಾದರೂ ಇದ್ದರೆ Please send the information, we will keep them away. ಆದರೆ ಲೋಕಸಭಾ ಸದಸ್ಯರೇ ಇಂತಹ ಕಾರ್ಯಕ್ರಮಗಳಿಗೆ ಹೋಗುತ್ತಾರೆ. ಒಂದು ಇನ್‌ವಿಟೇಷನ್ ಇದೆ. ಅಂಡರ್‌ವರ್ಲ್ಡ್‌ನವರ ಹೆಸರು ಇದೆ. ಆದರೆ ನಾನು ಎಕ್ಸ್‌ಪೆಕ್ಟ್ ಮಾಡಿದ್ದೆ. ಇವರು ಹೋಗುವುದಿಲ್ಲ ಎಂದು ನಿರೀಕ್ಷೆ ಮಾಡಿದ್ದೆ. ಅಂಡರ್‌ವರ್ಲ್ಡ್‌ನವರು ಬರಲಿಲ್ಲ, ಆದರೆ ಇವರು ಆ ಕಾರ್ಯಕ್ರಮಕ್ಕೆ ಹೋದರು. ಅವರ ಹೆಸರು ಹಾಕಿದ್ದಕ್ಕೆ ಇವರು ಹೋಗುವುದಿಲ್ಲ ಎಂದು. ಆದರೆ ಇವರು ಹೋಗಿದ್ದಾರೆ. ಏಕೆಂದರೆ ಇವರ ಹೆಸರು ವಿನಯ ನಗರ ಎಂದು ಇಟ್ಟಿದ್ದಾರೆ. ತಾವು ಲೋಕಸಭಾ ಸದಸ್ಯರ ಬಗ್ಗೆ ಚರ್ಚೆಯನ್ನು ಮಾಡಬಾರದು ಎಂದು ಹೇಳಿದಿರಿ. We have got every right. ಏಕೆಂದರೆ ನಾವು ಅವರ ಮೇಲೆ ಹಣವನ್ನು ಖರ್ಚು ಮಾಡುತ್ತಿದ್ದೇವೆ. ನಾವು ಹಣವನ್ನು ಅವರಿಗೆ ಖರ್ಚು ಮಾಡುತ್ತಿದ್ದೇವೆ. ಆದ್ದರಿಂದ ಶಾಸಕಾಂಗದಲ್ಲಿ ಅವರ ಬಗ್ಗೆ ಚರ್ಚೆ ಮಾಡಲು ನಮಗೆ ಹಕ್ಕು ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಂಬಂಧಪಟ್ಟ ಸದಸ್ಯರ ಹೆಸರು ಕೊಟ್ಟರೆ ನಾವು ವೆರಿಫೈ ಮಾಡಿಸಬಹುದು. ಆಂಟಿಸಿಡೆಂಟ್ ಏನು ಎಂದು ವೆರಿಫೈ ಮಾಡಿಸಬಹುದು. ಏಕೆಂದರೆ ಆಂಟಿಸಿಡೆಂಟ್ಸ್ ಗೊತ್ತಾದರೆ ಒಳ್ಳೆಯದು. ನಾವು ಎಂಪಿಯವರಿಗೆ ದೂರತಕ್ಕದ್ದು ಸಮಂಜಸ ಅಲ್ಲ. ತಾವು ಕೂಡ ಅನೇಕ ಸಾರಿ ಯಾವುದೋ ಫಂಕ್ಷನ್‌ನಲ್ಲಿ ಹೋಗುತ್ತೀರಿ. ಕೆಲವು ಸಲ ಗೊತ್ತಿರುತ್ತದೆ, ಕೆಲವು ಸಲ ಗೊತ್ತಿರುವುದಿಲ್ಲ.

ಅವರ ಆಂಟಿಸಿಡೆಂಟ್ಸ್ ಅನೇಕ ಸಾರಿ ತಮಗೂ ಗೊತ್ತಿರುತ್ತದೆ. ಕೆಲವು ಫಂಕ್ಷನ್‌ನಲ್ಲಿ ಹೋಗುತ್ತೇವೆ. ಸಾರ್ ತಮ್ಮ ಪಕ್ಕದಲ್ಲಿ ನಿಂತು ಒಂದು ಫೋಟೋ ತೆಗೆಸಿಕೊಳ್ಳೋಣ ಎಂದು ಹೇಳುತ್ತಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆಮೇಲೆ ಮರು ದಿವಸ ನೋಡಿದರೆ ಹೋಮ್ ಮಿನಿಸ್ಟರ್ ಒಬ್ಬ ಕ್ರಿಮಿನಲ್ ಜೊತೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಎಂಪಿ ಆಗಲೀ ಎಂಎಲ್‌ಎಗೇ ಆಗಲೀ ಅಂಥ ಪರಿಸ್ಥಿತಿ ಆ ರೀತಿ ಆಗಬಹುದು. ದಯವಿಟ್ಟು ಅಂತಹವರು ಯಾರಾದರೂ ಇದ್ದರೆ ತಿಳಿಸಿ ನನ್ನ ಗಮನಕ್ಕೆ ತನ್ನಿ. ನಾನು ಎಸ್‌ಪಿ ಅವರಿಂದ ವೆರಿಫೈ ಮಾಡಿಸುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನಾನು ಅಂತಹ ಆಪಾದನೆಯನ್ನು ಎಂದಿಗೂ ಮಾಡುವುದಿಲ್ಲ. ಆಕ್ಸಿಡೆಂಟಲಿ ಇಬ್ಬರೂ ಒಂದೇ ಕಾರ್ಯಕ್ರಮದಲ್ಲಿದ್ದಾಗ **I will not make any allegation.** ಇನ್‌ವಿಟೇಶನ್‌ನಲ್ಲಿ ಇಬ್ಬರ ಹೆಸರನ್ನೂ ಹಾಕುತ್ತಾರೆ. ಅಂತಹ ಸಂದರ್ಭದಲ್ಲಿ ಏನಾಗುತ್ತದೆ?

ಅಧ್ಯಕ್ಷರು: ನೀವು ಕಳಿಸಿ ಎಂದು ಹೇಳಿದ್ದಾರಲ್ಲ. ನೀವು ಕಳಿಸಿ ಕೊಡಿ. ಬೇರೆ ವಿಷಯಕ್ಕೆ ಬನ್ನಿ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನಾನು ಇನ್ನೊಂದು ಪತ್ರವನ್ನು ಬರೆದಿದ್ದೇನೆ. ತಾಲ್ಲೂಕು ಪಂಚಾಯತಿ ಸದಸ್ಯರ ಆಕ್ಸಿಡೆಂಟಲ್ ಫೈರಿಂಗ್ ಆದಂತಹ ವಿಚಾರ, ಅವರ ಮೇಲೆ ಸೆಕ್ಷನ್ 302ರ ಮೇಲೆ ಕೇಸ್ ಇತ್ತು, ಹಾಗೆಯೇ ಸೆಕ್ಷನ್ 506 ಕೇಸ್ ಇತ್ತು, ಅಷ್ಟಾದರೂ ಕೂಡ ಅವರಿಗೆ ರಿವಾಲ್ವರ್ ಲೈಸೆನ್ಸ್‌ನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ತಮಗೆ ಪತ್ರವನ್ನು ಬರೆದಿದ್ದೆ. ಇದು ಸಾಧಾರಣ ಕಳೆದ ಸಮಾವೇಶದಿಂದ ಇವತ್ತಿನವರೆಗೂ ಅವರ ಲೈಸೆನ್ಸ್ ಕ್ಯಾನ್ಸಲ್ ಆಗಿಲ್ಲ. ನಾನು ಜಿಲ್ಲಾಧಿಕಾರಿಗಳ ಕಛೇರಿಗೆ ಸಂಪರ್ಕವನ್ನು ಮಾಡಿದಾಗ ಅವರು ಹೇಳುತ್ತಾರೆ, ಪೋಲೀಸ್‌ನವರಿಂದ ನಮಗೆ ರೀಪೋರ್ಟ್ ಬಂದಿಲ್ಲ ಎಂದು ಹೇಳುತ್ತಾರೆ. ಪೋಲೀಸ್‌ನವರನ್ನು ಸಂಪರ್ಕ ಮಾಡಿದಾಗ ಜಿಲ್ಲಾಧಿಕಾರಿಗಳಿಂದ ಸೂಚನೆ ಬಂದಾಗ ನಾವು ಕೊಡಬಾರದು ಎಂದು ಹೇಳಿದ್ದೇವೆ ಎಂದರು. ಇದರ ಬಗ್ಗೆ ತಮಗೆ ಮಾಹಿತಿ ಇರಬೇಕು. ಇದರ ಬಗ್ಗೆ ಹೆಚ್ಚಿಗೆ ಚರ್ಚೆ ಮಾಡುವುದಕ್ಕಿಂತ ತಮಗೆ ನೇರವಾಗಿ ಒಂದು ಮಾಹಿತಿಯನ್ನು ಕೊಡುತ್ತೇನೆ. ತಾವು ದಯವಿಟ್ಟು ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ಶಾಸಕರ ಗೌರವವನ್ನು ಉಳಿಸುವಂತಹ ಕೆಲಸ ತಮಗೆ ಬಿಡುತ್ತೇನೆ. ಸಣ್ಣ ನೀರಾವರಿ ಇಲಾಖೆಯ ವಿಚಾರ ಹೇಳುತ್ತೇನೆ. ಇವತ್ತು ನಮ್ಮ ಭಾಗದಲ್ಲಿ ಒಂದೇ ಒಂದು ದೊಡ್ಡ

ಇರಿಗೇಷನ್ ಪ್ರಾಜೆಕ್ಟ್ ಇರುವಂತಹದು. ಅದು ದೊಡ್ಡ ವಾರಾಹಿ. ಅದರ ಬಗ್ಗೆ ಪ್ರತಿಯೊಂದು ಸಭೆಯಲ್ಲಿ ಚರ್ಚೆಯನ್ನು ಮಾಡುತ್ತಿದ್ದೇವೆ. ಹಣವನ್ನು ಇಟ್ಟಿದ್ದಾರೆ. ಟೆಂಡರನ್ನು ಕರೆದಿದ್ದಾರೆ. ಇವತ್ತಿನವರೆಗೆ ನಮ್ಮಲ್ಲಿ ಕೆಲಸ ಪ್ರಾರಂಭ ಆಗಲಿಲ್ಲ. ಅದಕ್ಕಿಂತ ಮುಖ್ಯವಾಗಿ ನಮಗೆ ಬೇಕಾಗಿರುವಂಥಾದ್ದು ಉಪ್ಪು ನೀರಿನ ಅಣೆಕಟ್ಟುಗಳನ್ನು ಆದಷ್ಟು ಹೆಚ್ಚು ನಿರ್ಮಾಣ ಮಾಡುವುದು. ಏಕೆಂದರೆ ಮೊನ್ನೆಯ ದಿವಸ ಸಣ್ಣ ನೀರಾವರಿ ಇಲಾಖೆಯ ಸಚಿವರು ಮಂಗಳೂರಿನಲ್ಲಿ ಬಂದು ಒಂದು ಕಾರ್ಯಕ್ರಮವನ್ನು ಮಾಡಿದ್ದರು. ಒಂದು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಪಶ್ಚಿಮ ವಾಹಿನಿ ಎಂದು ಒಂದು ಕಾರ್ಯಕ್ರಮವನ್ನು ಹಾಕಿ ಸಮುದ್ರಕ್ಕೆ ಹೋಗುವ ಎಲ್ಲ ನೀರನ್ನು ಬ್ಲಾಕ್ ಮಾಡಲಿಕ್ಕೆ ಮಾಡಿದ್ದಾರೆ. ಉಪ್ಪು ನೀರನ್ನು ಒಳಗೆ ಬರುವುದನ್ನು ನಿಲ್ಲಿಸಲಿಕ್ಕೆ, ಸಿಹಿ ನೀರು ಹೊರಗೆ ಹೋಗುವುಂಥದನ್ನು ನಿಲ್ಲಿಸುವಂತಹ ಒಂದು ಕಾರ್ಯಕ್ರಮ. ಅಂದರೆ ಅದಕ್ಕೆ ಸಾಧಾರಣ ಮೂರು ಜಿಲ್ಲೆಗಳಿಗೆ ಒಟ್ಟು 150 ಕೋಟಿ ರೂಪಾಯಿಗಳು ಬೇಕಾಗುವಂಥದ್ದು. ದೊಡ್ಡ ದೊಡ್ಡ ಇರಿಗೇಷನ್ ಪ್ರಾಜೆಕ್ಟ್‌ಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ಪ್ರಾಯಶಃ ಈ ಮೂರು ಜಿಲ್ಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ರೈತರಿಗೆ ಬೇಕಾಗುವಂತಹ ನೀರಿನ ವ್ಯವಸ್ಥೆ ಮಾಡಲಿಕ್ಕೆ ಈ ಒಂದು 150 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂತಹದು- ಅಷ್ಟು ದೊಡ್ಡ ವಿಷಯವಲ್ಲ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಮಾಜ ಕಲ್ಯಾಣ ಸಚಿವರಾದಂತಹ ಕಾಗೋಡು ತಿಮ್ಮಪ್ಪನವರು ಇದ್ದಿದ್ದರೆ ನನಗೆ ಅವರ ಹತ್ತಿರ ಕೆಲವು ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ವಿಚಾರ ಇತ್ತು. ಇವತ್ತು ಮಾನ್ಯ ಖರ್ಗೆಯವರು ಇದ್ದಾರೆ. ನಾವು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗಾಗಿ ಹಾಸ್ಟೆಲನ್ನು ನಿರ್ಮಾಣ ಮಾಡುತ್ತೇವೆ. ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. ಅದಕ್ಕಿಂತ ಇನ್ನೂ ಜನರಲ್ ಹಾಸ್ಟೆಲ್‌ನಲ್ಲಿ ಅವರಿಗೆ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು. ಎಲ್ಲರೂ ಮುಖ್ಯವಾಹಿನಿಗೆ ಬರಲಿಕ್ಕೆ ಅವಕಾಶ ಮಾಡಿಕೊಡಬೇಕು. ಅವರನ್ನು ಇವತ್ತಿನ ದಿವಸ ಪ್ರತ್ಯೇಕವಾಗಿ ಇಡಲಿಕ್ಕೆ ಪ್ರಯತ್ನವನ್ನು ಮಾಡುವಂತಹದು ನನ್ನ ಮನಸ್ಸಿಗೆ ಸರಿ ಕಾಣುವುದಿಲ್ಲ. ಅವರನ್ನು ಮುಖ್ಯವಾಹಿನಿಗೆ ತರಬೇಕಾದರೆ ಇನ್ನು ಮುಂದೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಹಾಸ್ಟೆಲ್ ಎಂದು ಹೇಳುವುದಕ್ಕಿಂತ ನೀವು ಜನರಲ್ ಹಾಸ್ಟೆಲ್‌ನಲ್ಲಿ ಅವರಿಗೆ ಇಷ್ಟು ಸೀಟು ಎಂದು ರಿಸರ್ವ್ ಮಾಡಿ. ಯಾವಾಗ ಅವರಿಗೆ ಕಾಲೇಜಿನಲ್ಲಿ ಸೀಟನ್ನು ರಿಸರ್ವ್ ಮಾಡುತ್ತೀರಿ, ಯಾವಾಗ ಉದ್ಯೋಗದಲ್ಲಿ ಸೀಟನ್ನು ರಿಸರ್ವ್ ಮಾಡುತ್ತೀರಿ. ಅವರನ್ನು ಪ್ರತ್ಯೇಕವಾಗಿ ಇಟ್ಟಷ್ಟು ದಿವಸ ಅವರ ಮನಸ್ಸಿನಲ್ಲಿರುವಂತಹ ಭಾವನೆಗಳನ್ನು ಹೊರಗೆ ಹಾಕಲು ಅವರಿಗೆ ಸಾಧ್ಯವಾಗುತ್ತಿಲ್ಲ. ಅದಕ್ಕೋಸ್ಕರ ಅದನ್ನು ಮಾಡುವುದರೊಂದಿಗೆ ನಮ್ಮಲ್ಲಿ ಒಂದು 'ಕುಡುಬಿ' ಜನಾಂಗ ಎಂದು ಹೇಳಿ ಒಂದು ಜನಾಂಗ ಇದೆ. ಕುಡುಬಿ ಜನಾಂಗದವರು ಹಿಂದೆ ಮದ್ರಾಸ್ ಪ್ರಾಂತ್ಯದಲ್ಲಿದ್ದಾಗ

ಅವರನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಇಟ್ಟಿದ್ದರು. ಆದರೆ ಕಾರಣಾಂತರದಿಂದ ಅದು ಪರಿಶಿಷ್ಟ ಜಾತಿಯ ಪಟ್ಟಿಯಿಂದ ಹೊರಗೆ ಹಾಕಿದ್ದಾರೆ. ನಿಜವಾಗಿ ಅವರು ಇರಬೇಕಾಗಿರುವಂತಹದು ಪರಿಶಿಷ್ಟ ವರ್ಗದಲ್ಲಿ. ಅವರು ಕಾಡು ಪ್ರದೇಶದಲ್ಲಿಯೇ ಜೀವನವನ್ನು ನಡೆಸುವಂತಹದು ಇವತ್ತಿಗೂ ಸಹ ಇದೆ. ನಾನು ಮಾನ್ಯ ಅಧ್ಯಕ್ಷರಿಗೆ ಒಂದು ಸಿಡಿ ಕ್ಯಾಸೆಟ್ ಅನ್ನು ಕಳಿಸಿಕೊಡುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಇದನ್ನು ಕೊಡಬೇಕು. ಈ ಕುಡುಬಿ ಜನಾಂಗದ ಬಗ್ಗೆ, ಅವರ ಜೀವನದ ಬಗ್ಗೆ ಒಂದು ಕ್ಯಾಸೆಟ್ ಇದೆ. ಮಾನ್ಯ ಕುಮಾರ್ ಅವರು ಹಾಗೂ ನಾನು ಸೇರಿ ದೂರದರ್ಶನಕ್ಕೆ ಒಂದು ಕಾರ್ಯಕ್ರಮವನ್ನು ಮಾಡಿದ್ದೇವೆ. ಈ ಕ್ಯಾಸೆಟ್ ಅನ್ನು ಪ್ರಾಯಶಃ ಅವರು ನೋಡಿದರೆ ನಿಜವಾಗಿಯೂ ರಾಜ್ಯ ಸರ್ಕಾರ ಇದನ್ನು ಮಾಡಲಿಕ್ಕೆ ಸಾಧ್ಯ ಇಲ್ಲ. ನನಗೆ ಗೊತ್ತಿದೆ. ಆದರೆ ಸಮಿತಿಯವರು ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆಯಬಹುದು. ಹಿಂದೆ ಪರಿಶಿಷ್ಟ ಜಾತಿಯಲ್ಲಿದ್ದವರನ್ನು ಪುನಃ ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ ಒಂದು ರೆಕ್ಮಂಡೇಷನ್ ಅನ್ನು ಅತೀ ಶೀಘ್ರದಲ್ಲಿ ಕಳಿಸಿದರೆ ಅವರ ಜನಾಂಗಕ್ಕೆ ಈ ರಾಜ್ಯ ಸರ್ಕಾರ ಬಹಳ ದೊಡ್ಡ ಉಪಕಾರವನ್ನು ಮಾಡಿದ ಹಾಗೆ ಆಗುತ್ತಿತ್ತು ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಕ್ಯಾಸೆಟನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಕಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಎಜುಕೇಶನ್ ವಿಚಾರದಲ್ಲಿ ಎಲ್ಲ ಮಾನ್ಯ ಸದಸ್ಯರೂ ಮಾತನಾಡಿದರು. ಇನ್ನು ಟ್ರಾನ್ಪರೆನ್ಸಿ ವಿಚಾರ. ಈಗ ಮುಖ್ಯವಾಗಿ ಹಿಂದಿನ ಸಭೆಯಲ್ಲಿ ನಾನು ಒಂದು ಪ್ರಶ್ನೆಯನ್ನು ಮಾನ್ಯ ವಿದ್ಯಾ ಸಚಿವರಲ್ಲಿ ಕೇಳಿದ್ದೆ. ಅಲ್ಲಿ ಟ್ರಾನ್ಸ್‌ಫರ್ಸ್‌ನಲ್ಲಿ ಕೌನ್ಸಿಲಿಂಗ್ ಮಾಡುತ್ತಿದ್ದರು. ಕೌನ್ಸಿಲಿಂಗ್ ಮಾಡಿದ ಮೇಲೆ ಕೆಲವು ಶಿಕ್ಷಕರು ರಿಪೋರ್ಟ್ ಮಾಡಲಿಲ್ಲ. ಕೆಲವು ಶಿಕ್ಷಕರು ರಿಪೋರ್ಟ್ ಮಾಡದೇ ಇದ್ದಾಗ ನಾನು ಈ ಪ್ರಶ್ನೆಯನ್ನು ಕೇಳಿದ್ದೆ. ಮರು ಕೌನ್ಸಿಲಿಂಗ್‌ನಿಂದ ಸೀಲ್ ಮಾಡುತ್ತೀರಾ ಎಂದು ಕೇಳಿದ್ದೆ. ಇಲ್ಲ ಎಂದು ಉತ್ತರವನ್ನು ಕೊಟ್ಟರು. ಆದರೆ ನನಗೆ ಆಶ್ಚರ್ಯ ಆದದ್ದು, ಅವರು ಉತ್ತರವನ್ನು ಕೊಟ್ಟ ಮೇಲೆ ಮರು ಕೌನ್ಸಿಲಿಂಗ್ ಮಾಡಿ ಆ ಶಿಕ್ಷಕರು ಎಲ್ಲೆಲ್ಲಿ ಕೇಳಿದ್ದಾರೆ ಅಲ್ಲಲ್ಲಿಯೇ ಪೋಸ್ಟಿಂಗನ್ನು ಕೊಟ್ಟಿದ್ದಾರೆ. ಹಾಗಾದರೆ ಮೊದಲು ಹೋಗಿ ರಿಪೋರ್ಟ್ ಮಾಡಿದವರು ಯಾವ ಅಪರಾಧವನ್ನು ಮಾಡಿದ್ದರು? ಅಂತಹದನ್ನು ಮಾಡಿದರೆ ಪ್ರಾಯಶಃ ಇದಕ್ಕೆ ಏನು ಅರ್ಥ? ಈ ಪ್ರೈವೇಟ್ ಸ್ಕೂಲ್ಸ್‌ನಲ್ಲಿ ಹೆಚ್ಚುವರಿ ಶಿಕ್ಷಕರ ವರ್ಗಾವಣೆ ವಿಚಾರ. ನಾನು ಹೇಳುತ್ತೇನೆ. ನಾವು ಪ್ರತಿ ಒಬ್ಬರಿಗೂ ಹೇಳುವಂತಹದು, ಕನ್ನಡ ಮಾಧ್ಯಮದಲ್ಲಿ ಮಕ್ಕಳನ್ನು ಕಳಿಸಿ ಎಂದು. ಈ ಸದನದಲ್ಲಿ ಎಷ್ಟು ಜನ ಸದಸ್ಯರ ಮಕ್ಕಳು, ಮೊಮ್ಮಕ್ಕಳು ಕನ್ನಡ ಮಾಧ್ಯಮ ಶಾಲೆಯಲ್ಲಿ ಕಲಿಯುತ್ತಿದ್ದಾರೆಂದು ನಾನು ಕೇಳುತ್ತೇನೆ. ಎಲ್ಲ ಇಂಗ್ಲೀಷ್ ಮೀಡಿಯಂನಲ್ಲಿ ಕಲಿಸುವಂತಹದು. ಬೇರೆಯವರಿಗೆ ನಾವು ಭಾಷಣವನ್ನು ಮಾಡುವುದು ಕನ್ನಡ ಮಾಧ್ಯಮದಲ್ಲಿ ಕಳಿಸಿ ಎಂದು. ಇವತ್ತಿನ ಹೈಟೆಕ್ ಎಂದು ಹೇಳುವಂತಹದು, ಕನ್ನಡ ಮಾಧ್ಯಮಕ್ಕೂ ಭಾರೀ ದೂರ ಇದೆ. ಇವತ್ತು ಸರ್ಕಾರದಲ್ಲಿ

ಉದ್ಯೋಗವನ್ನು ಒದಗಿಸಲಿಕ್ಕೆ ಆಗುತ್ತಿಲ್ಲ. ನಾವು ಫ್ರೀಜ್ ಮಾಡಿದ್ದೇವೆ. ರೆಕ್ರೂಟ್‌ಮೆಂಟ್ ಇಲ್ಲ. ಅವರನ್ನು ಕನ್ನಡ ಮಾಧ್ಯಮದಲ್ಲಿ ಕಲಿಸಿದರೆ ಅವರು ಹೊರಗೆ ಹೋಗಲಿಕ್ಕೂ ಇಲ್ಲ. ಇಲ್ಲಿ ಕೆಲಸವನ್ನೂ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಕನ್ನಡ ಮಾಧ್ಯಮದವರ ವಿರೋಧ ಅಲ್ಲ. ಆದರೆ ಇವತ್ತಿನ ಪರಿಸ್ಥಿತಿ ಏನಾಗಿದೆ? ಕನ್ನಡ ಮಾಧ್ಯಮದಲ್ಲಿ ಕಲಿಸುವಾಗ ಅವರಿಗೆ ಉದ್ಯೋಗ ನಿರ್ಮಾಣವನ್ನು ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗುತ್ತದೆ. ನಾವು ಕಂಪ್ಲೀಟ್ ಕೆಲವೇ ಉದ್ಯೋಗವನ್ನು ಬಿಟ್ಟು ಬೇರೆ ರಿಕ್ರೂಟ್‌ಮೆಂಟ್ ಇಲ್ಲ. ಹಾಗಾದರೆ ಅವರಿಗೆ ಹೈಟೆಕ್ ಕಲಿಸಬಹುದಾ? ಇವತ್ತು ಹೈಟೆಕ್ ಎಂದು ಹೇಳಿ ಹೇಳಿ ಅಮೇರಿಕಾದಿಂದ ಕಂಪ್ಯೂಟರ್ ಸೈಂಟಿಸ್ಟ್ ಇಂಜಿನಿಯರ್ಸ್ ಎಲ್ಲಾ ವಾಪಸ್ ಬರುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಮಾನ್ಯ ಸಭಾಪತಿಯವರು ಇದರ ಬಗ್ಗೆ ಬಹಳ ಮಾತನಾಡಿದರು. ನಾನು ಇರಲಿಲ್ಲ ನಿನ್ನೆ. ನಾನು ಅದನ್ನು ಸಂಪೂರ್ಣ ವಿರೋಧ ಮಾಡುವುದಿಲ್ಲ. ಅದು ಅಗತ್ಯ ಇದೆ. ಆದರೆ ಗ್ರಾಮೀಣ ಪ್ರದೇಶಕ್ಕೆ ಹೋಗುವಂತಹ ಪರಿಸ್ಥಿತಿ ಇನ್ನೂ ನಿರ್ಮಾಣ ಆಗಲಿಲ್ಲ. ಮಾನ್ಯ ಚೆನ್ನಿಗಪ್ಪನವರು ಏನು ಹೇಳಿದರು ಅದಕ್ಕೆ ನಾನು ಒಪ್ಪುತ್ತೇನೆ. ಏಕೆಂದರೆ ಇವತ್ತು ಗ್ರಾಮೀಣ ಪ್ರದೇಶಕ್ಕೆ ಹೋದಾಗ ನೇರವಾಗಿ ಹೋಗಿ ಒಂದು ಪಂಚಾಯತಿ ಆಫೀಸಿಗೆ ಹೋಗಿ ಒಂದು ಕಡತವನ್ನು ಕೇಳಿದರೆ ಕೇಸ್ ವರ್ಕರ್ ರಜೆಯಲ್ಲಿರುತ್ತಾನೆ ಎಂದು ಹೇಳಿದರೆ ಅವನು ಬೀಗ ಇಟ್ಟುಕೊಂಡು. ಹೋಗಿರುತ್ತಾನೆ. ಕಂಪ್ಯೂಟರ್ ಇದ್ದರೆ ಯಾರಿಗೂ ಆಪರೇಟ್ ಮಾಡಲಿಕ್ಕೂ ಗೊತ್ತಿರುವುದಿಲ್ಲ. ಮತ್ತೆ ಹೆಚ್ಚು ಆಗುವುದು ಎಂದರೆ ಅಲ್ಲಿ ಎರಡು ನೌಕರರ ವರ್ಗದವರು ಇರುವ ಬದಲು ಒಬ್ಬರು ಇರುತ್ತಾರೆ. ಇನ್ನೊಂದು ನಿರುದ್ಯೋಗ ಸಮಸ್ಯೆಯನ್ನು ಉದ್ಭವ ಮಾಡುತ್ತಿದ್ದೇವೆ. ಅದನ್ನು ಮಾಡುವುದಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಯುವಕರಿಗೆ ಕಲಿಸಬೇಕಾಗುತ್ತದೆ. ಆದರೆ ಹೈಟೆಕ್‌ನಿಂದ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಉಪಯೋಗ ಆಗುವುದಿಲ್ಲ. ಒಂದು ಉಪಯೋಗ ಆಗುತ್ತದೆ. ಏಕೆಂದರೆ, ಕಂದಾಯ ಇಲಾಖೆಯಲ್ಲಿ ಪಹಣಿ ಕೊಡುವ ಸಂದರ್ಭದಲ್ಲಿ, ಖಂಡಿತವಾಗಿಯೂ ಉಪಯೋಗವಾಗುತ್ತದೆ. ದುಡ್ಡು ಕಟ್ಟಿದ ನಂತರ ಅದನ್ನು ಪಡೆದುಕೊಳ್ಳಲು 'ಇವೊತ್ತು ಬನ್ನಿ, ನಾಳೆ ಬನ್ನಿ' ಎಂದು ಹೇಳುವುದಕ್ಕಿಂತ ಹಣ ಕಟ್ಟಿದ ತಕ್ಷಣವೇ ಅದರ ಪ್ರತಿಯನ್ನು ಪಡೆದು ಒದಗಿಸುವುದಕ್ಕೆ ಅನುಕೂಲವಾಗುತ್ತದಾದ್ದರಿಂದ ಇದನ್ನು ನಾನು ಒಪ್ಪುತ್ತೇನೆ. ಇದನ್ನು ಬಿಟ್ಟು ಮತ್ತೆಲ್ಲದಕ್ಕೂ ನಾವು ಐ.ಟಿ. ಎಂದರೆ ಖಂಡಿತ ಅದರಿಂದ ಲಾಭವಾಗಲಿಕ್ಕಿಲ್ಲವೆಂದು ಹೇಳುತ್ತಿದ್ದೇನೆ. ಹಳ್ಳಿಯವರಿಗಂತೂ ಇದರಿಂದ ಯಾವುದೇ ಲಾಭವಿಲ್ಲ. ಕಂಪ್ಯೂಟರ್‌ನ ಬಟನ್ ಅನ್ನು ಒತ್ತಿದ ಕೂಡಲೇ ಎಲ್ಲಿಯಾದರೂ ಬೆಳೆ ಜಾಸ್ತಿಯಾಗುವುದಿದ್ದರೆ, ಕಾಫೀ ತೋಟದಲ್ಲಿ ಕಂಪ್ಯೂಟರ್ ಇಟ್ಟು ಬಟನ್ ಒತ್ತಿದ ಕೂಡಲೇ ಕಾಫಿ ಬೆಳೆ ಜಾಸ್ತಿಯಾಗುವುದಿದ್ದರೆ, ಇಲ್ಲವೇ ಭತ್ತದ ಬೆಳೆ ಜಾಸ್ತಿಯಾವುದಿದ್ದರೆ ಅದರಿಂದ ರೈತರಿಗೆ ಅನುಕೂಲವಾಗುತ್ತಿತ್ತು. ಇಲ್ಲದಿದ್ದರೆ

ಖಂಡಿತವಾಗಿಯೂ ಅವರುಗಳಿಗೆ ಉಪಯೋಗವಾಗುವುದಿಲ್ಲ. ಆದರೆ, ಇದರಿಂದ ಒಂದನ್ನು ಮಾಡುವುದಕ್ಕೆ ಸಾಧ್ಯವಿದೆ. ಏನೆಂದರೆ, ಇದರಿಂದ ಕ್ರಾಪ್ ಪ್ಯಾಟ್ರನ್ ಕುರಿತು ಅಧ್ಯಯನ ಮಾಡಲು ಸಾಧ್ಯವಿದೆ. ಎಷ್ಟು ಭೂಮಿ ಪ್ರದೇಶದಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು? ಮುಂತಾದ ವಿವರಗಳನ್ನು ಅಧ್ಯಯನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇನ್ನು ಕೃಷಿ ಬಗ್ಗೆ ಬಹಳಷ್ಟು ಚರ್ಚೆ ಮಾಡಿದ್ದೇವೆ. ಆದರೆ, ಈ ಕುರಿತು ನನ್ನ ಬೇಡಿಕೆ ಮಂಡಿಸುವುದೇನೆಂದರೆ, ರೈತರಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸುವುದು, ಡೀಸೆಲ್ ಮತ್ತು ಸೀಮೆಎಣ್ಣೆ ಮೇಲೆ ಸೇಲ್ಸ್ ಟ್ಯಾಕ್ಸ್ ವಿನಾಯಿತಿ ನೀಡುವುದು. ಏಕೆಂದರೆ, ರೈತರು ತಮ್ಮ ಬೆಳೆ ಬೆಳೆಯುವುದಕ್ಕೆ ಸಕಾಲದಲ್ಲಿ ಕಡಿಮೆ ದರದಲ್ಲಿ ವಿದ್ಯುತ್ ಸೌಲಭ್ಯ ಒದಗಿಸಲು ಸಾಧ್ಯವಾಗದಿದ್ದಾಗ ಬೆಳೆಗಳಿಗೆ ನೀರುಣಿಸಲು ಪರ್ಯಾಯ ಮಾರ್ಗವಾಗಿ ಡೀಸೆಲ್ ಮೋಟಾರ್ ಮುಖಾಂತರ ಸೌಲಭ್ಯ ಪಡೆದುಕೊಳ್ಳುವುದರಿಂದ ಸೇಲ್ಸ್‌ಟ್ಯಾಕ್ಸ್ ವಿನಾಯಿತಿ ನೀಡಬೇಕು. ಮಾನ್ಯ ಕೃಷಿ ಸಚಿವರು ಸದನದಲ್ಲಿರುವುದರಿಂದ ಇದರ ಬಗ್ಗೆ ಹೇಳಬೇಕು. ನಮ್ಮ ಸರ್ಕಾರ ಮೀನುಗಾರರ ಅಭಿವೃದ್ಧಿಗಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ನಿಮ್ಮ ಸರ್ಕಾರ ಅಧಿಕಾರದಲ್ಲಿರುವ ಈ ಸಂದರ್ಭದಲ್ಲಿ ಅದನ್ನು ಮುಂದುವರೆಸಿಕೊಂಡು ಹೋಗಬೇಕು. ಇತ್ತೀಚೆಗೆ ಕಾರ್ಕಳ ಕ್ಷೇತ್ರದಲ್ಲೊಂದು ಘಟನೆ ಜರುಗಿತು. ಕಳೆದ ಹತ್ತು ವರ್ಷಗಳಿಂದ ರೈತರು ಹೊಳೆ ಬದಿಯಲ್ಲಿ ಒಂದು ಶೆಡ್ ನಿರ್ಮಿಸಿ ಅದರಲ್ಲಿ ಮೋಟಾರ್ ಇಟ್ಟು ಅದರ ಮುಖಾಂತರ ತಮ್ಮ ಕೃಷಿ ಭೂಮಿಗೆ ನೀರುಣಿಸುತ್ತಿದ್ದರು. ಆದರೆ, ಇತ್ತೀಚೆಗೆ ಅರಣ್ಯ ಇಲಾಖಾಧಿಕಾರಿಗಳು ಅಲ್ಲಿಗೆ ಬಂದು ಶೆಡ್ ಅನ್ನು ಒಡೆದು ಹಾಕಿ ಮೋಟಾರನ್ನು ಎತ್ತಿಕೊಂಡು ಹೋಗಿದ್ದಾರೆ. ಕಾರಣ ಕೇಳಿದಾಗ, ಮೋಟಾರ್ ಮುಖಾಂತರ ತಮ್ಮ ಜಮೀನುಗಳಿಗೆ ರೈತರು ನೀರುಣಿಸುತ್ತಿರುವ ಪೈಪು ಕಾಯ್ದಿಟ್ಟ ಅರಣ್ಯ ಪ್ರದೇಶದೊಳಗೆ ಹೋಗುತ್ತದಂತೆ ಮತ್ತು ವನ್ಯ ಜೀವಿಗಳಿಗೆ ಇದರಿಂದ ತೊಂದರೆಯಾಗುತ್ತದಂತೆ. ನಾವು ಇದರ ಬಗ್ಗೆ ಅರಣ್ಯ ಸಚಿವರಿಗೆ ದೂರು ಕೊಟ್ಟಿದ್ದೇವೆ. ಅರಣ್ಯಾಧಿಕಾರಿಗಳಿಗೆ ಇದರ ಬಗ್ಗೆ ಗಮನವಿಲ್ಲದಂತೆ ಕಾಣುತ್ತದೆ. ಕಾಯ್ದಿಟ್ಟ ಅರಣ್ಯ ಪ್ರದೇಶ ಭೂಮಿಯೊಳಗೆ ಹಾಕಿದ್ದ ಪೈಪುಗಳಿಂದ ವನ್ಯ ಪ್ರಾಣಿಗಳಿಗೆ ತೊಂದರೆಯಾಗುತ್ತದೆಂದು ಭಾವಿಸಿ ಅರಣ್ಯಾಧಿಕಾರಿಗಳು ರೈತರ ಮೋಟಾರ್‌ಗಳನ್ನು ಕಿತ್ತುಕೊಂಡು ಹೋಗಿದ್ದಾರೆ! ಅಂದರೆ, ವನ್ಯ ಪ್ರಾಣಿಗಳನ್ನು ಯಾರು ಕೊಲ್ಲುತ್ತಾರೋ, ಕಾಡಿನ ಮರಗಳನ್ನು ಯಾರು ಕಡಿಯುತ್ತಾರೋ ಅವರುಗಳ ಬಗ್ಗೆ ಕ್ರಮ ತೆಗೆದುಕೊಳ್ಳದೆ, ಕೃಷಿ ಉದ್ದೇಶಕ್ಕಾಗಿ ಕಾಯ್ದಿಟ್ಟ ಅರಣ್ಯ ಪ್ರದೇಶದ ಭೂಮಿಯೊಳಗೆ ರೈತರು ಪೈಪುಗಳನ್ನು ಹಾಕಿದ್ದು ತಪ್ಪೆಂದು ಇವರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ನಾವು ಎಷ್ಟು ಬೇಡಿಕೊಂಡಿದ್ದರೂ ಸಹ ಇವೊತ್ತಿನವರೆವಿಗೂ ಅವರು ರೈತರ ಮೋಟಾರುಗಳನ್ನು ವಾಪಸ್ಸು ಕೊಟ್ಟಿಲ್ಲ. ಇದನ್ನು ವಾಪಸ್ಸು ಕೊಡಿಸುವ ವ್ಯವಸ್ಥೆಯನ್ನು ತಾವು ಮಾಡಬೇಕು. ಇನ್ನು ಕರಾವಳಿ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮವನ್ನು ನಮ್ಮ ಸರ್ಕಾರ

ಅಧಿಕಾರದಲ್ಲಿದ್ದಂಥ ಕಾಲದಲ್ಲಿ ಪ್ರಾರಂಭಿಸಿದ್ದು, ಈಗಿನ ಸರ್ಕಾರ ಅದನ್ನು ಅನುಷ್ಠಾನಗೊಳಿಸುತ್ತಿದೆ. ಬಹುಶಃ ಈ ಕಾರ್ಯಕ್ರಮ ಸರಿಯಾದ ರೀತಿಯಲ್ಲಿ ಅನುಷ್ಠಾನವಾಗುತ್ತಿಲ್ಲ, ಅನುಷ್ಠಾನವಾಗುವುದಿಲ್ಲವೆಂದು ಕಾಣುತ್ತದೆ. ಇನ್ನು ಸಮುದ್ರಕ್ಕೆ ತಡೆಗೋಡೆ ನಿರ್ಮಿಸುವ ಕುರಿತು ಹೇಳುವುದಾದರೆ, ನಿನ್ನೆ ದಿವಸ ಮಾನ್ಯ ಸದಸ್ಯರಾದ ಯು.ಆರ್.ಸಭಾಪತಿಯವರು ಮಾತನಾಡುತ್ತಾ ಮೀನುಗಾರಿಕೆ ಹಾಗೂ ಬಂದರು ಸಚಿವರ ಬಗ್ಗೆ ಬಹಳಷ್ಟು ಹೇಳಿದರು. ಆಶ್ಚರ್ಯವೆಂದರೆ, ನೀರಿನಲ್ಲಿ ಚಲಿಸಬೇಕಾದ ಮೀನು ಭೂಮಿಯ ಮೇಲೆ ಬಂದು ಕೂತಂತೆ ಕಾಣುತ್ತದೆ!

ಶ್ರೀ ಯು.ಆರ್.ಸಭಾಪತಿ: ನಾನು ನಿನ್ನೆ ವಿಷಯ ಪ್ರಸ್ತಾಪಿಸುತ್ತಿದ್ದಾಗ ನೀವು ಸದನದಲ್ಲಿರಲಿಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನೀವು ಏನು ಹೇಳಿದ್ದೀರೆಂದು ನಾನು ಕೇಳಿದ್ದೇನೆ. ಮಾನ್ಯ ಅಧ್ಯಕ್ಷರೆ, ಅತ್ಯಂತ ನೋವಿನಿಂದ ತಮಗೆ ಇನ್ನೊಂದು ವಿಚಾರ ಹೇಳುವುದೇನೆಂದರೆ, ನಾವು ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವಂಥ ಸಂದರ್ಭದಲ್ಲಿ without illwill towards anybody ಕೆಲಸವನ್ನು ಮಾಡುವುದಾಗಿ ಹೇಳುತ್ತೇವೆ. ಆದರೆ ಮಂತ್ರಿಗಳಾಗಿ ಹೊಸದಾಗಿ ಬಂದವರ ಮೇಲೆ, ಎಲ್ಲರ ಮೇಲೂ ಆಪಾದನೆಗಳನ್ನು ಮಾಡಿದರು. ಹಿಂದಿನ ಸರ್ಕಾರ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳನ್ನು ಹಠತೊಟ್ಟು ರದ್ದುಗೊಳಿಸುವಂಥಾದ್ದು! ನಮ್ಮ ಭಾಗದಲ್ಲಿ ಇತ್ತೀಚೆಗೆ ಒಂದು ಕೋಮು ಗಲಭೆ ಪ್ರಕರಣ ಜರುಗಿದ್ದು ಮಾನ್ಯ ಗೃಹ ಸಚಿವರಿಗೆ ಗೊತ್ತಿದೆ. ಆ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಸಕಾಲಕ್ಕೆ ತಲುಪುವಲ್ಲಿ ವಿಳಂಬವಾಯಿತು. ಏಕೆಂದರೆ, ಅಲ್ಲಿನ ಮೀನುಗಾರಿಕೆ ರಸ್ತೆ ಸರಿಯಿರಲಿಲ್ಲ. ಈ ರಸ್ತೆಯನ್ನು ಸುಧಾರಿಸುವ ಸಲುವಾಗಿ ಹಣ ಮಂಜೂರು ಮಾಡಬೇಕೆಂದು ಮಾನ್ಯ ಬಂದರು ಹಾಗೂ ಮೀನುಗಾರಿಕೆ ಸಚಿವರನ್ನು ಕೇಳಿದಾಗ 'ಹಿಂದಿನ ತಮ್ಮ ಸರ್ಕಾರದ ಅವಧಿಯಲ್ಲಿ ಬಹಳಷ್ಟು ಹಣ ಪಡೆದುಕೊಂಡಿದ್ದೀರಿ' ಎಂದರು. ರಸ್ತೆ ದುರಸ್ತಿಗಾಗಿ ಹಣ ಕೊಡಬೇಕೆಂದು ಕೇಳಿದರೆ 'ಅವರು ಈಗಾಗಲೇ ತಮ್ಮ ಕ್ಷೇತ್ರದಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಿದ್ದರಿಂದ ಚುನಾವಣೆಯಲ್ಲಿ ಗೆದ್ದು ಬಂದಿದ್ದು, ಪುನಃ ಅವರ ಕ್ಷೇತ್ರದ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿದಲ್ಲಿ ಮತ್ತೆ ಅವರು ಚುನಾವಣೆಯಲ್ಲಿ ಗೆದ್ದು ಬರುತ್ತಾರೆ' ಎಂದು ನನ್ನ ಬಗ್ಗೆ ಹೇಳುತ್ತಾರಂತೆ. ಇದು ಅವರು ಮಂತ್ರಿಯಾಗುವಾಗ ಪ್ರಮಾಣ ವಚನ ಸ್ವೀಕರಿಸಿದ್ದರೂ ಈಗ ಅದಕ್ಕೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹಣ ಕೊಡುತ್ತಾರೆ. ಆದರೆ, ಸದರಿ ಮಂಡಳಿಯ ಅಧ್ಯಕ್ಷರ 'ವಿವೇಚನಾ ನಿಧಿ'ಯಿಂದ ಹಣ ಕೊಡಬೇಕೆಂದು

ಕೇಳಿದರೆ 'ಕಳೆದ ಸಲ ನೀವು ನಿಮ್ಮ ಕ್ಷೇತ್ರದಲ್ಲಿ ಬಹಳಷ್ಟು ಕೆಲಸ ಮಾಡಿದ್ದೀರಿ, ಆದ್ದರಿಂದ, ಕೊಪ್ಪಳ ಹಾಗೂ ಯಲಬುರ್ಗಾಕ್ಕೆ ಹಣ ಕೊಡುವುದಿಲ್ಲ' ಎಂದು ಹೇಳುತ್ತಾರೆ. ಇದು ಯಾವ ನ್ಯಾಯ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗಡೆಯವರು ಹೇಳಿದ್ದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅವರು ಕಳೆದ ಸಲ ಬಂದರು ಹಾಗೂ ಮೀನುಗಾರಿಕೆ ಸಚಿವರಾಗಿದ್ದಂಥ ಸಂದರ್ಭದಲ್ಲಿ ತಮ್ಮ ಮತಕ್ಷೇತ್ರದ ಅಭಿವೃದ್ಧಿಗಾಗಿ ನಬಾರ್ಡ್ ಸಂಸ್ಥೆಯಿಂದ ಸುಮಾರು ಏಳೂವರೆ ಕೋಟಿ ರೂಪಾಯಿಗಳಷ್ಟು ಹಣ ಪಡೆದುಕೊಂಡಿದ್ದಾರೆ. ಆದರೆ, ಅವರ ಪಕ್ಕದ ಮತಕ್ಷೇತ್ರದ ಅಭಿವೃದ್ಧಿಗೆ ಮೂವತ್ತು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ.

ಶ್ರೀ ಯು.ಆರ್.ಸಭಾಪತಿ: ಅವರ ಬ್ರಹ್ಮಾವರ ಮತಕ್ಷೇತ್ರದ ಅಭಿವೃದ್ಧಿಗಾಗಿ ಅವರು ಏಳೂವರೆ ಕೋಟಿ ರೂಪಾಯಿಗಳನ್ನು ಒದಗಿಸಿಕೊಂಡಿದ್ದರೆ, ಪಕ್ಕದಲ್ಲಿರುವ ನನ್ನ ಉಡುಪಿ ಮತಕ್ಷೇತ್ರದ ಅಭಿವೃದ್ಧಿಗೆ ಕೇವಲ ಮೂವತ್ತು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ನಮಗೆ ಬುದ್ಧಿವಾದ ಹೇಳುವುದಕ್ಕಿಂತ ಮೊದಲು ತಾವು ಹಿಂದೆ ಉಸ್ತುವಾರಿ ಸಚಿವರಾಗಿದ್ದಾಗ ತಮ್ಮ ಮತಕ್ಷೇತ್ರದ ಅಭಿವೃದ್ಧಿಗಾಗಿ ಏನೇನು ಮಾಡಿದ್ದೀರೆಂದು ಹೇಳಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನಾನು ಈ ಹಿಂದೆ ನನ್ನ ಮತಕ್ಷೇತ್ರದ ಅಭಿವೃದ್ಧಿಗಾಗಿ ಹೆಚ್ಚು ಹಣ ತೆಗೆದುಕೊಂಡಿದ್ದೇನೆ. ಇದನ್ನು ನಾನು ಆಡ್ಮಿಟ್ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ತಮ್ಮ ಮತಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ-ಕಾರ್ಯಗಳನ್ನು ಕೈಗೊಳ್ಳಬಾರದೆಂದಲ್ಲ. ತಾವು ತೆಗೆದುಕೊಂಡಿರುವ ಹಣ ಜಾಸ್ತಿಯಿದ್ದರೂ ಅಜೀರ್ಣವಾಗುವಷ್ಟು ಹಣ ತೆಗೆದುಕೊಂಡಿದ್ದೀರಿ. ತಾವು ಮಂತ್ರಿಯಾದ ಬಳಿಕ ರಾಜ್ಯದ ಎಲ್ಲಾ ಕ್ಷೇತ್ರಗಳಿಗೂ ಹಣವನ್ನು ಸಮಾನವಾಗಿ ಹಂಚಿಕೆ ಮಾಡಬೇಕು. ಈ ರೀತಿ ಹಂಚಿಕೆ ಮಾಡುವಾಗ ಶೇಕಡ 10-20ರಷ್ಟು ವ್ಯತ್ಯಾಸವಿದ್ದರೂ ಅಡ್ಡಿಯಿಲ್ಲ. ಆದರೆ, ತಮ್ಮ ಮತಕ್ಷೇತ್ರದ ಅಭಿವೃದ್ಧಿಗಾಗಿ ಅಜೀರ್ಣವಾಗುವಷ್ಟು ಹಣ ಪಡೆದುಕೊಳ್ಳುವುದೆಂದರೆ ಏನರ್ಥ? ಇದು ರಸ್ತೆಗಳ ಸುಧಾರಣೆ, ಅಭಿವೃದ್ಧಿ ವಿಚಾರವಾಯಿತು. ಮನೆಗಳ ಹಂಚಿಕೆ ವಿಚಾರವಾಗಿ ಹೇಳುವುದಾದರೆ, ಕೋಲಾರದವರೆಗೂ ಮನೆಗಳ ಹಂಚಿಕೆಯಾಯಿತು. ಆದರೆ, ನಮ್ಮ ಕ್ಷೇತ್ರದವರೆಗೆ ಹಾಗೂ ಬೇರೆ ಕ್ಷೇತ್ರಗಳಿಗೆ ಮನೆಗಳು ಬರಲಿಲ್ಲ!

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸತ್ಯಕ್ಕೆ ದೂರವಾದ ವಿಚಾರ ಪ್ರಸ್ತಾಪಿಸುತ್ತಿದ್ದಾರೆ. ಬೇಕಿದ್ದರೆ, ಪಟ್ಟಿ ತರಿಸಿ ನೋಡಿ:

ಮಲ್ಲಿಕಾರ್ಜುನ ಖರ್ಗೆಯವರ ಕ್ಷೇತ್ರಕ್ಕೆ ನಾನೇ ನೂರು ಮನೆಗಳನ್ನು ಮಂಜೂರು ಮಾಡಿಸಿದ್ದೇನೆ. ಇದು ನನಗೆ ನೆನಪಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಹೇಳಿದ್ದು ಏನೆಂದರೆ, ಎಲ್ಲರೂ ತಂತಮ್ಮ ಮತಕ್ಷೇತ್ರಗಳ ಅಭಿವೃದ್ಧಿಗೆ ಯೋಜನೆಯ ಸೌಲಭ್ಯವನ್ನು ಸಮಾನವಾಗಿ ಪಡೆದುಕೊಳ್ಳೋಣ. ಆದರೆ, ಅಜೀರ್ಣವಾಗುವಷ್ಟರ ಮಟ್ಟಿಗೆ ಸೌಲಭ್ಯ ಪಡೆದುಕೊಳ್ಳಬಾರದು.

ಶ್ರೀ ಯು.ಆರ್.ಸಭಾಪತಿ: ಇವರು ಈ ಹಿಂದೆ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಂಥ ಸಂದರ್ಭದಲ್ಲಿ ಜಿಲ್ಲೆಗೆ ಒಂದು ಸಾವಿರ ಮನೆಗಳು ಮಂಜೂರಾಗಿದ್ದರೆ, ಇವರ ಕ್ಷೇತ್ರಕ್ಕೆ ಐದುನೂರು ಮನೆಗಳನ್ನು ಮಂಜೂರು ಮಾಡಿಸಿಕೊಂಡು ನನ್ನ ಮತಕ್ಷೇತ್ರಕ್ಕೆ ಹತ್ತು ಮನೆಗಳನ್ನು ಮಂಜೂರು ಮಾಡಿದರು. ಇದು ನ್ಯಾಯವೇ?

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆ ಮತ್ತು ಸಭಾಪತಿಯವರು ಕರಾವಳಿ ಪ್ರದೇಶದಲ್ಲಿ ಅಡ್ಡಾಡಿ ನೋಡಿ, ಕರಾವಳಿ ಪ್ರದೇಶದ ಅಭಿವೃದ್ಧಿಗಾಗಿ ನಾನು ಏನೂ ಕೆಲಸ ಮಾಡಿಲ್ಲವೆಂದು ಅವರು ಹೇಳಿದರೆ ರಾಜೀನಾಮೆ ಕೊಡುತ್ತೇನೆ. ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿರುವ ಜನರು ಅಲ್ಲಿನ ಅಭಿವೃದ್ಧಿ ಕೆಲಸ-ಕಾರ್ಯಗಳ ಕುರಿತು ನನ್ನ ಹೆಸರು ಪ್ರಸ್ತಾಪಿಸುತ್ತಾರೆಯೇ ವಿನಃ ಈಗಿನ ಬಂದರು ಹಾಗೂ ಮೀನುಗಾರಿಕೆ ಸಚಿವರ ಹೆಸರನ್ನು ಹೇಳುವುದಿಲ್ಲ. ಅಷ್ಟರಮಟ್ಟಿಗೆ ನಾನು ಅಲ್ಲಿ ಕೆಲಸ ಮಾಡಿದ್ದೇನೆ. ತಾವು ಹೇಳುತ್ತಿರುವಂತೆ, ಎಲ್ಲಾ ಮಾನ್ಯ ಸಚಿವರ ಪಟ್ಟಿಯನ್ನು ಹೊರಗಡೆ ತೆಗೆಯೋಣ. ಅವರೆಲ್ಲರಿಗಿಂತ ನಾನು ಹೆಚ್ಚಿಗೆ ಯೋಜನೆಯ ಸೌಲಭ್ಯ ಪಡೆದಿದ್ದರೆ ತಾವು ನನ್ನ ಮೇಲೆ ಆಪಾದನೆ ಮಾಡಬಹುದು. ಇವೊತ್ತು ನಿಮ್ಮ ಸರ್ಕಾರದ ಸಚಿವ ಸಂಪುಟದಲ್ಲಿರುವ ಎಲ್ಲಾ ಸಚಿವರು ತಮ್ಮ ಮತ ಕ್ಷೇತ್ರಗಳ ಅಭಿವೃದ್ಧಿಗಾಗಿ ಎಷ್ಟೆಷ್ಟು ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆಂಬುದನ್ನು ಅದರ ಬಗ್ಗೆಯೂ ನೋಡೋಣ. ನಾನು ನನ್ನ ಮತಕ್ಷೇತ್ರದ ಅಭಿವೃದ್ಧಿಗಾಗಿ ಹೆಚ್ಚಿಗೆ ಸೌಲಭ್ಯ ಪಡೆದುಕೊಂಡಿಲ್ಲವೆಂದು ಹೇಳುತ್ತಿಲ್ಲ, ಪಡೆದುಕೊಂಡಿದ್ದೇನೆ, ಹೌದು. ನಮ್ಮ ಭಾಗದಲ್ಲಿರುವ ಮೀನುಗಾರರ ಅಭಿವೃದ್ಧಿಗಾಗಿ ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ನಿಜ. ಅದಕ್ಕೋಸ್ಕರ ಮತ್ತೊಮ್ಮೆ ನಾನು ಚುನಾವಣಾ ಸಮಯದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಿಂತಿದ್ದರೂ ತಮ್ಮ ಮತಗಳನ್ನು ಹಾಕಿ ಗೆಲ್ಲಿಸಿ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಯು.ಆರ್.ಸಭಾಪತಿ: ಇವರು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ತಮ್ಮ

ಮತಕ್ಷೇತ್ರದ ಅಭಿವೃದ್ಧಿಗಾಗಿ ಸ್ವಾರ್ಥ ಸಾಧನೆ ಮಾಡಿದ್ದರಿಂದ ಚುನಾವಣೆಯಲ್ಲಿ ಮತ್ತೊಮ್ಮೆ ಗೆದ್ದು ಬಂದರು.

ಅಧ್ಯಕ್ಷರು: ತಾವು ಅಜೀರ್ಣ ಮಾಡಿಕೊಳ್ಳಬಾರದೆಂದು ಮಾನ್ಯ ಗೃಹ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಜೀರ್ಣಿಸಿಕೊಳ್ಳುವ ಶಕ್ತಿ ಇದ್ದುದರಿಂದಲೇ ಅಷ್ಟು ಕೊಟ್ಟಿದ್ದು. ಇನ್ನು ಆರೋಗ್ಯ ಇಲಾಖೆ ಕುರಿತು ಹೇಳುವುದಾದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನಕ್ಕೆ ತರುವುದೇನೆಂದರೆ, ಪ್ರತಿ ವರ್ಷವೂ ಮಾರ್ಚಿ ತಿಂಗಳ 31ನೇ ತಾರೀಖಿಗೆ ಪರ್ಚೇಸಿಂಗ್ ಶಾರ್ಟೇಜ್ ಆಗುತ್ತದೆ. ಒಂದೇ ಐಟಂ ಅನ್ನು ಬೇರೆ ಬೇರೆ ಆಸ್ಪತ್ರೆಗಳಲ್ಲಿ ಯಾವ್ಯಾವ ದರಗಳಲ್ಲಿ ಇವರು ಖರೀದಿಸಿದ್ದಾರೆಂಬುದನ್ನು ನೋಡಬೇಕಾಗುತ್ತದೆ. ಒಂದೇ ಐಟಂ ಅನ್ನು ಒಂದು ಆಸ್ಪತ್ರೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಕೊಂಡಿದ್ದರೆ ಮತ್ತೊಂದು ಆಸ್ಪತ್ರೆಯಲ್ಲಿ ಕಡಿಮೆ ಪ್ರಮಾಣದಲ್ಲಿ ಕೊಂಡಿರುತ್ತಾರೆ. ಇದರಲ್ಲಿ ರೇಟ್ ಕಂಟ್ರಾಕ್ಟ್ ಇದ್ದು ಉಳಿದ ಐಟಂಗಳ ಕಡೆಗೂ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಮ್ಮ ಗಮನಹರಿಸಬೇಕಾಗುತ್ತದೆ. ಏಕೆಂದರೆ, ಇದರ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತದೆ. ಇನ್ನೊಂದು ವಿಚಾರವಾಗಿ ಹೇಳುವುದಾದರೆ, ರಾಜ್ಯದಲ್ಲಿ ಒಂದು ಹೊಸ ಸಂಘಟನೆಯಾಗಿದೆ. ಟೈಲರ್ ಅಸೋಸಿಯೇಷನ್ ಅಸ್ತಿತ್ವಕ್ಕೆ ಬಂದಿದ್ದು, ಇವೊತ್ತು ಪ್ರತಿ ಗ್ರಾಮಗಳಲ್ಲೂ ಟೈಲರ್‌ಗಳಿದ್ದಾರೆ. ಇವರು ಮೊನ್ನೆ ದಿವಸ ನನ್ನ ಕ್ಷೇತ್ರದಲ್ಲಿ ಒಂದು ಸಭೆ ನಡೆಸಿದರು. ನನ್ನ ಕ್ಷೇತ್ರದಲ್ಲಿಯೇ ಸುಮಾರು 2000 ಟೈಲರ್‌ಗಳಿದ್ದಾರೆ. ಇನ್ನು ರಾಜ್ಯಾದ್ಯಂತ ಅವರು ಎಷ್ಟು ಸಂಖ್ಯೆಯಲ್ಲಿರಬಹುದೆಂದು ಲೆಕ್ಕಾಚಾರ ಹಾಕಬಹುದು. ಇವರುಗಳಿಗೆ ಸರ್ಕಾರ ಸರಿಯಾದ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿಕೊಟ್ಟಿರುವುದಿಲ್ಲ. ಇದುವರೆವಿಗೂ ಯಾವುದೇ ಸರ್ಕಾರವು ಸೌಲಭ್ಯ ಒದಗಿಸಿಲ್ಲ. ಆದರೆ, ಪಕ್ಕದ ರಾಜ್ಯವಾದ ಕೇರಳ ಸರ್ಕಾರ ಇವರುಗಳ ಅಭಿವೃದ್ಧಿಗಾಗಿ ಒಂದು ಕಾರ್ಯಕ್ರಮ ಹಮ್ಮಿಕೊಂಡಿದೆ. ಆದುದರಿಂದ ಮಾನ್ಯ ಕಾರ್ಮಿಕ ಸಚಿವರು ಆ ರಾಜ್ಯದಿಂದ ಕಾರ್ಯಕ್ರಮದ ವಿವರ ತರಿಸಿಕೊಂಡು ಈ ರಾಜ್ಯದಲ್ಲಿರುವ ಟೈಲರುಗಳ ಅಭಿವೃದ್ಧಿಗಾಗಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಹೇಳುತ್ತೇನೆ.

2.40 ಪಿಎಂ

ಇನ್ನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಮಂಗಳೂರು ಏರ್‌ಪೋರ್ಟ್‌ಗೆ ಸಂಬಂಧಪಟ್ಟ ಹಾಗೆ ಮಾನ್ಯ ಕಂದಾಯ ಸಚಿವರು ಲ್ಯಾಂಡ್ ಅಕ್ವಿಜೆಷನ್ ಬೇಗ ಮಾಡಿ ಏರ್‌ಪೋರ್ಟ್ ಆಗುವಂತೆ ಮಾಡಬೇಕು. ಇನ್ನು ನಮ್ಮ ಲ್ಯಾಂಡ್ ಗ್ರ್ಯಾಂಟ್

ಕಮಿಟಿಗಳು ಆದಷ್ಟು ಬೇಗ ಮಾಡಬೇಕು, ತಾವು ನಮ್ಮನ್ನು ಕರೆದು ಚರ್ಚೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆಂದು ಈ ಸದನದಲ್ಲಿ ಹೇಳಿದ್ದೀರಿ. ಆ ಬಗ್ಗೆ ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾ, ಮೊನ್ನೆ ದಿವಸ ಮಾನ್ಯ ಕಾನೂನು ಸಚಿವರು ನನ್ನ ಪ್ರಶ್ನೆಗೆ ಒಂದು ಉತ್ತರವನ್ನು ಕೊಡುತ್ತಾ, ಹೈಕೋರ್ಟಿನವರು ಒಪ್ಪಿಗೆಯನ್ನು ಕೊಟ್ಟ ತಕ್ಷಣ ಉಡುಪಿಯಲ್ಲಿ ಜಿಲ್ಲಾ ನ್ಯಾಯಾಲಯವನ್ನು ಮಾಡುತ್ತೇನೆಂದು ಹೇಳಿದ್ದರು, ನನ್ನ ಒಂದು ಅಭಿಪ್ರಾಯದ ಪ್ರಕಾರ ಹೈಕೋರ್ಟಿನವರು ಈಗಾಗಲೇ ಒಪ್ಪಿಗೆಯನ್ನು ಕೊಟ್ಟಿದ್ದಾರೆನ್ನುವ ಮಾಹಿತಿ ನನಗೆ ಬಂದಿದೆ. ಅದನ್ನು ಪರಿಶೀಲನೆ ಮಾಡಿ ಕಾನೂನು ಸಚಿವರು ಈ ವರ್ಷದ ಬಜೆಟ್‌ನಲ್ಲಿ ಎಷ್ಟು ಹಣವನ್ನು ಒದಗಿಸಲು ಸಾಧ್ಯವೋ ಅಷ್ಟು ಹಣವನ್ನು ಈ ಬಜೆಟ್‌ನಲ್ಲಿ ಒದಗಿಸಿ ಜಿಲ್ಲಾ ನ್ಯಾಯಾಲಯವನ್ನು ಪ್ರಾರಂಭ ಮಾಡಬೇಕೆನ್ನುವ ಮಾತನ್ನು ಹೇಳಲು ನಾನು ಇಚ್ಛೆಪಟ್ಟು, ನಾನು ಆಕಾಶದಿಂದ ಮಧ್ಯಕ್ಕೆ ಬಂದಿದ್ದೇನೆ ಇನ್ನೂ ನಾನು ಭೂಮಿಯವರೆಗೂ ಬರಲಿಲ್ಲ. ಆದರೆ ನನ್ನ ತೃಪ್ತಿಗೋಸ್ಕರ ಕೆಲವು ವಿಷಯಗಳನ್ನು ಈ ಸದನದಲ್ಲಿ ಹೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಕಡೆ ಭಾಷಣವನ್ನು ಮಾಡಿದರು, ಈ ಐ.ಟಿ. ಬಗ್ಗೆ. ಆದರೆ ಅದೇ ದಿವಸ ಮಾನ್ಯ ರಾಜ್ಯಪಾಲರು ಒಂದು ಕಡೆ ಭಾಷಣ ಮಾಡಿದರು. It is luring youngsters ಅಂತ ಹೇಳಿ. ಆದರೆ ಅವರ ಹತ್ತಿರ ಐ.ಟಿ. ಬಗ್ಗೆ ಭಾಷಣವನ್ನು ಮಾಡಿಸಿದರು. ಅವರ ಸ್ವಂತ ಅಭಿಪ್ರಾಯ ಪತ್ರಿಕೆಯಲ್ಲಿ ಬಂದಿದೆ. ಅಂದರೆ ಅವರಿಗೆ ಆ ಅಭಿಪ್ರಾಯ ಇರಲಿಲ್ಲ ಐ.ಟಿ. ಬಗ್ಗೆ. ಆದರೆ ಸರ್ಕಾರ ಏನು ಬರೆದು ಕೊಟ್ಟಿದೆ ಅದನ್ನು ಮಾತ್ರ ರಾಜ್ಯಪಾಲರು ಓದಿದ್ದನ್ನು ಬಿಟ್ಟರೆ ಅವರ ಮನಸ್ಸಿನಲ್ಲಿ ಈ ಐ.ಟಿ. ಬಗ್ಗೆ ಯಾವ ಭಾವನೆ ಇದೆ, ಎನ್ನುವುದನ್ನು ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ಭಾಷಣವನ್ನು ಮಾಡಿದ್ದಾರೆ ನಿದ್ರಿಸುತ್ತಿದ್ದವರಿಂದ ಪಾಠ ಕಲಿಯಬೇಕಾಗಿಲ್ಲ ಅಂತ. ಹಿಂದಿನ ಸರ್ಕಾರದ ಬಗ್ಗೆ ಬಹುಶಃ ಜನರ ಹತ್ತಿರ ಹೋಗಿ ಕೇಳಿದರೆ ಗೊತ್ತಾಗುತ್ತದೆ, ಯಾವ ಸರ್ಕಾರ ನಿದ್ರಿಸುತ್ತಿದೆ ಅಂತ. ಯಾವ ಸರ್ಕಾರ ಹಿಂದೆ ಕೆಲಸ ಮಾಡುತ್ತಿತ್ತು, ಮಾನ್ಯ ಮುಖ್ಯಮಂತ್ರಿಗಳು ರಿವ್ಯೂ ಮಾಡಲಿ ಹಿಂದಿನ ಸರ್ಕಾರದಲ್ಲಿ ಯಾವ ಯಾವ ಮಂತ್ರಿಗಳು ಏನೇನು ಕೆಲಸ ಮಾಡಿದ್ದಾರೆ, ಅವರ ಪಕ್ಷದ ಶಾಸಕರೇ ಹೇಳುತ್ತಿದ್ದಾರೆ ನಿಮ್ಮ ಸರ್ಕಾರವಿದ್ದಾಗ ನಮ್ಮ ಕೆಲಸಗಳು ಆಗುತ್ತಿದ್ದವು ಈಗ ಆಗುತ್ತಿಲ್ಲ ಅಂತ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನು ಕೇವಲ 5 ನಿಮಿಷ ಮಾತ್ರ ಮಾತನಾಡುತ್ತೇನೆ. ಮಾನ್ಯ ಸದಸ್ಯರಾದ ವೈ.ಕೆ.ರಾಮಯ್ಯನವರು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುತ್ತಾ ಮಾತನಾಡುವಾಗ ಹೈಕೋರ್ಟ್ ಬಗ್ಗೆ

ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಈ ಬಗ್ಗೆ ಹೇಳುವುದೇನೆಂದರೆ ನಮ್ಮ ಕಾನೂನು ಸಚಿವರು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಮಾತನಾಡಿ ಪರಿಹಾರ ಮಾಡಿಕೊಳ್ಳಬೇಕೇ ವಿನಹ ಶಾಸನ ಸಭೆಯಲ್ಲಿ ಅಲ್ಲ. ಈ ವಿಷಯವನ್ನು ಒಂದು ದೊಡ್ಡ ವಿಷಯವನ್ನಾಗಿ ಮಾಡಿದರು. ನ್ಯಾಯಾಂಗಕ್ಕೂ ಮತ್ತು ಶಾಸಕಾಂಗಕ್ಕೂ ಯಾವ ರೀತಿಯಾದ ಘರ್ಷಣೆ ಇಲ್ಲ. ಇದು ಸಾಮರಸ್ಯದಿಂದ ಹೋಗಬೇಕಾದಂತಹ ವಿಷಯ. ಹಿರಿಯ ಸದಸ್ಯರಾದ ಮಾನ್ಯ ರಾಮಯ್ಯನವರು ನೋವಿನಿಂದ ಏನು ವಿಷಯ ಪ್ರಸ್ತಾಪ ಮಾಡಿದರು ಅದನ್ನು ನಮ್ಮ ಕಾನೂನು ಸಚಿವರು.....

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ತಮ್ಮ ದೃಷ್ಟಿಯಲ್ಲಿ ಅಂತಹ ಸಮಾರಂಭಗಳಿಗೆ ಶಾಸಕರನ್ನು ಕರೆಸಬೇಕೋ ಬೇಡವೋ?

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಇಂತಹ ವಿಷಯಗಳನ್ನು ಮಾನ್ಯ ಕಾನೂನು ಸಚಿವರು ಮತ್ತು ಮುಖ್ಯ ನ್ಯಾಯಾಧೀಶರು ಚರ್ಚೆ ಮಾಡಲಿ ನಾನು ಬೇಡ ಅಂತ ಹೇಳುತ್ತಿಲ್ಲ. ಈ ವಿಷಯವನ್ನು ಬಹಳ ದೊಡ್ಡ ವಿಷಯವನ್ನಾಗಿ ಮಾಡಬಾರದಾಗಿತ್ತು ಅಂತ ನಾನು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನಖರ್ಗೆ: ನಾಳೆ ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಇಂತಹ ಒಂದು ಸಮಾರಂಭ ನಡೆಯುತ್ತದೆ. ಆ ಸಮಾರಂಭಕ್ಕೆ ಮುಖ್ಯ ನ್ಯಾಯಾಧೀಶರು ಮತ್ತು ನ್ಯಾಯಾಧೀಶರು ಬಂದಾಗ ತಮಗೆ ಸಲ್ಲಬೇಕಾದಂತಹ ಗೌರವವನ್ನು ಕೊಡಬೇಕೋ ಬೇಡವೋ?

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಹಿಂದೆ ಇದ್ದ ಮುಖ್ಯ ನ್ಯಾಯಾಧೀಶರೂ ಕೂಡ ಶಾಸಕರನ್ನು ಕರೆಯದೇ ಅನೇಕ ಸಮಾರಂಭಗಳನ್ನು ಮಾಡಿದ್ದಾರೆ.

ಶ್ರೀ ಕೆ.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಅವರ ಕ್ಷೇತ್ರದಲ್ಲಿ ನಾಳೆ ಒಂದು ಕಾರ್ಯಕ್ರಮವಿದೆ. ಬಸವನಗುಡಿ ವಿಧಾನ ಸಭಾ ಕ್ಷೇತ್ರದ ಶಾಸಕರ ಕಛೇರಿ ಅಂದರೆ ಸುಬ್ಬಾರೆಡ್ಡಿಯವರ ಕಛೇರಿ, ಅದರಲ್ಲಿ ಸುಬ್ಬಾರೆಡ್ಡಿಯವರೆ, ವಿಶೇಷ ಆಹ್ವಾನಿತರು. ಅದು ಹೇಗೆ ಅಂತ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೇ ಅದು ಮುಖ್ಯವಲ್ಲ. ಇಲ್ಲಿ ಇರುವ ವಿಷಯ ಶಾಸಕರನ್ನು ಅಂತಹ ಸಮಾರಂಭಗಳಿಗೆ ಕರೆಯಬೇಕೋ ಅಥವಾ ಬೇಡವೋ ಅಂತ. ಮಾನ್ಯ ವೈ.ಕೆ.ರಾಮಯ್ಯನವರು ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನಾನು ಹೇಳುವುದೇನೆಂದರೆ, ಮಾನ್ಯ ಕಾನೂನು ಸಚಿವರು ಮತ್ತು

ಮುಖ್ಯನ್ಯಾಯಾಧೀಶರು ಮಾತನಾಡಿ ಇಂತಹ ವಿಷಯಗಳ ಬಗ್ಗೆ ತೀರ್ಮಾನ ಮಾಡಬೇಕು. ಆದರೆ ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಅವರಿಗೆ ಪೆಟ್ರೋಲ್ ಕೊಡುವವರು ನಾವು, ಕಾರು ಕೊಡುವವರು ನಾವು ಎಂದು ಮಾತನಾಡಿರುವುದು ಬಹಳ ದುಃಖಕರವಾದ ಸಂಗತಿ, ಆ ರೀತಿ ಮಾತನಾಡಬಾರದು ಅಂಥ ನನ್ನ ವಿನಂತಿ. ನಿನ್ನೆಯ ದಿವಸ ಮಾನ್ಯ ಸಭಾಪತಿಯವರು ಮಾತನಾಡುವಾಗ ಕೆಲವು ವಿಷಯಗಳನ್ನು ಮಾತನಾಡಿದರು. ನಿನ್ನೆಯ ದಿವಸ ನಾನು ಕ್ರಿಕೆಟ್ ಬಗ್ಗೆ ಮಾತನಾಡಿದೆ. ಕ್ರಿಕೆಟ್ ನಮಗೆ ಗ್ರೀಕ್ ಅಂಡ್ ಲ್ಯಾಟೀನ್. ಕ್ರಿಕೆಟನ್ನು ಅವರು ದೂರದರ್ಶನದಲ್ಲಿ ನೋಡಿ ಅಂತ ಅಂದರು. ನಾವು ಕ್ರಿಕೆಟ್ ನೋಡುವುದಿಲ್ಲ ನನ್ನ ಪತ್ನಿಯವರು ಕೂಡ ಕ್ರಿಕೆಟ್ ನೋಡುವುದಿಲ್ಲ. ಅವರು ದೂರದರ್ಶನದಲ್ಲಿ ನೋಡಿ ಅಂದರು, ನಾಚಿಕೆಗೇಡು ಅಂದರು ಬಹಳ ನೋವಾಯಿತು. ಅವರು ನೋಡದೇ ಇರುವುದಕ್ಕೆ ಬೇರೆ ರೀತಿಯಲ್ಲಿ ಮಾತನಾಡಿರಬಹುದು, ಇದು ಬಹಳ ದುಃಖಕರವಾದ ಸಂಗತಿ. ಅವರು ಹಿರಿಯ ಸದಸ್ಯರಾಗಿ ಈ ರೀತಿ ಮಾತನಾಡಿದ್ದು ಬಹಳ ತಪ್ಪು. ನಾವು ಹೋಗಲೇಬೇಕೆಂದೇನೂ ಇಲ್ಲ. ಇವತ್ತು ರಾಜ್ಯದಲ್ಲಿ ಪರೀಕ್ಷೆಗಳು ನಡೆಯುತ್ತಿವೆ. ಇಂತಹ ಸಮಯದಲ್ಲಿ ಕ್ರಿಕೆಟ್ ನಡೆಯುತ್ತಿದೆ. ಅವರು ಬಹಳ ಚೆನ್ನಾಗಿ ಮಾಡಿದ್ದಾರೆ. ನನ್ನ ಮತಕ್ಷೇತ್ರದವರು ಅನೇಕ ಜನ ಹೋಗಿದ್ದಾರೆ ಅವರಿಗೆ ಟಿಕೇಟ್ ಸಿಕ್ಕಿಲ್ಲ. ಇವತ್ತು ಕಲ್ಕತ್ತಾದಲ್ಲಿ ಈಡನ್ ಗಾರ್ಡನ್‌ನಲ್ಲಿ ಒಂದು ಲಕ್ಷ ಜನ ಕ್ರಿಕೆಟ್ ವೀಕ್ಷಣೆ ಮಾಡಬಹುದು. ಆ ರೀತಿಯಲ್ಲಿ ಏನಾದರೂ ಇಲ್ಲಿ ಅವಕಾಶ ಮಾಡಬೇಕು. ನಾನು ಮಾತನಾಡಿದ ಉದ್ದೇಶವೇನೆಂದರೆ ಮಂತ್ರಿಗಳಿಗೆ ಎರಡೆರಡು ಪಾಸುಗಳು, ಶಾಸಕರಿಗೆ ಒಂದೇ ಒಂದು ಪಾಸು, ಈ ರೀತಿ ಡಿಸ್‌ಕ್ರಿಮಿನೇಶನ್ ಆಗಬಾರದು ಎಂದು ತಮಾಷೆಯಾಗಿ ಮಾತನಾಡಿದೆ. ಆದರೆ ಕನ್ನಡಪ್ರಭಾ ಪತ್ರಿಕೆಯಲ್ಲಿ ಬಹಳ ದೊಡ್ಡದಾಗಿ ಹಾಕಿದ್ದಾರೆ, ಅದು ಬೇಕಾಗಿರಲಿಲ್ಲ. ಇನ್ನು ಬೆಂಗಳೂರು ನಗರ ಪಾಲಿಕೆಯ ಬಗ್ಗೆ ಒಂದೇ ಒಂದು ವಿಚಾರ ಪ್ರಸ್ತಾಪ ಮಾಡುತ್ತೇನೆ. ಇವತ್ತು ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಆಯುಕ್ತರು 3-4 ಜನ ಆದರು. ಇವತ್ತು ಮಹಾ ನಗರಪಾಲಿಕೆಯಲ್ಲಿ ಆಯುಕ್ತರು ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ನಗರವನ್ನು ಸಿಂಗಪುರ ಮಾಡಬೇಕೆಂದು ಹೋಗಿ ಇವತ್ತು ಯಾವ ವಾರ್ಡ್‌ನಲ್ಲಿ ಸಹ ಸರಿಯಾಗಿ ಅಭಿವೃದ್ಧಿ ಕೆಲಸ ನಡೆಯುತ್ತಿಲ್ಲ. ಈ ರೀತಿ ಆದರೆ ಬೆಂಗಳೂರು ನಗರ ಹೇಗೆ ಅಭಿವೃದ್ಧಿಯಾಗುತ್ತದೆ? ಜಯರಾಜ್‌ರವರು ಬಂದರು, ಹೋದರು, ಜಯಕರ್ ಜರೋಮ್ ಬಂದರು ಹೋದರು. ಸಂತನು ಕನ್ಸಲ್ ಬಂದರು ಹೋದರು, ಇವತ್ತು ಬೆಂಗಳೂರು ನಗರದಲ್ಲಿ ಎಲ್ಲಿ ನೋಡಿದರೆ ಅಲ್ಲಿ ಲೈವ್‌ಬ್ಯಾಂಡ್‌ಗಳು. ಎಲ್ಲಿ ನೋಡಿದರೆ ಅಲ್ಲಿ ಇಸ್ಪೀಟ್ ಕ್ಲಬ್‌ಗಳು. ಬೆಂಗಳೂರಿನಲ್ಲಿ ನಮ್ಮ ಉಪ್ಪಾರಪೇಟೆ ಪೊಲೀಸ್ ಠಾಣೆ ಎದುರಿಗೆ 35-40 ಇವೆ. ಅವರು ರಾಜಕೀಯ ಪ್ರಭಾವ ಇರತಕ್ಕಂಥ ವ್ಯಕ್ತಿಗಳನ್ನು ನೋಡಿ ಸುಮ್ಮನಾಗುತ್ತಾರೆ. ಹೀಗಾದರೆ ಬೆಂಗಳೂರು ಸಿಂಗಪುರ ಆಗಲು ಹೇಗೆ ಸಾಧ್ಯ? ನ್ಯೂಯಾರ್ಕ್‌ನಂತೆ ಸಾಲಾಗಿ

ಕ್ಲಬ್ಬುಗಳಿರುವಂತೆ ಇಲ್ಲೂ ಇವೆ. ಗ್ಯಾಂಬ್ಲಿಂಗ್ ಬೆಂಗಳೂರಿನಲ್ಲಿ ನಡೆಯುತ್ತಿರುವ ಬಗ್ಗೆ ಎಲ್ಲಾ ಪೇಪರ್‌ಗಳಲ್ಲೂ ಸಹಾ ಬಂದಿದೆ. ಮೊನ್ನೆ ಟೈಮ್ಸ್ ಆಫ್ ಇಂಡಿಯಾದಲ್ಲಿ ಒಂದು ವರದಿ ಬಂದಿದೆ. ನಾನು ಎಲ್ಲಾ ಪೇಪರ್‌ಗಳಲ್ಲಿ ಬಂದಿರುವ ವರದಿಗಳನ್ನು ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತೇನೆ. ಲೈವ್‌ಬ್ಯಾಂಡ್‌ಗಳು ನಡೆಯುತ್ತಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನಕ್ಕೆ ತಂದಿದ್ದರೂ ಕ್ರಮ ತೆಗೆದುಕೊಂಡಿಲ್ಲ. ಇವತ್ತು ಬೆಂಗಳೂರಿನಲ್ಲಿ 500-600 ಕಮರ್ಷಿಯಲ್ ಕ್ಲಬ್ಸ್ ಇವೆ. ಇವತ್ತು ಹುಡುಗರೂ ಕೂಡ ಎಲ್ಲೆಂದರಲ್ಲಿ ಕಾಣುವ ಪಬ್ ಮತ್ತು ಬಾರ್‌ಗಳಿಗೆ ನುಗ್ಗುತ್ತಿದ್ದಾರೆ. ಬೆಂಗಳೂರಿನಲ್ಲಿ ಇಷ್ಟೊಂದು ಬಾರ್‌ಗಳಿರುವಾಗ ನೀವು ಯಾವ ರೀತಿ ಇದನ್ನು ಸಿಂಗಪುರವನ್ನಾಗಿ ಮಾಡುತ್ತೀರಿ? ದೆಹಲಿಯಲ್ಲಿ ಎಲ್ಲೋ ಒಂದೆಡೆ ಕೆಲವಾರು ಗಂಟೆಗಳ ಕಾಲ ಮಾತ್ರ ಬಾರ್ ಅಥವಾ ವೈನ್ ಸ್ಟೋರ್ಸ್ ತೆರೆದಿರುತ್ತವೆ. ಆದರೆ ಬೆಂಗಳೂರಿನಲ್ಲಿ ಎಲ್ಲೇ ನೋಡಲಿ, ದೇವಸ್ಥಾನ ಮತ್ತು ಸ್ಕೂಲುಗಳ ಹತ್ತಿರ ಮತ್ತು ವಾಸದ ಮನೆಗಳ ಹತ್ತಿರ ಎಲ್ಲೆಂದರಲ್ಲಿ ಬಾರ್‌ಗಳು ತಲೆ ಎತ್ತಿವೆ. ಈಗಲೇ ಇಷ್ಟೊಂದು ಕ್ಲಬ್‌ಗಳು, ಬಾರ್‌ಗಳು ಮತ್ತು ಗ್ಯಾಂಬ್ಲಿಂಗ್ ಸೆಂಟರ್‌ಗಳು ಇರುವ ಬೆಂಗಳೂರಿನಲ್ಲಿ ಇನ್ನು ಐದು ವರ್ಷಗಳಾದ ಮೇಲೆ ನೋಡಿದರೆ ಎಲ್ಲೂ ಓಡಾಡಲಿಕ್ಕೆ ಆಗದಿರುವಂತಹ ಪರಿಸ್ಥಿತಿ ಬಂದೊದಗುತ್ತದೆ. ಮಾನ ಮತ್ತು ಮರ್ಯಾದೆ ಹೋಗುವಂತಹ ಪರಿಸ್ಥಿತಿ ಮುಂದೆ ಉದ್ಭವವಾಗುತ್ತದೆ. ಹಿರಿಯ ನಾಗರೀಕರಿಗೆ ಬಸ್ಸುಗಳಲ್ಲಿ ಶೇ.50ರ ರಿಯಾಯಿತಿ ದರದಲ್ಲಿ ಪಾಸ್‌ಗಳನ್ನು ನೀಡುವಂತೆ ಮಾನ್ಯ ಮುಖ್ಯಮಂತ್ರಿಗಳು ಸಾರಿಗೆ ಸಚಿವರಿಗೆ ಸೂಚನೆ ನೀಡಿದರೂ ಕೂಡ ಇದುವರೆಗೂ ಅದರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಹೊರ ಊರಿನಿಂದ ಬೆಂಗಳೂರಿಗೆ ಬರುವವರಿಗೆ ಇಲ್ಲಿ ನಡೆಯುತ್ತಿರತಕ್ಕಂಥ ಸಂಗತಿಗಳನ್ನು ನೋಡಿ ನಿಜವಾಗಿಯೂ ಕೂಡ ಬಹಳ ದುಃಖವಾಗಿದೆ. ಇದೇ ರೀತಿ ಇನ್ನು 2-3 ವರ್ಷಗಳು ಕಳೆದರೆ ಬೆಂಗಳೂರು ನಗರದ ಪರಿಸ್ಥಿತಿ ಶೋಚನೀಯವಾಗುತ್ತದೆ. ಮಾನ್ಯ ಗೃಹ ಸಚಿವರಲ್ಲಿ ನಮಗೆ ಬಹಳ ನಂಬಿಕೆ ಇದೆ. ಮಾನ್ಯ ಖರ್ಗೆಯವರು ಏನಾದರೂ ಮಾಡಿ ಇದನ್ನು ನಿಲ್ಲಿಸದೇ ಇದ್ದರೆ ಬಹುಶಃ ಬೆಂಗಳೂರು ನಗರ ನರಕವಾಗುತ್ತದೆ. ಪೊಲೀಸಿನವರ ಕುಮ್ಮಕ್ಕಿನಿಂದಲೇ ಇವೆಲ್ಲಾ ನಡೆಯುತ್ತಿರುವಾಗ ಏನೂ ಮಾಡಲು ಸಾಧ್ಯವಾಗುತ್ತಿಲ್ಲ. ಇವತ್ತು ಇಲಾಖೆಯಲ್ಲಿ ಅನೇಕ ಒಳ್ಳೆಯ ಪೋಲೀಸ್ ಅಧಿಕಾರಿಗಳಿದ್ದಾರೆ, ಅಂತಹವರುಗಳನ್ನು ಆಯಕಟ್ಟಿನ ಜಾಗಕ್ಕೆ ಪೋಸ್ಟಿಂಗ್ ಮಾಡಿ ದುಷ್ಕೃತ್ಯಗಳನ್ನು ನಡೆಸುತ್ತಿರುವವರನ್ನು ಮಟ್ಟ ಹಾಕಬೇಕು. ಯಾರಿಗೂ ಕೂಡ ಸರ್ಕಾರ ಶರಣಾಗಬಾರದು. ದಯವಿಟ್ಟು ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಾನು ಕೋರುತ್ತೇನೆ.

+ ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಅಧ್ಯಕ್ಷರೇ, ಜಂಟಿ ಸದನಗಳನ್ನು ಉದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ವಂದನಾ

ನಿರ್ಣಯವನ್ನು ವಿರೋಧಿಸುತ್ತಾ ನಾನು ಮಾತನಾಡಬಯಸುತ್ತೇನೆ. ರಾಜ್ಯಪಾಲರ ಭಾಷಣ ಸಾಧನೆಯ ಒಂದು ದಾಖಲೆಯಾಗಬೇಕಾಗಿತ್ತು. ಅದರ ಜೊತೆಯಲ್ಲಿ ಗುರಿ ಮತ್ತು ಭರವಸೆಗಳ ಒಂದು ದಾರಿದೀಪ ಆಗಬೇಕಾಗಿತ್ತು. ಆದರೆ ಅವು ಯಾವುವೂ ಇದರಲ್ಲಿ ಕಾಣಿಸಿಕೊಂಡಿಲ್ಲ. ಹಿಂದಿನ ರಾಜ್ಯಪಾಲರ ಭಾಷಣಗಳಲ್ಲಿ ಅನೇಕ ಮಾತುಗಳನ್ನು ತುಂಬಾ ಸೊಗಸಾಗಿ ಅವರ ಬಾಯಿಂದ ಹೇಳಿಸಲಾಗಿದೆ. ಕಳೆದ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಏನೇನು ಗುರಿ ಮತ್ತು ಭರವಸೆಗಳನ್ನು ಹೇಳಿತ್ತೋ ಅದರ ಬಗ್ಗೆ ಏನೇನು ಭರವಸೆಗಳನ್ನು ಈಡೇರಿಸಲಾಗಿದೆ ಹಾಗೂ ಸಾಧನೆಗಳನ್ನು ಸಾಧಿಸಲಾಗಿದೆ ಎಂದು ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದರೆ ನಾವು ತುಂಬಾ ಸಂತೋಷಪಡುತ್ತಿದ್ದೆವು. ರಾಜ್ಯದ ಜನತೆ ಕೂಡ ಇದರ ಬಗ್ಗೆ ತುಂಬಾ ಸಂತೋಷಪಡುತ್ತಿದ್ದರು. ಆದರೆ ಅದರ ಬಗ್ಗೆ ಸರ್ಕಾರ ಏನೂ ಹೇಳಿಲ್ಲ. ಈ ಸದನದ ಸದಸ್ಯರಿಗಾಗಲೀ ಅಥವಾ ರಾಜ್ಯದ ಜನತೆಗಾಗಲೀ ಯಾರಿಗೂ ಕೂಡ ಸರ್ಕಾರ ಕಳೆದ 17 ತಿಂಗಳ ಸಾಧನೆಗಳ ಬಗ್ಗೆ ಹೇಳಿಲ್ಲ. ಅನೇಕ ಸಂದರ್ಭಗಳಲ್ಲಿ ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳು ಏನೇನಾಗಿವೆ ಎಂಬುದು ಯಾರಿಗೂ ಗೊತ್ತಿಲ್ಲ. ಮಂತ್ರಿಮಂಡಲದಲ್ಲಿ ಸಚಿವರುಗಳ ನಡುವೆ ಅನೇಕ ಜಗಳಗಳಾಗಿವೆ. ಶಿಕ್ಷಣ ಮತ್ತು ಜವಳಿ ಖಾತೆ ಸಚಿವರ ನಡುವೆ ಜಗಳವಾಗಿದೆ. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವೆಯರ ನಡುವೆ ಜಗಳ ಉಂಟಾಗಿದೆ.

ಶ್ರೀ ಎಂ.ಮಹದೇವ: ಮಾನ್ಯ ಅಧ್ಯಕ್ಷರೇ, ಕ್ಯಾಬಿನೆಟ್ ಸಭೆಯಲ್ಲಿ ಇದುವರೆವಿಗೂ ಕೂಡ ಯಾವುದೇ ಸಚಿವರು ಒಬ್ಬರಿಗೊಬ್ಬರು ಜಗಳವಾಡಿಲ್ಲ. ನಾವೆಲ್ಲರೂ ಸೌಹಾರ್ದತೆಯಿಂದ ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ. ನನ್ನ ಮತ್ತು ಮಾನ್ಯ ವಿಶ್ವನಾಥ್‌ರವರ ನಡುವೆ ಯಾವುದೇ ತರಹದ ಭಿನ್ನಾಭಿಪ್ರಾಯವಿಲ್ಲ. ನಾವೆಲ್ಲಾ ಪರಸ್ಪರ ವಿಶ್ವಾಸಿಗಳಾಗಿದ್ದೇವೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೇ, ನಾನು ಮಂತ್ರಿಗಳ ಮೇಲೆ ಆರೋಪ ಮಾಡಬೇಕು ಎಂಬ ಉದ್ದೇಶದಿಂದ ಈ ಮಾತನ್ನು ಹೇಳಲಿಲ್ಲ. ಪತ್ರಿಕೆಗಳಲ್ಲಿ ಬಂದಿರುವ ವರದಿಗಳನ್ನು ನಾನು ಇಲ್ಲಿ ಹೇಳುತ್ತಿದ್ದೇನೆ ಅಷ್ಟೆ. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವೆಯರ ನಡುವೆ, ನಗರಾಡಳಿತ ಮತ್ತು ಪೌರಾಡಳಿತ ಸಚಿವರ ನಡುವೆ ಈ ರೀತಿ ಮಂತ್ರಿಮಂಡಲದಲ್ಲಿ ಒಬ್ಬರಿಗೊಬ್ಬರ ನಡುವೆ ಯಾವ ರೀತಿ ಜಗಳಗಳಾಗಿವೆ ಎಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಕಳೆದ 17 ತಿಂಗಳುಗಳಿಂದಲೂ ಸರ್ಕಾರ ಯಾವುದೇ ನಿಗಮ ಅಥವಾ ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿಲ್ಲ. ಏತಕ್ಕಾಗಿ ಇನ್ನೂ ನೇಮಕ ಮಾಡಿಲ್ಲ? ನೇಮಕ ಮಾಡುತ್ತೀರೋ ಇಲ್ಲವೋ ಎಂಬುದನ್ನಾದರೂ ಸರ್ಕಾರ ಹೇಳಬೇಕಲ್ಲವೇ? ಕಳೆದ

ವರ್ಷದ ರಾಜ್ಯಪಾಲರ ಭಾಷಣದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ 7 ಹೊಸ ಮೊರಾರ್ಜಿದೇಸಾಯಿ ವಸತಿ ಶಾಲೆಗಳನ್ನು ತೆರೆಯುವುದಾಗಿ ಸರ್ಕಾರ ಹೇಳಿತ್ತು. ಈ ಬಾರಿಯ ರಾಜ್ಯಪಾಲರ ಭಾಷಣದಲ್ಲಿ ಅದರ ಬಗ್ಗೆ ಸರ್ಕಾರ ಪ್ರಸ್ತಾಪ ಮಾಡಿಲ್ಲ. 85 ಹೊಸ ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು ಎಂದು ಸರ್ಕಾರ ಕಳೆದ ಭಾಷಣದಲ್ಲಿ ಹೇಳಿತ್ತು. ಆದರೆ ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ 20 ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡಿದ್ದಾಗಿ ಸರ್ಕಾರ ಹೇಳಿಕೊಂಡಿದೆ. 85ಕ್ಕೂ ಮತ್ತು 20ಕ್ಕೂ ಸಾಕಷ್ಟು ವ್ಯತ್ಯಾಸವಿಲ್ಲವೇ? ಯಾವುದೇ ಸರ್ಕಾರ ಅಧಿಕಾರಕ್ಕೆ ಬರಬೇಕಾದರೆ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರ ಮತಗಳು ಹೆಚ್ಚಾಗಿ ಪಡೆಯಬೇಕಾದುದು ಅತ್ಯಾವಶ್ಯಕ. ಅವರ ಮತಗಳಿಂದಲೇ ನಾವಿಲ್ಲಿ ಅಧಿಕಾರಕ್ಕೆ ಬಂದಿದ್ದೇವೆ ಎಂಬುದನ್ನು ನೀವು ಮರೆಯಬಾರದು. ಕಳೆದ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಏನು ಹೇಳಿತ್ತೋ ಅದನ್ನು ಮತ್ತು ಪತ್ರಿಕೆಗಳಲ್ಲಿ ಬಂದಿರತಕ್ಕ ವರದಿಗಳನ್ನು ಮಾತ್ರ ನಾನಿಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಬೇರೆ ಮಾತುಗಳನ್ನು ನಾನು ಇಲ್ಲಿ ಹೇಳುತ್ತಿಲ್ಲ. ಅನೇಕ ಬಾರಿ ಹೊಸಬರೆಂದು ನಮ್ಮನ್ನು ಭಾಷಣಗಳಲ್ಲಿ ಚುಚ್ಚಿ ಹೇಳಲಾಗುತ್ತದೆ. ಇಂದು ಸದನದಲ್ಲಿ ಮುಖ್ಯಮಂತ್ರಿಗಳಾಗಲು ಅರ್ಹತೆ ಇರತಕ್ಕ ಅನೇಕ ಸದಸ್ಯರುಗಳು ಸದನದ ಎರಡೂ ಕಡೆಗಳಲ್ಲಿದ್ದಾರೆ. ಈ ರಾಷ್ಟ್ರದಲ್ಲಿ ಪ್ರಥಮ ಬಾರಿಗೆ ಶಾಸನ ಸಭೆಗೆ ಆರಿಸಿ ಬಂದಂತಹ ಒಬ್ಬ ವ್ಯಕ್ತಿ ಮುಖ್ಯಮಂತ್ರಿಯಾಗಿದ್ದಾನೆ. ಈ ರಾಷ್ಟ್ರದಲ್ಲಿ ಪ್ರಥಮ ಬಾರಿಗೆ ಆರಿಸಿ ಬಂದಂತಹ ಒಬ್ಬ ವ್ಯಕ್ತಿ ಪ್ರಧಾನಮಂತ್ರಿಗಳಾಗಿ ಐದು ವರ್ಷಗಳ ಕಾಲ ಆಡಳಿತ ನಡೆಸಿದ್ದಾರೆ. ಇದನ್ನು ನಾವು ಯಾರೂ ಕೂಡ ಮರೆಯುವಂತಿಲ್ಲ. ನೀವು ಪ್ರಥಮ ಬಾರಿಗೆ ಆರಿಸಿ ಬಂದಿದ್ದೀರಿ ನನ್ನದು 36 ವರ್ಷಗಳ ಸಂಸದೀಯ ಅನುಭವ ಇದೆ ಎಂದು ನಮ್ಮನ್ನು ಏಕೆ ಚುಚ್ಚುತ್ತೀರಿ? ನಾವು ಪಾಪ ಮಾಡಿ ಇಲ್ಲಿ ವಿಧಾನಸೌಧಕ್ಕೆ ಬಂದಿದ್ದೇವೆಯೇ? ನಾವೇನು ತಪ್ಪು ಮಾಡಿ ಇಲ್ಲಿಗೆ ಬಂದಿದ್ದೇವೆ? ಬ್ಯಾಕ್ ಬೆಂಚಸ್‌ನಲ್ಲಿ ಕುಳಿತಿರುವಂತಹ ನಮ್ಮಗಳಿಗೆ ಅನೇಕ ಬಾರಿ ಏಕೆ ಚುಚ್ಚಿ ಚುಚ್ಚಿ ಮಾತನಾಡುತ್ತೀರಿ? ತಾವುಗಳೇ ಯಾವಾಗಲೂ ಸಮಯ ಹೆಚ್ಚಾಗಿ ತೆಗೆದುಕೊಳ್ಳುತ್ತೀರಿ. ನಾವು ಮಾತನಾಡಲಿಕ್ಕೆ, ನಮ್ಮ ಪ್ರತಿಭೆಯನ್ನು ತೋರಿಸಲಿಕ್ಕೆ ಅವಕಾಶವನ್ನೇ ಕೊಡುವುದಿಲ್ಲ. ನಾವೇನು ಅಧ್ಯಯನ ಮಾಡಿ ಬರುವುದಿಲ್ಲವೇ? ನಾವೂ ಕೂಡ ಅಧ್ಯಯನ ಮಾಡಿಯೇ ಇಲ್ಲಿಗೆ ಬಂದಿರುತ್ತೇವೆ. ನಾವು ಕೂಡ ಅನೇಕ ಪೇಪರ್‌ಗಳನ್ನು ಓದಿ ವಿಷಯಗಳನ್ನು ತಿಳಿದುಕೊಂಡು ಇಲ್ಲಿಗೆ ಮಾತನಾಡಬೇಕೆಂಬ ಆಸೆಯಿಂದ ಬಂದಿದ್ದೇವೆ. ಅನೇಕ ಬಾರಿ ನನಗೆ ನೀವು ಪ್ರಥಮ ಬಾರಿಗೆ ಆರಿಸಿ ಬಂದಿದ್ದೀರಿ, ನಿಮಗೇನೂ ಗೊತ್ತಿಲ್ಲ ಎಂದು ಚುಚ್ಚಿ ಹೇಳಲಾಗಿದೆ. ಮೊದಲ ಬಾರಿಗೆ ಆರಿಸಿ ಬಂದರೂ ಅಥವಾ ಐದನೇ ಬಾರಿಗೆ ಆರಿಸಿ ಬಂದರೂ ಜನ ನಮ್ಮನ್ನು

ಆರಿಸಿದ್ದಾರೆ ಎಂಬುದನ್ನು ಯಾರೂ ಮರೆಯಬಾರದು. ಆದ್ದರಿಂದ ನಾವು ಇಲ್ಲಿಗೆ ಬಂದಿದ್ದೇವೆ. ಇನ್ನು ಸಮಾಜಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ. 1998ನೇ ಸಾಲಿನ ವಿದ್ಯಾರ್ಥಿ ವೇತನವನ್ನು ಈಗ ನೀಡಲಾಗಿದೆ. ಇದು ಬಡವರ ಬಗ್ಗೆ, ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಗ್ಗೆ ನಾವು ತೋರಿಸುತ್ತಿರುವ ಕಳಕಳಿಯಾಗಿದೆ. ಅದು ಒಂದೇ ಅಲ್ಲ, ತುಮಕೂರಿನ ಒಂದು ಹಾಸ್ಟೆಲ್‌ನಲ್ಲಿ ಊಟ ಮಾಡಿ 31 ಜನ ವಿದ್ಯಾರ್ಥಿಗಳು ಕಾಲರಾ ಬಂದು ಆಸ್ಪತ್ರೆಗೆ ಜಾಯಿನ್ ಆದರು. ತಮ್ಮದೇ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಜೆಎಸ್ ಹಳ್ಳಿ ಹಾಸ್ಟೆಲ್‌ನಲ್ಲಿ ಹಾಸ್ಟೆಲ್ ಕಟ್ಟಡ ಕಟ್ಟಿ ಆರು ತಿಂಗಳಾಯಿತು, ಸೋರುತ್ತಿದೆ. ಆ ಹಾಸ್ಟೆಲ್ ಬಗ್ಗೆ ನಮಗೆ ಕಾಳಜಿ ಇಲ್ಲ, ವಿದ್ಯಾರ್ಥಿಗಳಿಗೆ ನೀರಿನ ಸಂಪರ್ಕ ಇಲ್ಲ, ವಿದ್ಯುತ್ ಸಂಪರ್ಕ ಇಲ್ಲ, ಇದು ಅಲ್ಲಿಯ ಹಾಸ್ಟೆಲ್ ಪರಿಸ್ಥಿತಿ. ಸಮಾಜ ಕಲ್ಯಾಣ ಇಲಾಖೆಯಲ್ಲಿ 425 ಜನ ಮೇಲ್ವಿಚಾರಕರ ಹುದ್ದೆಗಳು ಖಾಲಿ ಇದ್ದರೂ ಇಲ್ಲಿಯವರೆಗೆ ಅದನ್ನು ತುಂಬುವುದಕ್ಕೆ ಸರ್ಕಾರ ಪ್ರಯತ್ನ ಮಾಡಿಲ್ಲ. ಅದರಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಶೌಚಾಲಯ ಇಲ್ಲ, ಆ ಹಾಸ್ಟೆಲ್‌ನಲ್ಲಿ ಇವತ್ತು ಪ್ರಗತಿ ಆ ರೀತಿ ಇದೆ. ವಿದ್ಯಾರ್ಥಿಗಳಿಗೆ ಏನು ಸೋಪು ಕೊಡುತ್ತಾರೆ, ಎಣ್ಣೆ ಕೊಡುತ್ತಾರೆ ಅದು ಅಲ್ಲಿಯ ಸಿಬ್ಬಂದಿ ವರ್ಗ ಮಾರಿಕೊಳ್ಳುತ್ತಾರೆ. ನನಗೆ ಬಂದಿರುವ ಸಾಕ್ಷ್ಯಾಧಾರ ಸಮೇತ ನಾನು ಹೇಳುತ್ತಿದ್ದೇನೆ. ಅಲ್ಲಿ ಜೈಲಿನಲ್ಲಿ ಖೈದಿಗಳಿಗೆ ನೋಡುವ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ನೋಡುವುದು ಪರಿಪಾಠವಾಗಿದೆ. ಇದು ವೈಯಕ್ತಿವಾಗಿ ಹೇಳುತ್ತಿಲ್ಲ. ಅನುಭವದಿಂದ ಎಲ್ಲರಿಗೂ ಗೊತ್ತಿರುವ ವಿಚಾರ ಹೇಳುತ್ತಿದ್ದೇನೆ. ಬೆಂಗಳೂರು ಮಹಾನಗರದಲ್ಲಿ ಹೆಕ್ಟೇರ್‌ಗೆ ಆರು ಕೋಟಿ ರೂಪಾಯಿಗಳ ಸೆಸ್ ವಸೂಲಿ ಮಾಡಿ ಪ್ರತ್ಯೇಕವಾಗಿ ವ್ಯವಸ್ಥೆ ಮಾಡುತ್ತೇವೆಂದು ಹೇಳಿದರು. ಇವತ್ತಿನ ತನಕ ಆ ಹಣ ತೆಗೆದು ಕೆಲಸ ಮಾಡಿಲ್ಲ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು 3.30ಕ್ಕೆ ಬರುವುದಾಗಿ ಪತ್ರ ಕಳುಹಿಸಿದ್ದಾರೆ. ಅಷ್ಟರಲ್ಲಿ ಯಾರ್‍ಯಾರು ಮಾತನಾಡುವವರಿದ್ದೀರಿ ಮಾತನಾಡಿ. ನಿನ್ನೆ ಬಿಎಸಿ ಮೀಟಿಂಗ್‌ನಲ್ಲಿ ಮೂರು ಗಂಟೆಗೆ ಮುಖ್ಯಮಂತ್ರಿಗಳಿಂದ ಉತ್ತರ ಎಂದು ತೀರ್ಮಾನವಾಗಿದೆ. ಅಲ್ಲಿಗೂ ಅರ್ಧ ಗಂಟೆ ಹೆಚ್ಚಿಗೆ ಕೊಟ್ಟಿದ್ದೇನೆ. ಜನರಲ್ ಇನ್‌ಫಾರ್ಮೇಷನ್ ಹೇಳುವುದು. ಮೂರುವರೆಗೆ ಅವರು ಬರುತ್ತಾರೆ. ಮೂರುವರೆವರೆಗೆ ಯಾರು ಬೇಕಾದರೂ ಮಾತನಾಡಿ. ನನ್ನ ಅಬ್ಜೆಕ್ಷನ್ ಇಲ್ಲ.

(ಶ್ರೀ ಯು.ಆರ್.ಸಭಾಪತಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: 15 ವರ್ಷಗಳ ಹಿಂದೆ ಬಂಟ್ವಾಳದ

ಉಪ್ಪಿನಗಟ್ಟೆಯಲ್ಲಿ ಒಂದು ವಿದ್ಯಾರ್ಥಿ ನಿಲಯ ನಿರ್ಮಿಸಿ ಇಲ್ಲಿಯತನಕ ಅದನ್ನು ಯಾರೂ ಆಕ್ರಮಿಸಿ ಕೊಂಡಿಲ್ಲ. ಸರ್ಕಾರವೂ ವಶಕ್ಕೆ ತೆಗೆದುಕೊಂಡಿಲ್ಲ. ಕಿಟಕಿ ಬಾಗಿಲು ಎಲ್ಲ ಕಿತ್ತುಕೊಂಡು ಹೋಗಿದ್ದಾರೆ. ಅಧಿಕಾರಿಗಳು ಏನು ಮಾಡುತ್ತಾರೆ? ಮಂತ್ರಿಯವರು ಇದ್ದಾರೆ, ನಾವು ಏನೋ ನೀವು ಕೇಳಿಸಿಕೊಳ್ಳುತ್ತೀರಿ ಎಂದು ಈ ಮಾತನ್ನು ಹೇಳುತ್ತಿಲ್ಲ. ಇಲ್ಲಿಯತನಕ ಆ ಹಾಸ್ಟೆಲ್ ಕಟ್ಟಡ ಉಪಯೋಗ ಇಲ್ಲದೆ ಹಾಗೆಯೇ ಬಿದ್ದಿದೆ. ಇದು ಸಮಾಜ ಕಲ್ಯಾಣ ಇಲಾಖೆಯಲ್ಲಿ ನಡೆಯುತ್ತಿರುವಂತಹ ಒಂದು ಪ್ರಗತಿ. ಕರ್ನಾಟಕ ರಾಜ್ಯದಲ್ಲಿ 2327 ಘೋಷಿತ ಕೊಳಚೆ ಪ್ರದೇಶ ಇದೆ, 1300 ಅಘೋಷಿತ ಕೊಳಚೆ ಪ್ರದೇಶಗಳಿವೆ. ಒಟ್ಟು ಸೇರಿದರೆ 3600 ಕೊಳಚೆ ಪ್ರದೇಶಗಳಿವೆ. ಅದಕ್ಕೆ ಕೇಂದ್ರದಿಂದ ಹಣ ಬರುತ್ತದೆ. ಪ್ರತಿ ವರ್ಷ ಕೇಂದ್ರದಿಂದ ಬರುವ ಹಣ ತಾವು ತಮ್ಮ ಹಣಕಾಸು ಇಲಾಖೆಗೆ ಹಾಕಿಕೊಂಡು ಆ ಕೊಳಚೆ ಪ್ರದೇಶಗಳಿಗೆ ಎಷ್ಟು ಹಣ ಬೇಕಾಗಿದೆ ಅಷ್ಟು ಹಣ ಕೊಡುತ್ತಿಲ್ಲ. ಯಾವ ಹಣ ಬರುತ್ತದೆ ಆ ಹಣ ತಾವು ಉಪಯೋಗ ಮಾಡಿಕೊಂಡು ಅವರಿಗೆ ಭಿಕ್ಷೆ ಕೊಟ್ಟ ಹಾಗೆ ಐದು ಕೋಟಿ, ಆರು ಕೋಟಿ, 20 ಕೋಟಿಯಂತೆ ಕೊಡುತ್ತಿದ್ದೀರಿ. ಅಲ್ಲಿಂದ ಕಳೆದ ವರ್ಷ 47 ಕೋಟಿ ರೂಪಾಯಿಗಳು ತೆಗೆದುಕೊಂಡು ಬಂದರೆ ಅದಕ್ಕಾಗಿ ಖರ್ಚು ಮಾಡಿರುವುದು 25 ಕೋಟಿ ರೂಪಾಯಿಗಳು. ಬಡವರ ಬಗ್ಗೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಮಾತನಾಡುತ್ತೀರಿ. ಆದರೆ ಆ ಬಡವರ ಬಗ್ಗೆ ಏನು ಹಣ ಕೇಂದ್ರದಿಂದ ಬಂದಿದೆ ಅದು ಸರಿಯಾಗಿ ಉಪಯೋಗ ಮಾಡಿಲ್ಲ. ನಾನು ಬೀದರ್‌ಗೆ ಹೋಗಿದ್ದೆ, ಬೀದರ್‌ಗೆ 25 ಜನ ಶಾಸಕರೂ ಹೋಗಿದ್ದೆವು. 25,000 ಜನ ಬಂದಿದ್ದರು. ಸಂತಾಪುರದಿಂದ ಸಂಗಂ ರೋಡ್‌ಗೆ ಏನು ಆರು ಕಿ.ಮಿ. ಡಾಂಬರೀಕರಣ ಆಗಬೇಕಾಗಿತ್ತು, 70 ಲಕ್ಷ ರೂಪಾಯಿಗಳ ಡೂಪ್ಲಿಕೇಟ್ ಬಿಲ್ ಮಾಡಿ ಹಣ ತೆಗೆದುಕೊಂಡಿದ್ದಾರೆಂದು ಮಾನ್ಯ ಧರ್ಮಸಿಂಗ್‌ರವರು ಹೇಳಿದ್ದಾರೆ. 15 ದಿವಸಗಳೊಳಗೆ ಆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಅಲ್ಲಿ ಇಲ್ಲಿಯ ತನಕ ಏನು ಕ್ರಮ ತೆಗೆದುಕೊಂಡಿದ್ದೀರಿ? ಅಲ್ಲಿ ಪ್ರಭಾವಿ ರಾಜಕಾರಣಿ ಮಂತ್ರಿಗಳು ಅವರು ಅವರ ಮಗ ಇಬ್ಬರೂ ಶಾಮೀಲಾಗಿದ್ದಾರೆ. ಅವರ ಮೇಲೆ ಎಫ್‌ಐಆರ್ ಫೈಲ್ ಮಾಡಿಸಿ, ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ? ಹೌಸಿಂಗ್ ಇಲಾಖೆಯ ಬಗ್ಗೆ ತಾವು ಅನೇಕ ಬಾರಿ ಹೇಳಿದ್ದೀರಿ. ಎಂಟು ಲಕ್ಷ ಮನೆಗಳನ್ನು ಮೂರು ತಿಂಗಳ ಅವಧಿಯಲ್ಲಿ ನಾವು ಕಟ್ಟಿಕೊಡುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ತಾವು ಹೇಳಿದ್ದೀರಿ. 16,000 ಮನೆಗಳನ್ನು ನಾವು ನಿರ್ಮಾಣ ಮಾಡಿದ್ದೇವೆಂದು ಹೇಳಿದ್ದೀರಿ. ಹಾಗಾದರೆ ಎರಡು ಲಕ್ಷ ಮನೆಗಳ ಭರವಸೆ ಏಕೆ ಕೊಟ್ಟಿರಿ? ಮೂರು ತಿಂಗಳ ಅವಧಿಯಲ್ಲಿ ಎರಡು ಲಕ್ಷ ಮನೆಗಳನ್ನು ಕೊಡುತ್ತೇವೆಂದು ಹೇಳಿ, ಏತಕ್ಕೋಸ್ಕರ ಸುಳ್ಳು ಆಶ್ವಾಸನೆ ಈ ರಾಜ್ಯದ ಜನತೆಗೆ ನೀಡಿದಿರಿ? ತಾವು ಹೇಳಿದ ಪ್ರಕಾರ ಮಾಡಬೇಕಾಗಿತ್ತು, ನಾವೂ ಕೂಡ ಪ್ರಶಂಸೆ

ಮಾಡುತ್ತಿದ್ದೆವು. ತಾವು ಮಾಡಿದ ಒಳ್ಳೆಯ ಕೆಲಸವನ್ನು ನಾವು ಒಳ್ಳೆಯದು ಎಂದು ಹೇಳುತ್ತೇವೆ. ಕೆಟ್ಟದ್ದು ಮಾಡಿದ್ದರೆ ಕೆಟ್ಟ ಕೆಲಸ ಮಾಡಿದ್ದೀರಿ ಎಂದು ಹೇಳುವುದಕ್ಕೆ ನಾವು ಹೇಳುತ್ತಿದ್ದೇವೆ. ತಾವೂ ಹೇಳುತ್ತಿದ್ದೀರಿ. ಹೌಸಿಂಗ್ ಇಲಾಖೆಯಲ್ಲಿ ಮಂತ್ರಿಗಳ ಬಗ್ಗೆ ಅನೇಕ ಬಾರಿ ಆರೋಪ ಬಂದಿದೆ. ಆ ಮಂತ್ರಿ ಅವ್ಯವಹಾರ ನಡೆಸಿದ್ದಾರೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ಗುಲ್ಬರ್ಗ ನಗರದಲ್ಲಿ ಮತ್ತು ಅನೇಕ ಕಡೆಗಳಲ್ಲಿ ಮಂತ್ರಿಗಳ ಮೇಲೆ ಆರೋಪ ಬಂದಿದೆ. ಆ ಆರೋಪಗಳ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಮಂತ್ರಿಗಳು ಎಲ್ಲೂ ಕೂಡ ಕ್ಲ್ಯಾರಿಫಿಕೇಷನ್ ಕೊಟ್ಟಿಲ್ಲ. ನಾನು ಒಬ್ಬ ನಿರಪರಾಧಿ ಎಂದು ಎಲ್ಲೂ ಕೂಡ ಹೇಳಲಿಲ್ಲ.

ಛೇರ್ಮನ್: ತಾವು ನಿರ್ದಿಷ್ಟವಾಗಿ ಆರೋಪ ಮಾಡಿದ್ದು ಉಂಟಾ? ಪೇಪರ್‌ನಲ್ಲಿ ಬಂದಿದೆ ಎಂದು ಹೇಳುವುದಕ್ಕಾಗುವುದಿಲ್ಲ. ತಾವು ಏನಾದರೂ ನಿರ್ದಿಷ್ಟವಾಗಿ ಆರೋಪ ಮಾಡಿದ್ದೀರಾ? ಪೇಪರ್‌ನಲ್ಲಿ ಬರುವುದರ ಆಧಾರದ ಮೇಲೆ ನಾವು ಚರ್ಚೆ ಮಾಡುವುದಕ್ಕಾಗುವುದಿಲ್ಲ. ನಿರ್ದಿಷ್ಟ ಆರೋಪ ಇದ್ದರೆ ಕಳಹಿಸಿ ಕೊಡಿ ತನಿಖೆ ಮಾಡೋಣ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಕಳುಹಿಸಿ ಕೊಡುತ್ತೇನೆ. ಅನೇಕ ಭಾಗಗಳಲ್ಲಿ ಹೌಸಿಂಗ್ ಬೋರ್ಡ್ ಕಟ್ಟಿರುವ ಮನೆಗಳಲ್ಲಿ ಚನ್ನಪಟ್ಟಣದಲ್ಲಿ 14 ವರ್ಷಗಳಾಗಿವೆ. ಇಲ್ಲಿಯ ತನಕ ಆ ಮನೆಗಳಲ್ಲಿ ಕೇವಲ 45 ಮನೆಗಳನ್ನು ಕಟ್ಟಿದ್ದಾರೆ, ನಾಲ್ಕು ಮನೆಗಳಲ್ಲಿ ಜನ ಇದ್ದಾರೆ ನಲವತ್ತು ಮನೆಗಳಲ್ಲಿ ಯಾರೂ ವಾಸ ಮಾಡುತ್ತಿಲ್ಲ. ಅದಕ್ಕೆ ಯಾರು ಹೊಣೆಗಾರರು? ಸರ್ಕಾರದ ಖಜಾನೆ ಯಾವ ರೀತಿ ಲೂಟಿ ಆಗುತ್ತಿದೆ? ಯಾರು ಅಸಮರ್ಪಕರು, ಯಾರಿಂದ ಇದು ಆಗುತ್ತಿದೆ? ನಾನು ಮಂತ್ರಿಗಳ ಮೇಲೆ, ಸರ್ಕಾರದ ಮೇಲೆ ಆರೋಪ ಮಾಡಬೇಕೆಂದು ಹೇಳುತ್ತಿಲ್ಲ, ಅಧಿಕಾರಿಗಳು ಸಮರ್ಥವಾಗಿ ಕೆಲಸ ಮಾಡುತ್ತಿದ್ದಾರಾ ಎಂದು ನಾನು ಕೇಳುತ್ತಿದ್ದೇನೆ. ಅಧಿಕಾರಿಗಳು ರಾಜ್ಯದಲ್ಲಿರುವ ಸಂಗತಿಯನ್ನು ತಮಗೆ ತಿಳಿಸಬೇಕಾಗಿದೆ. ಅದು ಅವರ ಕರ್ತವ್ಯ. ಅಧಿಕಾರಿಗಳು ತಮಗೆ ಬಂದು ಹೇಳಿದಾಗ ಅದು ತಮಗೆ ಗೊತ್ತಾಗುತ್ತದೆ. ಏಕೆ ಹೀಗೆ ಮಾಡುತ್ತಿದ್ದೀರಿ ಎಂದು ತಾವು ಕೇಳಬೇಕಾಗುತ್ತದೆ. ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ತಾವು ಅನೇಕ ಸಂದರ್ಭಗಳಲ್ಲಿ ಪಾರದರ್ಶಕತೆ ಬಗ್ಗೆ ಮಾತನಾಡಿದ್ದೀರಿ. ನಾವು ಅದನ್ನು ಸ್ವಾಗತ ಮಾಡುತ್ತೇವೆ. ವಿರೋಧ ಪಕ್ಷದ ನಾಯಕರು ಪ್ರಶ್ನೆ ಕೇಳಿದರೆ ಉತ್ತರ ಕೊಡಬಾರದು ಎಂದು ವಿಧಾನ ಸಭೆಯಲ್ಲಿ ಕೇಳುವುದು, ಪಾರದರ್ಶಕತೆ ಇದೆಯಾ? ನಾವು ನಿಮಗೆ ಕೇಳುವುದು ಈ ರೀತಿ ವಿರೋಧ ಪಕ್ಷದ ನಾಯಕರಿಗೆ ಉತ್ತರ ಕೊಡಬೇಕಾಗಿರುವುದು ಪಾರದರ್ಶಕತೆಯಾ? ಬೆಂಗಳೂರು ಮಹಾ ನಗರದಲ್ಲಿ 60 ಲಕ್ಷ ಜನ ವಾಸ

ಮಾಡುತ್ತಿದ್ದಾರೆ. ಅವರು ಐದೂವರೆ ಸಾವಿರ ಕೋಟಿ ರೂಪಾಯಿಗಳು ತೆರಿಗೆ ರೂಪದಲ್ಲಿ ಹಣ ಪಾವತಿ ಮಾಡುತ್ತಿದ್ದಾರೆ. ಬೆಂಗಳೂರು ಮಹಾ ನಗರದಲ್ಲಿ ರಸ್ತೆಗಳಿಗೆ ಪ್ರತಿ ವರ್ಷ ಡಾಂಬರೀಕರಣ ಹಾಕುತ್ತಾರೆ. ಯಾವ ರೀತಿ ಹಾಕುತ್ತಾರೆಂದರೆ ಹೆಣ್ಣು ಮಕ್ಕಳು ಪೌಡರ್ ಹಾಕಿಕೊಂಡು ಸಂಜೆ ಮುಖ ತೊಳೆದರೆ ಯಾವ ರೀತಿ ಪೌಡರ್ ಹೋಗಿ ಬಿಡುತ್ತದೋ ಆ ರೀತಿ ಹಾಕುತ್ತಾರೆ. ಆಸ್‌ಫಾಲ್ಟಿಂಗ್ ಹಾಕುವುದು ಎಷ್ಟು ದಿವಸ ಇರುತ್ತದೆ, ಮಳೆಗಾಲ ಬರುವ ತನಕ ಇರುತ್ತದೆ. ಮತ್ತೆ ಹೋಯಿತು ಮತ್ತೆ ಹಾಕಿದಿರಿ. ನಾವು ಇಲ್ಲಿ ಅನೇಕ ಬಾರಿ ಆರೋಪ ಮಾಡಿದ್ದೇವೆ. ಬಾಂಡ್ ವಿಚಾರದಲ್ಲಿ ಹಗರಣ ಆಗಿದೆ ಎಂದು ಹೇಳಿದರೆ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಲಿಲ್ಲ. ಆದರೆ ಒಂದೇ ಒಂದು ಬಾರಿ ಮೊನ್ನೆ ಹೇಳಿದರು. ಬಾಂಡ್ ಯೋಜನೆಯಲ್ಲಿ ಹಗರಣ ಆಗಿದೆ ಎಂದು ಅವರೇ ಪತ್ರಿಕೆಯಲ್ಲಿ ಹೇಳಿದರು. ನಾನು ತುಂಬ ಸಂತೋಷ ಪಡುತ್ತೇನೆ. ಅಧಿಕಾರಿಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಅವರು ಛೀಮಾರಿ ಹಾಕಿದರು. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದಿಸುತ್ತೇನೆ. ಆ ರೀತಿ ಛೀಮಾರಿ ಹಾಕುವುದರಿಂದ ಕೆಲಸ ಆಗುತ್ತಾ? ತಪ್ಪಿತಸ್ಥರಿಗೆ ಶಿಕ್ಷೆಗೆ ಒಳಪಡಿಸಿ. ದಾರಿಗೆ ಬರುವುದಕ್ಕೆ ಸಾಧ್ಯವಾಗುತ್ತದೆ. ನಾವು ಯಾರಿಗೆ ಸಸ್ಪೆಂಡ್ ಮಾಡುತ್ತೇವೆ, ಅವರಿಗೆ ಪುನಃ ನೇಮಕ ಮಾಡುವ ವ್ಯವಸ್ಥೆ ಇರುವಾಗ ಯಾರಿಗೆ ನಾವು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಮಳೆಗಾಲ ಬಂದರೆ ಕೋಟಿ ಕೋಟಿ ರೂಪಾಯಿಗಳು ನಷ್ಟವಾಗುತ್ತವೆ ಶಾಲೆಗಳಲ್ಲಿ ಶೌಚಾಲಯಗಳು ಮಲ ಮೂತ್ರ ವಿಸರ್ಜನೆ ಮಾಡುವುದಕ್ಕೆ ಉಪಯೋಗವಾಗುತ್ತಿಲ್ಲ.

3. 10 ಪಿಎಂ

ಆ ಶಾಲೆಗಳಿಗೆ ಅನೇಕ ವರ್ಷಗಳಿಂದ ಕಾಂಪೌಂಡ್ ಇಲ್ಲದೇ ಅಲ್ಲಿ ಏನು ನಡೆಯಬಾರದೋ ಅಂಥ ಕೆಟ್ಟ ಕೆಲಸಗಳೆಲ್ಲಾ ನಡೆಯುತ್ತಿದೆ. ಬೆಂಗಳೂರು ನಗರದಲ್ಲಿರುವ 341 ಪಾರ್ಕ್‌ಗಳಿಗೆ ಕಾಂಪೌಂಡ್ ಇಲ್ಲ, ಗಿಡಗಳೂ ಇಲ್ಲದೇ ಇದರಲ್ಲಿ ಅನೇಕ ಪಾರ್ಕ್‌ಗಳು ಕೇವಲ ಬಯಲು ಪ್ರದೇಶವಾಗಿ ಪರಿವರ್ತನೆಯಾಗಿದೆ. ಇನ್ನು ಒಳ್ಳೆಯ ಯೋಜನೆ ಎಸ್.ಎ.ಎಸ್ ಎಂದು ತಾವು ಕಾರ್ಯ ರೂಪಕ್ಕೆ ತಂದರೆ ಇಂದು ಅಧಿಕಾರಿಗಳು ಎಸ್.ಎ.ಎಸ್.ನಲ್ಲಿ ಸುಲಿಗೆ ಮಾಡುತ್ತಿದ್ದಾರೆ. ಇದು ಮುಖ್ಯಮಂತ್ರಿಗಳ ಗಮನಕ್ಕೆ ಹೋಗಬೇಕು. ಹಣವನ್ನು ದರೋಡೆ ಮಾಡುತ್ತಿದ್ದಾರೆ. ಇದು ಬೆಂಗಳೂರು ನಗರದಲ್ಲಿ ನಡೆಯುತ್ತಿದೆ. ಇಂದು ಕಾನೂನು ಮಂತ್ರಿಗಳು ಬಹಳ ತಿಳಿದಿರುವವರೇ ಆಗಿದ್ದಾರೆ. ಆದರೆ ಕಾನೂನು ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ನಮ್ಮ ರಾಜ್ಯಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ, ಹೈಕೋರ್ಟ್ ಕೂಡ ಮೊನ್ನೆ ಮೊನ್ನೆ ತಾನೇ ಛೀಮಾರಿ ಹಾಕಿದಾಗ ನಮಗೆ ತುಂಬಾ ನೋವಾಯಿತು. ಇಂಥ ಪ್ರತಿಭಾನ್ವಿತ ಮಂತ್ರಿಗಳು ಇದ್ದರೂ ಕೂಡ ರಾಜ್ಯ ಸರ್ಕಾರ ಛೀಮಾರಿ ಹಾಕಿಸಿಕೊಳ್ಳುವ ಮಟ್ಟಕ್ಕೆ

ಬಂತಲ್ಲ ಎಂದು ನಮಗೆ ನೋವಾಯಿತು. ಇನ್ನು 75 ವರ್ಷ ವಯಸ್ಸಿನ ಹಿರಿಯರಾಗಿರುವ ಅರಣ್ಯ ಸಚಿವರು ಬಹಳ ಅನುಭವಸ್ಥರು, ಪಾರ್ಲಿಮೆಂಟ್ ಸದಸ್ಯರಾಗಿದ್ದವರೂ ಮತ್ತು ಸಭಾಧ್ಯಕ್ಷರಾಗಿಯೂ ಕೆಲಸ ಮಾಡಿದ ಅನುಭವವುಳ್ಳವರು. ಮೊನ್ನೆ ತಾನೇ ಬಸಂತರೆಡ್ಡಿಯವರು ಮಾತನಾಡಿ ಅರಣ್ಯವನ್ನೇ ಬೆಳಸದೇ ದುಡ್ಡನ್ನು ಲೂಟಿ ಮಾಡುತ್ತಿದ್ದಾರೆ ಎಂದು ಈ ಸದನದಲ್ಲಿ ಹೇಳಿದ್ದಾರೆ. ಇನ್ನು ನಮಗೆ ಒಬ್ಬ ಶಿಕ್ಷಣ ಮಂತ್ರಿಗಳು ಇದ್ದಾರೆ, ಆದರೆ ಶಾಲೆಗಳಿಗೆ ಬೇಕಾದ 11 ಸಾವಿರ ಕೊಠಡಿಗಳಿಲ್ಲ. ಉಪಾಧ್ಯಾಯರುಗಳಿಲ್ಲ, ಪ್ರಾಂಶುಪಾಲರುಗಳಿಲ್ಲ. ಇನ್ನು ಆಹಾರ ಮಂತ್ರಿಗಳಿದ್ದಾರೆ, ನಮ್ಮ ರೈತರ ಉತ್ಪನ್ನಗಳನ್ನು ಖರೀದಿ ಮಾಡಿ ಎಂದರೆ ಖರೀದಿ ಕೇಂದ್ರಗಳಿಲ್ಲವಾಗಿದೆ. ಇನ್ನು ನೀರಾವರಿ ಸಚಿವರು ಇದ್ದಾರೆ. ಆಂಧ್ರಕ್ಕೆ ಮತ್ತು ತಮಿಳುನಾಡಿಗೆ ನೀರು ಹೋಗುತ್ತಿದೆ, ಆದರೆ ನಮ್ಮ ಕರ್ನಾಟಕ್ಕೆ ನೀರು ಬರುವುದೇ ಇಲ್ಲ. ಇನ್ನು ಇಂಧನ ಮಂತ್ರಿಗಳು ಇದ್ದಾರೆ. ಆದರೆ ಇಡೀ ರಾಜ್ಯಕ್ಕೆ ಇಂದು ಇಂಧನವಿಲ್ಲದೇ ಕತ್ತಲಲ್ಲಿ ಇರುವಂತಾಗಿದೆ.

ಛೇರ್ಮನ್: ನಾಯ್ಡುರವರೆ, ಭಾಷಣವನ್ನು ಬೇಗ ಮುಗಿಸಿ. ಮುಖ್ಯಮಂತ್ರಿಗಳು ಉತ್ತರ ಕೊಡಲು ಇನ್ನೇನು ಬರುತ್ತಾರೆ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು: ಸನ್ಮಾನ್ಯ ಅಧ್ಯಕ್ಷರೆ, ತಾವು ಬೇಗ ಭಾಷಣ ಮುಗಿಸಿ ಎಂದು ಹೇಳಿದ್ದೀರಿ. ತಾವು ಇಷ್ಟು ಹೊತ್ತು ರಾಜ್ಯಪಾಲರ ಭಾಷಣದ ಮೇಲೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

\+ ಶ್ರೀ ಎನ್.ಚೆಲುವರಾಯಸ್ವಾಮಿ(ನಾಗಮಂಗಲ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣವನ್ನು ನಾವು ಗಮನಿಸಿ ನೋಡಿದಾಗ ಇದು ಕೇವಲ ಪತ್ರಿಕೆಗಳಲ್ಲಿ ಪ್ರಚಾರಕ್ಕೋಸ್ಕರ ತಯಾರಿಸಿರುವ ಭಾಷಣ ಎಂದು ನಮಗನ್ನಿಸುತ್ತಿದೆ. ಭಾಷಣದಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿದೇವೆ, ಕೇವಲ ಒಂದೆರಡು ಘಟನೆಗಳನ್ನು ಹೊರತುಪಡಿಸಿದರೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ ಎಂದು ಹೇಳಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿಯೇ ಪ್ರತಿ ಎರಡು ತಿಂಗಳಿಗೊಮ್ಮೆ ಏನಾದರೂ ಒಂದು ಘಟನೆ ನಡೆಯುತ್ತಲೇ ಇರುತ್ತದೆ. ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿಯೇ ಅಧಿಕಾರಿಗಳ ನಿರ್ಲಕ್ಷ್ಯತನದಿಂದಾಗಿ ಈ ರೀತಿಯ ಘಟನೆಗಳು ನಡೆಯುತ್ತಿದ್ದರೆ ಇದನ್ನು ಹೇಗೆ ಡಿಫೆಂಡ್ ಮಾಡಿಕೊಂಡು ಸರ್ಕಾರ ಉತ್ತರ ಕೊಡುತ್ತದೋ ಎಂಬುದನ್ನು ಸರ್ಕಾರ ಉತ್ತರ ಕೊಡುವಾಗ ನಾವು ಕೇಳಬಯಸುತ್ತೇವೆ. ಕೆ.ಆರ್.ಪೇಟೆ ಇರಬಹುದು, ಮಂಡ್ಯ ಇರಬಹುದು, ಮದ್ದೂರು ಇರಬಹುದು, ಇಲ್ಲೆಲ್ಲಾ ಪದೇ ಪದೇ ಅಹಿತಕರ ಘಟನೆಗಳ ಸನ್ನಿವೇಶಗಳು ನಡೆಯುವುದನ್ನು ತಾವು

ನೋಡಿರಬಹುದು. ಇಂದು ಪೋಲೀಸ್ ಇಲಾಖೆಯಲ್ಲಿ ಒಂದು ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಇಂದು ಅಧಿಕಾರದಲ್ಲಿರುವವರು ಮತ್ತು ಶಿಫಾರಸ್ಸು ಇರತಕ್ಕಂಥ ಜನಗಳನ್ನು ಬಿಟ್ಟು ಬೇರೆ ಸಾಮಾನ್ಯ ಜನರು ಪೋಲೀಸ್ ಸ್ಟೇಷನ್‌ಗೆ ಹೋದರೆ ಪೋಲೀಸಿನವರು ಉಪಯೋಗಿಸುವ ಭಾಷೆಯನ್ನು ತಾವು ದಯಮಾಡಿ ತಿಳಿದುಕೊಳ್ಳಬೇಕು. ರೈತರು, ಸಾಮಾನ್ಯ ಮನುಷ್ಯರು ಅಥವಾ ಮಹಿಳೆಯರು ಪೋಲಿಸ್ ಸ್ಟೇಷನ್‌ಗೆ ಹೋದರೆ ಪೋಲೀಸಿನವರು ಉಪಯೋಗಿಸುವ ಭಾಷೆಯನ್ನು ನೋಡಿದರೆ ನಿಜವಾಗಿಯೂ ನಾವೆಲ್ಲರೂ ತಲೆತಗ್ಗಿಸಬೇಕಾಗುತ್ತದೆ. ಇಂಥ ಸನ್ನಿವೇಶ ಪೋಲೀಸ್ ಇಲಾಖೆಯಲ್ಲಿದೆ. ಇದರ ಬಗ್ಗೆ ಗೃಹ ಸಚಿವರು ಪೋಲೀಸ್ ಇಲಾಖೆಗೆ ಸೂಕ್ತ ನಿರ್ದೇಶನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ರೈತರ ಬೆಳೆಗಳ ಬೆಲೆಗಳು ಕುಸಿದಿರುವಾಗ ಉತ್ತರ ಕರ್ನಾಟಕದ ಕಡೆ ಮೆಕ್ಕೆ ಜೋಳವನ್ನು ಸರ್ಕಾರ ಬೆಂಬಲ ಬೆಲೆಯಲ್ಲಿ ಖರೀದಿ ಮಾಡಿತು. ಇಂದು ನಮ್ಮ ಮಂಡ್ಯದಲ್ಲೂ ಮತ್ತು ದಕ್ಷಿಣ ಭಾಗದಲ್ಲೂ ಟಮೋಟೋ, ಆಲೂಗೆಡ್ಡೆ, ಕೋಸು ಮತ್ತಿನ್ನಿತರ ರೈತರ ಬೆಳೆಗಳಿಗೆ ಒಂದು ಕೆ.ಜಿ.ಗೆ 50 ಪೈಸೆ ಕೂಡ ಸಿಗದಂಥ ಪರಿಸ್ಥಿತಿ ಇದೆ. ಇಲ್ಲಿಯೂ ಕೂಡ ಇಂಥ ತರಕಾರಿಗಳನ್ನು ಸರ್ಕಾರ ಖರೀದಿ ಮಾಡಲು ಏಕೆ ಮನಸ್ಸು ಮಾಡಲಿಲ್ಲ? ಮಂಡ್ಯ, ಮೈಸೂರಿನವರು ರೈತರುಗಳಲ್ಲವೇ? ಇಂದು ತೆಂಗಿನಕಾಯಿ, ಕೊಬ್ಬರಿ ಬೆಲೆ ಯಾವ ಮಟ್ಟಕ್ಕೆ ಕುಸಿದಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ತೆಂಗಿನ ಗಿಡಕ್ಕೆ ನುಸಿರೋಗ ಬಂದು ಕಳೆದ ಒಂದೂವರೆ ವರ್ಷಗಳಿಂದ ಇದನ್ನು ತಡಗಟ್ಟಲು ಸಮರ್ಪಕವಾಗಿ ಸಾಧ್ಯವಾಗಲಿಲ್ಲ. ಸರ್ಕಾರ ಇದರ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವಲ್ಲಿ ಏಕೆ ನಿರ್ಲಕ್ಷ್ಯವನ್ನು ಮಾಡಿತು? ಅದೇ ಒಬ್ಬ ಅಬಕಾರಿ ಕಾಂಟ್ರಾಕ್ಟರ್ 400 ಕೋಟಿ ರೂಪಾಯಿಗಳ ಸಾಲವನ್ನು ಸರ್ಕಾರಕ್ಕೆ ಕೊಡಬೇಕಾಗಿದ್ದರೆ ಅದರಲ್ಲಿ 250 ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿ ಕೇವಲ 150 ಕೋಟಿ ರೂಪಾಯಿಗಳ ಸಾಲವನ್ನು ಕಟ್ಟಿದರೆ ಸಾಕು ಎಂದು ತೀರ್ಮಾನ ಮಾಡುತ್ತಾರೆ. ಆದರೆ ರೈತರ ಬೆಳೆಗಳು ಹಾಳಾದಾಗ ಅಥವಾ ಅವರ ಬೆಳೆಗಳ ಬೆಲೆಗಳು ಕುಸಿದಿರುವಾಗ ರೈತರು ತೆಗೆದುಕೊಂಡ ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸಲಾಗುವುದಿಲ್ಲವೆಂದು ಸರ್ಕಾರ ನಿರ್ಧಿಷ್ಟವಾಗಿ ಹೇಳುತ್ತಿದೆ. ಕೇವಲ ಬಡ್ಡಿಯನ್ನಾದರೂ ಮನ್ನಾ ಮಾಡಿ ಎಂದರೆ ಅದನ್ನೂ ಮನ್ನಾ ಮಾಡುವುದಕ್ಕಾಗುವುದಿಲ್ಲವೆನ್ನುತ್ತಾರೆ. ಆದರೆ ಕೆಲವು ಸಂದರ್ಭದಲ್ಲಿ ನಾವು ರೈತರ ಪರವಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತೀರಿ. ಇಂದು ಕೇಂದ್ರ ಸರ್ಕಾರ ತನ್ನ ಜವಾಬ್ದಾರಿಯನ್ನು ಹೇಗೆ ಮಾಡುತ್ತದೋ ಹಾಗೆಯೇ ರಾಜ್ಯ ಸರ್ಕಾರ ಕೂಡ ತನ್ನ ಜವಾಬ್ದಾರಿಯನ್ನು ನಿಭಾಯಿಸಬೇಕಾಗುತ್ತದೆ. ತಮ್ಮ ಸರ್ಕಾರಕ್ಕೆ ಬಹುಮತವಿದೆ, ತಮ್ಮ ಪಕ್ಷಗಳವರನ್ನೆ ಜನರು ಹೆಚ್ಚು ಎಂ.ಪಿಗಳನ್ನಾಗಿ ಆಯ್ಕೆ ಮಾಡಿದ್ದಾರೆ. ತಮ್ಮ ಪಕ್ಷದ ಎಂ.ಪಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಒತ್ತಡವನ್ನು ತಂದು ರಾಜ್ಯದ ರೈತರ ಕಷ್ಟವನ್ನು

ಪರಿಹರಿಸಲು ಸಂಪೂರ್ಣವಾಗಿ ಜವಾಬ್ದಾರಿಕೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಂದು ಕೆ.ಇ.ಬಿ.ಯಿಂದ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ರೈತರಿಗೆ ಮೂರು ವರ್ಷ ಹಿಡಿಯುತ್ತದೆ. ನೀವು ವಿದ್ಯುತ್ ದರವನ್ನು ಎಷ್ಟು ಬೇಕಾದರೂ ಮಾಡಿ, ಜನರು ಕಟ್ಟುವುದಕ್ಕೆ ತಯಾರಿದ್ದಾರೆ, ಆದರೆ ಇಂದು ವಿದ್ಯುತ್ ಸರಬರಾಜನ್ನು ಅರ್ಧ ಗಂಟೆ ಕೂಡ ಸರಿಯಾಗಿ ಮಾಡುವುದಿಲ್ಲ. ಹತ್ತು ನಿಮಿಷ ಕರೆಂಟ್ ಬಂದರೆ ಇನ್ನತ್ತು ನಿಮಿಷ ಕರೆಂಟ್ ಆಫ್ ಮಾಡಿಬಿಡುತ್ತಾರೆ. ಒಂದು ತೋಟಕ್ಕೆ ಪಂಪ್‌ಸೆಟ್ ಉಪಯೋಗಿಸಿ ನೀರು ಬಿಡಲು ಪ್ರಾರಂಭಿಸಿದರೆ ಒಂದು ಭಾಗದಿಂದ ಕೊನೆಯ ಭಾಗಕ್ಕೆ ನೀರು ಹರಿಸುವುದರೊಳಗೆ ಹತ್ತು ಬಾರಿಯಾದರೂ ಕರೆಂಟ್ ಬರುವುದು ಆಫ್ ಆಗುವುದು ಆಗುತ್ತಿರುತ್ತದೆ. ಇದರಿಂದಾಗಿ ತೆಂಗಿನ ತೋಟಕ್ಕೆ ರೈತರು ಪೂರ್ಣವಾಗಿ ನೀರು ಹರಿಸಲು ಕೂಡ ಆಗುತ್ತಿಲ್ಲ. ಇನ್ನು ಕುಡಿಯುವ ನೀರಿನ ಬಗ್ಗೆ ಹೇಳಬೇಕೆಂದರೆ ವಿದ್ಯುತ್ ಪೂರೈಕೆ ಸರಿ ಇಲ್ಲದೇ ಒಂದು ವಾರಗಟ್ಟಲೇ ಕುಡಿಯುವ ನೀರಿನ ಸರಬರಾಜು ಆಗುತ್ತಿಲ್ಲ. ಟಿ.ಸಿ. ಹಾಕಿ ಎಂದರೆ ಟಿ.ಸಿ. ಇಲ್ಲವೆನ್ನುತ್ತಾರೆ, ಕರೆಂಟ್ ಲೋ ವೋಲ್ಟೇಜ್ ಎಂದು ಹೇಳುತ್ತಾರೆ, ಇಂಥ ಒಂದು ಪರಿಸ್ಥಿತಿ ಇರುವಾಗ ಸರ್ಕಾರ ತೆಗೆದುಕೊಳ್ಳುವ ತೀರ್ಮಾನಕ್ಕೆ ಮುಂಚೆಯೇ ರೈತರ ಸಮಸ್ಯೆಗಳನ್ನು ಸರಿಪಡಿಸಿ ತೀರ್ಮಾನಗಳನ್ನು ತೆಗೆದುಕೊಂಡರೆ ಅದಕ್ಕೆ ಸ್ವಾಗತ ಕೋರುತ್ತೇವೆ. ದಯಮಾಡಿ ಏಕಮುಖ ನಿರ್ಧಾರವನ್ನು ಇನ್ನೆಂದೂ ತೆಗೆದುಕೊಳ್ಳಬಾರದೆಂದು ವಿನಂತಿ ಮಾಡುತ್ತೇನೆ. ಇನ್ನು ಯಾವುದೇ ಕೆಲಸದಲ್ಲಿ ಎರಡು ಲಕ್ಷಕ್ಕಿಂತ ಮೇಲಿದ್ದರೆ ಟೆಂಡರ್ ಮೂಲಕವೇ ಮಾಡುತ್ತೇವೆ, ಅಧಿಕಾರಿಗಳು ಟೆಂಡರ್ ಕರೆಯದೇ ಕೆಲಸ ಮಾಡಿದರೆ ಅಧಿಕಾರಿಗಳಿಗೆ ಜೈಲು ಶಿಕ್ಷ ಕೊಡಿಸುತ್ತೇವೆ ಎಂದು ಹೇಳುತ್ತೀರಿ. ಇಂದು ಯಾವುದೇ ಜಿಲ್ಲಾ ಪಂಚಾಯತಿ 5 ಲಕ್ಷ ರೂಪಾಯಿಗಳ ಕೆಲಸವನ್ನು ಒಂದೊಂದೇ ತೆಗೆದುಕೊಂಡಿರುವುದನ್ನು ಸರ್ಕಾರ ತೋರಿಸಬೇಕು. ಇಂದು 25 ಲಕ್ಷ ರೂಪಾಯಿಗಳ ಕೆಲಸವಿದ್ದರೂ ಕೂಡ ಅದನ್ನು ಹನ್ನೆರಡು ಭಾಗಗಳನ್ನಾಗಿ ಮಾಡಿ ಎರಡು ಲಕ್ಷ ರೂಪಾಯಿಗಳಂತೆ ಕೆಲಸವನ್ನು ಟೆಂಡರ್ ಕರೆಯದೇ ಮಾಡಿಸುತ್ತಾರೆ. ಇದನ್ನು ತಾವು ಯಾವ ರೀತಿಯಲ್ಲಿ ತಡೆಯುತ್ತೀರಿ? ಇವೊತ್ತು ಇರಿಗೇಶನ್‌ನಲ್ಲಿ 50 ಸಾವಿರಕ್ಕೂ ಕೆಲಸ ಮಾಡಿಸಲು ಟೆಂಡರ್ ಕರೆಯುತ್ತಾರೆ. ಪಿ.ಡಬ್ಲ್ಯೂ.ಡಿ.ಯಲ್ಲಿ ಒಂದು ಲಕ್ಷ ರೂಪಾಯಿಗಳ ಕೆಲಸದ ಪೀಸ್ ವರ್ಕ್ ಮಾಡಬಹುದು. ಆದರೆ ಜಿಲ್ಲಾ ಪಂಚಾಯಿತಿಯಲ್ಲಿ ಎರಡು ಲಕ್ಷ ರೂಪಾಯಿಗಳ ಕೆಲಸ ಪೀಸ್‌ವರ್ಕ್ ಆಗಿದೆ. ಸರ್ಕಾರ ಒಂದೇ ಇರುವಾಗ ಹಲವಾರು ಇಲಾಖೆಗಳಿಗೆ ಬೇರೆ ಬೇರೆ ರೀತಿಯ ತೀರ್ಮಾನಗಳನ್ನು ಮಾಡುತ್ತದೆ. ಇದರಿಂದ ಏನು ಪ್ರಯೋಜನ ಎನ್ನುವುದನ್ನು ಸರ್ಕಾರ ದಯವಿಟ್ಟು ಹೇಳಬೇಕು. ಇನ್ನು ಮಂಡ್ಯ ಜಿಲ್ಲಾ ಪಂಚಾಯತಿಯಲ್ಲಿ ಕಳೆದ ಏಪ್ರಿಲ್ ತಿಂಗಳಲ್ಲಿ ಪ್ಲಾನ್ ಮತ್ತು ನಾನ್-ಪ್ಲಾನ್‌ಗಳಡಿಯಲ್ಲಿ ತೆಗೆದುಕೊಂಡ ತೀರ್ಮಾನದ ಕೆಲಸಗಳಿಗೆ ಇವೊತ್ತಿನವರೆಗೂ ಇನ್ನೂ ಟೆಂಡರ್ ಆಗಿಲ್ಲ. ಇದರಿಂದಾಗಿ ಮಾರ್ಚ್‌ವರೆಗೆ

ಕೊಟ್ಟಿರುವ ಅನುದಾನ ಲ್ಯಾಪ್ಸ್ ಆಗುತ್ತಿದೆ. ಇದಕ್ಕೆ ಯಾರು ಜವಾಬ್ದಾರರು? ನಾನು ಹೇಳಿದ ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ಸರಿಪಡಿಸಲು ಸರ್ಕಾರ ಏನು ಮಾಡಿದೆ? ಜೊತೆಗೆ ಪಿಡಬ್ಲ್ಯೂಡಿ ಮತ್ತು ಇರಿಗೇಷನ್‌ನಲ್ಲಿ ಹತ್ತಾರು ವರ್ಷಗಳಿಂದ ಮುಂದುವರಿದ ಕಾಮಗಾರಿಗಳು ಎಂದು ಬರುತ್ತದೆ. ಇದಕ್ಕೆ ಕಾರಣ ಏನು? ಈ ವರ್ಷ ನಾವು ಬಜೆಟ್‌ನಲ್ಲಿ ಸೇರಿಸಿ ಈ ವರ್ಷ ಅನುಮೋದನೆ ಮಾಡಿ ಟೆಂಡರ್ ಮಾಡಿದರೆ ಆ ವರ್ಷ ಕೆಲಸ ಮುಗಿಯಬೇಕು. ಕೋಟ್ಯಾಂತರ ರೂಪಾಯಿ ಎಂದರೆ ನಾಲ್ಕೈದು ಕೋಟಿ ರೂಪಾಯಿಯ ಕೆಲಸವಾದರೆ ಪರವಾಗಿಲ್ಲ. ಇವತ್ತು ಹತ್ತು ಲಕ್ಷ ರೂಪಾಯಿಗಳ ಕೆಲಸವನ್ನು ಈ ವರ್ಷ ಮಾಡಿ ಮುಂದಿನ ವರ್ಷ ಹೋದರೆ 20 ಪರ್ಸೆಂಟ್ ಎಸ್.ಆರ್. ಜಾಸ್ತಿಯಾಗುತ್ತದೆ. ಅಲ್ಲಿ ಸ್ಥಳೀಯವಾಗಿ ತೊಂದರೆಯಾಗುತ್ತದೆ. ಇವತ್ತು ರಸ್ತೆಗೆ ಒಂದು ಸೇತುವೆ ಕಟ್ಟುತ್ತಾರೆ. ಅದನ್ನು ನಂತರ ಹಾಗೆ ಬಿಟ್ಟುಬಿಡುತ್ತಾರೆ. ನಾಲ್ಕು ವರ್ಷ ಇನ್ನು ಅದರ ಮೇಲೆ ಓಡಾಡುವುದಕ್ಕೆ ವ್ಯವಸ್ಥೆ ಮಾಡುವುದಿಲ್ಲ. ಅಂತಹ ಅನೇಕ ನ್ಯೂನತೆಗಳು ಈ ಇಲಾಖೆಗಳಲ್ಲಿ ಇದೆ. ನಮ್ಮ ಮಂಡ್ಯ ಜಿಲ್ಲಾ ಪಂಚಾಯಿತಿಯಿಂದ ಕುಡಿಯುವ ನೀರಿನ ವ್ಯವಸ್ಥೆಗೆ ಮಂಜೂರು ಮಾಡಬೇಕೆಂದು ಸರ್ಕಾರಕ್ಕೆ ಕಳುಹಿಸಿದ್ದೇವೆ. ಇನ್ನು ಆರು ತಿಂಗಳಾಯಿತು ಬಂದಿಲ್ಲ. ಅದು ಬಂದ ಮೇಲೆ ಟೆಂಡರ್ ಹಾಕುವುದಕ್ಕೆ ಇನ್ನೊಂದು ಮೂರು ತಿಂಗಳು ಬೇಕಾಗುತ್ತದೆ. ಈ ರೀತಿ ಅನೇಕ ನ್ಯೂನತೆಗಳು ಇಲಾಖೆಯಲ್ಲಿ ಇರುವುದರಿಂದ ಅದರ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ತಾವು ಕೆ.ಸಿ.ಸಿ. ವಜಾ ಮಾಡಿದಿರಿ. ರೋಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಮಾಡಿದಿರಿ. ಕೆ.ಸಿ.ಸಿ.ಯಲ್ಲಿ ಡೈರೆಕ್ಟ್ ಎನ್‌ಟ್ರಸ್ಟ್‌ಮೆಂಟ್ ಇದೆ ಎಂದು. ಈಗಲೂ ಸಹ ಸ್ವಚ್ಛಗ್ರಾಮ ಉದ್ಯೋಗ ಮಾಡುವಂಥಾದ್ದು ಲ್ಯಾಂಡ್ ಆರ್ಮಿಗೆ ಕೊಡುತ್ತೀರಿ. ದಯಮಾಡಿ ಲ್ಯಾಂಡ್ ಆರ್ಮಿಯವರು ಕೂಡ ಪಾರ್ಟಿಸಿಪೇಟ್ ಮಾಡಬೇಕು. ಟೆಂಡರ್ ಆದರೆ ಟೆಂಡರ್‌ನಲ್ಲಿ ಅವರು ಮಾತ್ರ ಆರ್‌ಸಿ ಮಾಡಬೇಕೆ ವಿನಃ ನೇರವಾಗಿ ಇವರು ಲ್ಯಾಂಡ್ ಆರ್ಮಿಗೆ ಕೊಡುವಂತಹ ಕೆಲಸವಾಗುತ್ತಿದೆ. ಮೊನ್ನೆ ಪ್ರಧಾನ ಮಂತ್ರಿಯವರ ಒಂದು ಸ್ಕೀಂನಲ್ಲಿ 25 ಲಕ್ಷ ರೂಪಾಯಿಗಳ ಒಂದು ಕೆಲಸವನ್ನು ಕೊಟ್ಟರು. ಅದೂ ಸಹ ಲ್ಯಾಂಡ್ ಆರ್ಮಿಗೆ ಕೊಟ್ಟಿದ್ದಾರೆ. ದಯಮಾಡಿ ಅವರೂ ಸಹ ಕಂಟ್ರಾಕ್ಟ್ ತರಹ ನೇರವಾಗಿ ಪಾರ್ಟಿಸಿಪೇಟ್ ಮಾಡಿ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡುವುದು ಸೂಕ್ತ. ಇದು ಇನ್ನೊಂದು ಹಗರಣ ಎನ್ನುವ ಭಾವನೆ ಬರುವಂತಹ ರೀತಿಯಲ್ಲಿ ಹೋಗುತ್ತಿದೆ. ಇದನ್ನು ದಯಮಾಡಿ ಮಾಡಬೇಕು. ಜೊತೆಗೆ ಇರಿಗೇಷನ್‌ನಲ್ಲಿ ಬಹಳಷ್ಟು ಅದರಲ್ಲೂ ಗೊರೂರು, ಹಾಗೂ ಹೇಮಾವತಿ ಜೋನ್‌ನಲ್ಲಿ 4-5 ಡಿವಿಜನ್‌ನಲ್ಲಿ ಮೇಜರ್ ಕೆಲಸವಾಗಿ ಕಂಪ್ಲೀಟ್ ಆಗಿ ನಾಲ್ಕು ವರ್ಷಗಳಾಗಿದೆ. ಅದರ ಮೇಂಟೆನೆನ್ಸ್ ಎಂದು ಪ್ರತಿ ತಿಂಗಳು ಪ್ರತಿ ವರ್ಷ ಜಿಲ್ಲೆಯಲ್ಲಿ ಖರ್ಚಾಗುತ್ತಿದೆ. ಆದರೂ ಕಂಪ್ಲೀಟ್ ಆಗದೆ ಇರುವ ಸಣ್ಣಪುಟ್ಟ ಕೆಲಸಗಳಿಂದ ನೀರು ಹಾಯಿಸತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಮಾನ್ಯ

ಹೆಚ್.ಕೆ.ಪಾಟೀಲ್ ಅವರು ಒಳ್ಳೆಯ ರೀತಿಯಲ್ಲಿ ಇರಿಗೇಷನ್ ತೆಗೆದುಕೊಂಡು ಹೋದರೂ ಸಹ ಕೆಲವು ಸಣ್ಣಪುಟ್ಟ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಹೋಗುತ್ತಿಲ್ಲ. ಇವತ್ತು ಒಬ್ಬ ಇಂಜಿನಿಯರ್ ತಪ್ಪು ಮಾಡಿದರೆ ಇನ್ನೊಬ್ಬನನ್ನು ಇನ್ಸ್‌ಪೆಕ್ಟ್ ಮಾಡುವುದಕ್ಕೆ ಕಳುಹಿಸಿದರೆ ಅವನೂ ಸಹ ಇನ್ನು ಎರಡು ಪರ್ಸೆಂಟ್ ಲಂಚ ಜಾಸ್ತಿ ಕೇಳುತ್ತಾನೆ ವಿನಃ ಅದರಿಂದ ಸರಿ ಹೋಗುತ್ತಿಲ್ಲ. ಇವತ್ತು ಇಲಾಖೆಯಲ್ಲಿ 20 ಪರ್ಸೆಂಟ್ ಲಂಚ ನಡೆಯುತ್ತದೆ. ಇನ್ನು 20 ಪರ್ಸೆಂಟ್ ಸರ್ಕಾರದಲ್ಲಿ ಸೇಲ್ಸ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ಅಥವಾ ರಾಯಲ್ಟಿ ಎಂದು ತೆಗೆದರೆ 10 ಪರ್ಸೆಂಟ್ ಮೇನ್‌ಟೆನೆನ್ಸ್‌ಗೆ ಹೋಗುತ್ತದೆ. ಇನ್ನು ಉಳಿದಂತಹ 50 ಪರ್ಸೆಂಟ್‌ನಲ್ಲಿ ಕೆಲಸವಾಗಬೇಕು. ಕಂಟ್ರಾಕ್ಟರ್ ಆ 50 ಪರ್ಸೆಂಟ್‌ನಲ್ಲಿ 20 ಪರ್ಸೆಂಟ್ ಲಾಭ ತೆಗೆದುಕೊಂಡರೆ ಇನ್ನು 30 ಪರ್ಸೆಂಟ್‌ನಲ್ಲಿ ಕೆಲಸವಾಗಬೇಕು. ಇಂತಹ ಒಂದು ಸ್ಥಿತಿ ಇದ್ದು, ಅದನ್ನು ಯಾವ ರೀತಿ ಸರಿಪಡಿಸುತ್ತೀರಿ? ಇವತ್ತು ಸರ್ಕಾರದಲ್ಲಿ ಹಣ ಬಿಡುಗಡೆಯಾಗುತ್ತದೆ. ಆದರೆ ಸರಿಯಾದ ರೀತಿಯಲ್ಲಿ ತಲುಪುವುದಿಲ್ಲ. ಈ ರೀತಿ ಮಧ್ಯದಲ್ಲಿ ಆಗತಕ್ಕಂಥ ನ್ಯೂನತೆಗಳನ್ನು ಸರಿಪಡಿಸುವ ಕೆಲಸವಾಗಬೇಕು. ಇನ್ನು ಮೇಜರ್ ಇರಿಗೇಷನ್‌ರವರಿಗೆ, ಮೈನರ್ ಇರಿಗೇಷನ್ ಅಚ್ಚುಕಟ್ಟಿಗೆ ಬರುವಂತಹ ಕೆಲವು ಮೈನರ್ ಇರಿಗೇಷನ್ ಟ್ಯಾಂಕಸ್ ಎಲ್ಲವನ್ನೂ ಹ್ಯಾಂಡ್ ಓವರ್ ಮಾಡುತ್ತೀರಿ. ಆದರೆ ಆ ಮೇಜರ್ ಇರಿಗೇಷನ್ ಇಲಾಖೆಯವರು ನಮಗೆ ಬರತಕ್ಕಂಥಾದ್ದನ್ನು ಮಾತ್ರ ನಾವು ಕೆಲಸ ಮಾಡುತ್ತೇವೆಂದು ಹೇಳುತ್ತಾರೆ. ಮೇಜರ್ ಇರಿಗೇಷನ್‌ರವರು ಅವರ ಹೆಡ್‌ನಲ್ಲಿ ಇರತಕ್ಕಂಥವುಗಳಿಗೆ ಮಾತ್ರ ಕೆಲಸ ಮಾಡುತ್ತಾರೆ. ಮೈನರ್ ಇರಿಗೇಷನ್ ಟ್ಯಾಂಕ್ಸ್ ಅನ್ನು ಇವರು ರಿಪೇರಿ ಸಹ ಮಾಡುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಇದೆ. ಇದರ ಬಗ್ಗೆ ಸಾಕಷ್ಟು ಮೈನರ್ ಹಾಗೂ ಮೇಜರ್ ಇರಿಗೇಷನ್ ಮಂತ್ರಿಗಳಿಬ್ಬರಿಗೂ ಹೇಳಿದ್ದೇನೆ. ಇದನ್ನು ಅವರು ಗಮನಕ್ಕೆ ತೆಗೆದುಕೊಂಡಿಲ್ಲ. ನನ್ನ ಕ್ಷೇತ್ರದಲ್ಲಿ 100 ರಿಂದ 150 ಕೆರೆಗಳು ನೀರಾವರಿ ಅಚ್ಚುಕಟ್ಟಿನಲ್ಲಿ ಬರುತ್ತವೆ. ಅದಕ್ಕೆ ಮೇಜರ್ ಇರಿಗೇಷನ್‌ನವರು ಮಾಡುತ್ತಿಲ್ಲ, ಮೈನರ್ ಇರಿಗೇಷನ್‌ರವರು ಮಾಡುತ್ತಿಲ್ಲ. ರೈತರು ಈ ಸಮಸ್ಯೆಯನ್ನು ಎದುರಿಸತಕ್ಕಂಥ ಪರಿಸ್ಥಿತಿಯಲ್ಲಿ ಇದೆ. ಮೊನ್ನೆ ಗಮನ ಸೆಳೆಯುವ ಸೂಚನೆ ಮುಖಾಂತರ ನಮ್ಮ ಕಂದಾಯ ಸಚಿವರಿಗೆ ಹೇಳಿದೆ. ಇವತ್ತು ರೈತರಿಗೆ ಯಾವುದಾದರೂ ಅವರು ಒಂದು ಗುಂಟೆ ಎರಡು ಗುಂಟೆ ಒತ್ತುವರಿ ಮಾಡಿಕೊಂಡರೆ ಅವರಿಕೆ ಕೊಡತಕ್ಕಂಥ ಹಿಂಸೆ ನೋಡುವುದಕ್ಕಾಗುವುದಿಲ್ಲ. ಕಣ್ಣಲ್ಲಿ ರಕ್ತ ಬರುತ್ತದೆ. ಆದರೆ ಕೆಲವು ಪ್ರಭಾವಿತ ವ್ಯಕ್ತಿಗಳು ನೂರು, ಇನ್ನೂರು ಎಕರೆ, ಐವತ್ತು ಹತ್ತು ಎಕರೆ ಒತ್ತುವರಿ ಮಾಡಿರುತ್ತಾರೆ. ದಯಮಾಡಿ ಇದನ್ನು ಬಿಡಿಸುವುದು ಅಷ್ಟೇ ಅಲ್ಲ, ಸರ್ಕಾರ ನೀವು ಏನು ಹೇಳಿದ್ದೀರಿ, ಅದೇ ರೀತಿಯಲ್ಲಿ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಅವರನ್ನು ಅರೆಸ್ಟ್ ಮಾಡುವ ಮೂಲಕ ಮಾದರಿಯಾಗಿ ಯಾವುದೇ ಪ್ರಭಾವಿತ ವ್ಯಕ್ತಿ ಅಂತಹ ಒಂದು ಕೆಲಸಕ್ಕೆ ಹೋಗದೆ ಇರುವಂತಹ

ಕಾರ್ಯಕ್ರಮವನ್ನು ಮಾಡಬೇಕು. ಇನ್ನು ಹೆಲ್ತ್ ಡಿಪಾರ್ಟ್‌ಮೆಂಟ್, ಇದರಲ್ಲಿ ಸಾಕಷ್ಟು ವರ್ಗಾವಣೆ ಗೊಂದಲವಾಗಿದೆ. ಒಬ್ಬ ಕ್ಲಾಸ್-3, ಕ್ಲಾಸ್-4 ನೌಕರನನ್ನು ಮೂರ್‍ನಾಲ್ಕು ಬಾರಿ ವರ್ಗಾವಣೆ ಮಾಡಕ್ಕಂಥ ಸ್ಥಿತಿ ನೋಡಿದ್ದೇನೆ. ಅದನ್ನು ನಾನು ಅವರ ಗಮನಕ್ಕೆ ತಂದಿದ್ದೇನೆ. ಇಂತಹದ್ದನ್ನು ದಯಮಾಡಿ ತಪ್ಪಿಸಬೇಕು. ನೀವು ಡಾಕ್ಟರನ್ನು ಎಲ್ಲಾದರೂ ಟ್ರಾನ್ಸ್‌ಫರ್‌ಮಾಡಿ. ನಾವು ಕೇಳುವುದಿಲ್ಲ. ಆದರೆ ಗ್ರೂಪ್ 3-4 ನೌಕರರನ್ನು ಟ್ರಾನ್ಸ್‌ಫರ್ ಮಾಡಬೇಕಾದರೆ ತಮ್ಮ ಸರ್ಕ್ಯುಲರ್ ಏನಿದೆ ಅದನ್ನು ಅಡಾಪ್ಟ್ ಮಾಡಬೇಕು. ಯಾವುದೋ ಇನ್‌ಫ್ಲೂಯೆನ್ಸ್ ಅಥವಾ ಒತ್ತಡಕ್ಕೆ ಸಿಕ್ಕಿ ಮಾಡಬಾರದು ಎಂದು ಅವರಿಗೆ ಕೇಳಿಕೊಳ್ಳುತ್ತೇನೆ ಇನ್ನು ಡಾಕ್ಟರ್ ನೇಮಕಾತಿ ಬಗ್ಗೆ ಹೇಳುವುದಾದರೆ, 500 ಜನ ಡಾಕ್ಟರನ್ನು ತೆಗೆದುಕೊಳ್ಳಬೇಕೆಂದು ನೋಟಿಫಿಕೇಷನ್ ಮಾಡಿದ್ದಾರೆ. ಈಗಾಗಲೇ ಲೋಕಲ್ ಕ್ಯಾಂಡಿಡೇಟ್ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸಂಬಳ ಕಡಿಮೆ ಇದ್ದು, ರೂರಲ್‌ನಲ್ಲಿ ಕೆಲಸ ಮಾಡಬೇಕೆಂದು ಕಂಡೀಷನ್ ಇದೆ. ಮೂರು ವರ್ಷಗಳು ಆದ ನಂತರ ಅವರನ್ನು ಕನ್‌ಫರ್ಮ್ ಮಾಡಬಹುದು. ತಾವು ನೇರ ನೇಮಕಾತಿ ಮಾಡಿ ಉಳಿದಂತಹ ಖಾಲಿ ಜಾಗಕ್ಕೆ ಲೋಕಲ್ ಕ್ಯಾಂಡಿಡೇಟ್ ಮೂರು ಅಥವಾ ಐದು ವರ್ಷ ಮಾಡಿರುವವರಿಗೆ ಕನ್‌ಫರ್ಮ್ ಮಾಡುವಂತಹ ಕೆಲಸವನ್ನು ಮಾಡಬೇಕು ಎಂದು ಒತ್ತಾಯ ಮಾಡುತ್ತಾ, ಇನ್ನು ಕೆ.ಎಸ್.ಆರ್.ಟಿ.ಸಿ. ಬಗ್ಗೆ ಹೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿ 500 ಗ್ರಾಮ ಇದೆ. ಕೋಲಾರ ಜಿಲ್ಲೆಯಲ್ಲಿ ಏಳು ಡಿಪೋ ಇದೆ. ನಮ್ಮ ಮಂಡ್ಯ ಜಿಲ್ಲೆಗೆ ಒಂದೇ ಡಿಪೋ ಇದೆ. ಇವತ್ತು ಒಂಬತ್ತು ಕ್ಷೇತ್ರಕ್ಕೆ ಒಂದು ಡಿಪೋ ಇಲ್ಲ. ಯಾವುದೇ ತರಹ ಬಸ್ ಸಂಚಾರದ ವ್ಯವಸ್ಥೆ ಮಾಡುವುದಕ್ಕೆ ಆಗದೇ ಇರುವುದರಿಂದ ದಯಮಾಡಿ ರಸ್ತೆ ಚೆನ್ನಾಗಿ ಇದ್ದರೂ ಬಸ್ ಒಂದು ರೂರಲ್ ಮಟ್ಟಕ್ಕೆ ಹೋಗುವುದಕ್ಕೆ ಅವ್ಯವಸ್ಥೆಯಾಗಿದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಸ್ವಚ್ಛಗ್ರಾಮ ಕಾರ್ಯಕ್ರಮ ಒಂದು ವರ್ಷದಿಂದ ಒಂದೂ ಪ್ರಾರಂಭವಾಗಿಲ್ಲ. ಸಾವಿರ ಕೆರೆಯನ್ನು ನಾವು ಹೂಳೆತ್ತಿಸುತ್ತೇವೆ ಎಂದು ಕಳೆದ ಬಜೆಟ್‌ನಲ್ಲಿ ಅನೌನ್ಸ್ ಮಾಡಿದಿರಿ. ಇಲ್ಲಿಯವರೆಗೆ ಒಂದೇ ಒಂದು ಕೆರೆ ಆಗಿಲ್ಲ. ನಮಗೆ ಹಣ ವರ್ಲ್ಡ್ ಬ್ಯಾಂಕಿನಿಂದ ಬರುತ್ತದೆ, ಅಲ್ಲಿಂದ ಇಲ್ಲಿಂದ ಬರುತ್ತದೆಂದು ಅನೌನ್ಸ್ ಮಾಡುವುದು ಬೇಡ. ಇರತಕ್ಕಂಥ ಸೋರ್ಸ್ ಅನ್ನು ವೇಸ್ಟ್ ಆಗದ ಹಾಗೆ ವ್ಯವಸ್ಥಿತವಾಗಿ ಹಾಗೂ ಪ್ರಾಮಾಣಿಕವಾಗಿ ಮಾಡುವಂತಹ ವ್ಯವಸ್ಥೆಯನ್ನು ಈ ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಗುಂಡಪ್ಪ ವಕೀಲ್(ಔರಾದ್): ಮಾನ್ಯ ಚೇರ್‌ಮನ್‌ರವರೆ, ರಾಜನಾದವನು ಯಾವುದೇ ಸರ್ಕಾರ ಇರಲಿ, ಸರ್ಕಾರಿ ಬೊಕ್ಕಸವನ್ನು ಹಾಗೂ ಕಾನೂನಿನ ಮರ್ಯಾದೆ ಇವೆರಡನ್ನು ರಕ್ಷಣೆ ಮಾಡುವುದಿಲ್ಲವೋ, ಆ ಸರ್ಕಾರ ಮೊದಲನೆಯದಾಗಿ ಸಂಪತ್ತು

ಕಳೆದುಕೊಳ್ಳುತ್ತದೆ, ಎರಡನೆಯದಾಗಿ ಅಧಿಕಾರವನ್ನು ಕಳೆದುಕೊಳ್ಳುತ್ತದೆ. ಔರಾದ್ ತಾಲ್ಲೂಕಿನಲ್ಲಿ ನನ್ನ ಕ್ಷೇತ್ರದಲ್ಲಿ 16 ಕಿಲೋಮೀಟರ್ ರಸ್ತೆ, ಪಿಡಬ್ಲ್ಯೂಡಿಗೆ ಸೇರಿರತಕ್ಕಂಥಾದ್ದು, ಡಾಂಬರಿಕರಣ ಮಾಡಿದ್ದೇವೆಂದು ಹೇಳಿ ಸುಳ್ಳು ಬಿಲ್ ಸೃಷ್ಟಿ ಮಾಡಿ 80 ಲಕ್ಷ ರೂಪಾಯಿ ಪ್ರೊಡ್ಯೂಸ್ ಮಾಡುತ್ತಾರೆ. ಅಲ್ಲಿ ರೋಡ್ ಆಗಿದೆ ಎಂದು ಇನ್ಸ್‌ಪೆಕ್ಷನ್ ಆಗುತ್ತದೆ. ಚೆಕ್ ಮೆಜರ್‌ಮೆಂಟ್ ಆಗುತ್ತದೆ. ಮೆಟೀರಿಯಲ್ ಎಲ್ಲಾ ಚೆನ್ನಾಗಿ ಯೂಸ್ ಮಾಡಿದ್ದಾರೆಂದು ಸರ್ಟಿಫಿಕೇಟ್ ಕೊಡುತ್ತಾರೆ. ಡಿವಿಜನ್‌ನಿಂದ ಎಲ್‌ಒಸಿ ರಿಲೀಜ್ ಮಾಡಿ, ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಆರ್ಥಿಕ ಇಲಾಖೆಗೆ ರೆಕಮೆಂಡೇಷನ್ ಬರುತ್ತದೆ. ಒಂದೆರಡು ಲಕ್ಷ ರೂಪಾಯಿಗಳು ಅಲ್ಲ, 80 ಲಕ್ಷ ರೂಪಾಯಿಗಳು ರಿಲೀಜ್ ಆಗುತ್ತದೆ. ಕಂಟ್ರಾಕ್ಟ್ ಕೆಲಸ ಮಾಡುವುದಿರಲಿ, ಆ ರೋಡಿನ ಮೇಲೆ ಗುತ್ತಿಗೆದಾರರು ಹೋಗಿರತಕ್ಕಂಥ, ನಡೆದಿರತಕ್ಕಂಥ ಒಂದು ದೃಶ್ಯ ನಮ್ಮ ಜನ ನೋಡಿಲ್ಲ. ಈ ರೀತಿ ಕೆಲಸವಾದರೆ ಪಿಡಬ್ಲ್ಯೂಡಿ ಇಲಾಖೆಯಲ್ಲಿ, ಜನರಿಗೆ ಹೇಗೆ ನ್ಯಾಯ ಸಿಗುತ್ತದೆ? ರೋಡ್ ಎಲ್ಲಾ ಕಾಗದದ ಮೇಲೆ. ರೆಕಾರ್ಡ್‌ನಲ್ಲಿ ರೋಡ್.

ಚೇರ್‌ಮನ್: ನೀವು ಏನಾದರೂ ನಿರ್ದಿಷ್ಟವಾಗಿ ಆರೋಪ ಮಾಡುವುದು ಇದೆಯಾ?

ಶ್ರೀ ವಕೀಲ್ ಗುಂಡಪ್ಪ: ಆರೋಪ ಇಲ್ಲ, ನಮ್ಮ ಮಂತ್ರಿಗಳು ಆರು ಜನರನ್ನು ಸಸ್ಪೆಂಡ್ ಮಾಡಿದ್ದಾರೆ.

ಶ್ರೀ ಧರ್ಮಸಿಂಗ್: ಹೋದ ಚುನಾವಣೆಯಲ್ಲಿ ಇದೇ ಭಾಷಣ ಮಾಡಿ ಆರಿಸಿ ಬಂದಿದ್ದೀರಿ 1997-98ರಲ್ಲಿ ನಾವು ಹಣ ಪಾವತಿ ಮಾಡಿಲ್ಲ. ಅದಕ್ಕೆ ಬೋಗಸ್ ಬಿಲ್ ಹಾಕಿದ್ದಾರೆ, ತಾವೆಲ್ಲಾ ಬಂದು ಡೆಲಿಗೇಷನ್ ಕೊಟ್ಟಿದ್ದೀರಿ. ಫಸ್ಟ್‌ಟೈಂ ಯಾರ್‍ಯಾರು ಬೋಗಸ್ ಬಿಲ್ ಮಾಡಿ ಹಣ ಪಡೆಯತಕ್ಕಂಥ ಪ್ರಯತ್ನ ಮಾಡಿದ್ದಾರೆ, ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದೆ. ಇದು 1997-98ರಲ್ಲಿ ನಡೆದಿದ್ದು. ಈಗ ರಾಜ್ಯಪಾಲರ ಭಾಷಣದ ಮೇಲೆ ನಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ಏನೇನು ಕೆಲಸ ಹೇಗೆ ಮಾಡಬೇಕೆಂದು ಸಲಹೆ ಸೂಚನೆ ಇದ್ದರೆ ಕೊಡಬಹುದು. ಅದನ್ನು ನೀವು ಹೇಳಿದ್ದೀರಿ. ಆ್ಯಕ್ಷನ್ ಕೂಡ ತೆಗೆದುಕೊಂಡಿದ್ದೇವೆ.

ಶ್ರೀ ವಕೀಲ್ ಗುಂಡಪ್ಪ: ಮಾನ್ಯ ಮಂತ್ರಿಯವರು ಮೂರನೆ ಫೆಬ್ರವರಿ ಬಸವಕಲ್ಯಾಣದಲ್ಲಿ ಫಂಕ್ಷನ್‌ಗೆ ಬಂದಿದ್ದರು. ನಾವು ಯಾರೂ ಅವರನ್ನು ಕೇಳಲಿಲ್ಲ, ಅವರೇ ಸ್ವತಃ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ ಕೇವಲ 15 ದಿವಸದಲ್ಲಿ ಈ ಅವ್ಯವಹಾರದಲ್ಲಿ ಭಾಗಿಯಾಗಿರತಕ್ಕಂಥ ಗುತ್ತಿಗೆದಾರರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆ ಗುತ್ತಿಗೆದಾರರು ಯಾರೆಂದರೆ ಮಾಜಿ

ಮಂತ್ರಿಗಳಾದ ಗುರುಪಾದಪ್ಪ ನಾಗಮಾರಪಳ್ಳಿ ಅವರ ಮಗ ಉಮಾಕಾಂತ್ ನಾಗಮಾರಪಳ್ಳಿ, ಅವರ ಮೇಲೆ ಏನು ಆ್ಯಕ್ಷನ್ ತೆಗೆದುಕೊಂಡಿದ್ದೀರಿ? ತಾವು ಹೇಳಿಕೆ ಕೊಟ್ಟಿದ್ದು.

ಅಧ್ಯಕ್ಷರು: ತಾವು ಸದನದಲ್ಲಿ ಇಲ್ಲದೆ ಇರುವವರ ಬಗ್ಗೆ ನಿರ್ದಿಷ್ಟವಾಗಿ ಆರೋಪ ಮಾಡಿದ್ದೀರಿ.

ಶ್ರೀ ವಕೀಲ್ ಗುಂಡಪ್ಪ: ಇದು ರೆಕಾರ್ಡ್‌ನಲ್ಲಿ ಇದೆ.

ಶ್ರೀ ಧರ್ಮಸಿಂಗ್: ಈಗ ಅವರು ಸದನದಲ್ಲಿ ಇಲ್ಲ. ಅವರು ಮಾಜಿ ಮಂತ್ರಿಗಳಾಗಿದ್ದಾರೆ ಅವರು ಸದನದಲ್ಲಿ ಇಲ್ಲ. ಯಾರ್‍ಯಾರು ಕಂಟ್ರಾಕ್ಟರ್ ಇದ್ದಾರೆ, ಅಂಥವರುಗಳನ್ನು ಬ್ಲಾಕ್ ಲಿಸ್ಟ್ ಮಾಡಿ ನಾವೆಲ್ಲಾ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಗುಂಡಪ್ಪ ವಕೀಲ: ಇವತ್ತು ಕಿರುಬೆರಳಿಗೆ ಏನಾದರೂ ಗಾಯವಾದರೆ ಇಡೀ ದೇಹಕ್ಕೆ ನೋವಾಗುತ್ತದೆ. ಆ ರೀತಿಯಲ್ಲಿ ಇವತ್ತು ಬೀದರ್ ಜಿಲ್ಲೆಯನ್ನು ನಿರ್ಲಕ್ಷ್ಯ ಮಾಡಿದರೆ ಇಡೀ ಕರ್ನಾಟಕ ರಾಜ್ಯ ನೋವನ್ನು ಅನುಭವಿಸಬೇಕಾಗುತ್ತದೆ. ಈ ವಿಚಾರವನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮಲ್ಲಿ 1995ನೇ ಇಸವಿಯಲ್ಲಿ 50 ರೂಪಾಯಿಗಳ ಖೋಟಾ ನೋಟುಗಳ ಪ್ರಿಂಟ್ ಆಯಿತು. ಕಾರವಾರದಲ್ಲಿ ಮಾಫಿಯಾ ಜಾಲವಾಗಿಲ್ಲ, ಬೀದರ್‌ನಲ್ಲಿ ಮಾಡಿದ್ದಾರೆ. ಇದನ್ನು ನಾವೇ ಮಾಡಿರಬಹುದು, ನಾವು ಮಾಡಿಲ್ಲವೆಂದು ಹೇಳಿಲ್ಲ, ಮಾಡಿರುವವರು ಯಾರೇ ಇರಲಿ, ಆದರೆ 1993ನೇ ಇಸವಿಯಲ್ಲಿ ನಮ್ಮ ಜಿಲ್ಲೆಯವೇ, ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ, ಈ ಟ್ರಾನ್ಸ್‌ಪೋರ್ಟ್ ಇಲಾಖೆಯ ಬಸ್ ಟಿಕೇಟ್‌ಗಳು ನಮ್ಮ ಜಿಲ್ಲೆಯಲ್ಲೇ ಪ್ರಿಂಟ್ ಆಗಿ ಇಡೀ ಕರ್ನಾಟಕ ರಾಜ್ಯದಲ್ಲಿ ಖೋಟಾ ಟಿಕೇಟ್‌ಗಳು ಚಲಾವಣೆಯಾಯಿತು. ಈ ಘಟನೆ ನಡೆದಂಥಾದ್ದು ಬೀದರ್ ಜಿಲ್ಲೆಯಲ್ಲಿ. ಈ ಖೋಟಾ ನೋಟುಗಳು ಮತ್ತು ಕೆ.ಎಸ್.ಆರ್.ಟಿ.ಸಿ. ಟಿಕೇಟ್‌ಗಳು, ನರಬಲಿಯನ್ನು ಮಾಡಿದ್ದಾರೆ. ನಿಧಿ ಸಿಗುತ್ತದೆಂದು ಜಮೀನಿನಲ್ಲಿ 12 ವರ್ಷ ವಯಸ್ಸಿನ ಹುಡುಗನನ್ನು ಅಲ್ಲಿ ಪೂಜೆ ಮಾಡಿ ಕುತ್ತಿಗೆಯನ್ನು ಕತ್ತರಿಸಿ ಕೊಲೆ ಮಾಡಿದ್ದಾರೆ, ಇದೆಲ್ಲಾ ಏಕೆ ನಡೆಯುತ್ತಿದೆ? ಇನ್ನು ರಸ್ತೆಯ ಬಗ್ಗೆ ಹೇಳುವುದಾದರೆ ಈ ರಸ್ತೆಗಳು ಕಳುವಾಗುತ್ತಿದೆ ಎಂದು ನಾವು ಪೇಪರ್‌ಗಳಲ್ಲಿ ದರ್ಖಾಸ್ತ್ ಕೊಡುವಂಥಾದ್ದು ಆಗುತ್ತಿದೆ. ಈ ಎಲ್ಲಾ ಘಟನೆಗಳು ಬೀದರ್‌ನಲ್ಲಿ ಆಗುತ್ತಿದೆ. ಇನ್ನು ನಾನು ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ, ಈ ಸಂಸಾರದಲ್ಲಿ ಯಾವುದಾದರೂ ಶಾಂತ ವಸ್ತು ಎಂದು ಇರುವುದಾದರೆ ಅದು ಬೆಂಕಿಯಾಗ್ನಿ ಪಾಶವೆಂದು ಇದೆ, ಅದಕ್ಕೆ ನಾವು ಎಲ್ಲಿಯವರೆಗೆ ಪ್ರಜ್ವಲಿತವನ್ನಾಗಿ ಮಾಡುವುದಿಲ್ಲವೊ, ಅಲ್ಲಿಯವರೆಗೆ ತನ್ನ

ಶಕ್ತಿಯನ್ನು ತೋರಿಸುವುದಿಲ್ಲ. ಅದೇ ರೀತಿಯಲ್ಲಿ ಬೀದರ್ ಜನತೆಯೂ ಅಗ್ನಿಯ ರೀತಿಯಲ್ಲಿ ಬಹಳ ಶಾಂತವಾಗಿದ್ದಾರೆ. ಆ ಜನತೆಯನ್ನು ಪ್ರಜ್ವಲಿತಗೊಳಿಸುವಂತಹ ಯತ್ನವನ್ನು ತಾವು ಮಾಡಬೇಡಿ. ತಾವು ನ್ಯಾಯ ಮಾಡಿ ಅವರು ಯಾರೇ ಆಗಿರಲಿ ಅವರನ್ನು ಜೈಲಿಗೆ ಕಳುಹಿಸಿ, ಅವರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಜಿಲ್ಲೆಯ ಇಲಾಖೆಗಳಲ್ಲಿ ಏನು ನಡೆಯುತ್ತಿದೆ? ಇವತ್ತು ಒಂಬತ್ತು ಕೋಟಿ ರೂಪಾಯಿಗಳಲ್ಲಿ ನಡೆಯಬೇಕಾಗಿರುವಂತಹ ಕಾರಂಜ ಯೋಜನೆ, 356 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಯಾಗಿದೆ, ಇನ್ನು 140 ಕೋಟಿ ರೂಪಾಯಿಗಳು ಬೇಕಾಗಿದೆ. ಇದರಲ್ಲಿ ಇನ್ನೂರು ಕೋಟಿ ರೂಪಾಯಿಗಳು ಅಧಿಕಾರಿಗಳ ಹಾಗೂ ರಾಜಕಾರಣಿಗಳ ಜೇಬಿಗೆ ಹೋಗಿದೆ. ಇದೆಲ್ಲವನ್ನು ತಪ್ಪಿಸಬೇಕು. ಇದನ್ನು ಸರ್ಕಾರ ತಡೆಯಬೇಕು, ದೇವರು ನಿಮಗೆ ಸತತವಾಗಿ ಅಧಿಕಾರವನ್ನು ಕೊಡುತ್ತಿದ್ದಾನೆ, ಅವನು ನಿಮಗೆ ಆಶೀರ್ವಾದವನ್ನು ಮಾಡುತ್ತಿದ್ದಾನೆ, ನೀವು ಭಾಗ್ಯವಂತರಾಗಿದ್ದೀರಿ. ಅದಕ್ಕೆ ಪ್ರತಿಯಾಗಿ ನೀವು ಕೆಲಸವನ್ನು ಮಾಡಬೇಕು, ಬೀದರ್ ಜಿಲ್ಲೆಯನ್ನು ಸುಧಾರಿಸುವಂತಹ ವ್ಯವಸ್ಥೆಯನ್ನು ತಾವು ಮಾಡಿ, ನ್ಯಾಯವನ್ನು ಕೊಡಿಸುವಂತಹ ವ್ಯವಸ್ಥೆಯನ್ನು ಮಾಡಿ. ಇವತ್ತು ರಾಜಕಾರಣಿಗಳು ಈ ಹಗರಣಗಳಲ್ಲಿ ಭಾಗಿಯಾಗಿದ್ದಾರೆಂದು ಅವರೆಲ್ಲರನ್ನು ಮುಚ್ಚಿ ಹಾಕುವಂತಹ ಕೆಲಸವನ್ನು ಮಾಡಬೇಡಿ. ಅವರನ್ನು ಹೊರಗಡೆ ತನ್ನಿ. ಅಲ್ಲಿ ಬಿರುಗಾಳಿ ಬೀಸಿದರೆ ಕಾರ್ಮೋಡ ತನಗೆ ತಾನೇ ಚದುರಿ ಹೋಗುತ್ತದೆ. ಅದೇ ರೀತಿಯಲ್ಲಿ ಈ ಜನರು ಅಲ್ಲಿ ಏನು ಕರ್ಮಕಾಂಡವನ್ನು ಮಾಡಿದ್ದಾರೆ, ಅದರಿಂದ ಪಕ್ಷವೂ ಹಾಳಾಗಿ ಹೋಗಿದೆ, ಇದನ್ನು ಸುಧಾರಣೆ ಮಾಡಿ. ನೀವು ಯಾರು ಏನು ಎಂಬುದನ್ನು ಮರೆತು, ಪಕ್ಷಭೇದವನ್ನು ಬಿಟ್ಟು, ಇವತ್ತು ನ್ಯಾಯ, ನೀತಿಯ ಮೇಲೆ ನಡೆಯುವಂತಹ ವ್ಯವಸ್ಥೆಯನ್ನು ಈ ಬೀದರ್ ಜಿಲ್ಲೆಯಲ್ಲಿ ತಾವು ಮಾಡಬೇಕು. ಈ ಒಂದು ನಿಟ್ಟಿನಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತಾ ಮಾನ್ಯ ಕಂದಾಯ ಸಚಿವರು ಗಮನಿಸಬೇಕಾದಂತಹ ಅಂಶವೇನೆಂದರೆ ಈ ಬೋಗಸ್ ಬಿಲ್ ಅನ್ನು ಯಾರು ಹಾಜರು ಪಡಿಸಿದ್ದಾರೆ, ಯಾವ ಗುತ್ತಿಗೆದಾರರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಿ, ಎಫ್.ಐ.ಆರ್. ಹಾಕಿ, ಅವರ ಲೈಸನ್ಸ್ ಅನ್ನು ಕ್ಯಾನ್ಸಲ್ ಮಾಡಿ, ಅವರನ್ನು ಜೈಲಿಗೆ ಕಳುಹಿಸಬೇಕು. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

+ ಶ್ರೀ ರೇವುನಾಯಕ್ ಬೆಳಮಗಿ(ಕಮಲಾಪುರ): ಮಾನ್ಯ ವೈಸ್ ಚೇರ್ಮನ್‌ರವರೆ, ನನಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ, ನಾನು ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಮಾತನಾಡುತ್ತೇನೆ. ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳವಿದೆ. ಈ ವಿಚಾರವನ್ನು ನಾನು

ಸದನದಲ್ಲಿ ಪದೇ ಪದೇ ಪ್ರಸ್ತಾಪ ಮಾಡುತ್ತಿದ್ದೇನೆ, ಇದಕ್ಕೆ ಸರ್ಕಾರವೂ ಆಶ್ವಾಸನೆಯನ್ನು ಕೊಡುತ್ತಿದೆ. ಆದರೆ ಇದರ ಪ್ರಗತಿ ಯಾವ ರೀತಿಯಲ್ಲೂ ಆಗುತ್ತಾ ಇಲ್ಲ. ಈ ಮಾತನ್ನು ನಾನು ಇವತ್ತು ಬಹಳ ದುಃಖದಿಂದ ಹೇಳಬೇಕಾಗುತ್ತಿದೆ. ನನ್ನ ಕ್ಷೇತ್ರದಲ್ಲಿ ಮಾಲೇವಾಡಿ ಎನ್ನುವಂತಹ ಊರು ಇದೆ, ಅಲ್ಲಿ ಐದು ವರ್ಷದಿಂದ ಸ್ಕೀಮ್ ಚಾಲು ಇದೆ, ಇಲ್ಲಿಯವರೆಗೆ ನೀರು ಕೊಟ್ಟಿಲ್ಲ. ಹಳ್ಳಿಗಳ ಹೆಸರುಗಳನ್ನು ಹೇಳಬೇಕೆಂದರೆ ಬಹಳಷ್ಟು ಇವೆ. ಇಲ್ಲಿ ಸ್ಕೀಮ್ ಚಾಲು ಮಾಡಿ ಅರ್ಧಕ್ಕೆ ನಿಲ್ಲಿಸಿದ್ದಾರೆ, ಇಲ್ಲಿ ಸುಲ್ತಾನಪುರ, ತೊಂಡ, ಆಳಂದ, ಹೊಲಕುಂದ, ಕಲಮುಡ, ಇನ್ನಿತರ ಹಳ್ಳಿಗಳು ಬರುತ್ತವೆ. ಸರ್ಕಾರ ಒಂದು ವರ್ಷದಿಂದ ಫಂಡ್ ಕೊಟ್ಟಿಲ್ಲ, ವಿಶೇಷ ಫಂಡ್ ಎಂದು ಲ್ಯಾಂಡ್ ಆರ್ಮಿಯವರಿಗೆ ಕೊಟ್ಟಿದ್ದಾರೆ. ಲ್ಯಾಂಡ್ ಆರ್ಮಿಯವರು ಕೆಲಸವನ್ನು ಮಾಡಿಲ್ಲ. ಜಿಲ್ಲಾ ಪಂಚಾಯತ್‌ನವರು ಕೆಲಸ ಮಾಡಿಲ್ಲ, ಇವರನ್ನು ಕೇಳಿದರೆ ಲ್ಯಾಂಡ್ ಆರ್ಮಿಯವರ ಕೆಲಸವೆಂದು ಹೇಳುತ್ತಾರೆ, ಇವರನ್ನು ಕೇಳಿದರೆ ಎಸ್ಟಿಮೇಟ್ ಮಾಡುತ್ತಿದ್ದೇವೆಂದು ಹೇಳುತ್ತಾರೆ, ಸರ್ಕಾರ ದುಡ್ಡು ಕೊಟ್ಟು ಒಂದು ವರ್ಷವಾಗಿದೆ. ಇದುವರೆಗೂ ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಗಿಲ್ಲ. ಈ ವಿಚಾರವಾಗಿ ಹಿಂದಿನ ಸರ್ಕಾರವನ್ನು ಕೇಳಿದ್ದೆ, ಈಗ ಈ ಸರ್ಕಾರವನ್ನು ಕೇಳುತ್ತಿದ್ದೇನೆ. ಆದರೆ ಸರ್ಕಾರದಿಂದ ಆಶ್ವಾಸನೆಗಳು ಸಿಗುತ್ತದೆ, ಈಗ ಸರ್ಕಾರ ಏನು ಉತ್ತರ ಕೊಡುತ್ತದೆ, ಅದರಿಂದ ನನ್ನ ಕ್ಷೇತ್ರದಲ್ಲಿ ಏನು ಕುಡಿಯುವ ನೀರಿನ ಸಮಸ್ಯೆ ಇದೆ, ಅದು ಪರಿಹಾರವಾಗಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಸಭೆಯಲ್ಲಿ ಮಾನ್ಯ ಧರ್ಮಸಿಂಗ್‌ರವರು ಇದ್ದಾರೆ. ಇವರು ಪೇಪರ್‌ಗಳಲ್ಲಿ ಸ್ಟೇಟ್‌ಮೆಂಟ್ ಕೊಡುವುದನ್ನು ನೋಡಿದ್ದೇನೆ, ಈಗ ನಮ್ಮ ಕ್ಷೇತ್ರದಲ್ಲಿ ಪಿ.ಡಬ್ಲ್ಯೂ.ಡಿ. ರೋಡ್‌ಗಳ ಬಗ್ಗೆ ತೊಂದರೆ ಇಲ್ಲ. ಆದರೆ ಜಿಲ್ಲಾ ಪಂಚಾಯತ್ ರೋಡುಗಳ ಬಗ್ಗೆ ತೊಂದರೆ ಇದೆ. ನಾನು ಯಾವ ಹಳ್ಳಿಗೆ ಹೋದರೂ ಜನರು ನನ್ನನ್ನು ಘೇರಾವ್ ಮಾಡುತ್ತಾರೆ. ನಮಗೆ ಬಸ್ಸು ಬರುತ್ತಿಲ್ಲವೆಂದು ಹೇಳುತ್ತಾರೆ, ಕೆ.ಎಸ್.ಆರ್.ಟಿ.ಸಿ.ಯವರು ರಸ್ತೆಗಳು ಸರಿಯಾಗಿಲ್ಲವೆಂದು ಹೇಳುತ್ತಾರೆ. ನಾವು ಈ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡಿಕೊಳ್ಳಬೇಕು? ಯಾರ ಹತ್ತಿರ ಹೇಳಬೇಕು? ನಾನು ಪ್ರತಿ ಹಳ್ಳಿಗೂ ಹೋಗುತ್ತೇನೆ, ಅಲ್ಲಿ ಬಸ್ಸುಗಳು ಸಂಚರಿಸುತ್ತಿಲ್ಲ. ಎಲ್ಲಾ ಕಡೆಗಳಲ್ಲಿ ಮುದುಕರು, ಹೆಣ್ಣುಮಕ್ಕಳು, ಬಸ್ಸು ಬಂದಿಲ್ಲವೆಂದು ಹೇಳುತ್ತಾರೆ. ಜಿಲ್ಲಾ ಪಂಚಾಯತ್ ರಸ್ತೆಗಳ ಬಗ್ಗೆ ಬಹಳ ತೊಂದರೆಯಾಗಿದೆ. ಇನ್ನು ಸಣ್ಣ ನೀರಾವರಿ ಬಗ್ಗೆ ಹೇಳುವುದಾದರೆ, ಯುವ ಸಚಿವರು ಆಗಿದ್ದು, ಅವರು ಹಿಂದಿನ ಬಾರಿ ನನಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಇಂದಿನ ಸರ್ಕಾರದವರೂ ಕೂಡ ಆಶ್ವಾಸನೆಯನ್ನು ಕೊಟ್ಟಿದ್ದರು. ನಮ್ಮ ಹೋಬಳಿ ಕೆರೆಗಳು ಇದ್ದು, ಇದರ ಬಗ್ಗೆ ನಾನು ಸತತವಾಗಿ ಐದು ಬಾರಿ ಪ್ರಯತ್ನ ಮಾಡುತ್ತಿದ್ದೇನೆ. ಇದಕ್ಕೆ ಬರೀ ಆಶ್ವಾಸನೆ ಸಿಗುತ್ತಿದೆ. ದೊಡ್ಡ ಕೆರೆಗಳ ಕೆಲಸವನ್ನು ಮಾಡಬೇಕೆಂದರೆ ಹೆಚ್ಚು ಸಮಯ ಬೇಕಾಗುತ್ತದೆ, ಇಲ್ಲಿ ಇರುವಂಥಾದ್ದು

ಸಣ್ಣ ಕೆರೆಗಳಾಗಿದ್ದು, ಇದರ ಜೀರ್ಣೋದ್ಧಾರವನ್ನು ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ, ಎರಡುಮೂರು ವರ್ಷ ನೀರು ಸಿಗುತ್ತದೆ. ನೀವು ಈ ಕೆಲಸಗಳನ್ನು ಮಾಡಿ ಕೊಟ್ಟರೆ ನಿಮ್ಮ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ, ನಿಮ್ಮ ಹೆಸರು ಕೂಡ ಉಳಿಯುತ್ತದೆ. ಇದರ ಜೊತೆಗೆ ಬೆಣ್ಣೆತೋರ, ಹಿಪ್ಪರಗಿಯಲ್ಲಿ ಬ್ರಿಜ್‌ಗಳು, ಬ್ಯಾರೇಜ್‌ಗಳಿದ್ದು, ಇಲ್ಲಿಗೆ ಮಹಾರಾಷ್ಟ್ರದಿಂದ ನೀರು ಬರುತ್ತಿತ್ತು, ಈಗ ಅವರು ನೀರು ಬಿಡುವುದನ್ನು ನಿಲ್ಲಿಸಿದ್ದಾರೆ. ಇದರಿಂದಾಗಿ 10- 12 ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಆದುದರಿಂದ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈಗ ಈ ಬ್ರಿಜ್ ಕೆಲಸ ಏನು ಪೆಂಡಿಂಗ್ ಇದೆ, ಇದಕ್ಕೆ 80 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಆಗಿದೆ, ಇದನ್ನು ಮಾಡಿಕೊಡಬೇಕೆಂದು ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ. ಇಲ್ಲಿನ ರೈತರ ಪರಿಸ್ಥಿತಿಯೂ ತೀರಾ ಹದಗೆಟ್ಟಿದೆ, ಎಲ್ಲರೂ ರೈತರ ಪರ ಮಾತನಾಡಿ ಅಧಿಕಾರಕ್ಕೆ ಬರುತ್ತಾರೆ. ರೈತರು ಬೆಳೆಯುವಂತಹ ತೊಗರಿಬೇಳೆಗೆ ಬೆಂಬಲ ಬೆಲೆ ನಿಗದಿ ಮಾಡಬೇಕು, ನಮ್ಮಲ್ಲಿ ಇದನ್ನು ಬೆಳೆಯುತ್ತಾರೆ. ಇಲ್ಲಿ ನಾನು ರಾಜ್ಯ ಸರ್ಕಾರವೆಂದಾಗಲಿ ಅಥವಾ ಕೇಂದ್ರ ಸರ್ಕಾರವೆಂದಾಗಲೀ ಹೇಳುತ್ತಿಲ್ಲ. ನಮ್ಮ ರಾಜ್ಯ ಸರ್ಕಾರದವರು ಪ್ರತಿ ಕ್ವಿಂಟಾಲ್‌ಗೆ ಎರಡು ಸಾವಿರ ರೂಪಾಯಿಗಳಂತೆ ಮಾಡಬೇಕು. ಇದರ ಜೊತೆಗೆ ''ತೊಗರಿ ಬೆಳೆ ಬೋರ್ಡ್'' ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕ್ಷೇತ್ರ ಮಹಾರಾಷ್ಟ್ರಕ್ಕೆ ಬಹಳ ಹತ್ತಿರವಾಗಿದೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವತ್ತು ನಾವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಗ್ಗೆ ಸಾಕಷ್ಟು ಭಾಷಣವನ್ನು ಮಾಡುತ್ತೇವೆ. ಆದರೆ ಇವತ್ತಿನ ದಿವಸ ಏನಾಗಿದೆ ಎಂದರೆ ನಮ್ಮಲ್ಲಿ ಒಂದು ಸೊಸೈಟಿ ಇದ್ದು, ಈಗ ಇದು ಸೂಪರ್‌ಸೀಡ್ ಆಗಿದೆ, ಇಲ್ಲಿ ಹುಡುಗರು 4ನೇ 5ನೇ ತರಗತಿಯಲ್ಲಿ ಓದುತ್ತಿದ್ದಂತಹ ಮಕ್ಕಳು ಬೀದಿ ಪಾಲಾಗಿದ್ದಾರೆ. ಇದನ್ನು ಸರ್ಕಾರ ಗಮನಿಸಿ ಈ ಗುಡ್ಡಗಾಡು ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿ ಕೊಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

3.40 ಪಿಎಂ

ನನ್ನ ಕ್ಷೇತ್ರದ ಬಹಳಷ್ಟು ಸಮಸ್ಯೆಗಳಿವೆ. ಗೃಹಮಂತ್ರಿಗಳು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಾರೆ, ಅವರು ಮೂರು ತಿಂಗಳಿಗೊಮ್ಮೆ ಸಭೆ ನಡೆಸುತ್ತಾರೆ, ಸರಿಯಾದ ಮಾರ್ಗದರ್ಶನವನ್ನು ಕೊಟ್ಟರೂ ಕೂಡ ಇಂಜಿನಿಯರ್‌ಗಳಾಗಲಿ, ಬೇರೆ ಅಧಿಕಾರಿಗಳಾಗಲಿ ಸರಿಯಾಗಿ ಕೆಲಸ ಮಾಡುವುದಿಲ್ಲ. ನನ್ನ ಕ್ಷೇತ್ರದ ಕುಡಿಯುವ ನೀರಿನ, ರಸ್ತೆಯ, ರೈತರಿಗೆ ತೊಗರಿ ಬೇಳೆ ಬೆಂಬಲ ಬೆಲೆ ಕೊಡುವ ಸಮಸ್ಯೆಯಾಗಲಿ

ಇವುಗಳು ಕಾರ್ಯಗತವಾಗುವಂತೆ ಸರ್ಕಾರ ಕೆಲಸ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ): ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನೆ ಸಲ್ಲಿಸುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ವಂಬನೆಗಳು. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದೂವರೆ ವರ್ಷಗಳ ಕಾಲ ಈ ರಾಜ್ಯದ ಅಭಿವೃದ್ಧಿಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದೇವೆಂದು ಹೇಳಿದ್ದಾರೆ. 2000ನೇ ಸಾಲಿನಲ್ಲಿ ಒಂದು ಕಡೆ ಮಳೆ ಚೆನ್ನಾಗಿ ಆಗಿ ಪಸಲನ್ನು ಪಡೆದುಕೊಂಡಿದ್ದೇವೆ, ಕೃಷಿಯಲ್ಲಿ ಅತಿ ಹೆಚ್ಚು ಉತ್ಪಾದನೆ ಮಾಡಿದ್ದೇವೆಂದು ಹೆಮ್ಮೆಯಿಂದ ಹೇಳುತ್ತೇವೆ. ಆದರೆ ಕೃಷಿ ಮಂತ್ರಿಗಳು ಗಮನಿಸಬೇಕು, ಇವತ್ತು ರೈತ ವಾಣಿಜ್ಯ ಬೆಳೆಗಳಾದ ಮುಖ್ಯವಾಗಿ ಶೇಂಗಾ, ಹಾಗೂ ಹತ್ತಿ ಬೆಳೆಗಳನ್ನು ಬೆಳೆಯುವುದನ್ನು ಕೈಬಿಟ್ಟಿದ್ದಾನೆ. ಈ ವಾಣಿಜ್ಯ ಬೆಳೆಗಳನ್ನು ಬೆಳೆಯುವುದನ್ನು ಕೈಬಿಟ್ಟ ಹಿನ್ನೆಲೆಯೇನು? ಹತ್ತಿಗೆ ಹಲವಾರು ರೋಗ ಬಂದು ರೈತ ಇವತ್ತು ಹೆಚ್ಚು ಇಳುವರಿಯನ್ನು ಕಾಣಲಾಗುತ್ತಿಲ್ಲ, ಹಾಗಾಗಿ ಆ ಬೆಳೆಯನ್ನು ಬೆಳೆಯಲು ಮುಂದಾಗುತ್ತಿಲ್ಲ. ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆಯುವ ಶೇಂಗಾ ಬೆಳೆಯ ಇಳುವರಿ ಬರುತ್ತಿಲ್ಲ. ಈ ಬಗ್ಗೆ ಕೃಷಿ ಮಂತ್ರಿಗಳು ತಜ್ಞರ ಸಲಹೆ ಪಡೆದುಕೊಂಡು ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲವೆನ್ನುವ ವಿಚಾರವನ್ನು ನಾನು ವ್ಯಕ್ತಪಡಿಸುತ್ತೇನೆ. ಹೀಗಾಗಿ ಇವತ್ತು ನಮ್ಮ ಉತ್ತರ ಕರ್ನಾಟಕದಲ್ಲಿ ಆ ಎರಡು ಬೆಳೆಗಳು ವಿಫಲವಾದ ಕಾರಣ ಜೋಳವನ್ನು ಬೆಳೆಯಲು ರೈತರು ಮುಂದಾದರು. ಇವತ್ತು ರೈತ ಯಾವ ಬೆಳೆಯನ್ನು ಹಾಕಿದ್ದಾನೆ, ಮಾರುಕಟ್ಟೆಯ ವ್ಯವಸ್ಥೆ ಏನು, ಆ ರೈತನ ಪರಿಸ್ಥಿತಿ ಮುಂದೇನಾಗಬಹುದು ಎಂಬುವ ವಿಚಾರವನ್ನು ಸರ್ಕಾರ ಮಾಡಲಿಲ್ಲ. ಇವತ್ತು ಇಡೀ ರಾಜ್ಯಾದ್ಯಂತ ರೈತರು ಬೆಳೆದ ಯಾವ ಬೆಳೆಗೂ ಬೆಲೆ ಸಿಗಲಿಲ್ಲ. ಇವತ್ತು ರೈತ ಎಷ್ಟು ಪಶ್ಚಾತ್ತಾಪವನ್ನು ಪಟ್ಟುಕೊಂಡಿದ್ದಾನೆಂದರೆ, ಮಾಲನ್ನು ವಾಹನಗಳಲ್ಲಿ ತೆಗೆದುಕೊಂಡು ಹೋಗಿ ಮೂರು ದಿವಸಗಳ ಕಾಲ ಮಾರುಕಟ್ಟೆಯಲ್ಲಿ ನಿಲ್ಲಿಸಿ ಬೆಂಬಲ ಬೆಲೆ ನಾನೂರ ಐವತ್ತು ರೂಪಾಯಿಗಳಿಗೆ ಅವನು ಮಾರಿದರೆ ಆತ ಬರೀ ಟ್ರಾಕ್ಟರ್ ಬಾಡಿಗೆ ಕೊಡಲಾಗಲಿಲ್ಲ. ಈಗ ರೈತ ಏನು ಬೆಳೆಯನ್ನು ಹಾಕಿದ್ದಾನೆ ಅದಕ್ಕೆ ಮಾರುಕಟ್ಟೆ ಇದೆಯೇ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಅವನಿಗೆ ಬೆಂಬಲವನ್ನು ಕೊಡುವ ವಿಚಾರವನ್ನು ಸರ್ಕಾರ ಮಾಡಲಿಲ್ಲ. ಐದು ಸರ್ಕಾರದ ಒಂದು ವಿಫಲತೆ. ಕೃಷಿ ಮಂತ್ರಿಗಳಲ್ಲಿ ನನ್ನ ವಿಜ್ಞಾಪನೆ ಏನೆಂದರೆ ಇವತ್ತು-ಖಾಸಗಿ ಬೀಜ ಕಂಪನಿಗಳು ನಮ್ಮ ಭಾಗದಲ್ಲಿ ಇವೆ. ರೈತನೊಡನೆ ಹಾಗೂ ಆ ಕಂಪನಿಯೊಡನೆ ವ್ಯವಸ್ಥಿತವಾದ ಒಂದು ಒಡಂಬಡಿಕೆ ಇಲ್ಲ, ಬೆಳೆ ವಿಫಲವಾದರೆ ರೈತನಿಗೆ ಏನು ಸಿಗುತ್ತಿಲ್ಲ, ಆ ಬೀಜ ಕಂಪನಿಗಳ ಮೇಲೆ ಈ ರಾಜ್ಯ ಸರ್ಕಾರದ ನಿಯಂತ್ರಣವಿದೆಯೋ ಹೇಗೆ ಎಂಬುದನ್ನು ಕೂಡ ಹೇಳಬೇಕು. ಈ ರೀತಿಯಾಗಿ ಬೇಕಾದ ರೀತಿಯಲ್ಲಿ ಬೀಜ ಕಂಪನಿಗಳು ಬಂದು,

ರೈತರು ಹಾಕಿದಂತಹ ಮೂಲ ಬಂಡವಾಳವನ್ನು ಕಳೆದುಕೊಂಡು ರೈತ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗ ನಮ್ಮ ತಾಲ್ಲೂಕಿನಲ್ಲಿ ನಡೆದಿದೆ. ನಮ್ಮ ವಿರೋಧಪಕ್ಷದ ನಾಯಕರು ಹಾಗೂ ಮಾನ್ಯ ಪಿ.ಜಿ.ಆರ್.ಸಿಂಧ್ಯಾರವರು ಬಂದು ನೋಡಿದ್ದಾರೆ. ಕೃಷಿ ಅಧಿಕಾರಿಗಳನ್ನು ಕೇಳಿದರೆ ಆ ಕಂಪನಿಗಳ ಮೇಲೆ ನಮ್ಮದೇನೂ ಹಿಡಿತವಿಲ್ಲ, ಪರವಾನಿಗೆಯನ್ನು ಕೇಂದ್ರ ಸರ್ಕಾರ ಕೊಡುತ್ತದೆಂದು ಹೇಳಿದರು. ಇವತ್ತು ರಾಜ್ಯ ಸರ್ಕಾರದ ನಿಯಂತ್ರಣ ಬೇಕು, ಈ ನಿಟ್ಟಿನಲ್ಲಿ ಕೃಷಿ ಮಂತ್ರಿಗಳು ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಆಲೂಗೆಡ್ಡೆ, ಸಜ್ಜೆ, ಮೆಕ್ಕೆಜೋಳ, ಯಾವುದೇ ಬೆಳೆ ಇರಬಹುದು ಅವುಗಳನ್ನು ಖರೀದಿ ಮಾಡಿದರೂ ಕೂಡ ಇಟ್ಟುಕೊಳ್ಳಲು ಉಗ್ರಾಣದ ವ್ಯವಸ್ಥೆ ಇವತ್ತು ಇಲ್ಲ, ಮುಂದಿನ ದಿವಸಗಳಲ್ಲಿ ಆ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇನ್ನು ಪ್ರಜಾಪ್ರಭುತ್ವದ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಮಾನ್ಯ ಘೋರ್ಪಡೆಯವರು ಆರ್ಥಿಕ ಸಲಹೆಗಾರರು, ತಜ್ಞರು. ಮಹಾತ್ಮಗಾಂಧಿಯವರು ವಿಕೇಂದ್ರಿಕರಣಗೊಂಡ ಗ್ರಾಮವನ್ನು ಸ್ವರಾಜ್ಯವನ್ನಾಗಿ ಮಾಡಬೇಕೆಂದು ಕನಸನ್ನು ಕಂಡಿದ್ದರು. ಇವತ್ತು ವಿಕೇಂದ್ರೀಕರಣ ಬಂದ ಮೇಲೆ, ಮೀಸಲಾತಿಯನ್ನು ಕೊಟ್ಟು ಸಮಬಾಳು, ಸಮಪಾಲನ್ನು ಕೊಡಬೇಕೆನ್ನುವ ವಿಚಾರವನ್ನು ಇವತ್ತು ನಾವು ಒಪ್ಪುತ್ತೇವೆ. ಗ್ರಾಮ, ತಾಲ್ಲೂಕು ಅಥವಾ ಜಿಲ್ಲಾ ಪಂಚಾಯತಿಗಳಲ್ಲಿ ರೊಟೇಶನ್ ಸಿಸ್ಟಂ ಅನ್ನು ತಂದು 20 ತಿಂಗಳು ಒಂದು ವರ್ಷಗಳ ಟರ್ಮ್ ಏನು ಮಾಡಿದ್ದಾರೆ, ಬಡವರಿಗಾಗಿ ಕೆಲಸ ಮಾಡಿ ನಿರ್ದಿಷ್ಟವಾಗಿ ಕೆಲಸ ಮಾಡಬೇಕೆನ್ನುವ ಭಾವನೆ ಇದರಿಂದ ಆಯ್ಕೆಗೊಂಡು ಬರುವ ಪ್ರತಿನಿಧಿಗಳಿಗೆ ಬರುತ್ತಿಲ್ಲ. ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ, ನಾವು ಕೆಲವು ಪತ್ರಿಕೆಗಳಲ್ಲಿ ಓದಿದ್ದೇವೆ, ನಮ್ಮ ರಾಜ್ಯದ ಪಾಲನ್ನು ಬಳಸಿಕೊಳ್ಳಲು ಈ ಸರ್ಕಾರದವರು ಏತಕ್ಕೆ ಚಿಂತನೆ ಮಾಡಲಿಲ್ಲ? ಇವತ್ತು ಬಚಾವತ್ ಆಯೋಗದ ತೀರ್ಪಿನ 'ಬಿ' ಸ್ಕೀಂನ ಅಡಿಯಲ್ಲಿ, ನಮ್ಮ ಭಾಗದ ಕೊಪ್ಪಳ ಜಿಲ್ಲೆಯಲ್ಲಿ ಒಣಪ್ರದೇಶಗಳಾದ ಯಲ್ಬುರ್ಗ, ಕುಷ್ಟಗಿ, ಕೊಪ್ಪಳ ಇಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಲು ಸಾಧ್ಯವಿದೆಯೇ ಎಂಬುದನ್ನು ಸರ್ಕಾರ ತಿಳಿಸಬೇಕು. ಇಷ್ಟು ಕಾಲ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ.

+ ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಸದನದ ಸದಸ್ಯರಾದ ಮಾನ್ಯ ವೈ.ಕೆ.ರಾಮಯ್ಯನವರು ಸದನದ ಮುಂದೆ ಮಂಡಿಸಿರುವ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸಬೇಕಾದ ವಂದನಾ ನಿರ್ಣಯ ಪ್ರಸ್ತಾವನೆ ಸಭೆಯಲ್ಲಿ ಚರ್ಚೆಗೆ ಬಂದಿದೆ. ಮಾನ್ಯ ವೈ.ಕೆ.ರಾಮಯ್ಯ ಹಾಗೂ ಮಾನ್ಯ ಯು.ಆರ್.ಸಭಾಪತಿಯವರು ತಮ್ಮ ಸುಧೀರ್ಘವಾದ ಭಾಷಣಗಳಲ್ಲಿ ರಾಜ್ಯಪಾಲರ ಭಾಷಣದಲ್ಲಿ ನಮೂದಾಗಿರುವ ಹಲವಾರು ವಿಚಾರಗಳ ಬಗ್ಗೆ ಮತ್ತು ರಾಜ್ಯವನ್ನು ಕಾಡುತ್ತಿರುವ ನಾಲ್ಕಾರು ಸಮಸ್ಯೆಗಳ ಬಗ್ಗೆ ತಮ್ಮ ಅಪಾರವಾದ ಅನುಭವದ

ಹಿನ್ನೆಲೆಯಲ್ಲಿ ಅವರು ಸಭೆಯ ಮುಂದೆ ಬಹಳ ಸಮರ್ಥವಾಗಿ ಮಂಡಿಸಿದ್ದಾರೆ. ಆ ಇಬ್ಬರು ಸ್ನೇಹಿತರನ್ನು ನಾನು ಪ್ರಶಂಸೆ ಮಾಡುತ್ತೇನೆ. ಯಾವುದೇ ರಾಜ್ಯ ತನ್ನ ಅಭಿವೃದ್ಧಿಯ ಹಾದಿಯಲ್ಲಿ ಹೋಗುವ ಕಾಲದಲ್ಲಿ ಹಲವಾರು ಅಡಚಣೆಗಳು ಬರುತ್ತವೆ, ಅವುಗಳನ್ನೆಲ್ಲವನ್ನೂ ವಿಕ್ರಮಿಸಿ ಮುಂದೆ ಅಡಿ ಇಡತಕ್ಕಂಥ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಲು ರಾಜ್ಯಪಾಲರ ಭಾಷಣ ಸರ್ಕಾರಕ್ಕೆ ಸಿಕ್ಕಿರತಕ್ಕಂಥ ಒಂದು ಅವಕಾಶ. ಈ ಭಾಷಣದ ಮೇಲೆ ಚರ್ಚೆ ಮಾಡುವ ಮೊದಲೇ ನಮ್ಮ ವ್ಯವಸಾಯ ಕ್ಷೇತ್ರದಲ್ಲಿ ಆಗಿರತಕ್ಕಂಥ ಏರುಪೇರುಗಳ ಬಗ್ಗೆ ಈ ಸದನ ಬಹಳ ಸುಧೀರ್ಘವಾಗಿ ಅರ್ಥಪೂರ್ಣವಾದಂಥ ಚರ್ಚೆಯನ್ನು ಮಾಡುವುದರ ಮೂಲಕ, ಪಕ್ಷಪಕ್ಷಗಳ ಮಧ್ಯೆ ಇರುವ ಭಿನ್ನಾಭಿಪ್ರಾಯಗಳೆಲ್ಲವನ್ನೂ ಬದಿಗೊತ್ತಿ, ಒಂದೇ ದೃಷ್ಟಿಯಿಂದ ರೈತರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಆ ಸಮಸ್ಯೆಗಳಿಗೆ ಯೋಗ್ಯವಾದ ಪರಿಹಾರವನ್ನು ಕಂಡುಹಿಡಿಯಲು ನಮ್ಮಲ್ಲಿ ಐಕಮತ್ಯ ಬಂದಿದೆ ಎನ್ನತಕ್ಕಂಥಾದ್ದು ಸ್ವಾಗತಾರ್ಹವಾದಂಥ ಒಂದು ಬೆಳವಣಿಗೆ, ಹಾಗೂ ಸ್ವಾಗತಾರ್ಹವಾದಂಥ ಮಾನಸಿಕ ಪರಿವರ್ತನೆ. ಹುಬ್ಬಳ್ಳಿ-ಧಾರವಾಡದಲ್ಲಿ ಆಲೂಗಡ್ಡೆ ಬೆಲೆ ಕುಸಿದು ಬಿದ್ದರೆ, ಅದು ದಕ್ಷಿಣ ಕರ್ನಾಟಕದ ರೈತನ ಮನಸ್ಸಿನಲ್ಲಿಯೂ ಕೂಡ ಆತಂಕದ ಛಾಯೆಯನ್ನು ಸ್ವಾಭಾವಿಕವಾಗಿ ತಂದು ಒಡ್ಡುತ್ತದೆ. ಕಾರಣವೆಂದರೆ, ರೈತ ಸಮೂಹದಲ್ಲಿ ಅಂಥ ಒಂದು ನೆಟ್‌ವರ್ಕಿಂಗ್ ಸ್ಥಾಪನೆಯಾಗಿದೆ. ಹಾಗೆಯೇ, ಕೋಲಾರದಲ್ಲಿ ಟೊಮೊಟೋ ಬೆಲೆ ಬಿದ್ದು ಹೋದಾಗ, ಟೊಮೊಟೋವನ್ನು ಕೊಂಡುಕೊಳ್ಳುವ ಮಾರುಕಟ್ಟೆ ಇಲ್ಲ ಎಂದು ರೈತ ಆ ಟೊಮೊಟೋವನ್ನು ರಸ್ತೆ ಬದಿಯಲ್ಲಿ ತಂದು ಹಾಕಿದಾಗ, ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾಂನಲ್ಲಿರುವ ರೈತರೂ ಕೂಡ, ಈ ಭಾಗದ ರೈತರು ಯಾವ ರೀತಿ ಇಂಥ ಸಮಸ್ಯೆಗಳಿಗೆ ಬಹಳ ಸಂಕಟದಿಂದ ಸ್ಪಂದಿಸುತ್ತಾರೆ, ಅದೇ ರೀತಿಯಲ್ಲಿ ಆ ರೈತರೂ ಕೂಡ ಸಂಕಟದಿಂದ ಸ್ಪಂದಿಸುತ್ತಾರೆ ಎನ್ನತಕ್ಕಂಥಾದ್ದನ್ನು ನಾವು ಅರ್ಥಮಾಡಿಕೊಂಡಾಗ ರೈತರ ಸಮಸ್ಯೆಗಳಿಗೆ ಮಾತ್ರ ನಮ್ಮಲ್ಲಿ ಪಕ್ಷಭೇಧದ ಗಡಿಗಳನ್ನು ನಾವು ದಾಟಿ ನಿಂತಿರತಕ್ಕಂಥಾದ್ದು ಈ ಸದನದ ಹೆಗ್ಗಳಿಕೆ ಎಂದು ನಾನು ಭಾವಿಸಿ, ವಿರೋಧ ಪಕ್ಷದ ನಾಯಕರನ್ನು, ಮತ್ತಿತರ ವಿರೋಧ ಪಕ್ಷದ ಎಲ್ಲ ಗೌರವಾನ್ವಿತ ಸದಸ್ಯರುಗಳಿಗೆ ಅವರು ತೋರಿದಂಥ ರೈತ ಕಾಳಜಿ, ರೈತರ ಕಳಕಳಿ, ರಾಜ್ಯ ಸರ್ಕಾರ ತೆಗೆದುಕೊಳ್ಳಬಹುದಾದಂಥ ಕಾರ್ಯಕ್ರಮಗಳಿಗೆ ಹೆಚ್ಚು ಬಲವನ್ನು ತಂದುಕೊಟ್ಟ ಹಾಗೆ ಆಗುತ್ತದೆ ಎಂದು ಹೇಳುತ್ತೇನೆ. ರೈತರ ಸಮಸ್ಯೆಯನ್ನು ವಿಶ್ಲೇಷಣೆ ಮಾಡುವಂಥ ಕಾಲದಲ್ಲಿ, ಒಂದು ದೊಡ್ಡ ಬದಲಾವಣೆಯಾಗಿದೆ ಎನ್ನುವಂಥಾದ್ದು ನಬಾರ್ಡ್‌ನವರು ಇತ್ತೀಚೆಗೆ ಹೊರಡಿಸಿರತಕ್ಕಂಥ ಒಂದು ವಿಶ್ಲೇಷಣೆಯಿಂದ ನಮಗೆ ಸ್ಪಷ್ಟವಾಗಿದೆ. ನಬಾರ್ಡ್‌ನವರು ಮಾಡಿರತಕ್ಕಂಥ ಎಕ್ಸರ್‌ಸೈಸ್‌ನಲ್ಲಿ, ಕರ್ನಾಟಕ ರಾಜ್ಯದಲ್ಲಿ ಇವತ್ತು ಭತ್ತ, ಮೆಕ್ಕೆಜೋಳ, ತೊಗರಿಬೇಳೆ, ತೆಂಗಿನಕಾಯಿ, ಎಣ್ಣೆಬೀಜಗಳು ಇವುಗಳೆಲ್ಲದರಲ್ಲೂ ಹಿಂದಿನ ವರ್ಷಗಳಿಗಿಂತ ಹೆಚ್ಚಿನ

ಉತ್ಪನ್ನವನ್ನು ಕರ್ನಾಟಕ ರಾಜ್ಯ ರಿಜಿಸ್ಟರ್ ಮಾಡಿದೆ ಎನ್ನುವುದು, ನಮ್ಮ ವ್ಯವಸಾಯ ಕ್ಷೇತ್ರ ಎಷ್ಟು ಬಲಯುತವಾಗಿ ಬೆಳೆಯುತ್ತಿದೆ ಎನ್ನುವುದಕ್ಕೆ ಒಂದು ನಿದರ್ಶನ ಎಂದು ನಾನು ಭಾವಿಸುತ್ತೇನೆ. ಅದರ ಅಂಕಿಸಂಖ್ಯೆಗಳು ಈಗ ನನ್ನಲ್ಲಿ ಇಲ್ಲ. ಆದರೆ ನಾನು ಬಜೆಟ್ ಮಂಡಿಸತಕ್ಕಂಥ ಸಂದರ್ಭದಲ್ಲಿ ಆ ಅಂಕಿಸಂಖ್ಯೆಗಳ ಕಡೆಗೆ ಸದನದ ಗಮನವನ್ನು ಸೆಳೆಯುತ್ತೇನೆ. ಒಂದು ಕಾಲದಲ್ಲಿ ನಮ್ಮ ಸಮಸ್ಯೆ ಏನಾಗಿತ್ತು ಎಂದರೆ, to manage the deficits, ಅಂದರೆ ಕೊರತೆ ಬಂದಿರತಕ್ಕಂಥ ಆಹಾರ ಪದಾರ್ಥಗಳನ್ನು ನಾವು ಮ್ಯಾನೇಜ್ ಮಾಡ ಬೇಕಾಗಿರತಕ್ಕಂಥ ಪರಿಸ್ಥಿತಿ ಉದ್ಭವವಾಗಿತ್ತು. ಆದರೆ, ಕಳೆದ ವರ್ಷದಿಂದೀಚೆಗಿನ ಬೆಳವಣಿಗೆ ಏನು ಎಂದರೆ, are we now ready to manage the surpluses? ಹೇಗೆ ಸರ್‌ಪ್ಲಸ್ ಅನ್ನು ಮ್ಯಾನೇಜ್ ಮಾಡುವುದು? ಅದಕ್ಕೆ ಬೇಕಾಗಿರತಕ್ಕಂಥ ಮಾರುಕಟ್ಟೆಯನ್ನು ಸೃಷ್ಟಿ ಮಾಡತಕ್ಕಂಥಾದ್ದು ನಮ್ಮ ಕೈಯ್ಯಲ್ಲಿದೆಯೇ? ನಮ್ಮ ಕನ್‌ಸಂಪ್‌ಷನ್ ಪ್ಯಾಟ್ರನ್ ಏನಿದೆ? ಇವುಗಳೆಲ್ಲದರ ಬಗ್ಗೆ ಆಳವಾದಂಥ ಅಧ್ಯಯನವನ್ನು ಮಾಡಬೇಕಾಗಿದೆ. ಸರ್‌ಪ್ಲಸ್ ಅನ್ನು ಮ್ಯಾನೇಜ್ ಮಾಡಬೇಕಾಗಿರುವಂಥಾದ್ದು ಒಂದು ಹೊಸ ಬೆಳವಣಿಗೆ. ಆದ್ದರಿಂದ ಈ ಹೊಸ ಬೆಳವಣಿಗೆಗೆ ನಮ್ಮ ವ್ಯವಸಾಯ ಕ್ಷೇತ್ರವನ್ನು ಸಿದ್ಧಪಡಿಸಲು ಸ್ವಲ್ಪ ಸಮಯ ಬೇಕಾಗುತ್ತದೆ. ಆ ಸಮ್ಮಯದಲ್ಲಿ, ನಾವು ಇದರ ಬಗ್ಗೆ ಅಧ್ಯಯನ ಮಾಡಿರತಕ್ಕಂಥ ಪರಿಣಿತರ ಜೊತೆಯಲ್ಲಿ ಸಮಾಲೋಚನೆಗಳನ್ನು ಮಾಡಿ, ಈ ಸರ್‌ಪ್ಲಸ್ ಅನ್ನು ಯಾವ ರೀತಿ ಮ್ಯಾನೇಜ್ ಮಾಡಬೇಕು ಎನ್ನುವುದಕ್ಕೆ ವೈಜ್ಞಾನಿಕವಾದಂಥ ವಿಧಿವಿಧಾನಗಳನ್ನು ನಾವು ಕಂಡುಹಿಡಿದುಕೊಳ್ಳಬೇಕಾಗಿದೆ. ಹುಬ್ಬಳ್ಳಿ-ಧಾರವಾಡವನ್ನೇ ನಾನು ಒಂದು ಉದಾಹರಣೆಯಾಗಿ ತೆಗೆದುಕೊಳ್ಳುತ್ತೇನೆ. ಕಪ್ಪುಮಣ್ಣು ಆಲೂಗಡ್ಡೆ ಬೆಳೆಗೆ ಯೋಗ್ಯವಾದಂಥ ಮಣ್ಣು ಅಲ್ಲ, Black soil is not suitable for potato cultivation ಎಂದು ಅಗ್ರಿಕಲ್ಚರಲ್ ಸೈಂಟಿಸ್ಟ್ ಹೇಳುತ್ತಾರೆ. ಆದರೆ ಕೋಲಾರ, ಹಾಸನ ಇವುಗಳು ಆಲೂಗಡ್ಡೆ ಬೆಳೆಗೆ ಬಹಳ ಪ್ರಶಸ್ತವಾದಂಥ ಭೂಮಿ ಎಂದು ಹೇಳುತ್ತಾರೆ. ಅದರಲ್ಲಿಯೂ, ವಿಶೇಷವಾಗಿ ಹಾಸನ ಆಲೂಗಡ್ಡೆ ಬೆಳೆಗೆ ಪ್ರಶಸ್ತವಾದ ಭೂಮಿ. ಇದನ್ನು ನಾವು ರೈತರಿಗೆ ಹೇಳಿಕೊಡತಕ್ಕಂಥ ಬಗೆ ಹೇಗೆ? ಇದಕ್ಕೆ ಒಂದು ಎಕ್ಸ್‌ಟೆನ್‌ಷನ್ ಪ್ರೋಗ್ರಾಂ ಇಲ್ಲದೇ ಹೋದರೆ, ನಾವು ಇದರ ಬಗ್ಗೆ ರೈತರಿಗೆ ಚಿಂತನೆ ಮಾಡಲು, ರೈತರಿಗೆ ಎಜುಕೇಟ್ ಮಾಡಲು ಸಾಧ್ಯವಾಗುವುದಿಲ್ಲ, ಓರಿಯೆಂಟೇಷನ್ ಕೊಡಲೂ ಕೂಡ ಸಾಧ್ಯವಾಗುವುದಿಲ್ಲ. ಮತ್ತು ಈಗಿರತಕ್ಕಂಥ ಕಾನೂನಿನ ಚೌಕಟ್ಟಿನಲ್ಲಿ ನಾವು ಇದನ್ನು ಕಡ್ಡಾಯ ಮಾಡಲೂ ಬರುವುದಿಲ್ಲ. ಆ ದೃಷ್ಟಿಯಿಂದಲೇ ನಾವು ರೈತಮಿತ್ರ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ವರ್ಕ್ ಅನ್ನು ನಾವು ಅದರ ಲಾಜಿಕಲ್ ಎಂಡ್‌ಗೆ ತೆಗೆದುಕೊಂಡು ಹೋಗಬೇಕಾದರೆ ರೈತರಿಗೆ ತಿಳಿವಳಿಕೆಯನ್ನು ಕೊಡಬೇಕಾಗುತ್ತದೆ. ರೈತರಿಗೆ ಸೈಂಟಿಫಿಕ್ ಇನ್‌ಪುಟ್ಸ್ ಅನ್ನು

ಕೊಡಬೇಕಾಗುತ್ತದೆ. ಆದ್ದರಿಂದಲೇ ಎಲ್ಲಾ ಹೋಬಳಿ ಕೇಂದ್ರಗಳಲ್ಲೂ ರೈತಮಿತ್ರ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು ಎಂದು ನಾವು ಹೊರಟಿದ್ದೇವೆ. ಈಗಾಗಲೇ ಸುಮಾರು 600ರಷ್ಟು ರೈತ ಮಿತ್ರ ಕೇಂದ್ರಗಳು ಸ್ಥಾಪನೆಯಾಗಿವೆ. ನಾನು ನೆನೆಸಿದ ರೀತಿಯಲ್ಲಿ, ಪೂರ್ಣ ಪ್ರಮಾಣದಲ್ಲಿ ಈ 600 ರೈತಮಿತ್ರ ಕೇಂದ್ರಗಳೂ ಆಗಿವೆ ಎನ್ನುವುದು ನನ್ನ ವಾದವಲ್ಲ. ಆದರೆ 600ಕ್ಕೂ ಹೆಚ್ಚು ಜಾಗಗಳಲ್ಲಿ ರೈತಮಿತ್ರ ಕೇಂದ್ರಗಳ ವ್ಯವಸ್ಥೆ ಜಾರಿಗೆ ಬಂದಿದೆ. ಮುಂದಿನ ತಿಂಗಳುಗಳಲ್ಲಿ ಅವುಗಳಿಗೆ ನಾವು ಇನ್ನೂ ಹೆಚ್ಚು ವೈಜ್ಞಾನಿಕವಾದಂಥ ರೀತಿಯಲ್ಲಿ ಶಕ್ತಿಯನ್ನು ಕೊಟ್ಟು, ಅವುಗಳಿಗೆ ಬೇಕಾದಂಥ ಸಂಪನ್ಮೂಲಗಳನ್ನು ಕೊಟ್ಟು ಈ ಎಕ್ಸ್‌ಟೆನ್‌ಷನ್ ವರ್ಕ್ ರೈತರ ಪರವಾಗಿ ಅಥವಾ ರೈತರ ಬೆಂಗಾವಲಿಗೆ ನಿಲ್ಲತಕ್ಕಂಥ ಸನ್ನಿವೇಶವನ್ನು ನಿರ್ಮಾಣ ಮಾಡಬೇಕು ಎನ್ನುವುದು ನಮ್ಮ ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಪಾಲಿಸಿಯ ಉದ್ದೇಶ. ಈ ದೃಷ್ಟಿಯಿಂದಲೇ ನಾವು ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್‌ನವರ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿದ್ದೇವೆ. ಸುಮಾರು ಒಂದು ವರ್ಷದ ಕೆಳಗೆ ನಾನು, ನಮ್ಮ ಗೃಹ ಸಚಿವರು, ಕೃಷಿ ಸಚಿವರು, ತೋಟಗಾರಿಕಾ ಸಚಿವರು ಮತ್ತು ಸಹಕಾರ ಸಚಿವರುಗಳೆಲ್ಲಾ ಆನಂದ್‌ಗೆ ಹೋದಂಥ ಕಾಲದಲ್ಲಿ ಎನ್. ಡಿ. ಡಿ. ಬಿ. ಯವರ ಜೊತೆಯಲ್ಲಿ ಮಾಡಿಕೊಂಡ ಒಪ್ಪಂದಗಳಲ್ಲಿ ಕೆಲವು ಇಷ್ಟು ಸುಸೂತ್ರವಾಗಿ ಮತ್ತು ಇಷ್ಟು ಕ್ಷಿಪ್ರಗತಿಯಲ್ಲಿ ಪ್ರಾರಂಭವಾಗುತ್ತದೆ ಎನ್ನುವ ಭರವಸೆ ಇರಲಿಲ್ಲ. ಮೊನ್ನೆತಾನೆ ನಾವು ನಮ್ಮ ಸ್ನೇಹಿತರಾದಂಥ ಶ್ರೀಮಾನ್ ಬಚ್ಚೇಗೌಡರವರ ಕ್ಷೇತ್ರಕ್ಕೆ ಹೋಗಿ ಸುಮಾರು 150 ಕೋಟಿ ರೂಪಾಯಿಗಳ ಹೋಲ್‌ಸೇಲ್ ಮಾರ್ಕೆಟ್‌ಗಾಗಿ ಶಂಕುಸ್ಥಾಪನೆ ಮಾಡಿದೆವು. ಇದರ ಉದ್ದೇಶ ಏನೆಂದರೆ ಈ ದಿವಸ ನಮ್ಮ ರಾಜ್ಯದ ಅಗ್ರಿಕಲ್ಚರ್ ಹೇಗೆ ಮುಂದುವರಿದೆದೆಯೋ ಹಾಗೆಯೇ ಇನ್ನೂ ದೊಡ್ಡ ಪ್ರಮಾಣದಲ್ಲಿ ಹಾರ್ಟಿಕಲ್ಚರ್ ಚೆನ್ನಾಗಿ ಬೆಳೆಯುತ್ತಿದೆ. ಆದ್ದರಿಂದ ಈ ಹಾರ್ಟಿಕಲ್ಚರಿಗೆ ಕೂಡ ಯೋಗ್ಯವಾದಂಥ ಚೌಕಟ್ಟನ್ನು ನಿರ್ಮಾಣ ಮಾಡಬೇಕಾಗಿರುವುದು ಬಹು ಅವಶ್ಯಕ ಎನ್ನತಕ್ಕಂಥಾದ್ದನ್ನು ಗಮನಿಸಿ ಈ 150 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹೋಲ್‌ಸೇಲ್ ವೆಜಿಟೆಬಲ್ಸ್ ಅಂಡ್ ಫ್ರೂಟ್ಸ್ ಸಲುವಾಗಿ ಟರ್ಮಿನಲ್ ಮಾರ್ಕೆಟ್‌ನ್ನು ಮಾಡುತ್ತಿದ್ದೇವೆ. ಈ ಮಾರುಕಟ್ಟೆ ನಿರ್ಮಾಣದ ಕೆಲಸ ಇನ್ನು 18 ತಿಂಗಳಲ್ಲಿ ಮುಕ್ತಾಯವಾಗುತ್ತದೆಂದು ಡಾ: ಅಮೃತ ಪಟೇಲ್ ಮತ್ತು ಡಾ: ಕುರಿಯನ್ ಅವರುಗಳು ಶಂಕುಸ್ಥಾಪನೆಗೆ ಬಂದಿದ್ದು ನಮಗೆ ಅಭಯವನ್ನು ಕೊಟ್ಟಿದ್ದಾರೆ. ಈ ಸದನದಿಂದ ಇವತ್ತು ಎನ್. ಡಿ. ಡಿ. ಬಿ. ಯವರಿಗೆ ಅನಂತವಾದಂಥ ಕೃತಜ್ಞತೆಗಳನ್ನು ಸಮರ್ಪಣೆ ಮಾಡಬೇಕಾಗಿರತಕ್ಕಂಥಾದ್ದು ನಮ್ಮ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಏಕೆಂದರೆ ಒಂದಲ್ಲ ಒಂದು ಕಾರಣಕ್ಕೋಸ್ಕರ ಇಂಥ ಸಂಸ್ಥೆಗಳ ಸಹಭಾಗಿತ್ವ ಕೆಲವು ಸಮಯದಲ್ಲಿ ಇಗೊ-ಕಾನ್‌ಫ್ಲಿಕ್ಟ್ ಬಂದುಬಿಡುತ್ತದೆ, ಕೆಲವು ಸಮಯದಲ್ಲಿ ಆನೆಸ್ಟ್ ಡಿಫರೆನ್ಸ್ ಆಫ್ ಒಪಿನಿಯನ್ ಬರುತ್ತದೆ. ಆದರೆ ಈ ಪ್ರಾಜೆಕ್ಟ್ ಮಟ್ಟಿಗೆ ಅಂಥ ಯಾವುದೇ ತೊಂದರೆ

ಇಲ್ಲದಿರತಕ್ಕಂಥಾದ್ದು ಈ ಮಾರುಕಟ್ಟೆಯ ಕೆಲಸ ಪ್ರಾರಂಭವಾಗಲಿಕ್ಕೆ ಒಳ್ಳೆಯ ಅನುಕೂಲವಾಗಿರತಕ್ಕಂಥ ವಾತಾವರಣ ಬಂದಿದೆ. ಡಬ್ಲ್ಯು.ಟಿ.ಒ. ಬಗ್ಗೆ ಬಹಳ ಪ್ರಸ್ತಾವನೆಗಳು ನಡೆದವು. ನಮ್ಮ ರಾಜ್ಯಪಾಲರ ಭಾಷಣದಲ್ಲಿ ಕೂಡ ನಾವು ಸಾಕಾದಷ್ಟು ವಿಚಾರಗಳನ್ನು ನಮೂದಿಸಿದ್ದೇವೆ. ಡಬ್ಲ್ಯು.ಟಿ.ಒ. ವಿಚಾರದಲ್ಲಿ ನಾವು ಇನ್ನೂ ಹೆಚ್ಚು ತಿಳುವಳಿಕೆಯನ್ನು ಪಡೆಯಬೇಕಾಗಿದೆ. ನನ್ನಿಂದ ಮೊದಲ್ಗೊಂಡು ಈ ಸದನದ ಪ್ರತಿಯೊಬ್ಬ ಸದಸ್ಯರೂ ಕೂಡ ಹೆಚ್ಚು ವಿವರಗಳನ್ನು ಪಡೆಯಬೇಕಾಗಿರತಕ್ಕಂಥಾದ್ದು ಅವಶ್ಯಕವಿದೆ. ಈ ವಿಚಾರದಲ್ಲಿ ಕಳೆದ 7 ತಿಂಗಳ ಹಿಂದೆ ನಾನು ನನ್ನ ಮಂತ್ರಿಮಂಡಲದ ಜೊತೆಯಲ್ಲಿ ಆಳವಾದಂಥ ಚರ್ಚೆಯನ್ನು ನಡೆಸಿದಂಥ ಕಾಲದಲ್ಲಿ ಹೊರಬಂದಂಥ ಒಂದು ಫಲಶೃತಿ ಏನೆಂದರೆ, ಡಬ್ಲ್ಯು.ಟಿ.ಒ. ಬಗ್ಗೆ ಕೇಂದ್ರ ಸರ್ಕಾರ ಮಾತನಾಡುತ್ತದೆ, ಎಲ್ಲಾ ರಾಜ್ಯ ಸರ್ಕಾರಗಳು ಮಾತನಾಡುತ್ತವೆ, ಪ್ರೊ॥ಸ್ವಾಮಿನಾಥನ್ ಮಾತನಾಡುತ್ತಾರೆ, ಆದರೆ ಅದರ ಇಂಪ್ಯಾಕ್ಟ್ ಏನಾಗುತ್ತದೆ ಎನ್ನುವುದರ ಬಗ್ಗೆ ಆಳವಾದಂಥ ಅಧ್ಯಯನ ಇಲ್ಲದೆ ನಾವು ಒಂದು ಕನ್‌ಕ್ಲೂಷನ್‌ಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಮ್ಮ ಮಂತ್ರಿಮಂಡಲದ ಸದಸ್ಯರುಗಳೆಲ್ಲರೂ ಸೇರಿ ಒಂದು ಸೆಲ್‌ನ್ನು ಪ್ರಾರಂಭ ಮಾಡುವುದರ ಮೂಲಕ, ಈ ಡಬ್ಲ್ಯು.ಟಿ.ಒ. ಕರ್ನಾಟಕ ರಾಜ್ಯದ ವ್ಯವಸಾಯ ಕ್ಷೇತ್ರದಲ್ಲಿ ಎಂತಹ ಸವಾಲುಗಳನ್ನು ಮುಂದಿನ ವರ್ಷಗಳಲ್ಲಿ ಒಡ್ಡಬಹುದು, ಅದನ್ನು ಹೇಗೆ ಎದುರಿಸಬೇಕಾಗುತ್ತದೆ ಎನ್ನುವುದನ್ನು ಸ್ಟಡಿ ಮಾಡಬೇಕೆಂದು ನಾವು ಡಾ॥ಪ್ರೇಮನಾಥ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿದೆವು. ಡಾ॥ಪ್ರೇಮ್‌ನಾಥ್‌ರವರು ಮತ್ತು ಅವರ ಸಹಸದಸ್ಯರು ಅತ್ಯಂತ ಕಡಿಮೆ ಕಾಲದಲ್ಲಿ ಅವರು ಮಾಡಿದಂಥ ಅಧ್ಯಯನದ ಹಿನ್ನೆಲೆಯಲ್ಲಿ ಒಂದು ಇಂಟಿರಿಮ್ ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಆ ಇಂಟಿರಿಮ್ ರಿಪೋರ್ಟ್‌ನ್ನು ನಾವು ಮಾನ್ಯ ಸದಸ್ಯರುಗಳೆಲ್ಲರಿಗೂ ಕಳುಹಿಸಿಕೊಟ್ಟಿದ್ದೇವೆ ಮತ್ತು ನಮ್ಮ ರಾಜ್ಯದ ಸಂಸತ್ ಸದಸ್ಯರುಗಳ ಜೊತೆಯಲ್ಲಿ ಇದರ ಬಗ್ಗೆ ನಾನು ಮೂರು ಗಂಟೆಗಳ ಕಾಲ ಚರ್ಚೆ ಮಾಡಿದ್ದೇನೆ. ಹಾಗೆ ಸಮಾಲೋಚನೆ ನಡೆಸಿದಂಥ ಕಾಲದಲ್ಲಿ ಕಂಡು ಬಂದಂಥ ಸಂಗತಿ ಏನೆಂದರೆ ಬಹಳ ವಿಚಾರಗಳು ನಮ್ಮ ಸಂಸತ್ ಸದಸ್ಯರುಗಳಿಗೂ ಕೂಡ ಗೊತ್ತಿರಲಿಲ್ಲ ಎನ್ನತಕ್ಕಂಥ ಮಾತನ್ನು ಬಹಳ ಹಿರಿಯ ಸಂಸತ್ ಸದಸ್ಯರು ತಿಳಿಸಿದರು. ಜೊತೆಗೆ 'ಈ ರಿಪೋರ್ಟ್‌ನ್ನು ಎಲ್ಲಾ ಪಾರ್ಲಿಮೆಂಟ್ ಸದಸ್ಯರಿಗೂ ನೀವು ಕಳುಹಿಸಿಕೊಡಿ' ಎಂದು ಸಂಸತ್ ಸದಸ್ಯರು ಮತ್ತೊಂದು ಸಲಹೆಯನ್ನು ಮಾಡಿದರು. ಇದಾದ ಮಾರನೇ ದಿವಸದಿಂದ 'ನಿಮ್ಮ ಡಬ್ಲ್ಯು.ಟಿ.ಒ. ರಿಪೋರ್ಟ್‌ನ್ನು ಕಳುಹಿಸಿಕೊಡಿ' ಎಂದು ಗುಜರಾತ್ ಭವನದಿಂದ, ಮಹಾರಾಷ್ಟ್ರ ಸದನದಿಂದ ಹೀಗೆ ಬೇರೆ ಬೇರೆ ಕಡೆಯಿಂದ ನಮ್ಮ ಕರ್ನಾಟಕ ಭವನಕ್ಕೆ ಬೇಕಾದಷ್ಟು ಟೆಲಿಫೋನ್ ಕಾಲ್ಸ್ ಅಲ್ಲಿಯ ಸಂಸತ್ ಸದಸ್ಯರುಗಳಿಂದ ಬರುತ್ತಿದ್ದವು. ಇದನ್ನು ಇದಕ್ಕಿಂತ ಹಿಂದೆಯೇ ಮಾಡಬಹುದಿತ್ತು. ಡಬ್ಲ್ಯು.ಟಿ.ಒ. ಪ್ರಸ್ತಾವನೆ

ಆಗುತ್ತಿರತಕ್ಕಂಥಾದ್ದು ಕಳೆದ 15 ತಿಂಗಳುಗಳಿಂದ ಅಲ್ಲ. ಡಬ್ಲ್ಯು.ಟಿ.ಒ. ಪ್ರಸ್ತಾವನೆ ಬಹಳ ವರ್ಷಗಳಿಂದ ನಡೆಯುತ್ತಿದೆ. ಆದರೆ ಮುಂದೆ ಏನು ನಡೆಯುತ್ತದೆ ಎನ್ನತಕ್ಕಂಥಾದ್ದನ್ನು ಸಂಯೋಜನೆ ಮಾಡಲಿಕ್ಕೆ ನಮ್ಮಿಂದ ಸಾಧ್ಯವಾಗುವುದಿಲ್ಲ. ಏಕೆಂದರೆ ಇಂಟರ್‌ನ್ಯಾಷನಲ್ ಅಗ್ರಿಮೆಂಟ್ಸ್ ಬಹಳ ಕಾಂಪ್ಲೆಕ್ಸ್ ಇವೆ, ಬಹಳ ಟ್ರಿಕ್ಕಿ ಇರುತ್ತವೆ ಆದ್ದರಿಂದ ಅದರ ಬಗ್ಗೆ ಯಾರು ಹೆಚ್ಚು ಮಾಹಿತಿ ಪಡೆದಿದ್ದಾರೆ, ಅದರ ಬಗ್ಗೆ ಅನುಭವ ಪಡೆದಿದ್ದಾರೆ ಅಂಥವರಿಂದ ನಾವು ಮಾರ್ಗದರ್ಶನವನ್ನು ಪಡೆಯಬೇಕಾಗುತ್ತದೆ. ಈ ಸಮಸ್ಯೆ ಗಂಭೀರತೆಯ ಬಗ್ಗೆ ಸುಮಾರು ಎರಡು ತಿಂಗಳ ಹಿಂದೆ ಮೊಟ್ಟಮೊದಲನೆಯ ಕಾಗದವನ್ನು ಬರೆದು ಮಾನ್ಯ ಪ್ರಧಾನಮಂತ್ರಿಗಳ ಗಮನಕ್ಕೆ ಕೂಡ ತಂದಿದ್ದೆ. ಡಬ್ಲ್ಯು.ಟಿ.ಒ. ತರತಕ್ಕಂಥ ಸವಾಲುಗಳನ್ನು ನಮ್ಮ ರಾಜ್ಯಗಳು ಎದುರಿಸಲಿಕ್ಕೆ ನಮ್ಮ ದೇಶ ಎದುರಿಸಲಿಕ್ಕೆ ಸಿದ್ಧವಾಗಿದೆಯೇ? ಎನ್ನುವುದರ ಬಗ್ಗೆ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ಒಂದನ್ನು ಕರೆದು ಅದರಲ್ಲಿ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಯಲ್ಲಿ ನೀವು ಸಮಾಲೋಚನೆ ಮಾಡುವುದರಿಂದ ದೇಶದ ರೈತಾಪಿ ಜನಗಳಿಗೆ ನೀವು ಸಾಕಾದಷ್ಟು ಇನ್‌ಶೂರೆನ್ಸ್‌ನ್ನು ಒದಗಿಸಿಕೊಡಬಹುದೆಂದು ಅವರಿಗೆ ಪತ್ರ ಬರೆದಿದ್ದೆ. ಆದರೆ ನನ್ನ ಪತ್ರಕ್ಕೆ ಅವರಿಂದ ಉತ್ತರ ಬರದಿದ್ದರೂ ಕೂಡ ಕಳೆದ ಸಲ ಬೆಂಗಳೂರಿಗೆ ಬಂದಾಗ ನಾನು ಅವರ ಗಮನಕ್ಕೆ ಈ ವಿಚಾರವನ್ನು ತಂದಿದ್ದೆ. ಮತ್ತು ನನ್ನ ದೃಷ್ಟಿಕೋನ ಈ ವಿಚಾರದಲ್ಲಿ ಏನಿತ್ತು ಅದರ ಪೂರ್ಣ ವಿವರಣೆಯನ್ನು ನಾನು ಅವರೊಂದಿಗೆ ಏರ್‌ಪೋರ್ಟ್‌ನಿಂದ ವಿಧಾನಸೌಧಕ್ಕೆ ಬರುವ 20 ನಿಮಿಷದಲ್ಲಿ ಕೊಡತಕ್ಕಂಥ ಅವಕಾಶ ಸಿಕ್ಕಿತ್ತು. ಅದು ಅವರ ಮೇಲೆ ಮಹತ್ತರವಾದಂಥ ಪರಿಣಾಮ ಉಂಟುಮಾಡಿತ್ತು. ಏಕೆಂದರೆ ವಾಪಸ್ಸು ದೆಹಲಿಗೆ ಹೋಗುವಾಗ ವಿಮಾನ ಹತ್ತಲಿಕ್ಕೆ ಮೊದಲು ಮಾನ್ಯ ಪ್ರಧಾನಮಂತ್ರಿಗಳು ನನ್ನನ್ನು ಪಕ್ಕಕ್ಕೆ ಕರೆದು ಕೇಳಿದರು "Are you serious about this Chief Ministers 'Conference' I said, Yes, I am serious. It will be helpful to you, it will be helpful to Goverment of India so that we can share our experiences, share our perceptions." ಎಂದು ಹೇಳಿದೆ. ಮಾರನೇ ದಿವಸ ಮಾನ್ಯ ಪ್ರಧಾನ ಮಂತ್ರಿಗಳು ರಾಜ್ಯ ಸಭೆಯಲ್ಲಿ ಮಾತನಾಡುತ್ತಾ ಆಂಧ್ರಪ್ರದೇಶದ ಮತ್ತು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಈ ವಿಚಾರವನ್ನು ಚರ್ಚೆ ಮಾಡುವ ಸಲುವಾಗಿ 'ಮುಖ್ಯಮಂತ್ರಿಗಳ ಸಮ್ಮೇಳನವನ್ನು ಕರೆಯಲಿಕ್ಕೆ' ಸೂಚನೆ ಮಾಡಿದ್ದಾರೆ, ನಾನು ಆ ಮುಖ್ಯಮಂತ್ರಿಗಳನ್ನು ಕರೆಯುತ್ತಿದ್ದೇನೆ ಎನ್ನತಕ್ಕಂಥ ಆಶ್ವಾಸನೆಯನ್ನು ರಾಜ್ಯಸಭೆಯಲ್ಲಿ ಅವರು ಕೊಟ್ಟರು. ಇದಕ್ಕಾಗಿ ನಾನು ಮಾನ್ಯ ಪ್ರಧಾನಮಂತ್ರಿಗಳಿಗೂ ಕೂಡ ಆಭಾರಿಯಾಗಿದ್ದೇನೆ. ಏಕೆಂದರೆ ಸಮಸ್ಯೆ ತೀವ್ರತೆ, ಸಮಸ್ಯೆ ಆಳ, ಸಮಸ್ಯೆಯ ವ್ಯಾಪಕತೆ ಇವೆಲ್ಲವುಗಳನ್ನು ಗಮನಿಸಿ ಇಂಥ ಒಂದು ನಿರ್ಣಯಕ್ಕೆ ಮಾನ್ಯ ಪ್ರಧಾನ ಮಂತ್ರಿಗಳು ಬಂದಿರತಕ್ಕಂಥಾದ್ದು

ನಮಗೆ ಸಮಾಧಾನವನ್ನು ತಂದುಕೊಟ್ಟಿದೆ. ಒಂದು ಪಕ್ಷ ಮಾನ್ಯ ಪ್ರಧಾನ ಮಂತ್ರಿಗಳು ಸಭೆಯನ್ನು ಕರೆಯದಿದ್ದರೆ ನೀವೇ ಮುಖ್ಯಮಂತ್ರಿಗಳ ಸಭೆಯನ್ನು ಕರೆಯಬೇಕೆನ್ನುವ ಸಲಹೆಯನ್ನು ವಿರೋಧ ಪಕ್ಷದ ಸಂಸತ್ ಸದಸ್ಯರು ನಮಗೆ ದೆಹಲಿಯಲ್ಲಿ ಕೊಟ್ಟರು. ಆದರೆ ನನ್ನ ದೃಢ ವಿಶ್ವಾಸ, ಪ್ರಾಮಾಣಿಕವಾದಂಥ ಅನಿಸಿಕೆ ಏನಿತ್ತೆಂದರೆ, ಇಂಥ ಒಂದು ತೀವ್ರತರವಾದಂಥ ಪರಿಸ್ಥಿತಿಯನ್ನು ನಮ್ಮ ರೈತರು ಎದುರಿಸತಕ್ಕಂಥ ಕಾಲದಲ್ಲಿ ರಾಷ್ಟ್ರದ ಪ್ರಧಾನಮಂತ್ರಿಗಳು ಇಂಥ ಸಭೆಯನ್ನು ಕರೆಯಬೇಕೇ ಹೊರತು ಒಬ್ಬಿಬ್ಬ ಮುಖ್ಯಮಂತ್ರಿಗಳು ಇಂಥ ಸಭೆಯನ್ನು ಕರೆದರೆ ಮಾನ್ಯ ಪ್ರಧಾನಮಂತ್ರಿಗಳು ಮುಂದೆ ಕರೆಯುವಂಥ ಸಭೆಗೆ ಏನು ಮಹತ್ವ ಸಿಗಬೇಕೋ ಆ ಮಹತ್ವ ಇದಕ್ಕೆ ಸಿಗುವುದಿಲ್ಲ ಎನ್ನುವ ಕಾರಣಕ್ಕೋಸ್ಕರ ನಾವು ಆ ಪ್ರಯತ್ನವನ್ನು ಮಾಡಲಿಕ್ಕೆ ಹೋಗಲಿಲ್ಲ.

4.10 ಪಿಎಂ

ಇನ್ನು ನಮ್ಮ ಗ್ರಾಮಾಂತರ ಪ್ರದೇಶದ ಕ್ಷೇತ್ರಗಳಲ್ಲಿ ಬಹಳ ಬದಲಾವಣೆಗಳು ಪ್ರಾರಂಭವಾಗಿವೆ. ಸ್ವಚ್ಛಗ್ರಾಮ ಎಂಬ ಕಲ್ಪನೆ ಏನಿದೆ ಅದು ಹೊಸ ಕಲ್ಪನೆಯೇನಲ್ಲ. ಇದು ನಮ್ಮ ನೂರಾರು ವರ್ಷಗಳ ಕಲ್ಪನೆ. ಅಧಿಕಾರಕ್ಕೆ ಬಂದಂಥ ಸರ್ಕಾರಗಳು ಅದಕ್ಕೆ ಬೇರೆ ಬೇರೆ ಹೆಸರುಗಳನ್ನು ಬದಲಾವಣೆ ಮಾಡಿಕೊಂಡು ಅದರಿಂದ ನಾವು ಸಮಾಧಾನಪಟ್ಟುಕೊಂಡು, ನಾವು ನಮ್ಮ ಬಡ್ಜೆಟ್ ಭಾಷಣವನ್ನು ಓದಿ ಮನೆಗೆ ಹೋಗಿದ್ದೇವೆ. ಆದರೆ, ಆ ಸ್ವಚ್ಛ ಗ್ರಾಮವೆಂಬ ಕಲ್ಪನೆಗೆ ಒಂದು ಸಾಂಘಿಕ ಚೌಕಟ್ಟನ್ನು ನಾವು ಕೊಟ್ಟ ಸಮಾಧಾನ ನಮಗಿದೆ. ಏನದು ಸಾಂಘಿಕ ಚೌಕಟ್ಟು? ಆ ಸ್ವಚ್ಛಗ್ರಾಮ ನಿರ್ಮಾಣದ ಕಾಲದಲ್ಲಿ ಯಾರು ಆ ಕಾರ್ಯಕ್ರಮದ ಫಲಾನುಭವಿಗಳಿದ್ದಾರೆ, ಅವರು ಕೂಡ ಆ ಕಾರ್ಯಕ್ರಮದಲ್ಲಿ ತಮ್ಮ ಒಂದು ಅಂಶವನ್ನು ತಮ್ಮ ಕೊಡುಗೆಯನ್ನಾಗಿ ಕೊಡಬೇಕೆನ್ನುವುದು ಇದೆ. ಇದೊಂದು ಪಾರ್ಟಿಸಿಪೇಟರಿ ಅಪ್ರೋಚ್, ಪಾರ್ಟ್‌ನರ್‌ಷಿಪ್ ಕಾಂಟ್ರಾಕ್ಟ್ ಇರುವ ಹಾಗೆ. ಆದ್ದರಿಂದಲೇ ನಾವು ಖರ್ಚು ಮಾಡುವ 20 ಲಕ್ಷ ರೂಪಾಯಿಗಳಲ್ಲಿ ಯಾವ ಗ್ರಾಮದವರು ತಮ್ಮ ಗ್ರಾಮವನ್ನು ಸ್ವಚ್ಛ ಗ್ರಾಮವೆಂದು ಅಪ್‌ಗ್ರೇಡ್ ಮಾಡಲಿಕ್ಕೆ ಇಷ್ಟಪಡುತ್ತಾರೆಯೋ, ಅವರಿಗೆ ಸೆನ್ಸ್ ಆಫ್ ಪಾರ್ಟಿಸಿಪೇಷನ್, ಸೆನ್ಸ್ ಆಫ್ ಓನರ್‌ಷಿಪ್ ಇರಬೇಕೆಂಬ ದೃಷ್ಟಿಯಿಂದ ಅವರು ತಮ್ಮದೇ ಆದ ಶೇ.10ರಷ್ಟನ್ನು ಕಾಂಟ್ರಿಬ್ಯೂಷನ್ ಕೊಡಬೇಕೆಂದು ಕಡ್ಡಾಯ ಮಾಡಿದ್ದೇವೆ. ಇದರ ಬಗ್ಗೆ ಸ್ವಲ್ಪ ನಮಗೂ ಮತ್ತು ಹುಡ್ಕೋದವರಿಗೂ ತಕರಾರಿದ್ದು, ಇದಕ್ಕೆ ಬೇಕಾದ 200 ಕೋಟಿ ರೂಪಾಯಿಗಳನ್ನು ನಾವು ಸರಿ ಹೊಂದಿಸಬೇಕಿದ್ದು, ಮೊನ್ನೆ ತಾನೆ ನಾವು ಈ ಬಿಕ್ಕಟ್ಟನ್ನು ನಿವಾರಣೆ ಮಾಡಿದೆವು. ಈಗಾಗಲೇ ಸುಮಾರು 20-30 ಕೋಟಿ ರೂಪಾಯಿಗಳನ್ನು ಅವರು ಮಾಡಿದ್ದು, ಇನ್ನೂ 180 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ದಿಸೆಯಲ್ಲಿ ಅವರು ಕೆಲವು ಷರತ್ತುಗಳನ್ನು ಹಾಕಿದ್ದಾರೆ. ಲ್ಯಾಂಡ್ ಆರ್ಮಿ ಕಾರ್ಪೋರೇಷನ್ ಅವರ ಈಕ್ವಿಟಿ ಬೇಸ್ ದೊಡ್ಡದು

ಮಾಡುವ ಮೂಲಕ ನಾವು ನಿಮಗೆ 200 ಕೋಟಿ ರೂಪಾಯಿಗಳನ್ನು ಆ ಒಂದು ಕಾರ್ಯಕ್ರಮಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಹುಡ್ಕೋವನ್ನು ನಾನು ಮತ್ತೊಮ್ಮೆ ಸ್ಮರಿಸಬೇಕಾಗಿದೆ. ಈ ಒಂದು ಅರ್ಥ ಪೂರ್ಣವಾದ ಕಾರ್ಯಕ್ರಮಕ್ಕೆ ಅವರು ಹಿಂದೆ ಹೇಗೆ ನಮ್ಮೆಲ್ಲಾ ಕಾರ್ಯಕ್ರಮಗಳಿಗೂ ಕೂಡ ಸ್ಪಂದಿಸಿದ್ದಾರೆಯೋ, ಅದೇ ರೀತಿ ಈ ಕಾರ್ಯಕ್ರಮಕ್ಕೂ ಕೂಡ ಒದಗಿಸಬೇಕಾದ 200 ಕೋಟಿ ರೂಪಾಯಿಗಳನ್ನು ನಮಗೆ ತುಂಬಿ ಕೊಡುವ ತೀರ್ಮಾನವನ್ನು ಅವರು ಮಾಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ನೀರು ಸರಬಾರಜು ವ್ಯವಸ್ಥೆ ಇದೆ. ಈ ವಿಚಾರದಲ್ಲಿ ಪ್ರತಿ ಬೇಸಿಗೆಯಲ್ಲೂ ಬಹಳ ಕಠಿಣ ಪರಿಸ್ಥಿತಿಯನ್ನು ಎಲ್ಲಾ ರಾಜ್ಯಗಳೂ ಕೂಡ ಅನುಭವಿಸುತ್ತವೆ. ನಿನ್ನೆ ತಾನೆ ಮಹಾರಾಷ್ಟ್ರದ ರಾಜ್ಯಪಾಲರನ್ನು ನಾನು ಭೇಟಿ ಮಾಡಿದ್ದಾಗ ಅವರು ಮಹಾರಾಷ್ಟ್ರದಲ್ಲಿ ತೀವ್ರ ಸ್ವರೂಪದ ಡ್ರೌಟ್ ಸಿಚುಯೇಷನ್ ಬಂದಿದೆ ಎಂದರು. ರಾಜಾಸ್ತಾನದ ಮುಖ್ಯಮಂತ್ರಿಗಳು ಬೆಂಗಳೂರಿಗೆ ಬಂದಿದ್ದಾಗ ಅವರು ಇಡೀ ರಾಜ್ಯದಲ್ಲಿ ದೊಡ್ಡ ಡ್ರೌಟ್ ಇದೆ ಎಂದು ಹೇಳಿದರು. ಇವತ್ತು ನಮ್ಮ ದೇಶದ ವ್ಯವಸ್ಥೆ ಹೇಗಿದೆ ಎಂದರೆ ರಾಜಸ್ತಾನದಲ್ಲಿ ಡ್ರೌಟ್ ಆದರೆ, ಕರ್ನಾಟಕದಲ್ಲಿ ನಮ್ಮ ರೈತ ಬೆಳೆದ ಸಾಮಗ್ರಿ, ವಸ್ತುಗಳನ್ನು ನಾವು ಸಂಗ್ರಹಿಸಲು ಗೋಡೌನ್ ಇಲ್ಲ. ಆದ್ದರಿಂದ, ಇದನ್ನು ಗಮನಿಸಿ, ಈ ಗೋಡೌನ್ ವ್ಯವಸ್ಥೆಯನ್ನು ಇನ್ನೂ ಹೆಚ್ಚು ಮಾಡಬೇಕೆಂಬ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ. ಅದಕ್ಕೆ ಬೇಕಾದ ಪೂರಕ ಕಾರ್ಯಕ್ರಮಗಳನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಈ ಹಿನ್ನೆಲೆಯಲ್ಲಿ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಕೋ-ಆಪರೇಟೀವ್ ಮಾರ್ಕೆಟಿಂಗ್ ಸೊಸೈಟಿಗಳನ್ನು ಇನ್ನೂ ಹೆಚ್ಚು ಶಕ್ತಿಶಾಲಿಯನ್ನಾಗಿ ಮಾಡಬೇಕೆಂಬುದು ನಮ್ಮ ದೃಷ್ಟಿ ಮತ್ತು ಗುರಿಯಾಗಿದೆ. ಮೆಕ್ಕೆಜೋಳವಾಗಲಿ ಅಥವಾ ಗುಲಬರ್ಗಾದಲ್ಲಿ ಬೆಳೆಯುವ ತೂರ್‌ದಾಲ್ ಆಗಲಿ, ಟೊಮೊಟೋ ಆಗಲಿ ನಾವು ಖರೀದಿಸಬೇಕಿದ್ದರೆ, ಈ ಸೊಸೈಟಿಯನ್ನು ಇನ್ನು ಮುಂದೆ ನೋಡಲ್ ಏಜೆನ್ಸಿಯನ್ನಾಗಿ ಮಾಡಿಕೊಂಡು ಹೆಚ್ಚು ಜವಾಬ್ದಾರಿಯನ್ನು ಅವರ ಮೇಲೆ ಹಾಕಬೇಕೆಂಬುದು ನಮ್ಮ ವಿಕೇಂದ್ರೀಕರಣ ವ್ಯವಸ್ಥೆಯ ಸ್ವರೂಪ ಮತ್ತು ಮಾದರಿ ಎಂದು ಈ ಸಮಯದಲ್ಲಿ ನಾನು ಹೇಳುತ್ತೇನೆ. ರಸ್ತೆಗಳ ವಿಚಾರದಲ್ಲಿ, ಈಗಾಗಲೇ ನಮ್ಮ ಲೋಕೋಪಯೋಗಿ ಸಚಿವರು ಸಾಕಷ್ಟು ಹೇಳಿದ್ದಾರೆ. ರಾಜ್ಯಪಾಲರ ಭಾಷಣದಲ್ಲೂ ಕೂಡ ಸಾಕಷ್ಟು ನಮೂದಾಗಿದೆ. ನಮ್ಮ 76 ಸಾವಿರ ಕಿ.ಮೀ.ನ ಎಲ್ಲಾ ರಸ್ತೆಗಳನ್ನು 4 ವರ್ಷಗಳಲ್ಲಿ ನಾವು ಉತ್ತಮಪಡಿಸುತ್ತೇವೆಂಬ ಭ್ರಮೆ ನಮಗಿಲ್ಲ. ಅಂಥ ಆಶ್ವಾಸನೆಯನ್ನು ಕೊಡುವ ಕಡೆಗೂ ನಾವು ಹೋಗುವುದಿಲ್ಲ. ಆದರೆ, ನಿಯಮಿತವಾದ ಕೆಲವು ದಾರಿಗಳನ್ನು ಉತ್ತಮಪಡಿಸಲು ಆರ್ಗನೈಜೇಷನ್ ಆಫ್ ಸೆಟ್‌ಅಪ್ ಮಾಡಿದ್ದೇವೆ. ಕಳೆದ ವರ್ಷದ ಪ್ರಾರಂಭದಲ್ಲಿ 180 ಕೋಟಿ ರೂಪಾಯಿಗಳನ್ನು ಕೊಟ್ಟಾಗ, ಕೆಲವು ಕಾರ್ಯಕ್ರಮಗಳು ಸರಿಯಾಗಿ ನಡೆದಿರಬಹುದು, ಕೆಲವು ಸರಿಯಾಗಿ ನಡೆಯದಿರಬಹುದು. ಆದರೆ, ಈ ವರ್ಷ ನಾವು ಪ್ರಾರಂಭಿಸಿದ ಕಾರ್ಯಕ್ರಮಗಳೆಲ್ಲಕ್ಕೂ ಕೂಡ ನಾವು ಒಂದು

ಕಟಿಬದ್ಧತೆಯನ್ನು ಸ್ಥಾಪಿಸಿದ್ದೇವೆ. ಯಾವುದೇ ಕೆಲಸವನ್ನೂ ಕೂಡ ಪ್ರೀ-ಕ್ವಾಲಿಫೈ ಮಾಡಿ, ಟೆಂಡರ್ ಕರೆದು ನಂತರ 3 ವರ್ಷಗಳ ಕಾಲ ಮಾಡಿರುವ ರಸ್ತೆಗಳನ್ನು ಅವರು ಮೇನ್‌ಟೇನ್ ಮಾಡಬೇಕೆಂಬ ಅಕೌಂಟಬಿಲಿಟಿಯನ್ನು ಅವರ ಮೇಲೆ ಹಾಕಿರುವುದು, ಅವರಿಗೆ ಕೊಡಬೇಕಾಗುವ ಶೇ.20ರಷ್ಟು ಬಿಲ್‌ನ್ನು ಪಾವತಿಸದೆ, ನಮ್ಮಲ್ಲೇ ಠೇವಣಿಯನ್ನಾಗಿಟ್ಟುಕೊಂಡಿರುವುದು, ರಸ್ತೆಗಳನ್ನೇನು ರಿಪೇರಿ ಮಾಡುತ್ತೇವೆ, ಅವು 3 ವರ್ಷಗಳ ಮೇಲೂ ಕೂಡ ನಮ್ಮ ಕಣ್ಣಿಗೆ ರಿಪೇರಿಯಾಗಿರುವ ರಸ್ತೆಗಳೆಂದು ಎದ್ದು ಕಾಣುವ ಹಾಗಿರಬೇಕೆನ್ನುವ ದೃಷ್ಟಿಯಿಂದ ಇವುಗಳನ್ನು ಮಾಡಿದ್ದೇವೆ. ನಾವು ಹೊಸ ಸೇತುವೆಗಳನ್ನು ಕಟ್ಟಲು ವ್ಯವಸ್ಥೆ ಮಾಡಿದ್ದೇವೆ. ನಮ್ಮ ರೋಡ್ಸ್ ಅಂಡ್ ಬ್ರಿಡ್ಜಸ್ ಕಾರ್ಪೋರೇಷನ್ ಏನಿದೆ ಅದು ಅತ್ಯಂತ ಯಶಸ್ವಿಯಾಗಿ ಈ ರಸ್ತೆಗಳನ್ನು ರಿಪೇರಿ ಮಾಡುವ ಕಾರ್ಯಕ್ರಮದಲ್ಲಿ ಅದನ್ನು ನಾವು ಇನ್ಸ್‌ಟ್ರುಮೆಂಟ್ ಆಗಿ, ಸ್ಪೆಷಲ್ ಪರ್ಪಸ್ ವೆಹಿಕಲ್ ಆಗಿ ಉಪಯೋಗಿಸಿಕೊಂಡಿದ್ದೇವೆ. ಪವರ್ ವಿಚಾರದಲ್ಲಿ, ರಾಷ್ಟ್ರೀಯ ಅನಿಸಿಕೆ ಅನಿವಾರ್ಯವಾಗಿ ಆಗಲೇಬೇಕಾಗಿದೆ. ಒಂದು ರಾಜ್ಯದಲ್ಲಿ ನೀವು, ಇನ್ನೊಂದು ರಾಜ್ಯದಲ್ಲಿ ಕಾಂಗ್ರೆಸ್‌ನವರು, ಮತ್ತೊಂದು ರಾಜ್ಯದಲ್ಲಿ ಅವರು ಅಧಿಕಾರ ನಡೆಸಬಹುದು. ಆದರೆ, ಎಲ್ಲಾ ರಾಜ್ಯಗಳಲ್ಲೂ ಈ ಕಿವಿಗಳು ಕೇಳಿದಂತೆ, ಪ್ರತಿಯೊಬ್ಬ ಮುಖ್ಯಮಂತ್ರಿಯೂ ಪ್ರಧಾನ ಮಂತ್ರಿಗಳು ಕರೆದ ಸಭೆಯಲ್ಲಿ ಹೇಳಿದ ಮಾತುಗಳು ಏನೆಂದರೆ, ನಮ್ಮ ಸ್ಟೇಜ್ ಪವರ್ ಯುಟಿಲಿಟೀಸ್ ಏನಿವೆ ಅವು ಬಹಳ ಕಷ್ಟದಲ್ಲಿವೆ, ಅವುಗಳನ್ನು ನಾವು ಆರೋಗ್ಯದಾಯಕವನ್ನಾಗಿ ಮಾಡುವ ಕ್ಷೇತ್ರದಲ್ಲಿ ಕೇಂದ್ರಸರ್ಕಾರ ಮಧ್ಯೆ ಪ್ರವೇಶಿಸಿ, ರಾಜ್ಯ ಸರ್ಕಾರಗಳಿಗೆ ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸಿಕೊಟ್ಟರೆ, ಆಗ ಮಾತ್ರ ನಾವು ವಿದ್ಯುತ್ ವಿತರಣೆ ಮತ್ತು ಉತ್ಪಾದನೆಯಲ್ಲಿ ಸಾಕಷ್ಟು ಯಶಸ್ಸನ್ನು ಪಡೆಯಬಹುದೆಂಬುದು ಪ್ರತಿಯೊಬ್ಬ ಮುಖ್ಯಮಂತ್ರಿಯ ವಾದವಾಗಿತ್ತು. ನಮ್ಮ ಸರ್ಕಾರದ ವಾದವೂ ಅದೇ ಆಗಿದೆ. ಹಿಂದಿನ ಸರ್ಕಾರ ಪ್ರತಿವರ್ಷವೂ 13 ಪರ್ಸೆಂಟ್ ಆಟೋಮ್ಯಾಟಿಕ್ ಪವರ್ ಟಾರಿಫ್ ಹೈಕ್ ಮಾಡಬೇಕೆಂಬ ತೀರ್ಮಾನ ಮಾಡಿತ್ತು. ಅದನ್ನು ನಾವು ಅನುಸರಿಸಲಿಕ್ಕೆ ಪ್ರಯತ್ನಿಸಿದೆವು. ಆದರೆ, ಈ ವರ್ಷ ನಮ್ಮ ಆಹಾರ ಕ್ಷೇತ್ರದಲ್ಲಾಗಿರುವ ಪರಿಮಿತಗಳನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ವಿರೋಧಿ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅನಂತರ ನಾವು ನೀವು ಒಟ್ಟಿಗೆ ಸೇರಿ ಅಂತಿಮ ನಿರ್ಧಾರಕ್ಕೆ ಬಂದೆವು. ಆ ನಿರ್ಧಾರವೇನೆಂದರೆ, ಈ ವರ್ಷ ಅಗ್ರಿಕಲ್ಚರಿಸ್ಟ್ ಏನಿದ್ದಾರೆ, ರೈತರ ಪಂಪ್‌ಸೆಟ್ಟುಗಳೇನಿವೆ ಅವುಗಳ ಮೇಲೆ ನಮ್ಮ ರೆಗ್ಯುಲೇಟರಿ ಕಮಿಷನ್‌ರವರು 142 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ತೆರಿಗೆಯೇನು ಹಾಕಿದ್ದರು, ಅದನ್ನು ಒಂದು ವರ್ಷದ ಮಟ್ಟಿಗೆ ಮುಂದುವರೆಸಿ ಎಂದು ಮಾನ್ಯ ಸದಸ್ಯರ ಜೊತೆಯಲ್ಲಿ ಸಮಾಲೋಚಿಸಿದ ನಂತರ ಈ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ. ಈ ಮಧ್ಯೆ ನಾವು ವಿದ್ಯುತ್ ಕ್ಷೇತ್ರದಲ್ಲಿ ಕೊಂಡ ಸುಧಾರಣೆಗಳನ್ನು ತರಲಿಕ್ಕೆ ವಿದ್ಯುತ್ ಮಂಡಳಿಗೆ ಮ್ಯಾಂಡೇಟ್‌ನ್ನು ಕೊಟ್ಟಿದ್ದೇವೆ, ಏಕೆಂದರೆ, ಈ ಟ್ರಾನ್ಸ್‌ಮಿಷನ್ ಲಾಸಸ್ ಸುಮಾರು 36

ರಿಂದ 38 ಪರ್ಸೆಂಟ್ ಇದೆ ಎಂದು ಏನು ಹೇಳುತ್ತಾರೆ ಇದು ಸರಿಯಾಗಿ ಗೊತ್ತಿಲ್ಲ. ಎಲ್ಲಿಯವರೆವಿಗೂ ನಾವು ಈ ಮೀಟರ್‌ಗಳನ್ನು ಅಳವಡಿಸುವುದಿಲ್ಲವೋ ಅಂದರೆ, ಈ 16 ಲಕ್ಷ ಭಾಗ್ಯಜ್ಯೋತಿಗಳಿಗೆ ಮೀಟರ್‌ಗಳನ್ನು ಅಳವಡಿಸಿಲ್ಲ, 12 ಲಕ್ಷ ಪಂಪ್ ಸೆಟ್ಟುಗಳಿಗೆ ಮೀಟರ್‌ಗಳನ್ನು ಅಳವಡಿಸಿಲ್ಲವಾದ್ದರಿಂದ ನಾವು ಈ ಬಗ್ಗೆ ವೈಜ್ಞಾನಿಕವಾಗಿ ಗೆಸ್ ವರ್ಕ್ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಆದರೆ ಇದನ್ನು ನಾವು ಕನ್‌ವಿಕ್ಷನ್ ಎಂದು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ 38 ಪರ್ಸೆಂಟ್ ಲಾಸೆಸ್ ಇದು ಎಫಿಷಿಯೆನ್ಸಿ, ಕಾಂಪಿಟೆನ್ಸಿ ಈ ಎರಡು ವಿದ್ಯುತ್ ಮಂಡಳಿಯಲ್ಲಿ ಆಗಬೇಕಾಗಿದೆ. ಈ ವಿದ್ಯುತ್ ಕಳ್ಳತನ ಮಾಡುವವರ ಬಗ್ಗೆ ಯಾವುದೇ ರೀತಿಯಿಂದಲೂ ನಾವು ಮೃದು ಧೋರಣೆಯನ್ನು ತಾಳುವುದು ಸಾಧುವಲ್ಲವೆಂದು ಈ ಸದನ ಒಪ್ಪುತ್ತದೆಂದು ನಾನು ಭಾವಿಸುತ್ತೇನೆ. ನಮ್ಮ ಈಗಿರುವ ವಿಧೇಯಕದಲ್ಲಿ ಯಾರು ವಿದ್ಯುತ್ ಕಳ್ಳತನ ಮಾಡುತ್ತಾರೋ ಮತ್ತು ಇಂಥವರಿಗೆ ಮಂಡಳಿಯಿಂದ ಸಹಾಯ ಮಾಡಿ ಶಾಮೀಲಾಗುತ್ತಾರೋ ಅಂಥವರನ್ನು ಜೈಲಿಗೆ ಕಳುಹಿಸುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ, ಇದರ ಬಗ್ಗೆ ಒಂದು ಹೊಸ ತಿದ್ದುಪಡಿಯ ವಿಧೇಯಕವನ್ನು ನಾನು ತರುತ್ತೇನೆ. ಬಹುಶಃ ಈ ಸದನ ಇದನ್ನು ಬೆಂಬಲಿಸುತ್ತದೆಂದು ನಾನು ಭಾವಿಸುತ್ತೇನೆ. ಯಾರು ಕಳ್ಳತನ ಮಾಡುತ್ತಾರೆ ಮತ್ತು ಇವರ ಜೊತೆಗೆ ಯಾರು ಶಾಮೀಲಾಗುತ್ತಾರೆ ಇವರಿಬ್ಬರನ್ನು ಕೂಡ ಜೈಲಿಗೆ ಕಳಿಹಿಸಲಿಕ್ಕೆ ನಾನು ಹೊಸ ಕ್ಲಾಸ್‌ಗಳನ್ನು ಈ ವಿಧೇಯಕದಲ್ಲಿ ಸೇರಿಸುವುದರ ಮೂಲಕ ನಾವು ವಿದ್ಯುತ್ ಕ್ಷೇತ್ರದಲ್ಲಿ ಕೊಂಚ ಸುಧಾರಣೆಗಳನ್ನು ತರುವುದಕ್ಕೆ ಪ್ರಯತ್ನಿಸುತ್ತೇವೆ. ನಮ್ಮ ಅನೇಕ ಸದಸ್ಯರುಗಳು ಅವರಿಗೆ ಸಿಕ್ಕಿದ ಸೀಮಿತವಾದ ಅವಕಾಶದಲ್ಲಿ ಹಲವಾರು ಸೂಚನೆಗಳನ್ನು ಮಾಡಿದ್ದಾರೆ, ಟೀಕೆ ಮಾಡಲಿಕ್ಕೆ ಯಾರಿಗೂ ಹೆಚ್ಚು ಸಮಯ ಸಿಕ್ಕಲಿಲ್ಲ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ನಾನು ಮತ್ತು ಸನ್ಮಾನ್ಯ ಸಭಾಧ್ಯಕ್ಷರವರು ಮಾನ್ಯ ವಿರೋಧ ಪಕ್ಷದ ನಾಯಕರವರನ್ನು ಬಹಳ ವಿಧವಾಗಿ ಕೇಳಿಕೊಂಡೆವು, ಬೆಲೆ ಕುಸಿತ ಮತ್ತು ರಾಜ್ಯಪಾಲರ ಭಾಷಣ ಇವೆರಡನ್ನು ಜೊತೆಯಾಗಿ ತೆಗೆದುಕೊಂಡಿದ್ದರೆ ಬಹುಶಃ ಇನ್ನೂ ಹತ್ತಾರು ಜನ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಸಾಧ್ಯವಾಗುತ್ತಿತ್ತು. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಚರ್ಚೆ ಇಷ್ಟು ಬೇಗ ಮುಗಿದಿರುವುದು ನನಗೂ ಸಮಾಧಾನವಾಗಿಲ್ಲವಾದರೂ ಅನಿವಾರ್ಯವಾಗಿರುವುದರಿಂದ ಮಾಡಬೇಕಾಯಿತು. ನಾನು ಇದೇ 26ರಂದು ಆಯವ್ಯಯ ಮಂಡನೆ ಮಾಡುವವನಿದ್ದು ಆ ಸಂದರ್ಭದಲ್ಲಿ ತಾವುಗಳು ರಾಜ್ಯದ ಆಗುಹೋಗುಗಳು ಹಾಗೂ ಗೊತ್ತುಗುರಿಗಳ ಬಗ್ಗೆ ದೀರ್ಘ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಲವಾರು ಮಾನ್ಯ ಸದಸ್ಯರುಗಳು ನಮ್ಮ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಮಾತನಾಡಿದ್ದಾರೆ, ಇದು ಕೇವಲ ಕರ್ನಾಟಕ ಮತ್ತು ಬೆಂಗಳೂರಿಗೆ ಸೀಮಿತವಾಗಿರದೆ ಇಡೀ ದೇಶದಲ್ಲಿ ಈ ಕಾನೂನು ಮತ್ತು ಸುವ್ಯವಸ್ಥೆ ಬಹಳ ಕಠಿಣವಾಗಿದೆ. ಸನ್ಮಾನ್ಯ ಪ್ರಧಾನಮಂತ್ರಿಗಳು ನಿನ್ನೆ ರಾತ್ರಿ ಎಲ್ಲಾ ರಾಜ್ಯಗಳಿಗೂ

ಕೂಡ ಒಂದು ವಿಶೇಷವಾದ ಸಂದೇಶವನ್ನು ಕೊಟ್ಟಿದ್ದಾರೆ. ಒಂದು ಸಣ್ಣ ಪುಕಾರ್‌ನಿಂದಾಗಿ ಕನಕಪುರದಲ್ಲಿ 13 ಜನ ಸತ್ತರು, ಆದ್ದರಿಂದ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ವಿಶ್ಲೇಷಣೆ ಮಾಡತಕ್ಕ ಕಾಲದಲ್ಲಿ ಯೋಚಿಸಬೇಕಾಗುತ್ತದೆ. ಏಕೆಂದರೆ, ಕಂಬಾಲಪಲ್ಲಿ ಘಟನೆಯ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿ ಅದನ್ನು ಸಿ.ಬಿ.ಐ.ಗೆ ಕೊಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಸೂಚಿಸಿದರು. ಅದರಂತೆ ನಾವು ಸಿ.ಬಿ.ಐ.ಗೆ ಕೊಟ್ಟ ಮೇಲೆ ಅವರು ಇದನ್ನು ವಿಚಾರಣೆ ಮಾಡುತ್ತಲೇ ಇದ್ದಾರೆ. ಮತ್ತೊಂದು ಪ್ರಕರಣದಲ್ಲಿ ಶ್ರೀ ವಸಂತ ಆಸ್ನೋಟಿಕರ್ ಬಗ್ಗೆ ನೀವು ಸಿ.ಬಿ.ಐ.ಗೆ ಕೊಡಿ ಎಂದರೂ ನಾನು ಒಪ್ಪಲಿಲ್ಲ, ಈಗ ಅದು ಚಾರ್ಜ್‌ಷೀಟ್ ಫೈಲ್ ಆಗಿದೆ ಅಷ್ಟೇ ವ್ಯತ್ಯಾಸ. ಸಿ.ಬಿ.ಐ. ಮತ್ತು ಸಿ.ಒ.ಡಿ. ಹೇಗೆ ಕಾರ್ಯ ರೂಪಿಸುತ್ತದೆ ಎನ್ನುವುದಕ್ಕೆ ಮಾನ್ಯ ಚನ್ನಿಗಪ್ಪನವರಿಗೆ ಒಂದು ಸಣ್ಣ ಉದಾಹರಣೆಯನ್ನು ಕೊಡಬಯಸುತ್ತೇನೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಸದಸ್ಯರು ಒಂದು ಕಾಲದಲ್ಲಿ ಪೋಲೀಸ್ ಇಲಾಖೆಯಲ್ಲಿ ಇದ್ದರು. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಅದಕ್ಕಾಗಿ ಅವರಿಗೆ ಹೇಳುತ್ತಿರಬಹುದು.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿ ಏನೆಂದರೆ, ನಾನು ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಹೇಳಲಿಲ್ಲ, ಆ ವಿಚಾರಣೆ ಚೆನ್ನಾಗಿ ನಡೆಯಬೇಕಾದರೆ ಕೆಲವು ಕಲ್‌ಪ್ರಿಟ್ಸ್‌ಗಳನ್ನು ಹಿಡಿದು ಚಾರ್ಜ್‌ಷೀಟ್ ಹಾಕುವಾಗ ಬಿಟ್ಟಿದ್ದಾರೆ, ಬಿಟ್ಟಿರುವ ಕಲ್‌ಪ್ರಿಟ್ಸ್‌ಗಳನ್ನು ಹಿಡಿಯಬೇಕೆಂದು ಹೇಳಿದ್ದೆ.

ಶ್ರೀ ಎಸ್.ಎಂ.ಕೃಷ್ಣ: ಅವರು ಮುಖ್ಯವಾಗಿ ಹೇಳಿದ್ದು ವೀರಪ್ಪನ್ ಹಿಡಿಯಿರಿ ಎಂದು. ಅವರು ಭಾಷಣ ಮಾಡುವಂಥ ಕಾಲದಲ್ಲಿ ಮಾನ್ಯ ಗೃಹ ಸಚಿವರು ಹಾಗೂ ನಾನು ಕೂಡ ಮಧ್ಯೆ ಪ್ರವೇಶಿಸಬೇಕಾಗಿ ಬಂತು. ಮರ್ಡರ್‌ಗಳನ್ನು ತಪ್ಪಿಸಲಿಕ್ಕೆ ಏನಾದರೂ constructive ಸಲಹೆ ಇದ್ದರೆ ಸರ್ಕಾರ ಅದಕ್ಕೆ ಮುಕ್ತವಾಗಿದ್ದು, ಅದರಂತೆ ಕಳ್ಳತನಗಳನ್ನು ತಪ್ಪಿಸುವುದಕ್ಕೆ ಏನಾದರೂ ಸಲಹೆ ಇದ್ದರೆ ಕೊಡಿ. ಈಗ ಹೊಸ ಬೆಳವಣಿಗೆ ಏನೆಂದರೆ, CBI has not taken over investigation of Kambalapalli incident in spite of our repeated requests. ಮಾನ್ಯ ಸದಾನಂದಗೌಡರವರೇ, ಇದಕ್ಕೆ ಔಷಧಿ ಎಲ್ಲಿ ಕೊಡುತ್ತೀರಿ? ಇದನ್ನು ರಿಪೇರಿ ಎಲ್ಲಿ ಮಾಡುತ್ತೀರಿ? ಅದಕ್ಕಾಗಿ ನಾವು ಅನುಭವಸ್ಥರು ಇದ್ದೇವೆ ಆದ್ದರಿಂದ ಇನ್ನು ಮುಂದೆ ನೀವು ನಮ್ಮ ಮಾತು ಕೇಳಿ. ನೀವು ಮತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರು ಇಬ್ಬರು ನಮ್ಮ ಮಾತುಗಳನ್ನು ಕೇಳಿದರೆ ಬೇಗ ರಿಜಲ್ಟ್ ಸಿಗುತ್ತದೆಂದು ನಾನು ಈ ಮಾತನ್ನು ಹೇಳಬೇಕಾಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಿಮ್ಮ ಅನುಭವವನ್ನು ಕೇಳುವುದಕ್ಕೆ ನಾವು ಅವರಿಬ್ಬರನ್ನು ಬಿಡುವುದಿಲ್ಲ.

ಶ್ರೀ ಎಸ್.ಎಂ.ಕೃಷ್ಣ: ನೀವು ದೃಷ್ಟಿ ಪರಿಹಾರಕ್ಕೆ ಇದ್ದೀರಿ ಎಂಬುದು ನನಗೆ ಗೊತ್ತಿದೆ. ಆದ್ದರಿಂದಲೇ ಮಾನ್ಯ ನರೇಂದ್ರಮೋದಿಯವರಿಗೆ ಅವರ ಬಗ್ಗೆ ಹೇಳಿದೆ. ಏಕೆಂದರೆ, ಎಲ್ಲಿಯವರೆಗೂ ಅವರು ಇರುತ್ತಾರೆ ಅಲ್ಲಿಯವರೆವಿಗೂ ಇವರಿಬ್ಬರೂ ಸರಿಯಾದ ದಾರಿಯಲ್ಲಿ ಹೋಗುವುದಕ್ಕೆ ಬಿಡುವುದಿಲ್ಲವೆನ್ನುವ ಗುಟ್ಟು ನನಗೆ ಗೊತ್ತು, ಆ ಗುಟ್ಟನ್ನು ಅವರೇ ನಾವು ಬಿಟ್ಟುಕೊಡುವುದಿಲ್ಲವೆಂದು ಹೇಳಿಕೊಂಡರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನೀವು ಹೇಳಿದಂತೆ ಕೇಳುವುದಕ್ಕೆ ಬಿಡುವುದಿಲ್ಲವೆಂದು ಹೇಳಿದೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಮುಖ್ಯಮಂತ್ರಿಗಳೇ, ನಾವು ಹೋಗುವ ದಾರಿ ಸರಿಯಿದ್ದ ಕಾರಣ ಅವರು ತಪ್ಪಿಸುವ ಕೆಲಸ ಮಾಡುವುದಿಲ್ಲ ಹಾಗೂ ಅವರು ಕೂಡ ನಾವು ಹೋಗುವ ಸರಿ ದಾರಿಯಲ್ಲಿಯೇ ಬರುತ್ತಿದ್ದಾರೆ, ಹಿಂದೆ ಇರುವವನು ಮುಂದುಗಡೆ ಹೋಗುವವನ ದಾರಿ ತಪ್ಪಿಸಲಿಕ್ಕೆ ಸಾಧ್ಯವಿಲ್ಲ, ಆದರೆ ಮುಂದೆ ಕುಳಿತಿರುವವರು ನಮ್ಮನ್ನು ದಾರಿ ತಪ್ಪಿಸುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಾರೆ. ಆದರೆ ಅದಕ್ಕೆ ನಾವು ಖಂಡಿತವಾಗಿ ಯಾವತ್ತೂ ಈಲ್ಡ್ ಆಗುವುದಿಲ್ಲ.

ಶ್ರೀ ಎಸ್.ಎಂ.ಕೃಷ್ಣ: ನಾವು ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ವಿಶೇಷವಾದ ಗಮನವನ್ನು ಹರಿಸುತ್ತಿದ್ದೇವೆ, ಆದರೆ ನಾನು ಒಂದು ವಿಚಾರವನ್ನು ಈ ಸದನದ ಮುಂದೆ ಸ್ಪಷ್ಟಪಡಿಸುವುದಕ್ಕೆ ಇಚ್ಛಿಸುತ್ತೇನೆ. ಕ್ರೈಮ್ ನಡೆದಾಗ ಕೆಲವು ಆಸಕ್ತ, ಹಿತಾಸಕ್ತ ವ್ಯಕ್ತಿಗಳು ತನಿಖೆ ಹೀಗೇ ನಡೆಯಬೇಕು, ತತ್‌ಕ್ಷಣ ಒಬ್ಬ ಸಬ್‌ಇನ್ಸ್‌ಪೆಕ್ಟರ್‌ರವರನ್ನು ಸಸ್‌ಪೆಂಡ್ ಮಾಡಬೇಕು, ಎಂದು ಹೇಳುತ್ತಾರೆ, ಇಲ್ಲದಿದ್ದರೆ ನಾವು ''ರಸ್ತಾರೋಕು'' ಮಾಡಿಸುತ್ತೇವೆ, ಜನ ಸೇರಿಸುತ್ತೇವೆ, ಎಂದು ಹೇಳಿ ಹೊಸ ಸಮಸ್ಯೆಯನ್ನು ಸೃಷ್ಟಿಸುವುದಕ್ಕೆ ಪ್ರಯತ್ನಿಸುತ್ತಾರೆ. ಉದಾಹರಣೆಗೆ ಮಂಡ್ಯದಲ್ಲಿ ನಡೆದ ಘಟನೆ ಬಗ್ಗೆ ಹೇಳುವುದಾದರೆ, ಇಬ್ಬರು ಅಪ್ರಾಪ್ತ ವಯಸ್ಸಿನ ಗಂಡು, ಹೆಣ್ಣು, ವಿದ್ಯಾರ್ಥಿಗಳು ಶಾಲೆಗೆ ಹೋಗುತ್ತಿರುತ್ತಾರೆ, ಈ ಶಾಲೆಗಳಲ್ಲಿ ಇವತ್ತು ಏನು ನಡೆಯುತ್ತಿವೆ? ನಾವು ನೀವು ಇದನ್ನು ಹೊಸದಾಗಿ ನೋಡಬೇಕೆ? ಹೊಸದಾಗಿ ಈ ವಿಚಾರ ತಿಳಿಯಬೇಕೆ? ಈಗಿನ ಕಾಲದ ಹುಡುಗರು, ಹುಡುಗಿಯರು ನಮ್ಮ ಕಾಲಕ್ಕಿಂತ ಬಹಳ ಮುಂದುವರೆದಿದ್ದಾರೆ. ಯಾವ ಕಾರಣಕ್ಕೆ ಅದು ನಡೆಯಿತು ಎಂಬುದನ್ನು ಯೋಚಿಸಬೇಕಲ್ಲವೆ? ಈ ಕುರಿತಾಗಿ ಮಾನ್ಯ ಗೃಹ ಸಚಿವರು ಯಾವ ತನಿಖೆಗೂ ನಾನು ಸಿದ್ಧನಿದ್ದೇನೆಂದು ಹೇಳಿದರು. ಸಿ.ಬಿ.ಐ. ದಿಂದ ಸರ್ಕಲ್ ಇನ್ಸ್‌ಪೆಕ್ಟರ್‌ವರೆಗೂ ಕೂಡ ತನಿಖೆ ಮಾಡಲಿಕ್ಕೆ ಸಿದ್ಧನಿದ್ದೇನೆಂದರು. ಆದರೆ ಇದಕ್ಕೆ ಒಪ್ಪದೆ 2 ಲಕ್ಷ ಕೊಡಬೇಕು,

ಅವರನ್ನು ಸಸ್‌ಪೆಂಡ್ ಮಾಡಿ ಮತ್ತೊಮ್ಮೆ ಪೋಸ್ಟ್‌ಮಾರ್ಟಂ ಮಾಡಬೇಕು ಎಂದು ಹೇಳಿದರೆ ಹೇಗೆ? ನಿಮ್ಮ ಸರ್ಕಾರ ಇದ್ದಾಗ ಇಂಥ ಅಸಹನೀಯವಾದ ಬೇಡಿಕೆಗಳು ಬಂದಾಗ, ಮಾನ್ಯ ಸಿಂಧ್ಯಾರವರು ಗೃಹ ಸಚಿವರಾಗಿದ್ದಂಥವರು ಇದನ್ನು ಒಪ್ಪುವುದಕ್ಕೆ ಸಾಧ್ಯವೆ? ನೀವೇ ಹೇಳಿ. ತಾವು ಕೇಳತಕ್ಕಂಥದಕ್ಕೆಲ್ಲಾ ಒಂದು ಜವಾಬ್ದಾರಿ ಇರಬೇಕು. ಕಂಬಾಲಪಲ್ಲಿಯಲ್ಲಿ ದಲಿತ ಸಮಾಜಕ್ಕೆ ಸೇರಿದ 7 ಜನರ ಆಹುತಿ ಸಂದರ್ಭದಲ್ಲಿ ಈ ಘಟನೆ ಬಗ್ಗೆ ತನಿಖೆ ಮಾಡಲು ಸಿ.ಬಿ.ಐ.ಗೆ ಒಪ್ಪಿಸಬೇಕೆಂದು ತಾವು ಕೇಳಿದ್ದಕ್ಕೆ ನಾವು ಸದರಿ ಘಟನೆಯ ತನಿಖೆಗೆ ಸಿ.ಬಿ.ಐ.ಗೆ ರೆಫರ್ ಮಾಡಿದೆವು. ಒಂದು ಸಮಸ್ಯೆ ಯಾವ ರೀತಿಯಾಗಿ ವಿಚಾರಣೆಯಾಗಬೇಕು ಎನ್ನತಕ್ಕಂಥಾದ್ದು ಆ ಸಮಸ್ಯೆಯ ಮೇಲೆ ನಿರ್ಮಾಣಗೊಂಡಿರುತ್ತದೆ. ಆದ್ದರಿಂದ ಈ ಸದನದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಏನೆಂದರೆ, ಲಾ ಅಂಡ್ ಆರ್ಡರ್ ವಿಚಾರದಲ್ಲಿ ನಮ್ಮ ಸರ್ಕಾರ ಇನ್ನು ಮುಂದೆ ಅತ್ಯಂತ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ವಿಷಯವನ್ನು ಸ್ಪಷ್ಟಪಡಿಸುತ್ತಿದ್ದೇನೆ. ಸನ್ಮಾನ್ಯ ಪ್ರಧಾನಮಂತ್ರಿಗಳು ಕೂಡ ಲಾ ಅಂಡ್ ಆರ್ಡರ್‌ನ್ನು ಕಟ್ಟನಿಟ್ಟಾಗಿ ಅನುಸರಿಸಬೇಕೆಂದು ಅವರೂ ಸಹ ಆಸಕ್ತಿ ತೋರಿಸಿದರು. ನಮ್ಮ ದೇಶದಲ್ಲಿ ಲಾ ಅಂಡ್ ಆರ್ಡರ್ ನಮ್ಮ ಕೈ ಮೀರಿ ಹೋಗತಕ್ಕಂಥ ಸಂದರ್ಭಗಳು ಉಂಟಾಗುತ್ತಿರುವುದರಿಂದ ಪ್ರತಿಯೊಂದು ರಾಜ್ಯವೂ ಕೂಡ ಲಾ ಅಂಡ್ ಆರ್ಡರ್ ವಿಚಾರದಲ್ಲಿ ಇವತ್ತು ಕಾಂಪ್ರೊಮೈಸ್ ಆಗತಕ್ಕಂಥ ವಿಷಯವೇ ಇಲ್ಲ. ಕಾಂಪ್ರೊಮೈಸ್ ಮಾಡುವುದಿಲ್ಲ ಎಂದ ತಕ್ಷಣ ಪೊಲೀಸ್‌ನವರು ಜನರ ಮೇಲೆ ಗುಂಡು ಹಾರಿಸುವುದಾಗಲಿ ಅಥವಾ ಲಾಠಿ ಚಾರ್ಜ್ ಮಾಡುವುದಾಗಲಿ ಅಥವಾ ಅಶ್ರುವಾಯು ಪ್ರಯೋಗ ಮಾಡುವಂಥದಲ್ಲ. ಪೋಲೀಸ್‌ನವರು ಕನಿಷ್ಟ ಸೌಜನ್ಯವನ್ನು ತೋರಿಸಬೇಕಾಗುತ್ತದೆ. ಹಾಗೆಯೇ ಸಾಕಷ್ಟು ತಾಳ್ಮೆಯನ್ನು ಪೊಲೀಸ್‌ನವರು ತೋರಿಸುತ್ತಾ ಬಂದಿದ್ದಾರೆ. ಇದಕ್ಕೆ ಇವತ್ತಿನ ದಿವಸ ಹಲವಾರು ಉದಾಹರಣೆಗಳಿವೆ. ಆದರೆ ನಮ್ಮ ರಾಜಕೀಯದ ಕೆಲವು ವ್ಯಕ್ತಿಗಳು ಇಂಥ ವಿಚಾರಗಳನ್ನು ರಾಜಕೀಯ ಬಂಡವಾಳವನ್ನಾಗಿ ಮಾಡುವುದಕ್ಕೆ ಪ್ರಯತ್ನ ನಡೆಸುತ್ತಾರೆ. ಇವತ್ತಿನ ದಿವಸ ಇದಕ್ಕೆ ತಳವೇ ಇಲ್ಲದಂತೆ ಆಗಿದೆ. ಆದ್ದರಿಂದ ಇದನ್ನು ತಡೆಗಟ್ಟುವುದಕ್ಕೆ ತಮ್ಮೆಲ್ಲರ ಬೆಂಬಲ ಕೊಡತಕ್ಕಂಥಾದ್ದು ಅವಶ್ಯಕತೆ ಇದೆ ಎಂದು ಈ ಸದನದ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಚರ್ಚ್ ಮೇಲೆ ಬಾಂಬ್ ದಾಳಿ ಆಗಿರುವುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯವಾಗಿದೆ. ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರ ತನಿಖೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನಮ್ಮ ರಾಜ್ಯ ಸರ್ಕಾರ ಮಾಡಿದ ತನಿಖಾ ವಿಭಾಗವು ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡತಕ್ಕಂಥ ಒಬ್ಬ ರಕ್ಷಣಾ ಇಲಾಖೆಯ ಸ್ಟೋರ್ ಕೀಪರ್ ಇದಕ್ಕೆ he was an agent of this conspiracy. ಆತನನ್ನು ನಾವು ಹಿಡಿದುಕೊಂಡು ಬಂದಿದ್ದೇವೆ. ಸನ್ಮಾನ್ಯ ಚನ್ನಿಗಪ್ಪನವರು ಚರ್ಚ್ ಮೇಲೆ ಬಾಂಬ್ ದಾಳಿ ಮಾಡಿರುವ ಬಗ್ಗೆ ಸರ್ಕಾರದ ಮೇಲೆ ಮತ್ತು ಗೃಹ ಸಚಿವರ ಮೇಲೆ ಹಾಗೂ ನನ್ನ

ಮೇಲೆ ಆರೋಪ ಮಾಡಿದ್ದಾರೆ. ತಾವು ಈ ರೀತಿ ಮಾಡುವುದು ಸರಿಯೆ? ಏಕೆಂದರೆ, ಈಗಾಗಲೇ ಆರೋಪಿಗಳನ್ನು ಕೋರ್ಟ್‌ನಲ್ಲಿ ಕಟಕಟೆ ಮುಂದೆ ನಿಲ್ಲಿಸಲಾಗಿದೆ. chargesheet has been filed ಆದ್ದರಿಂದ ಇನ್ನು ಮುಂದೆ ಮಾನ್ಯ ಚನ್ನಿಗಪ್ಪನವರು ಲಾ ಅಂಡ್ ಆರ್ಡರ್ ಬಗ್ಗೆ ಮಾತನಾಡುವುದು ಬೇಡ. ಆದರೆ ಸಾಮಾಜಿಕ ವಿಷಯದ ಮೇಲೆ ಮಾತನಾಡಿ.

ಶ್ರೀ ಡಿ.ವಿ.ಸದಾನಂದಗೌಡ: ಕೊನೆಯಲ್ಲಿ ಅವರು ಒಬ್ಬರು ಮಾತ್ರ ಉಳಿದುಕೊಂಡಿದ್ದಾರೆ. ಆದ್ದರಿಂದ ಅವರನ್ನು ತಾವು ಪಾಯಿಂಟ್‌ಔಟ್ ಮಾಡುತ್ತಿದ್ದೀರೆಂದು ನಮಗೆ ಸಂಶಯ ಬರುತ್ತಿದೆ.

ಶ್ರೀ ಎಸ್.ಎಂ.ಕೃಷ್ಣ: ಹಾಗೇನಿಲ್ಲ. ತಾವು ನನ್ನ ಮೊದಲ ಭಾಷಣದ ಕಡತಗಳನ್ನು ತೆಗೆದು ನೋಡಬಹುದು. ಮಾನ್ಯ ಚೆನ್ನಿಗಪ್ಪನವರ ರೆಫರೆನ್ಸ್ ಇಲ್ಲದೇ ನಾನು ಯಾವತ್ತು. ಸಹ ಭಾಷಣವನ್ನು ಪ್ರಾರಂಭ ಮಾಡಿಲ್ಲ. ಹಾಗೆಯೇ ಭಾಷಣವನ್ನು ಮುಗಿಸಿಲ್ಲ, ಇನ್ನು ಮುಂದೆಯೂ ಸಹ ಮುಗಿಸುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಚನ್ನಿಗಪ್ಪನವರ ಮೇಲೆ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಇಷ್ಟೊಂದು ಪ್ರೀತಿ ಏಕೆ ಎಂದರೆ, ಚುನಾವಣೆ ಫಲಿತಾಂಶ ಬರುವುದಕ್ಕೆ ಮುಂಚೆ ಅವರ ಗೆಳೆತನಕ್ಕೆ ತಾವು ಹೋಗಿದ್ದಿರಿ. ಆದ್ದರಿಂದ ಇವರ ಮೇಲೆ ಪ್ರೇಮ ಇದೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ,ನಮ್ಮ ರಾಜ್ಯದ ಬೆಳವಣಿಗೆ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವ್ಯಕ್ತಪಡಿಸಿರತಕ್ಕಂಥ ಹಲವಾರು ವಿಚಾರಗಳು, ವಸ್ತುಸ್ಥಿತಿ, ನಾವು ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂಬುದಕ್ಕೆ ದಾಖಲೆಗಳಾಗಿವೆ. ''ಸ್ತ್ರೀಶಕ್ತಿ'' ಎನ್ನತಕ್ಕಂಥ ಒಂದು ಹೊಸ ಯೋಜನೆಯನ್ನು ನಾವು ಜಾರಿಗೆ ತಂದಿದ್ದೇವೆ. ಈಗಾಗಲೇ 38 ಸಹಸ್ರ ಸ್ತ್ರೀ ಶಕ್ತಿ ತಂಡಗಳನ್ನು ಸೃಷ್ಟಿ ಮಾಡಿದ್ದೇವೆ. ಇನ್ನೂ ಒಂದು ಲಕ್ಷ ಸ್ತ್ರೀಶಕ್ತಿ ತಂಡಗಳನ್ನು ರಚನೆ ಮಾಡುವುದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಇಷ್ಟಾದರೂ ಕೂಡ ಶೇಕಡ ಅರ್ಧದಷ್ಟು ನಮ್ಮ ಗುರಿಯನ್ನು ಮುಟ್ಟಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವರಾದಂಥ ಶ್ರೀಮತಿ ಮೋಟಮ್ಮನವರ ನೇತೃತ್ವದಲ್ಲಿ ನಾನು ಸ್ತ್ರೀ ಶಕ್ತಿ ಸಮೂಹಗಳಿಗೆ ಭೇಟಿ ನೀಡಿದ್ದೇನೆ. ಸ್ತ್ರೀ ಶಕ್ತಿ ಗುಂಪಿನಲ್ಲಿ ಬಹುತೇಕ ದಲಿತರು ಮತ್ತು ಹಿಂದುಳಿದ ವರ್ಗಗಳ ಸ್ತ್ರೀಯರು ಭಾಗವಹಿಸುತ್ತಾರೆ. ಇವರಿಗೆ ಆತ್ಮವಿಶ್ವಾಸವನ್ನು ಮತ್ತು ಆತ್ಮಾಭಿಮಾನವನ್ನು ತಂದು ಕೊಡಬೇಕೆಂದು ಮತ್ತು ಗಂಡಂದಿರನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡು ಆರ್ಥಿಕ ಶಕ್ತಿಯನ್ನು ಪಡೆಯಬೇಕೆಂಬ

ಉದ್ದೇಶದಿಂದ ಸ್ತ್ರೀ ಶಕ್ತಿ ಯೋಜನೆಯೆನ್ನು ತರಲಾಗಿದೆ. ಇನ್ನು ಶಾಲೆಯತ್ತ ಸಮುದಾಯ ಯೋಜನೆ ಬಗ್ಗೆ ದೊಡ್ಡ ಚರ್ಚೆಯೇ ಪ್ರಾರಂಭವಾಯಿತು. ಅಮೇರಿಕಾದಲ್ಲಿ ಇದನ್ನು ಪಿ.ಟಿ.ಎ. ಅಂದರೆ, Parents-Teachers Association ಎಂದು ಹೇಳುತ್ತಾರೆ. ಇದು ಅಲ್ಲಿ ಬಹಳ ಚೆನ್ನಾಗಿ ನಡೆಯುತ್ತಿದೆ. ಆದರೆ ನಾವು ಇಲ್ಲಿ ಸಮುದಾಯದತ್ತ ಶಾಲೆ ಅಥವಾ ಶಾಲೆಯತ್ತ ಸಮುದಾಯ ಎಂದು ಮಾಡಿದರೆ ಏಕೆ ಸರಿಯಾಗಿ ಬರುವುದಕ್ಕೆ ಸಾಧ್ಯವಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಪ್ರಾಥಮಿಕ ಶಾಲೆಗಳ ಹೊಣೆ ಸಮಾಜಕ್ಕೆ ಇಲ್ಲವೇನು? ಈ ಹೊಣೆಗಾರಿಕೆಗೆ ನಮ್ಮ ಜನರನ್ನು ಬದ್ಧರನ್ನಾಗಿ ಮಾಡುವುದರಲ್ಲಿ ತಪ್ಪೇನು ಎಂಬುದರಲ್ಲಿ ನನಗೆ ಅರ್ಥವಾಗುತ್ತಿಲ್ಲ. ಇದಕ್ಕೆ ಸಮಾಜದ ಮತ್ತು ನಿಮ್ಮಗಳ ಬೆಂಬಲ ಬೇಕು. ಆ ದಿಕ್ಕಿನಲ್ಲಿ ನಾವು ಸರಿಯಾದಂಥ ಹೆಜ್ಜೆಗಳನ್ನು ಹಾಕಿದ್ದೇವೆ.

ಇನ್ನು ಬೆಳಗಾಂ ವಿಷಯದ ಬಗ್ಗೆ ಕೆಲವು ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಈಗಾಗಲೇ ಈ ವಿಷಯದ ಬಗ್ಗೆ ಸ್ಪಷ್ಟಪಡಿಸಿದ್ದೇನೆ, ಮತ್ತೆ ಸ್ಪಷ್ಟಪಡಿಸತಕ್ಕಂಥ ಅವಶ್ಯಕತೆ ಇಲ್ಲ. ಈ ಸಭೆಯ ನಿರ್ಣಯಕ್ಕೆ ನಾನು ದಾಸ. ಆದ್ದರಿಂದ ಯಾವುದೇ ಕವಲು ದಾರಿಯನ್ನು ಹಿಡಿಯಲಿಕ್ಕೆ ನನಗೆ ಸಾಧ್ಯವಿಲ್ಲ. ಏಕೆಂದರೆ, ಇಂಥ ಮ್ಯಾಂಡೇಟ್‌ಗಳನ್ನು ಎರಡು ಸದನವು ನನಗೆ ಕೊಟ್ಟಿದೆ. ಆದ್ದರಿಂದ ನಾನು ಮಹಾರಾಷ್ಟ್ರದ ಮುಖ್ಯಮಂತ್ರಿಯವರಲ್ಲಿ ಮತ್ತು ಸನ್ಮಾನ್ಯ ಪ್ರಧಾನಮಂತ್ರಿಯವರಲ್ಲಿ ನಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದೇನೆ. ಈ ಸಮಸ್ಯೆಯನ್ನು ನಮ್ಮ ಜನರು ಈಗಾಗಲೇ ಮರೆತು ಹೋಗಿದ್ದಾರೆ. ಆದರೆ ಪದೇ ಪದೇ ಮಹಾರಾಷ್ಟ್ರದ ಕಡೆಯಿಂದ ಈ ವಿಚಾರವನ್ನು ಕದಡುವುದರ ಮೂಲಕ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದ ಗಡಿಗಳಲ್ಲಿ ಒಂದು ರೀತಿಯಾದಂಥ ಕ್ಷೋಭೆಯನ್ನು ಉಂಟು ಮಾಡತಕ್ಕಂಥ ವ್ಯವಹಾರ ನಡೆಯುತ್ತಿದೆ. ಕೇಂದ್ರ ಸರ್ಕಾರದ ಸಚಿವರೊಬ್ಬರು ಭಾಷಣ ಮಾಡುವಂಥ ಸಂದರ್ಭದಲ್ಲಿ ಈ ವಿಷಯವನ್ನು ಎತ್ತತಕ್ಕಂಥ ಅವಶ್ಯಕತೆ ಏನು ಇತ್ತೆಂಬುದು ನನಗೆ ಅರ್ಥವಾಗುತ್ತಿಲ್ಲ. ಸಚಿವರ ಖಾತೆಗೆ ಸಂಬಂಧಪಟ್ಟಂತೆ ಮಾತನಾಡಿದರೆ ನಮ್ಮದೇನು ಅಬ್ಜೆಕ್ಷನ್ ಇರಲಿಲ್ಲ. ಆದರೆ ಬೆಳಗಾವಿ ವಿಷಯವನ್ನು ಹೊರಗಡೆ ಪ್ರಸ್ತಾಪ ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಬೆಳಗಾಂ ಜಿಲ್ಲೆಯಲ್ಲಿ ಏನೇನು ಉಳಿದಿದೆ ಎನ್ನತಕ್ಕಂಥಾದ್ದು ಮಹಾರಾಷ್ಟ್ರದ ಏಕೀಕರಣ ಸಮಿತಿಯು ಗಮನಿಸಿದೆ. ಏಕೆಂದರೆ, ಇವತ್ತಿನ ದಿವಸ ಬೆಳಗಾವಿ ಮೇಯರ್ ಕೂಡ ಅವರಿಲ್ಲ. ಒಂದು ಕಾಲದಲ್ಲಿ 7 ಜನ ಇದ್ದರು, ಆ ನಂತರ 5 ರಿಂದ 3 ಮತ್ತೆ ಈಗ ಯಾರು ಇಲ್ಲದಂಥ ಪರಿಸ್ಥಿತಿ ಅಲ್ಲಿ ಬಂದಿದೆ. ಇಷ್ಟೆಲ್ಲಾ ಇದ್ದರೂ ಸಹ ತಮ್ಮ ವಕ್ರ ಕಣ್ಣನ್ನು ಬೆಳಗಾಂಗೆ ಹಾಕುತ್ತಿರುವುದು ಸರಿಯಾದಂಥದಲ್ಲ ಮತ್ತು ಸಾಧುವಲ್ಲ. ದೇಶದ ಮುಂದೆ ಹಲವಾರು ಜ್ವಲಂತ ಸಮಸ್ಯೆಗಳು ಇರತಕ್ಕಂಥ ಸಮಯದಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿಯವರು ಕೂಡ ಈ

ವಿಚಾರದಲ್ಲಿ ತಲೆಕೆಡಿಸಿಕೊಳ್ಳುವಂಥಾದ್ದು ಅಗತ್ಯತೆ ಇಲ್ಲ ಎನ್ನತಕ್ಕಂಥಾದ್ದನ್ನು ನಾನು ಬಹಳ ನಮ್ರತೆಯಿಂದ ಸನ್ಮಾನ್ಯ ಪ್ರಧಾನಮಂತ್ರಿಯವರ ಗಮನಕ್ಕೆ ತರುವುದಕ್ಕೆ ಈ ಸಮಯವನ್ನು ಉಪಯೋಗಿಸುತ್ತೇನೆ. ಸನ್ಮಾನ್ಯ ವೈ.ಕೆ.ರಾಮಯ್ಯನವರು ಮತ್ತು ಸನ್ಮಾನ್ಯ ಯು.ಆರ್.ಸಭಾಪತಿಯವರು ನಮ್ಮ ರಾಜ್ಯ ಸರ್ಕಾರ ತೆಗೆದುಕೊಂಡಿರತಕ್ಕಂಥ ಹತ್ತು ಹಲವಾರು ಕಾರ್ಯಕ್ರಮಗಳ ಬಗ್ಗೆ ವಿಶಿಷ್ಟವಾದಂಥ ಭಾಷಣವನ್ನು ಮಾಡಿದ್ದಾರೆ. ಇವರ ಭಾಷಣವನ್ನು ಕೇಳಲಿಕ್ಕೆ ನಾನು ಇರಲಿಲ್ಲ. ಆದರೆ, ಮುಂದಿನ ಸಾರಿ ಮಾನ್ಯ ರಾಮಯ್ಯನವರು ಮತ್ತು ಮಾನ್ಯ ಸಭಾಪತಿಯವರು ಮಾತನಾಡಲು ಎದ್ದಾಗ ಇವರ ಭಾಷಣವನ್ನು ಕೇಳುವುದಕ್ಕೆ ನಾನು ಇಲ್ಲಿಯೇ ಕುಳಿತುಕೊಳ್ಳುತ್ತೇನೆ.

4.40

I can only take liberty with Members of our party. I cannot take liberty with you. I am compelled to be here when all of you speak. But, ಈ ಸಲ ಮಾತ್ರ ನಮ್ಮ ಬಜೆಟ್‌ನ ಏರುಪೇರಿನಿಂದಾಗಿ ನನಗೆ ನಿಮ್ಮ ಭಾಷಣವನ್ನು ಕೇಳುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಸಧ್ಯಕ್ಕೆ ಈ ವಂದನಾ ನಿರ್ಣಯದ ಮೇಲೆ ಮಧ್ಯೆ ಪ್ರವೇಶ ಮಾಡಿ ತಮ್ಮಲ್ಲಿ ಈ ನಾಲ್ಕು ಮಾತುಗಳನ್ನು ನಿವೇದನೆ ಮಾಡಿಕೊಂಡು ಈ ವಂದನಾ ನಿರ್ಣಯವನ್ನು ತಾವು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನನ್ನ ಕೆಲವೊಂದು ಕ್ಲಾರಿಫಿಕೇಷನ್‌ಗಳು ಇವೆ. ಬಹುಶಃ ಸದನದಲ್ಲಿ ಮಾನ್ಯ ರಾಜ್ಯಪಾಲರ ಭಾಷಣವನ್ನು ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಆಗದೇ, ಕಾರಣ ಉತ್ತರಗಳು ಕೂಡ ಬಹಳ ಸೂಕ್ಷ್ಮವಾಗಿ ಬಂದಿವೆ. ಕೆಲವು ವಿಚಾರಗಳನ್ನು ಮಾತ್ರ ಮುಟ್ಟಿದ್ದೀರಿ, ಕೆಲವೊಂದು ವಿಚಾರಗಳನ್ನು ಮುಟ್ಟಿಲ್ಲ, ಮುಂದೆ ಮುಟ್ಟುತ್ತೇನೆ ಎಂದು ಹೇಳಿದ್ದೀರಿ. ಆದರೆ ಇವತ್ತು ರಾಜ್ಯದ ಜನತೆಯ ಸಮಸ್ಯೆಯಾದ ಕಾನೂನು ಮತ್ತು ಶಿಸ್ತು ಇದರ ಬಗ್ಗೆ ಏನು ಹೇಳಿದಿರಿ, ಇದನ್ನು ಇನ್ನೂ ಹೆಚ್ಚು ಸುಧಾರಣೆ ಮಾಡಬೇಕು. ಇದು ಬರೀ ಕಂಬಾಲಪಲ್ಲಿಯ ಘಟನೆಯೊಂದಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಇವತ್ತು ಈ ಭಾಗದಲ್ಲಿರತಕ್ಕಂಥ ಮಾಫಿಯಾಗಳು ಭೂಗತ ಚಟುವಟಿಕೆಗಳ ಬಗ್ಗೆ ಬಹುಶಃ ತಮಗೆ ಗೊತ್ತಿದೆ. ಕರಾವಳಿಯ ಭಾಗದಲ್ಲಿ ಅತ್ಯಂತ ಭೀಕರವಾಗಿದೆ. ಮುಂಬೈ ಪೂರ್ತಿ ಮಂಗಳೂರು ಭಾಗದಲ್ಲಿ ಪೂರ್ತಿಯಾಗಿದೆ. ಇದಕ್ಕೂ ಕೂಡ ಸ್ವಲ್ಪ ಹೆಚ್ಚಿನ ಮುತುವರ್ಜಿ ವಹಿಸಬೇಕು. ಅದಕ್ಕೆ ಶಾಸನಗಳನ್ನು ತಂದಿರುತ್ತೀರಿ, ನಾನು ಇಲ್ಲವೆಂದು ಹೇಳುತ್ತಿಲ್ಲ. ಆದ್ದರಿಂದ ಅದು ಇನ್ನೂ ಕಾರ್ಯಗತವಾಗಿಲ್ಲ, ಇಲ್ಲಿ ಕಾಣದ ಕೈಗಳು ಕೂಡ ಕೆಲಸ ಮಾಡುತ್ತಿವೆ ಎನ್ನುವುದನ್ನು

ನಾವು ಕಾಣುತ್ತಿದ್ದೇವೆ. ಇದರ ಬಗ್ಗೆ ತಾವು ಹೆಚ್ಚು ಏನೂ ಹೇಳಲಿಲ್ಲ. ಈ ಭಾಗದಲ್ಲಿ ನಡೆಯತಕ್ಕಂಥ ಚಟುವಟಿಕೆಗಳು, ಇವತ್ತು ಬೆಂಗಳೂರಿನಲ್ಲಿ ನಡೆಯತಕ್ಕಂಥ ಚಟುವಟಿಕೆಗಳು, ಹಿಂದಿನಂತೆ ಈಗ ಆಗುತ್ತಿವೆ ಎನ್ನುವ ಗಂಭೀರ ಸ್ವರೂಪವನ್ನು ನಾವು ನೋಡುತ್ತಿದ್ದೇವೆ. ಆದ ಕಾರಣ ಪೊಲೀಸ್ ಇಲಾಖೆ ಇನ್ನಷ್ಟು ಜಾಸ್ತಿ ಉತ್ಸುಕತೆಯನ್ನು ತೋರಿಸಬೇಕು ಎನ್ನುವ ವಿನಂತಿ ನಮ್ಮದಾಗಿದೆ. ಅದಕ್ಕಾಗಿ ನಾವು ಎಲ್ಲ ವಿಚಾರಗಳನ್ನು ಹೇಳಿದ್ದೇವೆ. ಕಳೆದ ಒಂದೂವರೇ ವರ್ಷಗಳಲ್ಲಿ ನಡೆದಂಥ ಘಟನೆಗಳನ್ನು ಹಿಂದಿನದಕ್ಕೆ ನಾವು ಹೋಲಿಸಿದರೆ ಅದರ ಎರಡು-ಮೂರು ಪಟ್ಟಾಗಿದೆ. ಅದರ ಬಗ್ಗೆ ನೀವು ಹೇಳಬೇಕಾಗಿದೆ. ವಿಶೇಷವಾಗಿ ತಾವು ಇನ್ನೊಂದು ಪ್ರಸ್ತಾಪ ಬೆಳಗಾಂ ಬಗ್ಗೆ ಮಾಡಿದ್ದೀರಿ. ನಾನು ಕಾಸರಗೋಡಿನ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದೆ, ಮಹಾಜನ್ ಆಯೋಗದ ವರದಿಯ ಜಾರಿಗೆ ನಾವು ಸಿದ್ಧ ಎನ್ನುವ ಮಾತನ್ನು ತಾವು ರಾಜ್ಯಪಾಲರ ಭಾಷಣದಲ್ಲಿ ಹೇಳಿರುತ್ತೀರಿ. ಕೇರಳದ ಹಿಂದಿನ ಮುಖ್ಯಮಂತ್ರಿಗಳು ಕೂಡ, ಪಟ್ಟಂತಾಮ್ ಪಿಳ್ಳೆಯಿಂದ ನಂಬೂದಿ ಪಾದ್ರಿಯಿಂದ ಹಿಡಿದು ಎಲ್ಲರೂ ಕೂಡ ಚಂದ್ರಗಿರಿಯಿಂದ ಹಿಡಿದು ಅದು ಕರ್ನಾಟಕಕ್ಕೆ ಸೇರಬೇಕೆಂದು ಹೇಳಿದ್ದಾರೆ. ಹೀಗಾಗಿ ಇದರ ಬಗ್ಗೆ ನಿಯೋಗಗಳು ನಿಮ್ಮಲ್ಲಿಗೆ ಬಂದಿವೆ. ಬಹುಶಃ ಇದರಲ್ಲಿ ಯಾರಿಗೂ ಕೂಡ ಭಿನ್ನಾಭಿಪ್ರಾಯಗಳು ಇಲ್ಲ. ಇತ್ತೀಚೆಗೆ ಕೂಡ ರಾಜಕೀಯ ಅವ್ಯವಸ್ಥೆಯಿಂದ, ಕೇರಳದಲ್ಲಿ ಕನ್ನಡ ಮಾತನಾಡುವವರ ಬಗ್ಗೆ ಒತ್ತಡಗಳು ಬರುವಂಥಾದ್ದು, ಅಲ್ಲಿರುವ ಶಾಲಾ-ಕಾಲೇಜುಗಳು ಕನ್ನಡದಲ್ಲಿವೆ. ಇವತ್ತು ಅದರಲ್ಲಿ ಯಾರದು ಡಿಸ್‌ಪ್ಯೂಟ್ ಇಲ್ಲದಿರುವ ಸಂದರ್ಭದಲ್ಲಿ ಆ ಭಾಗಗಳನ್ನು ನಮ್ಮ ಕಡೆ ಸೇರಿಸಿಕೊಳ್ಳುವ ಪ್ರಯತ್ನವನ್ನು ಇವತ್ತು ನೀವು ಮಹಾಜನ್ ವರದಿಯ ಆಯೋಗಕ್ಕೆ ಬದ್ಧ ಎನ್ನುವ ಮಾತನ್ನು ಹೇಳಿ ಕೇವಲ ಇಷ್ಟನ್ನು ಹೇಳಿದರೆ ಸಾಕಾಗುತ್ತದೆಯೇ? ಆ ಮಾತುಕತೆಯನ್ನು, ನೀವು ಯಾವಾಗ ಕೇಂದ್ರದವರ ಜೊತೆ ಮಾತನಾಡುತ್ತೀರಿ! ಅದಕ್ಕೆ ಸಂಬಂದಪಟ್ಟ ವ್ಯವಸ್ಥೆಯನ್ನು ಮಾಡಿ ಅದನ್ನು ಆದಷ್ಟು ಜಾಗ್ರತೆ ನೀವು ಮಾಡಬೇಕು. ಇದರ ಬಗ್ಗೆ ಉಲ್ಲೇಖವನ್ನು ಮಾಡಲಿಲ್ಲ. ಇನ್ನೊಂದು ಮಾತು, ಆಯೋಗಗಳ ರಚನೆ, ಈಗಾಗಲೇ ಎರಡು ಆಯೋಗಗಳು ಮಧ್ಯಂತರ ವರದಿಯನ್ನು ಕೊಟ್ಟಿರುತ್ತವೆ. ಪತ್ರಿಕೆಗಳಲ್ಲಿ ಕೂಡ ಇದರ ಬಗ್ಗೆ ಪೂರ್ತಿಯಾಗಿ ಬಂದಿರುತ್ತದೆ. ಇನ್ನೊಂದು ಆಯೋಗದ ಅರ್ಧದಲ್ಲಿಯೇ ಅದರ ಮಧ್ಯಂತರ ವರದಿ ಬಂದಿದೆ. ನೀವು ಆ ಆಯೋಗವನ್ನು ರದ್ದು ಮಾಡಿದ್ದೀರಿ. ಇದು ಏನು ತೋರಿಸುತ್ತದೆಂದರೆ, ಈ ರೀತಿಯಾದ ವ್ಯವಸ್ಥೆಗಳಿಂದಾಗಿ ಪೂರ್ತಿ ಪ್ರಮಾಣದ ಆ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯುವುದಿಲ್ಲ. ಇದರ ಬಗ್ಗೆ ತಮ್ಮ ಸರ್ಕಾರದ ಸ್ಪಷ್ಟ ನಿಲುವು ಏನು? ಇದು ನಮಗೆ ಗೊತ್ತಾಗಬೇಕು. ಮಧ್ಯಂತರ ವರದಿಯನ್ನು ಅರ್ಧಕ್ಕೆ ನಿಲ್ಲಿಸುವ ಕಾರಣವೇನು? ಇವತ್ತು ಆ ವರದಿ ಅನುಷ್ಠಾನ ಆಗುತ್ತದೋ ಇಲ್ಲವೋ, ಇದು ಮುಂದುವರೆಯುವ ವ್ಯವಸ್ಥೆ ಇದೆಯೋ ಇಲ್ಲವೋ, ಇದರ ಬಗ್ಗೆ ತಮ್ಮ ನಿಲುವು ಏನು? ಸ್ವಚ್ಛ ಗ್ರಾಮ ಯೋಜನೆಯ ಬಗ್ಗೆ ತಾವು

ಹೇಳಿದಿರಿ, ಸ್ವಚ್ಛಗ್ರಾಮದ ಯೋಜನೆಯ ಬಗ್ಗೆ ನಾವು ಇಲ್ಲಿ ನಿನ್ನೆ ದಿವಸ ಚರ್ಚೆ ಮಾಡಿರುತ್ತೇವೆ. ನಮಗೆ ಒಂದು ಜಿಜ್ಞಾಸೆ ಬಂತು. ಇವತ್ತು ಹರಿಜನ-ಗಿರಿಜನ ಇರುವಂಥ ಹಲವಾರು ಭಾಗಗಳಲ್ಲಿ ಶೇಕಡಾ 10ರಷ್ಟನ್ನು ಕೂಡ ಕೊಡುವುದಕ್ಕೆ ಆಗದಂಥ ಸಂದರ್ಭಗಳಲ್ಲಿ ಇದನ್ನು ಮಲೆನಾಡು ಅಭಿವೃದ್ಧಿ ಮಂಡಲಿ, ಅಥವಾ ಲೋಕಸಭಾ ಸದಸ್ಯರ ನಿಧಿಯಿಂದ ಕೊಡುವ ವ್ಯವಸ್ಥೆ ಮಾಡಿದರೆ ಹೇಗಾಗುತ್ತದೆ ಎನ್ನುವ ಬಗ್ಗೆ ಚರ್ಚೆಯಾಗಿರುತ್ತದೆ. ಅದರ ಬಗ್ಗೆ ಕೂಡ ಒಂದು ಸ್ಪಷ್ಟವಾದ ನಿಲುವು ಬೇಕು. ಇನ್ನು ರೈತರ ವಿಚಾರದಲ್ಲಿ ಬಹಳ ಚರ್ಚೆಯಾಗಿದೆ, ಆ ಚರ್ಚೆ ಕೂಡ ಇನ್ನು ಫಲಪ್ರದವಾಗಲಿಲ್ಲ ಎನ್ನುವ ಒಂದು ಕೂಗು ಎಲ್ಲ ಕಡೆಯಿಂದ ಕೇಳಿ ಬರುತ್ತಿದೆ. ಇದರ ಬಗ್ಗೆ ಕೂಡ ತಾವು ಸ್ಪಷ್ಟವಾದ ಮಾಹಿತಿಯನ್ನು ಕೊಡಬೇಕು. ಶಿಕ್ಷಣ ಕ್ಷೇತ್ರದಲ್ಲಿರುವ ಗೊಂದಲಗಳ ಬಗ್ಗೆ ಕೂಡ ತಾವು ಪೂರ್ತಿ ಪ್ರಮಾಣದಲ್ಲಿ ಹೇಳಲಿಲ್ಲ. ಪ್ರಾಯಶಃ ಇದರ ಬಗ್ಗೆ ತಾವು ಹೇಳದಿದ್ದರೆ ಏನಾಗುತ್ತದೆಂದರೆ, ರಾಜ್ಯಪಾಲರ ಭಾಷಣವನ್ನು ಓದಿ ಹೇಳಿದ ಮೇಲೆ ಜನ ಅದನ್ನೆ ಸರಿ ಎಂದು ತಿಳಿದುಕೊಂಡು ಜನ ತೀರ್ಮಾನ ಮಾಡುತ್ತಾರೆ. ಇದರ ಬಗ್ಗೆ ಕೂಡ ಸ್ವಲ್ಪ ಮಾಹಿತಿಗಳನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ಎರಡು-ಮೂರು ವಿಚಾರಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾಡಿರುವ ಘೋಷಣೆಯನ್ನು ನಾನು ಸ್ವಾಗತ ಮಾಡುತ್ತೇನೆ. ಮೊದಲನೆಯದಾಗಿ, ವಿದ್ಯುತ್ ಕಳ್ಳತನಕ್ಕೆ ಶಿಕ್ಷೆಯನ್ನು ಕೊಡತಕ್ಕಂಥ ಕಾನೂನನ್ನು ತೆಗೆದುಕೊಂಡು ಬರುತ್ತೇವೆಂದು ಹೇಳಿದ್ದಾರೆ, ಅದನ್ನು ಆದಷ್ಟು ಬೇಗ ತೆಗೆದುಕೊಂಡು ಬಂದರೆ ಅದಕ್ಕೆ ನಾವು ನಮ್ಮ ಸಂಪೂರ್ಣ ಬೆಂಬಲವನ್ನು ಕೊಡುತ್ತೇವೆ. ಎರಡನೆಯದಾಗಿ, ಕಾನೂನಿನ ಸುವ್ಯವಸ್ಥೆಯನ್ನು ಕಾಪಾಡಲಿಕ್ಕೆ ಕೋಮುವಾದಿ ಶಕ್ತಿಗಳು ಇರಬಹುದು, ಅಥವಾ ಬೇರೆ ಯಾವ ರೀತಿಯಾದ ಶಕ್ತಿಗಳು ಕೂಡ ಇರಬಹುದು, ಇದಕ್ಕೆ ಪ್ರಚೋದನೆ ಕೊಡಬಾರದು, ಇವುಗಳಿಗೆ ವಿರೋಧ ಪಕ್ಷದವರು, ಸಹಕಾರ ಕೊಡಬೇಕೆಂದು ಹೇಳಿದ್ದಾರೆ, ಅವರೆಡಕ್ಕೂ ಕೂಡ ನಾವು ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿ, ಇವೊತ್ತು ಏಕೋ ಏನೋ ಮಾನ್ಯ ಮುಖ್ಯ ಮಂತ್ರಿಗಳ ವಕ್ರವಾದ ದೃಷ್ಟಿ ಶ್ರೀ ಚನ್ನಿಗಪ್ಪನವರ ಮೇಲೆ, ಶ್ರೀ ವಿಶ್ವೇಶ್ವರ ಹೆಗಡೆಯವರ ಮೇಲೆ ಸಿಬಿಐದವರ ಮೇಲೆ ಬಿದ್ದು ಹೋಯಿತು. ಅದು ಏಕೆ ಎಂದು ನನಗೆ ಗೊತ್ತಾಗಲಿಲ್ಲ. ಎರಡು ಮೂರು ವಿಚಾರಗಳಲ್ಲಿ ಸ್ಪಷ್ಟವಾದ ಉತ್ತರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಬಯಸುತ್ತೇನೆ. ತಾವು ಉದಯ ಟಿವಿಯನ್ನು ಗಮನಿಸಿರಬಹುದು, ಇದರ ಬಗ್ಗೆ ಪತ್ರಿಕೆಗಳಲ್ಲಿ ಕೂಡ ಬಂದಿದೆ. ದಂಡುಪಾಳ್ಯ ಎನ್ನುವ ಒಂದು ಗ್ಯಾಂಗು ಹಲವಾರು ಕೊಲೆಗಳನ್ನು ಮಾಡಿ ಕೋರ್ಟಿನಲ್ಲಿ ಕೇಸ್ ನಿಧಾನವಾಗತಕ್ಕಂಥಾದ್ದನ್ನು ತಾವು

ನೋಡಿದ್ದೀರಿ, ಪತ್ರಿಕೆಗಳಲ್ಲಿ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ತಾವು ನೋಡದಿದ್ದರೆ 26ನೇ ತಾರೀಖು ಬಜೆಟ್ ಆದಮೇಲೆ ತಾವು ಸಮಯವನ್ನು ಕೊಟ್ಟು ನೋಡಿ, ಉದಯ ಟಿವಿಯಲ್ಲಿ ಆ ಸೀರಿಯಲ್ ಬರುತ್ತಿದೆ ಅವರು ಮಾಡುತ್ತಿರುವ ಕಾರ್ಯಗಳನ್ನು ತೋರಿಸುತ್ತಾರೆ, ಇಂತಹ ಕ್ರಿಮಿನಲ್‌ಗಳಿಗೆ ನಾವು ತಕ್ಷಣ ಒಂದು ಶಿಕ್ಷೆಯನ್ನು ಕೊಡಬೇಕಾದರೆ ಇದಕ್ಕೆ ಒಂದು ಸ್ಪೆಶಲ್ ಕೋರ್ಟ್ ಆಗಬೇಕು. ಆ ಸ್ಪೆಶಲ್ ಕೋರ್ಟ್‌ನ್ನು ನಾವು ಈಗಾಗಲೇ ಅನೇಕ ಸಂದರ್ಭಗಳಲ್ಲಿ ಮಾಡಿದ್ದೇವೆ ದಯಮಾಡಿ ಇವೊತ್ತು ಅದಕ್ಕೆ ಒಂದು ಘೋಷಣೆಯನ್ನು ಕೊಟ್ಟರೆ ಇಂತಹ ಎಲಿಮೆಂಟ್ಸ್‌ಗೆ ಒಂದು ಸಿಗ್ನಲ್ ಹೋಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ನಿಜವಾಗಿ ಘೋಷಣೆ ಮಾಡಿದ್ದಾರೆ. ಅದರಲ್ಲಿ 16 ವರ್ಷದ ಒಂದು ಹೆಣ್ಣು ಮಗಳು ಧಾರುಣವಾಗಿ ಸತ್ತಿರುವುದನ್ನು ನೋಡಿದರೆ ಎಂತಹ ಕಟುಕನಿಗೂ ಕೂಡ ಕರುಣೆ ಎನ್ನುವುದು ಹುಟ್ಟುತ್ತದೆ. ಅವರು ಮಾಡಿರುವ ಕೃತ್ಯಗಳಲ್ಲಿ ನರಕ ಎನ್ನುವುದನ್ನು ನಾವು ಕೇಳಿದ್ದೇವಲ್ಲ, ''ನರಕದಲ್ಲಿ ಪಾಪಿಗಳು'' ಅವೆರಡನ್ನು ಕೂಡ ಅದಕ್ಕೆ ಊಹೆ ಮಾಡಬಹುದು. ತಾವು ಇವತ್ತು ಅದಕ್ಕೆ ಒಂದು ಸ್ಪೆಶಲ್ ಕೋರ್ಟ್ ಮಾಡುತ್ತೇವೆ ಎನ್ನುವ ಘೋಷಣೆಯನ್ನು ಮಾಡಬೇಕು, ಇದು ಮುಖ್ಯವಾದುದು. ಎರಡನೆಯದಾಗಿ ಹೇಳಬೇಕಾದುದು ಏನೆಂದರೆ, ಅನೇಕ ಸಂಪಾದಕೀಯ ಹಾಗೂ ಪತ್ರಿಕೆಗಳಲ್ಲಿ ಕೂಡ ಬಂದಿದೆ. ರೈತರ ಆತ್ಮಹತ್ಯೆಯ ಬಗ್ಗೆ, ತಾವು ಒಂದು ಹೇಳಿಕೆಯನ್ನು ಕೊಟ್ಟು ವಿಚಾರಣೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿರುತ್ತೀರಿ. ಮೊನ್ನೆ ಕೋಲಾರ ಜಿಲ್ಲೆಯಲ್ಲಿ ಮೂರು ಆತ್ಮಹತ್ಯೆಯಾಗಿದೆ, ಅದರಂತೆ ಅನೇಕ ಜಿಲ್ಲೆಗಳಲ್ಲಿ ಕೂಡ ಆತ್ಮಹತ್ಯೆಯಾಗಿದೆ. ಅದು ಏಕೆ ಎನ್ನುವುದು ಕೂಡ ನಿಮಗೆ ಗೊತ್ತಿದೆ. ನಾನೇನು ಸಲಹೆ ಕೊಟ್ಟಿದ್ದೇನೆಂದರೆ, ಪೋಲೀಸ್‌ನವರು ಏನು ಮಾಡುತ್ತಾರೆಂದರೆ, unnatural death case ಬುಕ್ ಮಾಡುತ್ತಾರೆ. This is a very important aspect. ಮಾನ್ಯ ಕರಡಿ ಸಂಗಣ್ಣನವರು ಹಾಗೂ ನಾನು ಹೋಗಿದ್ದೆವು. ಸತ್ತು ಒಂದು ದಿವಸವಾದರೂ ಕೂಡ ತಹಸೀಲ್ದಾರರಾಗಲಿ, ಕಂದಾಯ ನಿರೀಕ್ಷಕರಾಗಲಿ ಅಥವಾ ಉಪ ವಿಭಾಗಾಧಿಕಾರಿಗಳು ಆಗಲಿ ಯಾರು ಹೋಗಿಲ್ಲ. ಅದನ್ನು ಅನ್-ನ್ಯಾಚುರಲ್ ಡೆತ್ ಎಂದು ಬರೆದುಕೊಳ್ಳುತ್ತಾರೆ. ಪರಿಹಾರ ಕೊಡುತ್ತಾರೆಂದು ಯಾರೂ ಸಾಯುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ತಮಗೂ ಕೂಡ ಗೊತ್ತಿದೆ. ಇವತ್ತು ರಾಷ್ಟ್ರದಲ್ಲಿ ಪರಿಸ್ಥಿತಿ ಏನಾಗುತ್ತಿದೆ ಎಂದರೆ, ಇದರ ಬಗ್ಗೆ ಒಂದು ಗೈಡ್‌ಲೈನ್ಸ್ ಇರಬೇಕಾಗುತ್ತದೆ. ತಕ್ಷಣ ತಹಸೀಲ್ದಾರರು ಹೋಗಬೇಕು, ಉಪ ವಿಭಾಗಾಧಿಕಾರಿಗಳು ಹೋಗಬೇಕು, ಜಿಲ್ಲಾಧಿಕಾರಿಗಳು ಹೋಗಬೇಕು, ಪೋಲೀಸ್‌ನವರಿಂದ ವಿಚಾರಣೆ ನಡೆಯಬೇಕು. ನ್ಯಾಯಾಂಗ ತನಿಖೆ ಬೇರೆ, ಪರಿಹಾರ ಬೇರೆ, ಇದರ ಬಗ್ಗೆ ಮಾನ್ಯ ಎಸ್‌ಎಸ್ ಪಾಟೀಲರವರು ಹೇಳುತ್ತಿದ್ದರು. ಇದರಿಂದ ತಡವಾಗುತ್ತದೆ. ತಾವು ಸರ್ವಪಕ್ಷಗಳ ಒಂದು ಸಭೆಯನ್ನು ಕರೆಯಿರಿ. ರೈತ

ಮಾನ್ಯ ಸದಾನಂದಗೌಡರು ಕೂಡ ಹೇಳಿದರು. ನಾವು ಗಡಿನಾಡಿನ ಭಾಗದಲ್ಲಿರತಕ್ಕಂಥ ಹಳ್ಳಿಗಳನ್ನುಅಭಿವೃದ್ಧಿ ಪಡಿಸಬೇಕು. ನಾನು ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಮಾನ್ಯ ವೀರೇಂದ್ರ ಪಾಟೀಲ್‌ರವರು ರಾಜ್ಯದ ಮುಖ್ಯಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಇದಕ್ಕೆ ಹೆಚ್ಚಿನ ಒಂದು ಒತ್ತನ್ನು ಕೊಟ್ಟು 25 ಲಕ್ಷ ರೂಪಾಯಿಗಳನ್ನು ಒಂದೊಂದು ಕ್ಷೇತ್ರಕ್ಕೆ ಕೊಡುತ್ತಿದ್ದೆವು. ಅದು ಕಡಿಮೆಯಾಗುತ್ತಾ ಬಂದು ಇವತ್ತು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಒಂದೂವರೆ ಲಕ್ಷ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆ. ಸುಮಾರು 60-70 ಗಡಿ ಅಭಿವೃದ್ಧಿ ತಾಲ್ಲೂಕುಗಳು ಇವೆ. ಮೊದಲು ಇದ್ದಂತೆ ತಾವು 25 ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಆ ಕ್ಷೇತ್ರಕ್ಕೆ ಕೊಡಬೇಕೆಂದು ತಮ್ಮಲ್ಲಿ ಒತ್ತಾಯವನ್ನು ಮಾಡುತ್ತೇನೆ. ಇವತ್ತು ತಮಗೂ ಗೊತ್ತಿರುವಂತೆ ಡಿಮಾಂಡ್ ಅಂಡ್ ಸಪ್ಲೈಗೆ ಇರುವಂಥ ಪವರ್ ಪೊಜಿಷನ್‌ನಲ್ಲಿ ಅವೆರಡರಲ್ಲಿ ಯಾವುದು ಮ್ಯಾಚ್ ಆಗುತ್ತದೆ? ನಮಗೆ ಹಾಗೂ ಸೆಂಟ್ರಲ್ ಗೌರ್ನ್‌ಮೆಂಟ್‌ಗೂ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ನನ್ನ ಸಲಹೆ ಏನೆಂದರೆ, ಕೆಪಿಟಿಸಿಎಲ್‌ನವರು ಮಹಾರಾಷ್ಟ್ರದಿಂದ ಮೂರು ರೂಪಾಯಿ ತೊಂಭತ್ತು ಪೈಸೆ ಕೊಟ್ಟು ಪವರ್ ತರಬೇಕೆಂದರೆ ಖಾಸಗಿಯಾಗಿ ತೆಗೆದುಕೊಂಡು ಬರುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ 100 ಕೋಟಿ ರೂಪಾಯಿಗಳನ್ನು ಕೂಡಲೇ ವಿದ್ಯುತ್‌ಗೆ ಕೊಡಿ. ವಿದ್ಯಾರ್ಥಿಗಳು ಹಾಗೂ ರೈತರು ಬಹಳ ತೊಂದರೆಗೆ ಈಡಾಗುತ್ತಿದ್ದಾರೆ. ತಾವು ಮೊನ್ನೆ ರೈತರು ಬಂದಾಗ ರಾತ್ರಿ ಸಮಯ ಹೇಗೆ ವಿದ್ಯುತ್ ಕೊಟ್ಟರು ಎಂದು ಮಾತನಾಡಿದಿರಂತೆ, ರಾತ್ರಿ 8 ಗಂಟೆ ಅನ್-ಇಂಟ್ರೆಪ್ಟ್ ಪವರ್ ಕೊಟ್ಟರೆ ಹೇಗೆ ಎನ್ನುವ ಬಗ್ಗೆ ತಾವು ಸಲಹೆಯನ್ನು ಕೇಳಿದಿರಂತೆ, ತಾವು ಹಾಗೆ ಮಾಡಬೇಕು. ನೀವು ಹಾಗೆ ಮಾಡಿದರೂ ಕೂಡ ಒಂದು ದಿನಕ್ಕೆ 4 ಸಾವಿರ ಮಿಲಿಯನ್ ಯೂನಿಟ್ ನಿಮಗೆ ಸಿಗುವುದಿಲ್ಲ. ಡಿಮ್ಯಾಂಡ್ ಹಾಗೂ ಸಪ್ಲೈ ಎರಡಕ್ಕೂ ಮ್ಯಾಚ್ ಆಗಬೇಕಾದರೆ ಅದಕ್ಕೆ ನೀವು ಗ್ರಾಂಟ್‌ನ್ನು ಕೊಡಬೇಕಾಗುತ್ತದೆ. ಕೆಪಿಟಿಸಿಎಲ್ ಮತ್ತು ಕೆಪಿಸಿಗೆ ನೂರು ಕೋಟಿ ರೂಪಾಯಿಗಳನ್ನಾದರೂ ತಕ್ಷಣ ಬಿಡುಗಡೆ ಮಾಡಿ ಸಹಾಯ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಕೊನೆಯದಾಗಿ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆಶ್ರಯ ಸಮಿತಿಗಳಲ್ಲಿ ವಿರೋಧಪಕ್ಷದವರು 75 ಜನ ಸದಸ್ಯರಿದ್ದಾರೆ. ತಾವು ಮೆಜಾರಿಟಿಯೆಂದು ಹೇಳಿದರೆ, ಡಬ್ಲ್ಯುಟಿಓಗೆ ನಾವು ಬೇಕು, ಪವರ್‌ಗೆ ನಾವು ಬೇಕು, ಲಾ ಅಂಡ್ ಆರ್ಡರ್ ಸ್ಯುಚುಯೇಷನ್‌ಗೆ ನಿಮಗೆ ಕನ್‌ಸೆನ್ಸ್ ಇತ್ತು. ಕನ್ಸೆನ್ಸ್ ಎಂದು ಕಂಟಿನ್ಯೂ ಮಾಡಿದರೆ ಏನಾಗುತ್ತದೆ? ಈ ಐದು ವಿಚಾರಗಳನ್ನು ತಿಳಿಸಬೇಕೆಂದು ಹೇಳಿ, ನಾನು ವಂದಾನಾರ್ಪಣೆಯ ಭಾಷಣ ಮಾಡಲಿಕ್ಕೆ ಆಗಿರಲಿಲ್ಲ, ಕ್ಲಾರಿಫೀಕೇಶನ್ ಕೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು.

ಶ್ರೀ ಎಸ್.ಸುರೇಶ್‌ಕುಮಾರ್(ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದೇ ಒಂದು ವಿಚಾರವನ್ನು ತರುವುದಕ್ಕೆ ಇಷ್ಟಪಡುತ್ತೇನೆ. Morale of the Bureaucracy in Karnataka, ಅದು ಟೆನ್ಯುರ್ ಬಗ್ಗೆ ಇರಬಹುದು. ಬ್ಯುರೋಕ್ರಸಿ ಮೇಲೆ ಇವತ್ತು ನಿನ್ನೆ ಪತ್ರಿಕೆಗಳನ್ನು ನೋಡಿದ ಮೇಲೆ ಅವರ ಮೇಲೆ ಹಲ್ಲೆ ಆಗುತ್ತಿರುವುದು ತಮಗೆ ಗೊತ್ತಿದೆ. ತುಮಕೂರಿನಲ್ಲಿ ಒಬ್ಬರು ಐಎಎಸ್ ಆಫೀಸರ್‌ಗೆ ಕಪಾಳಮೋಕ್ಷವಾಗಿದೆ. ಪ್ರಾಯಶಃ ಇದರ ಬಗ್ಗೆ ಯೋಚನೆ ಮಾಡದಿದ್ದರೆ, ನಾವು ಒಂದು ಸ್ಥಾನದಲ್ಲಿರುವ ಟೆನ್ಯುರ್ ಅನ್ನು ಯೋಚನೆ ಮಾಡದಿದ್ದರೆ, ಒಂದು ಮಿನಿಮಮ್ ಟೆನ್ಯುರ್ ಅನ್ನು ಕೊಟ್ಟು ಕೆಲಸ ಮಾಡುವುದಕ್ಕೆ ಅವಕಾಶ ಕೊಡದೇ ಹೋದರೆ, ಜೊತೆಗೆ ಈ ರೀತಿ ಹಲ್ಲೆ ಮಾಡುವುದಕ್ಕೆ ಅವಕಾಶ ಕೊಡುತ್ತಾ ಹೋದರೆ, ಕರ್ನಾಟಕದ ಬ್ಯುರೋಕ್ರಸಿಯ ಬಗ್ಗೆ ಇಡೀ ಇಂಡಿಯಾದಲ್ಲಿರತಕ್ಕ ಒಂದು ಇಮೇಜ್ ಏನಿದೆ ಅದನ್ನು ಕಳೆದುಕೊಂಡು ಮುಂದಿನ ದಿವಸಗಳಲ್ಲಿ ಬಹಳ ತೊಂದರೆಯಾಗಬಹುದು. ವಿಶೇಷವಾಗಿ ಈ ರೀತಿಯ ಹಲ್ಲೆಗಳು ನಡೆಯುತ್ತಿದೆ. ನಾವು ನೋಡುತ್ತಿದ್ದೇವೆ, ಕೇಳುತ್ತಿದ್ದೇವೆ. ಇದು ಎರಡನೆಯದು, ಮೂರನೆಯದು ಇರಬಹುದು. ನಾವು ಕೇಳುತ್ತಿರುವ ನೋಡುತ್ತಿರುವ ಬಗ್ಗೆ ಸ್ವಲ್ಪ ಗಂಭೀರವಾಗಿ ಗಮನಕೊಡಬೇಕು. ಈ ರೀತಿಯಾಗುವುದಕ್ಕೆ ಕಾರಣ ಮತ್ತು ಹಿನ್ನೆಲೆಯನ್ನು ಕಂಡುಹಿಡಿದು ಇದನ್ನು ತಪ್ಪಿಸಬೇಕು. ನನಗೆ ತಿಳಿದ ಪ್ರಕಾರ ಇಡೀ ತುಮಕೂರಿನಲ್ಲಿ ಯಾವ ಬ್ಯುರೋಕ್ರಸಿ, ಯಾರು ಅಧಿಕಾರಿಗಳಿದ್ದಾರೆ ಅವರಿಗೆ ಬಹಳ ಆಘಾತವಾಗುವ ರೀತಿಯಲ್ಲಿ ಆಗಿರುವುದರಿಂದ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಸರ್ಕಾರ ಇತ್ತ ಕಡೆಗೆ ಗಮನಕೊಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ಮಾನ್ಯ ಅಧ್ಯಕ್ಷರೆ, ಇಡೀ ತುಮಕೂರು ಜಿಲ್ಲೆಯಲ್ಲಿರತಕ್ಕ ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರತಕ್ಕ ಎಲ್ಲಾ ಅಧಿಕಾರಿಗಳು ತಮ್ಮ ತಮ್ಮ ಕಛೇರಿಗಳಿಗೆ ಬೀಗ ಹಾಕಿ ಧರಣಿ ನಡೆಸುತ್ತಿದ್ದಾರೆ. ಅದರ ಬಗ್ಗೆ ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶ ಕೊಡಬೇಕೆಂದು ನಿವೇದನೆಯನ್ನು ಮಾಡಿದ್ದೆ. ಇವತ್ತು ಸರ್ಕಾರ ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಜಿಲ್ಲಾ ಮಂತ್ರಿಗಳು ಸಹ ಇಲ್ಲೇ ಇದ್ದಾರೆ. ನಿನ್ನೆ ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದ ಹಾಗೆ ಐಎಎಸ್ ಅಧಿಕಾರಿಯ ಮೇಲೆ ಕಪಾಳಮೋಕ್ಷ ಆಗಿದೆ. ಅದು ಎಲ್ಲಾ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಬಂದಿದೆ. ಅದರಿಂದ ಕುಡಿಯುವ ನೀರಿನ ಸಮಸ್ಯೆಯಿರಬಹುದು, ಬೇರೆ ಯಾವುದೇ ಸಮಸ್ಯೆ ಇರಬಹುದು ಎಲ್ಲದಕ್ಕೂ ಕೂಡ ಪರಿಹಾರ ಕಾಣದಂತಾಗಿದೆ. ಅಧಿಕಾರಿಗಳು ತಮ್ಮ ಕಛೇರಿಗಳಿಗೆ ಬೀಗ ಹಾಕಿ ಧರಣಿ ಮಾಡುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ಏನು ನಿಲುವು ತೆಗೆದುಕೊಳ್ಳುತ್ತದೆ ಎನ್ನುವ ಬಗ್ಗೆ ಹೇಳಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನು ಬಹಳ ಸೂಕ್ಷ್ಮವಾಗಿ ಕೇಳಿದೆ. ಈಗ ಅನೇಕ ಆಯೋಗಗಳನ್ನು ರಚನೆ ಮಾಡಿದ್ದಾರೆ. ಹಣಕಾಸಿನ ಟ್ಯಾಕ್ಸೇಷನ್ ಬಗ್ಗೆ ಒಂದು ಆಯೋಗ ಮಾಡಿದ್ದಾರೆ. ಅದರ ಬಗ್ಗೆ ಬಜೆಟ್ ಬಂದಾಗ ಪ್ರಸ್ತಾಪ ಮಾಡೋಣ. ಆದರೆ ಈಗ ಪ್ರಸ್ತಾಪ ಮಾಡತಕ್ಕ ವಿಚಾರ ಯಾವುದೆಂದರೆ, ಆಡಳಿತ ಸುಧಾರಣೆಗೋಸ್ಕರ ತಾವು ಒಂದು ಆಯೋಗವನ್ನು ರಚನೆ ಮಾಡಿದ್ದೀರಿ. ಅದು ತನ್ನ ತಾತ್ಕಲಿಕ ವರದಿಯನ್ನು ಕೊಟ್ಟಿದೆ. ಅದನ್ನು ಏನು ಮಾಡುತ್ತೀರಿ? ಆಯೋಗ ರಚನೆ ಮಾಡುವಾಗ ಇದ್ದ ಕಾತುರತೆ, ಆಯೋಗ ಕೊಟ್ಟಿರತಕ್ಕ ವರದಿಯನ್ನು ಕಾರ್ಯಗತ ಮಾಡುವ ಸಂದರ್ಭದಲ್ಲಿ ಇರುವುದಿಲ್ಲ. ತಾವೇನು ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಡಬ್ಲ್ಯುಟಿಓ ಇದು ಬಹಳ ಮುಖ್ಯವಾದುದು. ಡಬ್ಲ್ಯುಟಿಓ ಬಗ್ಗೆ ಸ್ವಲ್ಪ ದೂರದಿಂದ ಕಣ್ಣು ಹಾಯಿಸಿದ್ದೇನೆ. ಅದರಲ್ಲಿರತಕ್ಕದ್ದು ನಮ್ಮ ರಾಜ್ಯದಲ್ಲಿರತಕ್ಕ ಪರಿಸ್ಥಿತಿ ಇವತ್ತು ಏನು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಅದಕ್ಕೂ ಡಬ್ಲ್ಯುಟಿಓಗೂ ಸಂಬಂಧವಿಲ್ಲ. ಯಾರೋ ರೀಸರ್ಚ್‌ನಲ್ಲಿ ಸ್ಕಾಲರ್ ಆಗಿರತಕ್ಕವರು ಅಲ್ಲಲ್ಲಿ ರೀಸರ್ಚ್ ಪೇಪರ್ ಹೊರಡಿಸುತ್ತಾರೆ. ಆ ರೀಸರ್ಚ್‌ನಲ್ಲಿ ಪೇಪರ್‌ನಲ್ಲಿ ಏನಿರುತ್ತದೆಂದರೆ ಬೇರೆ ಬೇರೆ ಕಾಲದಲ್ಲಿ ಪಬ್ಲಿಶ್ ಮಾಡಿರತಕ್ಕದ್ದನ್ನು ಹಾಕಿ ಆ ರೆಫರೆನ್ಸ್ ಹಾಕಿ ಯಾವ ಕಾಲದಲ್ಲಿ ಪಬ್ಲಿಶ್ ಆಗಿದೆ ಎನ್ನುವುದನ್ನು ಸಹ ಹಾಕುತ್ತಾರೆ. ನಮ್ಮ ಜಿಲ್ಲೆಯಲ್ಲಿ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡರು. ಒಬ್ಬ ಸಾವು ಬದುಕಿನ ಮಧ್ಯೆ ಹೋರಾಟ ಮಾಡುತ್ತಿದ್ದಾನೆ. ಅದಕ್ಕೆ ಇವತ್ತು ಉತ್ತರ ಸಿಗುತ್ತಿಲ್ಲ. ಅದರ ಬಗ್ಗೆ ಚರ್ಚೆ ಮಾಡಿಸಿ. ಯಾವಾಗ ಚರ್ಚೆ ಮಾಡುತ್ತೀರೋ ಗೊತ್ತಿಲ್ಲ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಆ ವರದಿ ಏನಿದೆ ಅದು ಪರಿಪೂರ್ಣವಾದ ವರದಿಯಲ್ಲ. ನಮ್ಮ ರಾಜ್ಯಕ್ಕೆ ಸೀಮಿತವಾಗಿರತಕ್ಕ ಸಮಸ್ಯೆಗಳನ್ನು ಬಿಡಿಸುವುದಕ್ಕೆ ಪ್ರಯತ್ನ ಕೂಡ ನಡೆದಿಲ್ಲ. ಇದನ್ನು ತಾವು ಗಮನದಲ್ಲಿಟ್ಟುಕೊಂಡು ನೋಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ನೆಲಮಂಗಲ ತಾಲ್ಲೂಕಿನಲ್ಲಿ ಅಧಿಕಾರಿಗಳ ಮೇಲೆ ಎರಡು ಭಾರಿ ದೌರ್ಜನ್ಯಗಳು ನಡೆದಿವೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರು ನೀವು ಏಕೆ ಕೆಲಸ ಮಾಡುವುದಿಲ್ಲ, ಹೇಗೆ ಮಾಡುತ್ತೀರಿ? ನಾನು ಹೇಳಿದ ಹಾಗೆ ಮಾಡಿಯೆಂದು ದೌರ್ಜನ್ಯ ಮಾಡಿ ಅಧಿಕಾರಿಗಳು ಕೆಲಸ ಮಾಡುವುದಕ್ಕೆ ಅನಾನುಕೂಲ ಮಾಡಿದ್ದಾರೆ. ದಯಮಾಡಿ ತುಮಕೂರು ಜಿಲ್ಲೆ ಮತ್ತು ನೆಲಮಂಗಲ ತಾಲ್ಲೂಕಿನಲ್ಲಿ ಏನು ಅಧಿಕಾರಿಗಳ ಮೇಲೆ ದೌರ್ಜನ್ಯ ನಡೆದಿದೆ ಅದನ್ನು ಸರ್ಕಾರ ಪರಿಶೀಲನೆ ಮಾಡಿ ಅವರಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ನಾಳೆ ಬಜೆಟ್ ಮಂಡನೆ ಮಾಡುತ್ತಿರುವುದರಿಂದ ಈ ಪ್ರಶ್ನೆ ಕೇಳುತ್ತಿದ್ದೇನೆ. ಈಗ ಗ್ರಾಮ ಪಂಚಾಯಿತಿಗಳಿಗೆ ಏನು 2 ಲಕ್ಷ ರೂಪಾಯಿಗಳ ಅನುದಾನ ಕೊಡುತ್ತಿದ್ದೀರಿ ಅದು ಸಾಕಾಗುವುದಿಲ್ಲ. ಅದನ್ನು ನಾಲ್ಕೈದು ಲಕ್ಷ ಮಾಡಿದರೆ ಪ್ರಾಯಶಃ ಗ್ರಾಮ ಪಂಚಾಯಿತಿಗಳು ಹೆಚ್ಚಿನ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕಾಲೇಜುಗಳ ಗ್ರಾಂಟ್ ಕಟ್ ಮಾಡಿದ್ದನ್ನು ರಿವೋಕ್ ಮಾಡಿದ್ದೀರಿ. ಆದರೆ ಟೋಟಲ್ ರಿಕ್ರೂಟ್‌ಮೆಂಟ್‌ನಲ್ಲಿ ಬದಲಾವಣೆ ಮಾಡಲಾಗಿದೆ. ಈಗ ಮಂತ್ರಿಗಳ ಖಾತೆಗಳನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ರಿಕ್ರೂಟ್‌ಮೆಂಟ್ ಮಾಡಿದಾಗ, ಸೈನ್ಸ್ ಟೀಚರ್ ಆರ್ಟ್ಸ್ ಬಗ್ಗೆ ಟೀಚಿಂಗ್ ಮಾಡುವುದಕ್ಕಾಗುವುದಿಲ್ಲ. ಅದೇ ಆರ್ಟ್ಸ್ ಟೀಚರ್ ಸೈನ್ಸ್ ಟೀಚ್ ಮಾಡುವುದಕ್ಕೆ ಆಗುವುದಿಲ್ಲ. ಆರ್ಟ್ಸ್ ಮತ್ತು ಸೈನ್ಸ್ ಟೀಚರ್ಸ್ ಕಾಮರ್ಸ್ ಟೀಚ್ ಮಾಡುವುದಕ್ಕಾಗುವುದಿಲ್ಲ. ಈಗ ಏನು ನಿಯಮ ಬದಲಾವಣೆ ಮಾಡಿದ್ದೀರಿ ಅದನ್ನು ತೆಗೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಹೆಚ್ ಪೂಜಾರ್: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕ ರೈಲ್ವೆ ಯೋಜನೆಗಳನ್ನು ಅನುಷ್ಠಾನ ಮಾಡುವ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಭಾರತೀಯ ರೈಲ್ವೆ ಇಲಾಖೆಯ ಜೊತೆ ಒಪ್ಪಂದ ಮಾಡಿಕೊಂಡಿದೆ. ಅದನ್ನು ನಾನು ಶ್ಲಾಘನೆ ಮಾಡುತ್ತಿದ್ದೇನೆ. ನಾಲ್ಕು ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು ಕೂಡ ಸ್ವಾಗತಾರ್ಹವಾಗಿದೆ. ಒಡಂಬಡಿಕೆ ಪ್ರಕಾರ ಶೇಕಡ 25ರಷ್ಟು ಕೇಂದ್ರ ಸರ್ಕಾರ ಕೊಡಬೇಕು. ಶೇ 25ರಷ್ಟು ರಾಜ್ಯ ಸರ್ಕಾರ ಕೊಡಬೇಕು. ಉಳಿದ 50ರಷ್ಟು ಬಾಂಡ್‌ಗಳ ಮುಖಾಂತರ ಸಂಗ್ರಹ ಮಾಡಿ ಯೋಜನೆ ಮುಗಿಸಬೇಕೆಂದು ತಾವು ತೀರ್ಮಾನ ಮಾಡಿದ್ದೀರಿ. ಈ ಹಿನ್ನೆಲೆಯಲ್ಲಿ ಗದಗ್‌ನಿಂದ ಬಿಜಾಪುರದವರೆಗೆ ಮಾರ್ಗ ಏನಿದೆ ಅದು ಐಲೆಂಡ್ ಆಗಿ ಉಳಿದಿದೆ. ಇಲ್ಲಿಂದ ದೆಹಲಿಗೆ ಹೋಗುವವರಿಗೆ 140 ಕಿಲೋಮೀಟರ್ ದೂರ ಉಳಿಯುವುದರ ಜೊತೆಗೆ ನಾಲ್ಕು ತಾಸು ಸಮಯ ಉಳಿಯುತ್ತದೆ ಅಂತಹ ಒಂದು ದೊಡ್ಡ ಯೋಜನೆ. ಈಗಾಗಲೇ ರೈಲ್ವೆ ಬಜೆಟ್‌ನಲ್ಲಿ ಇದಕ್ಕಾಗಿ 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ರಾಜ್ಯ ಸರ್ಕಾರ 10 ಕೋಟಿ ರೂಪಾಯಿಗಳನ್ನು ಇಡಬೇಕು. ಇನ್ನು ಉಳಿದ 20 ಕೋಟಿ ರೂಪಾಯಿಗಳನ್ನು ಬಾಂಡ್‌ಗಳ ಮುಖಾಂತರ ಸಂಗ್ರಹ ಮಾಡಿದರೆ ಕಾರ್ಯಕ್ರಮವನ್ನು ಪೂರ್ತಿ ಮುಗಿಸಬಹುದು. ಇನ್ನು 120 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದನ್ನು ರೈಲ್ವೆ ಸಚಿವಾಲಯ ಕೊಡಬೇಕೆನ್ನುವ ವಿನಂತಿಯನ್ನು ಕೂಡ ಮಾಡುತ್ತಿದ್ದೇವೆ. ಈ ಬಜೆಟ್‌ನಲ್ಲಿ ಅದಕ್ಕೆ ಪ್ರಾವಿಜನ್ ಮಾಡಬೇಕೆಂದು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಆಲಮಟ್ಟಿ ಅಣೆಕಟ್ಟೆಯಿಂದ 30 ಸಾವಿರ ಎಕರೆ ಭೂಮಿ ಮುಳುಗಡೆಯಾಗುತ್ತಿದೆ. 519.6 ಅಡಿಗೆ ನೀರು ನಿಂತಾಗ ಮುಳುಗಡೆಯಾಗುವ ಜಮೀನಿಗೆ ಪರಿಹಾರ ಕೊಡುವುದು ಅವಾರ್ಡ್ ಸ್ಟೇಜ್‌ನಲ್ಲಿ ನಿಂತಿದೆ. ಕಳೆದ ಒಂದೂವರೆ ವರ್ಷದಿಂದ ಜನ ಮುಷ್ಕರ ಮಾಡುವ ಹಂತ ತಲುಪಿದ್ದಾರೆ. ದಯವಿಟ್ಟು ಅದಕ್ಕೆ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿ ರೇಟ್ ಪರಿಷ್ಕರಣೆ ಮಾಡಿ ಜನಗಳಿಗೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಹಿಂದಿನ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಎಲ್ಲಾ ಹಂತದಲ್ಲಿ ಕನ್ನಡವನ್ನು ಜಾರಿಗೆ ತರುತ್ತೇವೆಂದು ಹೇಳಿದರು. ಆದರೆ ಈ ಸಲದ ಭಾಷಣದಲ್ಲಿ ಏನೂ ಹೇಳಿಲ್ಲ. ಅಂದರೆ ನೂರಕ್ಕೆ ನೂರರಷ್ಟು ಕನ್ನಡವನ್ನು ಆಚರಣೆಗೆ ತಂದಿದ್ದೇವೆ ಎನ್ನುವ ಭಾವನೆ ಬರುತ್ತದೆ. ಕನ್ನಡ ಯಾವ ರೀತಿ ಆಚರಣೆಗೆ ಬಂದಿದೆ ಎನ್ನುವ ಬಗ್ಗೆ ಮೊನ್ನೆ ಹೊರಡಿಸಿದ ಗೆಜೆಟ್ ನೋಡಿದರೆ ಗೊತ್ತಾಗುತ್ತದೆ. ಮೊನ್ನೆ ಪುರಸಭೆಗಳ ರಿಸರ್ವೇಶನ್ ಬಗ್ಗೆ ಗೆಜೆಟ್ ನೋಟಿಫಿಕೇಷನ್ ಹೊರಡಿಸಿದ್ದಾರೆ. ಅದು ಎಲ್ಲವೂ ಇಂಗ್ಲೀಷ್‌ನಲ್ಲಿದೆ. ಕನ್ನಡದಲ್ಲಿ ಎಲ್ಲಿಯಾದರೂ ಇದೆಯೇ ಎಂದು ಹುಡುಕಿದೆ. ಕನ್ನಡದಲ್ಲಿ ಗೆಜೆಟ್ ನೋಟೀಫಿಕೇಷನ್ ಹೊರಟಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು, ಸಂಸದೀಯ ಸಚಿವರು): ಮಾನ್ಯ ಪಾಟೀಲರೆ, ಏನು ಹೇಳಿದಿರಿ?

ಶ್ರೀ ಎಸ್.ಎಸ್.ಪಾಟೀಲ್: ಪುರಸಭೆಗಳ ರಿಸರ್ವೇಶನ್ ಬಗ್ಗೆ ಹೊರಡಿಸಿಲಾದ ಗೆಜೆಟ್ ನೋಟಿಫಿಕೇಶನ್ ಎಂದೆ, ಕೆಲವು ಇಂಗ್ಲೀಷ್ ಶಬ್ದಗಳನ್ನು ಉಪಯೋಗಿಸಿದರೆ ತಪ್ಪೇನೂ ಇಲ್ಲ. ಮುಖ್ಯಮಂತ್ರಿಗಳು ಮಾತನಾಡುವಾಗ ನಡುನಡುವೆ ಇಂಗ್ಲೀಷ್ ಪದಗಳನ್ನು ಉಪಯೋಗಿಸುತ್ತಾರೆ. ಅದರಲ್ಲಿ ತಪ್ಪೇನೂ ಇಲ್ಲ. ರೂಢಿ ಭಾಷೆಯಲ್ಲಿ ಕೆಲವು ಶಬ್ಧಗಳು ಬರುತ್ತವೆ. ಪ್ರಶ್ನೆ ಏನೆಂದರೆ ಆಡಳಿತದಲ್ಲಿ ನೀವು ಏನಾದರೂ ನೋಟಿಫಿಕೇಶನ್ ಹೊರಡಿಸುವುದು ಇದ್ದರೆ ಕನ್ನಡದಲ್ಲಿಯೂ ಹೊರಡಿಸಬೇಕಾಗುತ್ತದೆ. ಇಂದಿನ ರಾಜ್ಯಪಾಲರ ಭಾಷಣದಲ್ಲಿ ಹೊಸದಾಗಿ ತಾವೇನೂ ಹೇಳಲಿಲ್ಲ. ಅಂದರೆ ಎಲ್ಲವೂ ಸಂಪೂರ್ಣವಾಗಿ ಕನ್ನಡದಲ್ಲಿ ಜಾರಿಯಾಗಿದೆಯೆಂದು ಅರ್ಥಮಾಡಿಕೊಳ್ಳಬೇಕಾ?

ಅಧ್ಯಕ್ಷರು: ಸಾಕು, ಒಂದು ಸಾಕು.

ಶ್ರೀ ಎಸ್.ಎಸ್.ಪಾಟೀಲ್: ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಮುಖ್ಯಮಂತ್ರಿಗಳನ್ನು ಒಂದು ವಿವರಣೆಯನ್ನು ಕೇಳಿಬಿಡುತ್ತೇನೆ. ದುರ್ದೈವದಿಂದ ನಿನ್ನೆ

ದಿವಸ ನಾನು ಒಬ್ಬ ಹಿರಿಯ ಸದಸ್ಯನಾಗಿ ಅಲ್ಲಿ ಹೋಗಬಾರದಿತ್ತು. ರಾಜ್ಯದಲ್ಲಿ ಕನ್ನಡ ನಡೆಯತಕ್ಕದ್ದು ನೋಡಿ ಸಿಟ್ಟು ಬಂದು ಹೋದೆ. ಈ ದೃಷ್ಟಿಯಿಂದ ಇವತ್ತು ಮುಖ್ಯಮಂತ್ರಿಗಳನ್ನು ನಾನು ಕಳಕಳಿಯಿಂದ ಕೇಳುವುದೇನೆಂದರೆ ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಹೇಳಬೇಕು. ಇನ್ನೊಂದು ಪ್ರಮುಖವಾದದ್ದು ಎಂದರೆ ಹೋದ ಸಲ ರಾಜ್ಯಪಾಲರ ಭಾಷಣದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುತ್ತೇವೆ ಎಂದು ಹೇಳಿದ್ದೀರಿ. ಭ್ರಷ್ಟರಹಿತವಾದ ಆಡಳಿತವನ್ನು ನಡೆಸುತ್ತೇವೆ ಎಂದು ಹೇಳಿದವರು ಈ ಸಲ ಇದರ ಬಗ್ಗೆ ಏನೂ ಹೇಳಿಲ್ಲ. ಅಂದರೆ ಈ ರಾಜ್ಯದಲ್ಲಿ ಭ್ರಷ್ಟಾಚಾರ ಹೋಗಿದೆಯೋ ಹೇಗೆ? ಇದರ ಬಗ್ಗೆ ಕೂಡ ತಾವು ಹೇಳಬೇಕಾಗುತ್ತದೆ.

ಅಧ್ಯಕ್ಷರು: ಕೊನೆಯದಾಗಿ ಅರಗ ಜ್ಞಾನೇಂದ್ರ ಅವರು.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಸನ್ಮಾನ್ಯ ಅಧ್ಯಕ್ಷರೇ, ಈ ವರ್ಷ ರಾಜ್ಯಪಾಲರ ಭಾಷಣದ ಮೇಲೆ ವಂದನೆ ಸಲ್ಲಿಸುವಂಥ ಸಂದರ್ಭದಲ್ಲಿ ಆಡಳಿತ ಪಕ್ಷದವರೇ ಹೆಚ್ಚು ಸಮಯ ತೆಗೆದುಕೊಂಡು ಮಾತನಾಡಿಬಿಟ್ಟರು. ಯಾವ ವರ್ಷವೂ ಹೀಗೆ ಮಾತನಾಡಿರಲಿಲ್ಲ. ರಾಮಯ್ಯನವರು ಮತ್ತು ಸಭಾಪತಿಯವರೇ ಹೆಚ್ಚು ಮಾತನಾಡಿದರು. ನಮಗೆ ಸಿಕ್ಕಂಥ ಸಮಯ ಬಹಳ ಕಡಿಮೆ ನಾವು ಇನ್ನೂ ಇದರ ಬಗ್ಗೆ ಮಾತನಾಡಬೇಕಿತ್ತು. ಆದರೆ ಬಹಳ ಕಡಿಮೆ ಸಮಯವಾಯಿತು. ಬಹುಶಃ ಹೋದ ಸಾರಿ ಅಂತ ಕಾಣುತ್ತದೆ, ಬಜೆಟ್ ಆದನಂತರವೂ ಕೂಡ ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯ ಸಲ್ಲಿಸುವುದರ ಮೇಲೆ ಐದಾರು ದಿವಸ ಸಭೆ ಮಾನ್ಯ ಖರ್ಗೆಯವರ ನೇತೃತ್ವದಲ್ಲಿ ನಡೆದಿತ್ತು. ಅವರು ಅದನ್ನು ಹೇಳಬೇಕು. ಏಕೆಂದರೆ ಈಗ ನಾವು ತರಾತುರಿ ಮಾಡುತ್ತಿದ್ದೇವೆ. ನಾನು ಕ್ಲಾರಿಫಿಕೇಶನ್ ಕೇಳುವಂಥಾದ್ದು ಇಷ್ಟೇನೆ. ನಿಮ್ಮ ಸರ್ಕಾರ ಹೇಗೆ ನಡೆಯುತ್ತದೆ ಎಂದು ಹೇಳಿ ನಿಮ್ಮ ನೀತಿ ನಿರೂಪಣೆಯೇ ಈ ಒಂದು ರಾಜ್ಯಪಾಲರ ಭಾಷಣ. ನಿಮ್ಮ ಮೊದಲನೇ ರಾಜ್ಯಪಾಲರ ಭಾಷಣದಲ್ಲಿ ಮಾತನಾಡುವಾಗ ಹೇಳಿದ್ದೀರಿ, ಏನೆಂದರೆ ನಮ್ಮ ರಾಜ್ಯದ ಸಾರ್ವಜನಿಕ ಉದ್ದಿಮೆಗಳು ಯಾವುದು ನಷ್ಟದಲ್ಲಿವೆ ಅವುಗಳಿಗೆ ಬಾಗಿಲು ಹಾಕಿಸುತ್ತೇವೆ, ಖಾಸಗೀಕರಣ ಮಾಡುತ್ತೇವೆ ಎಂದು. ಈ ಸಾರಿ ಇದರಲ್ಲಿ ಏನೂ ಉಲ್ಲೇಖ ಇಲ್ಲ. ತಾವು ಮೊನ್ನೆ 21ನೇ ತಾರೀಖು ನನಗೆ ಕೊಟ್ಟಂಥ ಉತ್ತರದಲ್ಲಿ ಹೇಳಿದ್ದೀರಿ, 15ನ್ನು ಖಾಸಗೀಕರಣ ಮಾಡುತ್ತೇವೆ ಎಂದು ತಾವೇ ಉತ್ತರ ಕೊಟ್ಟಿದ್ದೀರಿ. ಆದರೆ ನಿಮ್ಮ ಎ.ಐ.ಸಿ.ಸಿ. ಅಧಿವೇಶನ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಹೇಳಿಕೆ ಕೊಡುತ್ತೀರಿ, ಏನೆಂದರೆ ಇಲ್ಲ ನಾವು ಮಾಡುವುದಿಲ್ಲ, ಅದೆಲ್ಲ ವಿತ್‌ಡ್ರಾ ಮಾಡಿಕೊಳ್ಳುತ್ತೇವೆ ಎಂದು. ಒಟ್ಟಾರೆ ಕಾರ್ಮಿಕರು ಮತ್ತು ಸಾರ್ವಜನಿಕರು ಇವತ್ತು ಗೊಂದಲದಲ್ಲಿದ್ದಾರೆ. ಈ ಸಂದರ್ಭದಲ್ಲಿ ಇದರ ಬಗ್ಗೆ ತಾವು ವಿವರಣೆ ಕೊಡುತ್ತೀರಿ ಎಂದು ನಾನು ಭಾವಿಸುತ್ತೇನೆ. ಡಬ್ಲ್ಯೂ.ಟಿ.ಓ. ಸೆಲ್ ಬಗ್ಗೆ ತಾವು ಬಹಳ ಹೆಮ್ಮೆಯಿಂದ ಸ್ಮರಿಸಿಕೊಂಡಿರಿ ಮತ್ತು ನಾವು ಕೂಡ ಹೆಮ್ಮೆಯಿಂದ

ಅದನ್ನು ಸ್ಮರಿಸುತ್ತೇವೆ. ಏಕೆಂದರೆ ಒಂದು ಒಳ್ಳೆಯ ಹೆಜ್ಜೆ ಇಟ್ಟಿದ್ದೀರಿ ಸಾರ್ವಜನಿಕರಿಗೆ ಒಂದು ಮಾಹಿತಿ ಕೊಡುವ ದೃಷ್ಠಿಯಿಂದ. ಇದನ್ನು ಅಧ್ಯಯನ ಮಾಡುವ ದೃಷ್ಟಿಯಿಂದ ಸ್ಥಾಪನೆ ಮಾಡಿದ್ದೀರಿ. ಆದರೆ ಈ ಸೆಲ್ ಕೊಟ್ಟಂಥ ಒಂದು ಇಂಟಿರೀಮ್ ರಿಪೋರ್ಟ್‌ನ್ನು ತಾವು ಕೂಲಂಕಷವಾಗಿ ಅಧ್ಯಯನ ಮಾಡಿದ್ದೀರೋ ಇಲ್ಲವೋ ಗೊತ್ತಿಲ್ಲ. ನಾನು ಅಧ್ಯಯನ ಮಾಡಿದ ರೀತಿಯಲ್ಲಿ ಆ ಸೆಲ್ ರಿಪೋರ್ಟ್‌ನ್ನು ಕೊಡುವುದಕ್ಕಿಂತ ಮೊದಲು ರೈತ ಮುಖಂಡರನ್ನು ಕರೆದು ಸೆಮಿನಾರ್ ಮಾಡಿದ್ದರು. ಅದರ ಪ್ರೊಸೀಡಿಂಗ್ಸ್ ಕೂಡ ನನ್ನ ಹತ್ತಿರ ಇದೆ. ಆ ಪ್ರೊಸೀಡಿಂಗ್ಸ್‌ನಲ್ಲಿ ಸಲಹೆ ಮಾಡಿದ ಯಾವ ಒಂದು ಶಬ್ಧ ಕೂಡ ಈ ರಿಪೋರ್ಟ್‌ನಲ್ಲಿ ಅಳವಡಿಸಿಕೊಂಡಿಲ್ಲ. ಜಯರಾಂ ರಮೇಶ್‌ರವರು ಘೋಷಣೆ ಮಾಡಿದಂಥ ಕಮಿಟಿಗೂ ಮತ್ತು ಅಲ್ಲಿ ರಿಪೋರ್ಟ್‌ನಲ್ಲಿ ಹೆಸರು ಬಂದಿರತಕ್ಕಂಥ ಕಮಿಟಿಗೂ ವ್ಯತ್ಯಾಸ ಇದೆ. ಮೇನ್ ಕಮಿಟಿ ಮತ್ತು ಕೋರ್ ಕಮಿಟಿ ಎರಡನ್ನೂ ರಚನೆ ಮಾಡಿದ್ದಾರೆ. ಎರಡು-ಮೂರು ಮೀಟಿಂಗ್‌ಗಳನ್ನು ಮಾಡಿ ಎಲ್ಲೂ ಕೂಡ ಪ್ರವಾಸ ಮಾಡದೆ, ಯಾವುದೇ ರೈತರ ಸಮಸ್ಯೆಯನ್ನು ಕೂಡ ಅದರಲ್ಲಿ ಉಲ್ಲೇಖ ಮಾಡದೇನೆ, ಈಗ ಬೈರೇಗೌಡರು ಹೇಳಿದರು. ನಾನು ಅದನ್ನು ಹೇಳಬೇಕೆಂದು ಇದ್ದೆ ಎಷ್ಟೋ ರೈತರು ಆತ್ಮಹತ್ಯೆ ಮಾಡಿಕೊಂಡರು, ಅದ್ಯಾವುದೇ ಒಂದು ಉಲ್ಲೇಖ ಇಲ್ಲದೇನೇ ಆಶ್ಚರ್ಯವೆಂದರೆ, ಅವರು ಏನು ಹೇಳುತ್ತಾರೆ ಎಂದರೆ ನಾವು ಕನ್‌ಸ್ಯೂಮ್ ಮಾಡುವಂಥ ವಸ್ತುಗಳನ್ನು ಮೂರು ಪರ್ಸೆಂಟ್‌ನಷ್ಟು ನಾವು ವಿದೇಶಗಳಿಂದ ತೆಗೆದುಕೊಂಡರೆ ನಮಗೆ ಏನೂ ತೊಂದರೆಯಾಗುವುದಿಲ್ಲ, ನಮ್ಮ ಮಾರ್ಕೆಟ್ ಮೇಲೆ ಏನೂ ಪರಿಣಾಮವಾಗುವುದಿಲ್ಲ ಎನ್ನುವಂಥಾದ್ದನ್ನು ವರದಿಯಲ್ಲಿ ಕೊಟ್ಟಿದ್ದಾರೆ. ನಾವು ಹೇಳುತ್ತಿದ್ದೇವೆ ಏನೋ ದೊಡ್ಡ ಪರಿಣಾಮಗಳು ಆಗುತ್ತಾ ಇವೆ ಅಂತ. ತಾವೇ ರಚನೆ ಮಾಡಿರತಕ್ಕಂಥ ಸೆಲ್ ತಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿರತಕ್ಕಂಥ ಒಂದು ವಿಚಾರವನ್ನು ಅಲ್ಲಿ ಉಲ್ಲೇಖ ಮಾಡಿದೆ ಎನ್ನತಕ್ಕಂಥಾದ್ದನ್ನು ತಾವು ಗಮನಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆ ಒಂದು ಸೆಲ್‌ನಲ್ಲಿ ಕಾರ್ಯಕಾರಿ ಸಮಿತಿ ಏನು ರಚನೆ ಮಾಡಿದ್ದೀರಿ, ಅವರಲ್ಲಿ ಕೆಲವರು ನನಗೆ ಮಾತನಾಡಲಿಕ್ಕೆ ಸಿಕ್ಕಿದ್ದರು. ಅವರು ಏನೆಂದು ಹೇಳಿದರು ಎಂದರೆ, ರಿಪೋರ್ಟ್ ಯಾವತ್ತು ಕೊಟ್ಟರು ಎಂದು ನಮಗೆ ಗೊತ್ತಿಲ್ಲ, ಫೈನಲೈಸ್ ಮಾಡುವಾಗ ನಮ್ಮಲ್ಲಿ ಯಾರನ್ನೂ ಕರೆದು ನಮ್ಮ ಅಭಿಪ್ರಾಯವನ್ನು ರಿಕಾರ್ಡ್ ಮಾಡುವುದಕ್ಕೆ ಬಿಟ್ಟಿಲ್ಲ ಎನ್ನತಕ್ಕಂಥಾದ್ದನ್ನು ಕೂಡ ಅವರು ಹೇಳಿದರು. ನಮ್ಮ ರಾಜ್ಯದ ಅಥವಾ ರೈತರ ಬಗ್ಗೆ ಅಧ್ಯಯನ ಮಾಡಿರತಕ್ಕಂಥ ಕೆಲವರು ಆ ಕಮಿಟಿಯಲ್ಲಿ ಇದ್ದಾರೆ. ಅವರ ವರದಿಗಳು ಕೂಡ ಅದರಲ್ಲಿವೆ. ಆದರೆ ಅವರ ಚಿಂತನೆ ಕೂಡ ಎಲ್ಲಿಯೂ ಉಲ್ಲೇಖ ಮಾಡಿಲ್ಲ ಎನ್ನುವುದನ್ನು ಹೇಳಿದ್ದಾರೆ. ತಾವು ಇದನ್ನು ಕೂಲಂಕಷವಾಗಿ ವಿಮರ್ಶೆ ಮಾಡದೇ ಹೋದರೆ, ಕಮಿಟಿಯವರ ಜತೆ ಮಾತನಾಡದೇ ಹೋದರೆ, ನಾವು ತಾವು ಎಲ್ಲ ಒಳ್ಳೆಯದಾಗುತ್ತದೆ ಎಂದು ಸ್ಮರಿಸಿಕೊಂಡಿರತಕ್ಕಂಥ ರ್‍ಯಾಪೋರ್ಟ್ - ಅದು

ಅರ್ಥಹೀನವಾದ ರಿಪೋರ್ಟ್ ಆಗಿ ಹೊರಬರುತ್ತದೆ ಎನ್ನುವ ಕಾರಣಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕೆ.ಪಿ.ಟಿ.ಸಿ.ಎಲ್. ಬಗ್ಗೆ ಹೇಳಿದ್ದೀರಿ ತಾವು ಸಮಿತಿಯವರೆಲ್ಲ. ಕುಳಿತುಕೊಂಡು ತೀರ್ಮಾನ ಮಾಡಿ ರೈತರದ್ದೆಲ್ಲ ಒಂದು ವರ್ಷ ಮುಂದೆ ಹಾಕಿಕೊಂಡಿದ್ದೇವೆ ಎಂದು ಹೇಳಿದ್ದೀರಿ. ತಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ನಮಗೆಲ್ಲ ಒಂದು ನೋಟೀಸ್ ಬಂದಿದೆ. ನಿಮಗೆ ಟೆಲಿಫೋನ್ ಇದೆಯಾ, ಕಾರು ಇದೆಯಾ, ನಿಮಗೆ ಜಮೀನು ಎಷ್ಟು ಉಂಟು, ಪಂಪುಸೆಟ್ಟು ಎಷ್ಟು ಉಂಟು ಎಂದು ಈ ವಿವರಗಳನ್ನು ಕೇಳುತ್ತಿದ್ದಾರೆ. ಇದು ಏಕೆ ಈ ವಿವರಣೆ ಕೇಳುತ್ತಿದ್ದಾರೆ ಅಥವಾ ನೆಂಟಸ್ತಿಕೆ ಏನಾದರೂ ಬೆಳೆಸಿಕೊಳ್ಳುತ್ತಿದ್ದಾರಾ ಅನುಕೂಲಸ್ಥರಾಗಿದ್ದರೆ ಅಂತ ಹೇಳಿ ನಮಗೆ ಗೊತ್ತಿಲ್ಲ. ಅವರಿಗೆ ಸರಿಯಾದ ಸೂಚನೆ ಹೋಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಕಟ್ಟಕಡೆಯದಾಗಿ ಒಂದೇ ಒಂದು. ಅತ್ಯಂತ ಬಡವರಿಗೆ ಕೊಟ್ಟಂಥ ಮನೆ - ಇದರ ಬಗ್ಗೆ ನಾವು ಮೊನ್ನೆ ಕೂಡ ಚರ್ಚೆ ಮಾಡಿದ್ದೇವೆ. ತಾವು ಮುಖ್ಯಮಂತ್ರಿಗಳು ಸದನದಲ್ಲಿ ಇರಲಿಲ್ಲ. ಇವತ್ತು ನೂರು ಜನರಲ್ಲಿ 80 ರಿಂದ 90 ಜನ ಮನೆ ಬಿಲ್‌ಗೋಸ್ಕರ ತಾಲ್ಲೂಕು ಪಂಚಾಯತಿಗಳಿಗೆ ಅಲೆದಾಡುತ್ತಿದ್ದಾರೆ. ಈ ವರ್ಷದ್ದು ನೀವು ಕೊಡುತ್ತಿದ್ದೀರಿ ಮತ್ತು ನಮಗೆ ಏನೂ ತೊಂದರೆ ಇಲ್ಲ. ಆದರೆ ಹಿಂದಿನವರ್ಷ, ಅದರ ಹಿಂದಿನವರ್ಷ ಸರ್ಕಾರ ಕೊಟ್ಟಿರತಕ್ಕಂಥ ಮನೆಯ ಬಿಲ್‌ಗಳು ಕೋಟಿಗಟ್ಟಲೆ ಬಾಕಿಯಿವೆ. ಆ ಜನ ಬಸ್ಸಿಗೆ ದುಡ್ಡು ಇಲ್ಲದೆ, ಯಾರ್‍ಯಾರಲ್ಲೋ ಸಾಲ ಮಾಡಿಕೊಂಡು, ಮನೆ ಕಟ್ಟಿಕೊಂಡಿರತಕ್ಕಂಥವರು ತಾಲ್ಲೂಕು ಪಂಚಾಯತಿ ಕಚೇರಿಗಳಿಗೆ ಮತ್ತು ನಮ್ಮ ಮನೆಗಳಿಗೆ ಕೂಡ ಅಲೆದು ಸುಸ್ತಾಗುತ್ತಿದ್ದಾರೆ. ಅದನ್ನು ತಕ್ಷಣ ಬಿಡುಗಡೆ ಮಾಡುವುದರ ಜತೆಗೆ ಸರ್ಕಾರ ಬದಲಾವಣೆ ಆದ ಮೇಲೆ ಸರ್ಕಾರದ ನೀತಿ, ಕಮಿಟ್‌ಮೆಂಟ್‌ಗಳು ಬದಲಾವಣೆಯಾಗುತ್ತವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅದು ಆಗಬಾರದು. ಸರ್ಕಾರ ಎನ್ನುವುದು ಒಂದು ಕಂಟಿನ್ಯೂಯಸ್ ಬಾಡಿಯಾಗಿರುತ್ತದೆ. ಆದ್ದರಿಂದ ನಿಮ್ಮ ಸರ್ಕಾರ ಇರಬಹುದು, ಬೇರೆ ಇನ್ನೊಂದು ಸರ್ಕಾರ ಬರಬಹುದು, ಇದನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಗುಂಡಪ್ಪ ವಕೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ ದಯವಿಟ್ಟು ಯೀಲ್ಡ್ ಆಗಬೇಕು.

ಶ್ರೀ ಎಸ್.ಎಂ.ಕೃಷ್ಣ: ವಿಶೇಷ ಕಾರಣಕ್ಕೋಸ್ಕರ ಅವರಿಗೆ ನಾನು ಯೀಲ್ಡ್ ಆಗುತ್ತೇನೆ.

ಶ್ರೀ ಸಿ.ಭೈರೇಗೌಡ: ಆಶ್ರಯ ಮನೆಗಳ ಹಣ ಕೊಟ್ಟಿಲ್ಲವೆಂದು ಹೇಳಿದ್ದಾರೆ. ನಾವು ಪುನಃ ಅಧಿಕಾರಕ್ಕೆ ಬರುತ್ತೇವೆ ಮತ್ತು ಖಂಡಿತ ಹಣ ಕೊಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಒಂದೇ ಒಂದು ಕ್ಲಾರಿಫಿಕೇಷನ್ ತೆರಿಗೆ ಸುಧಾರಣೆ ಬಗ್ಗೆ ಕೇಳುತ್ತಿದ್ದೇನೆ. ರಾಜ್ಯದಲ್ಲಿ ಆದಾಯಗಳು ಸೋರಿಹೋಗುತ್ತಿವೆ. ಹೀಗಾಗಿ ತೆರಿಗೆಗಳನ್ನು ಸರಳೀಕರಣಗೊಳಿಸುವುದಕ್ಕೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪ ಮೊಯಿಲಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ವರದಿಯನ್ನು ಕೊಟ್ಟಿದ್ದಾರೆ. ಅವರ ಶಿಫಾರಸ್ಸುಗಳನ್ನು ಅನುಷ್ಠಾನ ಮಾಡುವ ಬಗ್ಗೆ ಸರ್ಕಾರ ಯೋಚಿಸುತ್ತದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದರು. ಆದರೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಬಲಪಡಿಸುವುದಕ್ಕೆ ಸ್ಪಷ್ಟವಾದಂಥ ಒಂದು ನೀತಿ ಇದರಲ್ಲಿ ಇಲ್ಲ ಅಥವಾ ಸರ್ಕಾರದ ಉತ್ತರದಲ್ಲಿ ಸ್ಪಷ್ಟತೆ ಇಲ್ಲ. ಏಕೆಂದರೆ 1450 ಕೋಟಿ ರೂಪಾಯಿಗಳು ಎಕ್ಸೈಸ್ ಇಲಾಖೆಯಲ್ಲಿ ಸೋರಿ ಹೋಗುತ್ತಿವೆ ಎನ್ನುವಂಥ ಮಾತು ಕೂಡ ಆ ವರದಿಯಲ್ಲಿದೆ ಎನ್ನುವುದು ಈಗಾಗಲೇ ಪತ್ರಿಕೆಗಳಲ್ಲಿ ಬಹಿರಂಗಗೊಂಡಿದೆ. ಹಾಗಾಗಿ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸದೃಢಗೊಳಿಸುವುದಕ್ಕೆ ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳುತ್ತದೆಯೆ? ಆರ್ಥಿಕ ಸಮೀಕ್ಷೆಯ ವರದಿಯನ್ನು ಈಗ ಕೊಟ್ಟಿದ್ದೀರಿ. ಆದರೆ ಸ್ಪಷ್ಟವಾದ ನಿಲುವು, ಸ್ಪಷ್ಟವಾದ ಹೆಜ್ಜೆ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಉತ್ತರದಲ್ಲೂ ಏನೂ ಇಲ್ಲ. ಈ ಬಗ್ಗೆ ಸರ್ಕಾರ ನಿಲುವು ಏನೆಂದು ನಾನು ಸ್ಪಷ್ಟೀಕರಣ ಕೇಳುತ್ತೇನೆ.

ಶ್ರೀ ಗುಂಡಪ್ಪ ವಕೀಲ್ (ಔರಾದ್): ಬೀದರ್ ಜಿಲ್ಲೆಯಲ್ಲಿ ಅಧಿಕಾರಿಗಳ ಮೇಲೆ ಹಲ್ಲೆಯಾಗಿದೆ ಮತ್ತು ಅವರು ಬಾಯ್‌ಕಾಟ್ ಮಾಡಿದ್ದಾರೆ, ಮೆರವಣಿಗೆ ತೆಗೆದಿದ್ದರೆ, ಜಿಲ್ಲಾ ಪಂಚಾಯತ್‌ನಲ್ಲಿ ಬಿಕ್ಕಟ್ಟು ಉದ್ಭವಿಸಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ ನಾವೆಲ್ಲರೂ ತಮ್ಮ ಜತೆಗಿದ್ದೇವೆ ಸ್ವಾಮಿ. ನೀವು ಏನಾದರೂ ಇದರ ಬಗ್ಗೆ ಸುಧಾರಣೆ ಮಾಡತಕ್ಕಂಥ ಕ್ರಮ ತೆಗೆದುಕೊಳ್ಳಬೇಕು. ಈ ವೇದಿಕೆಯ ಮುಖಾಂತರ ತಾವು ಜನತೆಗೆ ಒಂದು ಸಂದೇಶವನ್ನು ಕೊಡಬೇಕು, ಈ ಸದನದಿಂದ ಒಂದು ಸಂದೇಶವನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿ): ಮಾನ್ಯ ಸದಾನಂದಗೌಡರು ಎರಡು - ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಮತ್ತು ಟ್ಯಾಕ್ಸ್ ಕಮಿಷನ್ ರಿಪೋರ್ಟ್ ಕೊಟ್ಟಿದ್ದಾರೆ ಎಂದು ಹೇಳಿದರು. ಅದನ್ನು ಮಾನ್ಯ ವಿಶ್ವೇಶ್ವರ ಹೆಗಡೆಯವರು ಮತ್ತು ಭೈರೇಗೌಡರೂ ಪ್ರಸ್ತಾಪ ಮಾಡಿದ್ದಾರೆ. ಇದು ಯಾವುದೇ ಒಂದು ಕಮಿಷನ್ ನಾನು ಅಪಾಯಿಂಟ್ ಮಾಡಿದಾಗ ಅವರು ಇಂಟಿರೀಮ್ ರಿಪೋರ್ಟ್ ಕೊಡುತ್ತಾರೆ ನಂತರ ಫೈನಲ್ ರಿಪೋರ್ಟನ್ನು ಕೊಡುತ್ತಾರೆ. ಇಂಟಿರೀಮ್ ರಿಪೋರ್ಟ್ ಕೊಟ್ಟಾಕ್ಷಣ ಏನು ಮಾಡುತ್ತೇವೆ ಹೇಳಿ? ಅಷ್ಟನ್ನೂ ಕಾರ್ಯರೂಪಕ್ಕೆ ತಂದಿದ್ದೀರಾ ಹಾಗೆಂದು ಕೇಳತಕ್ಕಂಥಾದ್ದು ಅಲ್ಲ. ಕಳೆದ 51 ವರ್ಷಗಳಲ್ಲಿ ಬೇಕಾದಷ್ಟು ಕಮಿಷನ್‌ಗಳ ರಿಪೋರ್ಟ್‌ಗಳು ಬಂದಿವೆ.

ಅಧ್ಯಕ್ಷರು: ರಮಾನಾಥರೈ ಅವರೇ, ತಾವು ದಯವಿಟ್ಟು ತಮ್ಮ ಜಾಗದಲ್ಲಿ ಕುಳಿತುಕೊಳ್ಳಿ.

ಶ್ರೀ ಎಸ್.ಎಂ.ಕೃಷ್ಣ: ಬೇಕಾದಷ್ಟು ಕಮಿಷನ್‌ಗಳು ರಿಪೋರ್ಟ್‌ಗಳನ್ನು ಕೊಟ್ಟಿವೆ. ಆದರೆ ಯಾವ ಸರ್ಕಾರ ಕೂಡ ಮೂರು ತಿಂಗಳಲ್ಲಿ ಸದನದ ಮುಂದೆ ತೆಗೆದುಕೊಂಡು ಬಂದು ಅವರು 72 ಶಿಫಾರಸ್ಸುಗಳನ್ನು ಮಾಡಿದ್ದಾರೆ, ನಾವು 23ನ್ನು ಒಪ್ಪಿದ್ದೇವೆ, 23 ಮಾಡುವುದಕ್ಕೆ ಬರುವುದಿಲ್ಲ, 22ನ್ನು ಬಿಟ್ಟು ಬಿಟ್ಟಿದ್ದೀವಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಈ ರೀತಿಯಲ್ಲಿ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ. ಅವರು ಏನು ಶಿಫಾರಸ್ಸುಗಳನ್ನು ಕೊಟ್ಟಿದ್ದಾರೆ ಅದನ್ನು ನಾವು ಆಳವಾಗಿ ಅಧ್ಯಯನ ಮಾಡುತ್ತೇವೆ. ಸರ್ಕಾರ ನಡೆಸತಕ್ಕವರು ರಿಪೋರ್ಟ್ ಕೊಟ್ಟಾಕ್ಷಣ ಮಕ್ಕಿಕಾಮಕ್ಕಿ ಅವನ್ನೆಲ್ಲ ಇಳಿಸಿ ಬಿಡುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

5. 10 ಪಿಎಂ

We will consider every recommendation made by these Commissions with utmos respect, scrutinise it and see how best we can incorporate those recommendations which are feasible, which are in the larger interest of the State and we will implement those suggestions. This applies to the Administrative Reforms Commission report also. They have made very very valid recommendations regarding simplification, file clearance etc., We will examine, we are examining those recommendations, A Cabinet Sub-Committee has been constituted.

5. 10 ಪಿಎಂ

ಅವರು ಮೂರು ಸಭೆಗಳನ್ನು ಈಗಾಗಲೇ ಮಾಡಿದ್ದಾರೆ. ಅವರು, ತಮ್ಮ ಅನಿಸಿಕೆಗಳು ಮತ್ತು ತಮ್ಮ ಅನುಭವ, ಏಕೆಂದರೆ ಇಲ್ಲಿ ಕೂತಿರತಕ್ಕಂಥವರು ಅಗಾಧವಾದ ಅನುಭವವನ್ನು ಪಡೆದಿರುತ್ತಾರೆ. ರಿಪೋರ್ಟ್ ಕೊಟ್ಟಿರತಕ್ಕಂಥವರ ಅನುಭವಕ್ಕೆ ಮ್ಯಾಚಿಂಗ್ ಅನುಭವ ಇಲ್ಲಿದೆ. ಆದ್ದರಿಂದ, ನಮ್ಮ ಅನುಭವದ ಆಧಾರದ ಮೇಲೆ, ಅವರು ಕೊಟ್ಟಿರತಕ್ಕ ಅನುಭವಪೂರಿತವಾದಂಥ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ನಾವು ಮಾಡುತ್ತೇವೆ. ಮತ್ತು ಈ ಸದನಕ್ಕೆ ಆಗಿಂದಾಗ್ಗೆ ರಿಪೋರ್ಟ್ ಕೊಡುತ್ತೇವೆ. ಕೇರಳದ

ಬಗ್ಗೆ ಏಕೆ ಪ್ರಸ್ತಾಪ ಮಾಡಲಿಲ್ಲ, ಬೆಳಗಾಂ ಬಗ್ಗೆ ಮಾತ್ರ ಮಾಡಿದ್ದೀರಿ ಎಂದು ಹೇಳಿದರು. ತಾವು ದಯವಿಟ್ಟು ಪ್ರಧಾನ ಮಂತ್ರಿಗಳಿಗೆ ತಿಳಿಸಿ ನಾನು ಈಗಾಗಲೇ ಅವರಿಗೆ ತಿಳಿಸಿದ್ದೇನೆ. ಏನೆಂದರೆ, ಮಹಾಜನ್ ಕಮೀಷನ್ ವಿಚಾರ ಬಂದಾಗ ಕೇವಲ it is not between Maharashtra and Karnataka. Inevitably Kerala has to be a party to that. Kerala Chief Minister will have to be called along with the Chief Minister of Karnataka and Chief Minister of Maharashtra. ಆದ್ದರಿಂದ, ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ಸದಾನಂದಗೌಡರು ನಿಮ್ಮ ರೀತಿಯಲ್ಲಿ ನೀವೂ ಅವರಿಗೆ ತಿಳಿಸಿದರೆ ನನ್ನ ಕೈಯನ್ನು ಬಲಪಡಿಸಿದಂತಾಗುತ್ತದೆ.

ಶ್ರೀ ಡಿ.ವಿ.ಸದಾನಂದಗೌಡ: ಆ ಗಡಿನಾಡಿನ ಡೆಲಿಗೇಷನ್ ತಮ್ಮಲ್ಲಿಗೆ ಬಂದಿತ್ತು. ನಮ್ಮ ಕೈಯಾರ ಕಿಂಜ್ಞಣ್ಣರೈ ಅವರ ನೇತೃತ್ವದಲ್ಲಿ ಒಂದು ಡೆಲಿಗೇಷನ್ ಬಂದಿತ್ತು. ಆ ಸಂದರ್ಭದಲ್ಲಿ ಒತ್ತು ಕೊಡುವಂಥ ಪ್ರಯತ್ನವನ್ನು ಮಾಡುತ್ತೇವೆಂದು, ತಮ್ಮ ಕಡೆಯಿಂದ ಭರವಸೆಯನ್ನು ಕೊಟ್ಟಿದ್ದೀರಿ. ಈಗ ನನ್ನ ಒತ್ತಾಯ ಏನೆಂದರೆ, ನಾವು ಕೂಡ ಈ ಸದನದಿಂದ ಅದಕ್ಕೆ ಸ್ವಲ್ಪ ಹೆಚ್ಚು ಒತ್ತು ಕೊಡಬೇಕು. ಈ ರಾಜ್ಯದ ಮುಖ್ಯಮಂತ್ರಿಗಳಾಗಿ ತಾವು ಅದಕ್ಕೆ ಒತ್ತು ಕೊಡಬೇಕು. ಪ್ರಧಾನ ಮಂತ್ರಿಯವರಿಂದ ಒತ್ತಡ ತರಬೇಕು. ಈಗ ನಾವು ಸ್ವಪಕ್ಷೀಯವಾಗಿ ಬೇರೆ ರೀತಿಯಲ್ಲಿ ಒತ್ತಡವನ್ನು ತರುವಂಥಾದ್ದು ಮತ್ತು ರಾಜ್ಯದ ಹಿತದೃಷ್ಟಿಯಿಂದ ಮತ್ತು ರಾಜ್ಯದ ಮುಖ್ಯಮಂತ್ರಿಗಳಾಗಿ ಆ ಕೆಲಸವನ್ನು ನೀವೇ ಮಾಡಬೇಕಾಗುತ್ತದೆ. ನಾವು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ, ಸ್ವಲ್ಪ ಒತ್ತು ಕೊಡಬೇಕೆಂದು ನನ್ನ ವಿನಂತಿ. ಈಗಾಗಲೇ ಕೇರಳದಿಂದ ಸ್ವಲ್ಪ ಬಾಧೆ ಶುರುವಾಗಿದೆ. ಏನೆಂದರೆ, ಮಲೆಯಾಳೀಕರಣ ಮಾಡುವಂಥಾದ್ದು, ಕೊಳತ್‌ನಾಡು ಎಂದು ಹೆಸರಿಡಬೇಕೆಂಬ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ಶ್ರೀ ಎಸ್.ಎಂ.ಕೃಷ್ಣ: ಈಗಾಗಲೇ ನಮ್ಮ ಕೇರಳದ ಕನ್ನಡ ಮಾತನಾಡತಕ್ಕ ಪ್ರತಿನಿಧಿಗಳಿಗೆ ಕಯ್ಯಾರ ಕಿಂಜ್ಞಣ್ಣರೈ ಅವರಿಗೆ ಭರವಸೆ ಕೊಟ್ಟಿದ್ದೇನೆ. ನಾನು ಪ್ರಧಾನಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ ಎಂದು ಹೇಳಿದ್ದೇನೆ. ಅವರೂ ಕೂಡ ನಿಯೋಗ ಹೋಗುತ್ತೇವೆಂದು ಹೇಳಿದ್ದಾರೆ. ತಾವು ಆ ನಿಯೋಗವನ್ನು ಕರೆದುಕೊಂಡು ಪ್ರಧಾನಮಂತ್ರಿಗಳ ಹತ್ತಿರ ಹೋದರೆ, ಅದು ನನ್ನ ಕೈಯನ್ನು ಬಲಪಡಿಸಿದಂತಾಗುತ್ತದೆ. ಈಗಾಗಲೇ ನಾನು ಪ್ರಧಾನಮಂತ್ರಿಗಳಿಗೆ ತಿಳಿಸಿದ್ದೇನೆ. ಈ ಮಹಾಜನ್ ವರದಿ ವಿಚಾರ ಬಂದಾಗ ಕೇರಳವನ್ನು ಬೇರ್ಪಡಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಕೇರಳದ ಮುಖ್ಯಮಂತ್ರಿಯವರ ಪ್ರೆಸೆನ್ಸ್ ಬಹಳ ಅವಶ್ಯಕತೆ ಇದೆಯೆಂಬುದನ್ನು ಹೇಳಿದ್ದೇನೆ.

ಮಾನ್ಯ ಸಿಂಧ್ಯರವರು ದಂಡುಪಾಳ್ಯದ ವಿಚಾರದಲ್ಲಿ ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ಇತ್ತೀಚಿನ ಪತ್ರಿಕೆಗಳಲ್ಲಿ ಮತ್ತು ಇತ್ತೀಚಿನ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಈ ಬಗ್ಗೆ ಬಹಳ ವಿಚಾರಗಳು ನಮೂದಿತವಾಗಿದೆ. ಆದರೆ, ಈ ಸರ್ಕಾರಕ್ಕೆ ಒಂದು ಸಮಾಧಾನ ಎಂದರೆ, ನಾವು ಅವರನ್ನು ಹಿಡಿದಿದ್ದೇವೆ. ಗೃಹಸಚಿವರಿಗೆ ಮತ್ತು ನಮ್ಮ ಪೋಲೀಸ್ ಇಲಾಖೆಗೆ, ಅವರು ತೆಗೆದುಕೊಂಡಂಥ ಕ್ಷಿಪ್ರ ಕಾರ್ಯಾಚರಣೆಗೋಸ್ಕರ ನಾನು ಸದನದ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಮರ್ಪಣೆ ಮಾಡುತ್ತೇನೆ. ಈಗಾಗಲೇ ಬಾಂಬ್ ಬ್ಲಾಸ್ಟ್ ಕೇಸುಗಳ ವಿಚಾರವನ್ನು ಒಂದು ಸ್ಪೆಷಲ್ ಕೋರ್ಟಿಗೆ ಶಿಫಾರಸ್ ಮಾಡಿದ್ದೇವೆ. ಟಾಡಾ ಕೇಸಸ್‌ಗೆ ಈಗಾಗಲೇ ಒಂದು ಸ್ಪೆಷಲ್ ಕೋರ್ಟ್ ಮೈಸೂರಿನಲ್ಲಿ ನಡೆಯುತ್ತಾ ಇದೆ. ಹಾಗೆಯೇ ಎಸ್‌ಸಿ/ಎಸ್‌ಟಿ ಅಟ್ರಾಸಿಟೀಸ್ ಕೇಸ್‌ಗೆ, ಒಂದು ಸ್ಪೆಷಲ್ ಕೋರ್ಟ್ ಮಾಡಿದ್ದೇವೆ. ಮಾನ್ಯ ಸಿಂಧ್ಯರವರು ಹಿಂದೆ ನಮ್ಮ ರಾಜ್ಯದ ಗೃಹಸಚಿವರಾಗಿದ್ದರು. ಆದ್ದರಿಂದ, ಅವರ ಸಲಹೆ ಏನಿದೆ, ಇದಕ್ಕೊಂದು ಸ್ಪೆಷಲ್ ಕೋರ್ಟ್ ಮಾಡಬೇಕೆಂಬ ಸಲಹೆಯನ್ನು ಮಾನ್ಯ ಗೃಹಸಚಿವರು ಒಪ್ಪಿದ್ದಾರೆ. ನಾವು ಈ ಶಿಫಾರಸ್ಸನ್ನು ನಮ್ಮ ಹೈಕೋರ್ಟಿಗೆ ಮಾಡುತ್ತೇವೆ. ಆಶ್ರಯ ಬಗ್ಗೆ ಮೆಜಾರಿಟಿ, ಮೈನಾರಿಟಿ ಎಂದು ಹೇಳಿದರು. ಒಂದು ವಿಚಾರದಲ್ಲಿ, ಈ ಸದನದಲ್ಲಿ ಒಂದು ಸಾಮೂಹಿಕ ಚಿಂತನೆ ನಡೆಯಬೇಕು. ಏನೆಂದರೆ, ಬಡವರಿಗೆ ಪಕ್ಷ ಪಂಗಡ ಏನೂ ಇಲ್ಲ. ಇವತ್ತು ನಾವು ಯೋಚನೆ ಮಾಡುತ್ತಾ ಇರತಕ್ಕಂಥಾದ್ದು ಬಡವರ ವಿಚಾರವೇ. ಆದ್ದರಿಂದ ಇದರಲ್ಲಿ ಮೆಜಾರಿಟಿ ಏನು, ಮೈನಾರಿಟಿ ಏನು ನನಗೆ ಅರ್ಥವಾಗುವುದಿಲ್ಲ. ಈಗಾಗಲೇ ಸರ್ಕಾರ ಒಂದು ಡಿಕ್ಲರೇಷನ್ ಮಾಡಿದೆ. ಏನೆಂದರೆ, 1990-91ರ ಗಣತಿಯಲ್ಲಿ 11 ಲಕ್ಷ ಸಂಸಾರಗಳಿಗೆ ಮನೆ ಇಲ್ಲ. ಆ 11 ಲಕ್ಷ ಸಂಸಾರಗಳಿಗೆ 2005ನೇ ಇಸವಿಯೊಳಗೆ ಮನೆಗಳನ್ನು ಕೊಡಿಸಿಕೊಡಬೇಕು ಎನ್ನತಕ್ಕಂಥಾದ್ದು ನಮ್ಮ ಪ್ರತಿಪಾದನೆಯಾಗಿದೆ. ನಾನು ಮನೆ ಇಲ್ಲದವರಿಗೆ ಮನೆ ಕೊಡುತ್ತೇವೆಂದು ಹೇಳಿದ್ದೇವೆ. ಆದ್ದರಿಂದ ಮೆಜಾರಿಟಿ, ಮೈನಾರಿಟಿಯೋ ಆ 11 ಲಕ್ಷ ಜನಗಳಿಗೂ ಕೂಡ ಮನೆ ಬರಬೇಕಾಗುತ್ತದೆ. ಆದ್ದರಿಂದ, ತಾವು ಹೇಳಿದ್ದನ್ನು ನಾವು ಗಮನದಲ್ಲಿಟ್ಟುಕೊಂಡಿದ್ದೇವೆ. ಅದಕ್ಕೆ ಸೂಕ್ತವಾದ ಪರಿಹಾರವನ್ನು ನಾವು ಕೊಡುತ್ತೇವೆ. ಮಾನ್ಯ ಸುರೇಶ್ ಕುಮಾರ್‌ರವರು ಅತ್ಯಂತ ಗಹನವಾದ ವಿಚಾರವನ್ನು ಹೇಳಿ, ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ಈ ಕರ್ನಾಟಕ ಸಿವಿಲ್ ಸರ್ವೀಸಸ್, ಅದು ಐ ಎ ಎಸ್ ಅಥವಾ ಕೆ ಎ ಎಸ್ ಆಗಿರಲಿ. ಬಹಳ ಒಳ್ಳೆಯ ಹೆಸರನ್ನು ಇಡೀ ದೇಶದಲ್ಲಿ ಅವರು ಮಾಡಿದ್ದಾರೆ. We are proud of our civil services. At times we might criticise them, at times we might try to pull them up. But let me go on record, let me send a message to the Civil servants of this State, that this Government has total faith in the Civil services of the State.

ಇದಕ್ಕೆ ಅಲ್ಲಲ್ಲಿ ಕೆಲವು ಅಪಭ್ರಂಶಗಳು ಇರುತ್ತವೆ. ಈಗ ತುಮಕೂರಿನಲ್ಲಿ ನಡೆದಿದೆ. ಇದೊಂದು ದುರದೃಷ್ಟಕರವಾದಂಥ ಘಟನೆ. ಜನಪ್ರತಿನಿಧಿಗಳು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡರೆ, ಕಾನೂನನ್ನು ರಕ್ಷಣೆ ಮಾಡತಕ್ಕಂಥವರು ಯಾರು? ಈ ಸದನದ ಸದಸ್ಯರುಗಳನ್ನು ಕಾನೂನಿನ ರಕ್ಷಣೆಗಾಗಿ ಜನ ಕಳುಹಿಸಿಕೊಟ್ಟಿದ್ದಾರೆ. ಆದರೆ, ನಾವೇ ಕಾನೂನಿನ ಭಕ್ಷಕರಾಗಿ ಹೋದರೆ, ಕಾನೂನಿನ ರಕ್ಷಣೆ ಮಾಡತಕ್ಕಂಥವರು ಯಾರು? ಆದ್ದರಿಂದ, ನಾನು ಇದರ ಬಗ್ಗೆ ತೀವ್ರವಾದ ಗಮನವನ್ನು ತೆಗೆದುಕೊಂಡು, ಯಾರು ಈ ಕಾನೂನನ್ನು ಕೈಗೆ ತೆಗೆದುಕೊಂಡರು, ಅವರ ಬಗ್ಗೆ ಕಂಪ್ಲೇಂಟ್ ಬಂದತಕ್ಷಣ, ಅವರ ಮೇಲೆ law of the land ಪ್ರಕಾರ, ಕಾನೂನಿನ ಪ್ರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ಸೂಚನೆಯನ್ನು ಮಾನ್ಯ ಗೃಹಸಚಿವರು ಕೊಟ್ಟಿದ್ದಾರೆಂಬುದನ್ನು ತಮಗೆ ತಿಳಿಸುತ್ತಿದ್ದೇನೆ. ಮತ್ತು ಯಾರೋ ಒಬ್ಬರು ಒಂದು ರೆಫರೆನ್ಸ್ ಮಾಡಿದರು. ಒಬ್ಬ ಐ ಎ ಎಸ್ ಅಧಿಕಾರಿಯನ್ನು ನೀವು ಸಸ್ಪೆಂಡ್ ಮಾಡಿದಿರಿ, ಆದರೆ, 8 ದಿವಸದಲ್ಲೇ ಅದನ್ನು ರಿವೋಕ್ ಮಾಡಿದಿರಿ ಎಂದು ಹೇಳಿದರು. ಐ ಎ ಎಸ್, ಕೆ ಎ ಎಸ್, ಐ ಪಿ ಎಸ್ ಮತ್ತು ಫಾರೆಸ್ಟ್‌ನವರು ಯಾರನ್ನು ಬೇಕಾದರೂ ಸಸ್ಪೆಂಡ್ ಮಾಡತಕ್ಕ ಅಧಿಕಾರ ಸರ್ಕಾರಕ್ಕೆ ಇದೆ. ಹೇಗೆ ಈ ಸಭೆಗೆ ನನ್ನನ್ನು ಆರಿಸಿ ಕಳುಹಿಸತಕ್ಕ ಅಧಿಕಾರ ಇದೆಯೋ ಹಾಗೆ ಈ ಮಂತ್ರಿಮಂಡಲಕ್ಕೆ ಯಾವುದೇ ಅಧಿಕಾರಿಯನ್ನು ಬೇಕಾದರೂ ಸಸ್ಪೆಂಡ್ ಮಾಡತಕ್ಕ ಅಧಿಕಾರ ಇದೆ. ಯಾವುದೋ ಒಂದು ಹಂತದಲ್ಲಿ, ಯಾವುದೋ ಒಂದು ಕಾರಣಕ್ಕಾಗಿ, ಆ ಪರಿಸ್ಥಿತಿ ಹೇಗೆ ಬಿಲ್ಡಪ್ ಆಗಿತ್ತು ಅವತ್ತು? ನಮ್ಮ ಮಂತ್ರಿಮಂಡಲದ ಸಭೆ ನಡೆದಾಗ, ಉತ್ತರ ಭಾಗದಲ್ಲಿ ಈ ಪ್ರೊಕ್ಯೂರ್‌ಮೆಂಟ್ ಪಾಲಿಸಿ ವಿಚಾರದಲ್ಲಿ ಎಂತಹ ಭೀಕರವಾದಂಥ ಸನ್ನಿವೇಶ ಉದ್ಭವವಾಗುತ್ತಾ ಇತ್ತು. ಈ ಗೋವಿನ ಜೋಳದ ವಿಚಾರವಾಗಿ ಎಂತಹ ಒಂದು it was an explosive situation and so we had to fight that situation. We had to send a very strong message. Yes, we took a decision and ultimately when we analysed it on a calmer reconsideration of what we did, we found that was not warranted and this Government has no hesitation. When we commit a mistake, we say, yes, we have committed a mistake. But we have the courage to set right that mistake.

ಇದು ಪ್ರೆಸ್ಟೀಜ್ ಪ್ರಶ್ನೆ ಹೇಗೆ ಸಾರ್. ಫಾಲ್ಸ್ ಪ್ರೆಸ್ಟೀಜ್. ಸಸ್ಪೆಂಡ್ ಮಾಡಿದ ತಕ್ಷಣ ಹೇಗೆ ಮಾಡುವುದಕ್ಕಾಗುತ್ತದೆ ಎಂದರು. ಆದರೆ, ಆ ನಮೂನೆ ಸರ್ಕಾರ ಇಲ್ಲ when we are reasonable ನಮಗೇ ಗೊತ್ತಾಯಿತು. He is one of our offic-

ers who is known for his integrity. But the situation at that point of time was such that we had to inevitably go into that kind of action. ಇನ್ನು ಆತ್ಮಹತ್ಯೆ ವಿಚಾರವನ್ನು ಬಹಳ ಜನ ಹೇಳಿದರು. ನಾನಾಗಲೇ ಪಂಜಾಬ್ ನಿದರ್ಶನವನ್ನು ನಿಮಗೆ ಹೇಳಿದೆ. ಹಿಂದಿನ ಚರ್ಚೆಯಲ್ಲಿ ಪಂಜಾಬಿನ ಅಂಕಿಅಂಶಗಳನ್ನು ಕೋಟ್ ಮಾಡಿದೆ. ಆತ್ಮಹತ್ಯೆ ಏಕೆ ಮಾಡಿಕೊಳ್ಳುತ್ತಾರೆ? ನಿನ್ನೆ ಯಾರೋ ಹೇಳುತ್ತಾ ಇದ್ದರು. ಬೆಂಗಳೂರು ನಗರದಲ್ಲಿ ಆತ್ಮಹತ್ಯೆಗಳು ಬಹಳ ಜಾಸ್ತಿಯಾಗುತ್ತಾ ಇವೆ ಎಂದು. ಬೆಂಗಳೂರು ನಗರದ ಮಣ್ಣಿನ ಗುಣ ಏನಿದೆಯೋ ಗೊತ್ತಿಲ್ಲ. ಬೆಂಗಳೂರು ನಗರದಲ್ಲಿ ಆತ್ಮಹತ್ಯೆ ಜಾಸ್ತಿ ಎಂದು ಯಾರೋ ಒಬ್ಬರು ಹೇಳಿ, ಈ ಅಂಕಿಅಂಶಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈಗ ಕೋಲಾರದಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಮಾನ್ಯ ಸಿಂಧ್ಯಾರವರು ಹೇಳಿದರು ವಿರೋಧಪಕ್ಷದ ನಾಯಕರ ಒಂದು ಸಭೆಯನ್ನು ಕರೆಯಿರಿ ಅಂತ. ನಾನು ಅಗತ್ಯವಾಗಿ ಕರೆಯುತ್ತೇನೆ. ಇಂತಹ ವಿಚಾರದಲ್ಲಿ ಒಂದು ಸರ್ವಾನುಮತದ ಅಭಿಪ್ರಾಯ ಉದ್ಭವವಾದರೆ ವಿಚಾರಗಳು ಬಹಳ ಸುಲಭವಾಗಿ ಪರಿಹಾರವಾಗುವುದಕ್ಕೆ ಸಾಧ್ಯವಿದೆ. ಆದ್ದರಿಂದ ತಮ್ಮನ್ನು ಕರೆಸಿ ಆ ನಂತರ ಒಂದು we will try to evolve a consensus so far as suicide cases are concerned.

ಇನ್ನು ಮಾನ್ಯ ಪೂಜಾರ್‌ರವರು ಕರ್ನಾಟಕ ರೈಲ್ವೆ ಡೆವಲಪ್‌ಮೆಂಟ್ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ರೈಲ್ವೆ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಸೀಮಿತವಾದಂತಹ ನಾಲ್ಕು ಮಾರ್ಗಗಳಿಗೆ ಮಾತ್ರ ನಾವು ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿಮಂಡಲದ ಜೊತೆ ಒಪ್ಪಂದ ಮಾಡಿಕೊಂಡಿದ್ದೇವೆ. ಇನ್ನು ಹೊಸ ಯೋಜನೆಗಳನ್ನು ಸೇರಿಸಬೇಕಾಗಿದ್ದರೆ ನಾವು ಏನು ಒಂದು ಬೋರ್ಡ್ ಮಾಡುತ್ತೇವೆ, ಅದಕ್ಕೆ ಈಗಾಗಲೇ ಕೇಂದ್ರ ರೈಲ್ವೆ ಸಚಿವರು ಬಜೆಟ್‌ನಲ್ಲಿ ತಮ್ಮ ಪಾಲಿನ 25 ಪರ್ಸೆಂಟ್ ಹಣವನ್ನು ತೆಗೆದಿಟ್ಟಿದ್ದಾರೆ. ನಮ್ಮ ಭಾಗದ್ದು ಏನು ಇದೆಯೋ ಅದನ್ನು ನಾವು ಕೊಡುತ್ತೇವೆ. ಆನಂತರ ಮಿಕ್ಕ ಹಣಕಾಸಿನ ಸಂಸ್ಥೆಗಳು ಅದರ ಜೊತೆ ಸೇರುತ್ತವೆ. ಒಟ್ಟಾರೆ ನಮ್ಮ ಗುರಿ ಏನೆಂದರೆ ಈ ನಾಲ್ಕು ಪ್ರಾಜೆಕ್ಟ್‌ಗಳನ್ನು ಮುಗಿಸಬೇಕು ಎನ್ನತಕ್ಕಂಥ ದೃಷ್ಟಿಯಿಂದ ಮಾಡಿದ್ದೇವೆ. ಇನ್ನು ಅರಗ ಜ್ಞಾನೇಂದ್ರರವರು ಹಲವಾರು ವಿಚಾರಗಳನ್ನು ಹೇಳಿದ್ದಾರೆ. ಅದರ ಜೊತೆಗೆ ಸಾರ್ವಜನಿಕ ಉದ್ದಿಮೆಗಳ ಬಗ್ಗೆ ನಾವು ಈಗಾಗಲೇ ನಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದೇವೆ. ಆ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇವೆ. ಮತ್ತು ಒಂದು ಪದ್ಮನಾಭ ಕಮೀಷನ್ ನೇಮಕ ಮಾಡಿದ್ದೇವೆ. ಆ ಕಮೀಷನ್‌ರವರು ಏನು ಶಿಫಾರಸ್ಸುಗಳನ್ನು ಮಾಡಿದ್ದಾರೆ ರೀ-ಸ್ಟ್ರಕ್ಚರಿಂಗ್ ಕಮೀಷನ್ ಹಾಗೆ ಅಂತ ಹೇಳಿ ಅವರ ಉದ್ದೇಶ ಏನೆಂದರೆ ನಮ್ಮಲ್ಲಿ 79-80 ಉದ್ದಿಮೆಗಳು ಇವೆ. ಎರಡನ್ನು ಬಿಟ್ಟು ಬಾಕಿ ಇರತಕ್ಕಂಥ ಎಲ್ಲಾ ಉದ್ದಿಮೆಗಳು ಕುಗ್ಗುತ್ತಾ ಇರತಕ್ಕಂಥ ಸಾರ್ವಜನಿಕ

ಉದ್ದಿಮೆಗಳು. ಈ ಸಾರ್ವಜನಿಕ ಉದ್ದಿಮೆಗಳನ್ನು ನಾವು ಉಳಿಸಿಕೊಂಡು ಹೋಗಬೇಕಾದರೆ ನಮ್ಮ ಹಳ್ಳಿಗಾಡಿನ ರಸ್ತೆ ಕೆಲಸ ನಿಲ್ಲಿಸಬೇಕು. ಆಶ್ರಯ ಮನೆಗಳ ಕೆಲಸ ನಿಲ್ಲಿಸಬೇಕಾಗುತ್ತದೆ. ಮತ್ತು ಹೊಸ ಆಸ್ಪತ್ರೆ ಕಟ್ಟಡಗಳನ್ನು ಕಟ್ಟಿಸುವಂಥಾದ್ದು ನಿಲ್ಲಿಸಬೇಕಾಗುತ್ತದೆ. ಹೊಸ ಯೋಜನೆಗಳನ್ನು ನಿಲ್ಲಿಸಬೇಕಾಗುತ್ತದೆ. ಏಕೆಂದರೆ ಎನ್.ಜಿ.ಎಫ್.ಗೆ ಪ್ರತಿ ತಿಂಗಳು ನಾವು ಎರಡೂವರೆ ಕೋಟಿ ರೂಪಾಯಿ ಸಂಬಳ ಕೊಡುತ್ತಲೇ ಹೋಗಬೇಕಾಗುತ್ತದೆ. ಈಗ ನಮ್ಮ ದೃಷ್ಟಿ ಏನೆಂದರೆ ಆ ಎರಡು ಸಾವಿರ ಕುಟುಂಬಗಳು ಪ್ರಾಮುಖ್ಯವೋ ಅಥವಾ ಒಟ್ಟಾರೆ ನಮ್ಮ ಕರ್ನಾಟಕ ರಾಜ್ಯದ 5 ಕೋಟಿ ಜನಗಳ ಹಿತದೃಷ್ಟಿಯಿಂದ ನಾವು ತೀರ್ಮಾನ ತೆಗೆದುಕೊಳ್ಳಬೇಕೋ ಎನ್ನುವುದು. ಆದರೆ ಇದರ ಬಗ್ಗೆ ನಾವು ಈ ಸದನದಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಏಕೆಂದರೆ ಈ ರೀಸ್ಟ್ರಕ್ಚರಿಂಗ್ ಕಮಿಷನ್‌ರವರು ಏನು ವರದಿಯನ್ನು ಕೊಡುತ್ತಾರೆ ಆ ವರದಿಯನ್ನು ನಾನು ಸದನದ ಮುಂದೆ ಮಂಡಿಸುತ್ತೇನೆ. ಆ ನಂತರ ನಾವು ಆ ಬಗ್ಗೆ ಮುಕ್ತವಾದಂತಹ ಚರ್ಚೆಯನ್ನು ಮಾಡಿ ಒಂದು ನಿರ್ಣಯಕ್ಕೆ ಬರಬಹುದಾಗಿದೆ. ಮಾನ್ಯ ಹೆಗಡೆಯವರು ಮಾತನಾಡುತ್ತಾ ನೀವು ಸುಮಾರು 80 ಸಾವಿರ ಹುದ್ದೆಗಳನ್ನು ಫ್ರೀಜ್ ಮಾಡಿದ್ದೀರಿ, ಇದರಲ್ಲಿ ಕೆಲವು ಹುದ್ದೆಗಳು ಅವಶ್ಯಕ ಹುದ್ದೆಗಳು ಇರಬಹುದು ಎನ್ನುವ ಅನುಮಾನವನ್ನು ವ್ಯಕ್ತಪಡಿಸಿದ್ದೀರಿ. ಅದಕ್ಕೋಸ್ಕರವಾಗಿಯೇ ನಾವು ಬುದ್ಧಿಪೂರ್ವಕವಾದ ಒಂದು ತೀರ್ಮಾನವನ್ನು ಮಾಡಿದ್ದೇವೆ. ಇನ್ನು ಮೇಲೆ ನಾವು ಹೊಸ ಹುದ್ದೆಗಳನ್ನು ಸೃಷ್ಟಿ ಮಾಡಬೇಕಾದರೆ it will be need based creation of new job opportunities. We are not blocking the employment as such. It does apply to teachers, it does not apply to Police, Health, Education and Animal Husbandry departments. These departments are exempted. ಇನ್ನು, ನಮ್ಮ ಪಾಟೀಲರು ಮಾತನಾಡುತ್ತಾ ಭ್ರಷ್ಟಾಚಾರದ ಬಗ್ಗೆ ಏನೂ ನಮೂದು ಆಗಲಿಲ್ಲ ಎನ್ನುವ ಮಾತನ್ನು ಹೇಳಿದರು. ಭ್ರಷ್ಟಾಚಾರವನ್ನು ಇಳಿಸುವುದಕ್ಕೆ ನಾವು ಈಗಾಗಲೇ ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಎಲ್ಲಾ ಮಜಲುಗಳಲ್ಲಿ ಈ ಭ್ರಷ್ಟಾಚಾರವನ್ನು ಕಡಿಮೆ ಮಾಡುವುದಕ್ಕೆ ನಾವು ಪಾರದರ್ಶಕತೆಯ ಕಾನೂನನ್ನು ಜಾರಿಗೆ ತಂದಿದ್ದೇವೆ. ಟೆಂಡರ್ ಕರೆಯಬೇಕೆಂದು ಏಕೆ ನಾವು ನಮ್ಮ ಪಾರದರ್ಶಕತೆಯ ಕಾನೂನಿನಲ್ಲಿ ಸೂಚನೆ ಮಾಡಿದ್ದೇವೆ? ಇದರ ಮೂಲ ಉದ್ದೇಶವೇನೆಂದರೆ ಪಾರದರ್ಶಕತೆ ಯಾವಾಗ ಬರುತ್ತದೆ ಆಗ ಭ್ರಷ್ಟಾಚಾರ ಕಡಿಮೆಯಾಗುತ್ತದೆ ಎನ್ನತಕ್ಕಂಥಾದ್ದು ನಮ್ಮ ವಿಶ್ಲೇಷಣೆ, ನಮ್ಮ ಯೋಚನೆ ಅದು. ನಾವು ಅಧಿಕಾರಕ್ಕೆ ಬಂದಾಗ ಏನು ವಚನ ಕೊಟ್ಟಿದ್ದೇವೆ ಈ ಸಭೆಗೆ ಅದನ್ನು ವೈಜ್ಞಾನಿಕವಾದ ರೀತಿಯಲ್ಲಿ ಒಬ್ಬ ಆಫೀಸರನ್ನು ಸಸ್ಪೆಂಡ್ ಮಾಡಿ ಇನ್ನೊಬ್ಬ ಆಫೀಸರ್‌ನ್ನು ಡಿಸ್‌ಮಿಸ್ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವನು ಕೋರ್ಟಿಗೆ

ಹೋಗಿ ಸ್ಟೇ ಆರ್ಡರ್ ತೆಗೆದುಕೊಂಡು ಬರುತ್ತಾನೆ, ಆದ್ದರಿಂದ ನಮ್ಮ ಚೌಕಟ್ಟಿನ ಒಳಗೆ ನಾವು ಈ ಭ್ರಷ್ಟಾಚಾರವನ್ನು ಕಡಿಮೆ ಮಾಡಲು ಎಲ್ಲಾ ಹಂತದಲ್ಲಿ ತರಬೇಕು ಅಂತ ಹೇಳಿ ಹಳ್ಳಿಯಿಂದ ಬೆಂಗಳೂರಿನವರೆಗೂ ತರಬೇಕೆಂದು ಹೇಳಿ ಪಾರದರ್ಶಕತೆ ಮತ್ತು ಟೆಂಡರಿಗೆ ಸಿಸ್ಟಂ ತಂದಿದ್ದೇವೆ. ಇವತ್ತು ಬೆಳಿಗ್ಗೆ ಮಾನ್ಯ ಶ್ರೀನಿವಾಸಗೌಡರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು, ನಾನು ತಕ್ಷಣ ಮುಖ್ಯಕಾರ್ಯದರ್ಶಿಗಳಿಗೆ ಒಂದು ನೋಟ್ ಕಳುಹಿಸಿದ್ದೇನೆ. ಯಾರೇ ಅಧಿಕಾರಿ ಎರಡು ಲಕ್ಷ ರೂಪಾಯಿ, ನಾಲ್ಕು ಲಕ್ಷ ರೂಪಾಯಿ ಏನು ಇದೆ ಅದರ ಮೇಲ್ಪಟ್ಟು ಯಾವುದೇ ಕೆಲಸವನ್ನು ಟೆಂಡರ್ ಇಲ್ಲದೆ ಯಾರೇ ಗುತ್ತಿಗೆದಾರನಿಗೆ ಕೆಲಸ ವಹಿಸಿದ್ದರೆ ಅದು ನಮಗೆ ಕಂಡು ಬಂದರೆ ಅವರ ಮೇಲೆ ನಾವು ನಮ್ಮ ಕಾಯ್ದೆ ಪ್ರಕಾರ ಕ್ರಮವನ್ನು ಅವನ ಮೇಲೆ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ ಜಿ ಆರ್ ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ರೀತಿ ಒಂದು ಲಕ್ಷ, ಎರಡು ಲಕ್ಷ ರೂಪಾಯಿಗಳ ಮೇಲ್ಪಟ್ಟ ಕೆಲಸಗಳನ್ನು ಟೆಂಡರ್ ಕರೆದು ಕೊಡಬೇಕೆನ್ನುವ ಮಾತನ್ನು ನಾವೆಲ್ಲ ಮೆಚ್ಚುತ್ತೇವೆ. ಒಂದು ವಿಷಯ ಅವರ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ಅದನ್ನು ತರಬೇಕೆನ್ನುವ ಉದ್ದೇಶದಿಂದ ನಾನು ಮಾತನಾಡುತ್ತಿದ್ದೇನೆ. ಏನೆಂದರೆ ಟೆಂಡರ್ ಕರೆಯಬೇಕೆನ್ನುವುದು ನಿಜವೇ. ಆದರೆ 4-5 ಜನ ಕಂಟ್ರಾಕ್ಟರ್ಸ್ ಸೇರಿಕೊಂಡು ಒಂದು ಗ್ಯಾಂಗ್ ಮಾಡಿಕೊಳ್ಳುತ್ತಾರೆ. ರಿಂಗ್ ಮಾಡಿಕೊಳ್ಳುತ್ತಾರೆ. ಸಿಂಡಿಕೇಟ್ ಮಾಡಿಕೊಳ್ಳುತ್ತಾರೆ. ಈ ರೀತಿ ಮಾಡಿಕೊಂಡು ನೀನು ಆ ಕೆಲಸ ತೆಗೆದುಕೋ, ನಾನು ಈ ಕೆಲಸ ತೆಗೆದುಕೊಳ್ಳುತ್ತೇನೆಂದು ಹೇಳಿ ಅವರವರೇ ಹಂಚಿಕೊಳ್ಳುತ್ತಿದ್ದಾರೆ. ನಮ್ಮ ಸರ್ಕಾರವಿದ್ದಾಗ ಸಹ ವಿಶೇಷವಾಗಿ ನೀರಾವರಿ ಯೋಜನೆಗಳಲ್ಲಿ ಈ ತರಹ ಆಗಿರುವಂಥಾದ್ದನ್ನು ನಾವು ಗಮನಿಸಿದ್ದೇವೆ. ವಿಶೇಷವಾಗಿ ಈಗ ಸ್ಲಂ ಬೋರ್ಡಿನಲ್ಲಿ ಹೇಳಬೇಕೆಂದರೆ ಕೆಲವು ಪರ್ಟಿಕ್ಯುಲರ್ ಕಂಟ್ರಾಕ್ಟರ್ಸ್ ಗ್ಯಾಂಗ್ ಇದೆ. ಅವರೇ 20-25 ವರ್ಷಗಳಿಂದ ಮಾಡಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಈ ಕಂಟ್ರಾಕ್ಟರ್ಸ್ ಯಾರು ಎನ್‌ಲಿಸ್ಟ್ ಮಾಡುತ್ತಾರೆ ಅವರು ಕ್ಲಾಸ್-1 ಕ್ಲಾಸ್-2 ಅಂತ ಮಾಡಬೇಕಾಗುತ್ತದೆ. ಈ ಬಗ್ಗೆ ಸ್ವಲ್ಪ ರಿವ್ಯೂ ಮಾಡಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ನಾನು ಮಂಡ್ಯ ವಿಚಾರದ ಬಗ್ಗೆ ಎರಡು ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೆ. ಮೈಸೂರು ಷುಗರ್ ಕಂಪನಿಯಲ್ಲಿ ಸಾರಾಯಿ ಮಾರಾಟದಲ್ಲಿ ಆಗಿರುವಂತಹ ಅವ್ಯವಹಾರದ ಬಗ್ಗೆ ನಮ್ಮ ಸರ್ಕಾರವಿದ್ದಾಗ ಸಿಓಡಿ ವಿಚಾರಣೆಗೆ ಆರ್ಡರ್ ಆಗಿತ್ತು. ಅಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಆಗಿದೆ. ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಮತ್ತು ಮಂಡ್ಯದ ಮೂಡಾದಲ್ಲಿ 2700 ಸೈಟ್‌ಗಳ ವಿತರಣೆಯಲ್ಲಿ ಬಹಳ ತಡವಾಗಿದೆ. ನಾವು ಈಗಾಗಲೇ

ಸಾಲ ತೆಗೆದುಕೊಂಡು ಬ್ಯಾಂಕ್‌ನವರಿಗೂ ದುಡ್ಡು ಕಟ್ಟುವುದಕ್ಕೆ ಆಗಿಲ್ಲ. ಈ ಬಗ್ಗೆ ಸಹ ಉತ್ತರ ಕೊಡಬೇಕು.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೇ, ಟೆಂಡರ್ ಬಗ್ಗೆ ಮಾನ್ಯ ಸಿಂಧ್ಯಾರವರು ಹೇಳಿದರು. ಟೆಂಡರ್ ಅಂತ ಹೇಳಿದ ಮೇಲೆ ಒಂದು ಪದ್ಧತಿ ಪ್ರಾರಂಭವಾಗಿದೆ. ಯಾವುದೇ ಒಂದು ಕೆಲಸಕ್ಕೆ ಟೆಂಡರ್ ಹಾಕಬೇಕಾದರೆ ಒಂದು 10 ಜನ ಸೇರಿ ಟೆಂಡರ್ ಹಾಕುತ್ತಾರೆ. ನೀವು ಎರಡು ಲಕ್ಷ ರೂಪಾಯಿ ಇಟ್ಟಿದ್ದರೆ ಅವನು 2 ಲಕ್ಷ 10 ಸಾವಿರ 20 ಸಾವಿರ ಹೀಗೆ ಹಾಕಿಕೊಂಡು ಆ 10 ಜನ ಕಂಟ್ರಾಕ್ಟರ್ಸ್ ಸೇರಿ ಒಂದು ಆಕ್ಷನ್ ಮಾಡುತ್ತಾರೆ. ಆ ಆಕ್ಷನ್‌ನಲ್ಲಿ ಯಾರೋ ಒಬ್ಬ ಬಿಡ್ ಮಾಡಿ, ಇದರಲ್ಲಿ ಇರುವ ದುಡ್ಡು ಅವರಿಗೆ ಕೊಟ್ಟು ಅವನು ಆ ಟೆಂಡರ್‌ನ್ನು ತೆಗೆದುಕೊಳ್ಳುತ್ತಾನೆ, ಈ ಪದ್ಧತಿ ಈಗ ಎಲ್ಲಾ ಕಡೆ ಬಂದು ಹೋಗಿದೆ. ಟೆಂಡರ್ ಫಾರಂಗಳು ವಿತರಣೆ ಮಾಡಬೇಕಾದರೆ ನೀವು ಅಲ್ಲಿಂದ ಫಿಲ್ಟರ್ ಮಾಡಿ ಕಳುಹಿಸುವಂತಾದ್ದು ಒಳ್ಳೆಯದು. ಕೇಳಿದವರಿಗೆಲ್ಲಾ ಟೆಂಡರ್ ಫಾರಂ ಕೊಟ್ಟರೆ ಎಲ್ಲರೂ ಟೆಂಡರ್ ಹಾಕುತ್ತಾರೆ. ಅದರಲ್ಲಿ ಯಾರೋ ಒಬ್ಬ ಬಿಡ್ ಮಾಡಿ ಅದರಲ್ಲಿರುವಂತಹ ದುಡ್ಡನ್ನು ಉಳಿದ 9 ಜನ ಹಂಚಿಕೊಳ್ಳುತ್ತಾರೆ. ಅವರು ವಿತ್‌ಡ್ರಾ ಮಾಡಿದಾಗ ಒಬ್ಬನ ಮೇಲೆ ಟೆಂಡರ್ ನಿಲ್ಲುತ್ತದೆ. ಇದೊಂದು ಕೆಟ್ಟ ಪದ್ಧತಿ ಆಗಿದೆ. ಆದ್ದರಿಂದ ಈ ಟೆಂಡರ್ ಫಾರಂ ಕೊಡುವಾಗ ಫಿಲ್ಟರ್ ಮಾಡುವುದಕ್ಕೆ ಸಾಧ್ಯವಾದರೆ ಏನಾದರೂ ಮಾಡಬೇಕು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಕೂಡ ಹೇಳಿದೆ. ನಮ್ಮ ಗದಗ ಜಿಲ್ಲಾ ಪಂಚಾಯತಿ ಮೀಟಿಂಗ್‌ನಲ್ಲಿ ಆದದ್ದು ಒಂದು ಕೋಟಿ ರೂಪಾಯಿ ವ್ಯವಹಾರದ ಬಗ್ಗೆ ಮಾತನಾಡಬೇಕೆಂದು ಇದ್ದೆ, ಆದರೆ ಆಗಲಿಲ್ಲ. ಇದರಲ್ಲಿ ಅಧಿಕಾರಿಗಳು ಸೇರುತ್ತಾರೆ. ಟೆಂಡರ್ ಇಲ್ಲದಿದ್ದಾಗ ಎಲ್ಲರನ್ನು ಕೂಡಿಸಿ ರೇಟ್‌ಗಾದರೂ ಕೊಟ್ಟುಬಿಡುತ್ತಿದ್ದೆವು. ಈಗ ಅವನ್ನು 10 ಪರ್ಸೆಂಟ್ 15 ಪರ್ಸೆಂಟ್‌ಗೆ ತೆಗೆದುಕೊಳ್ಳುತ್ತಿದ್ದಾರೆ. ಆಗ ಅವರು ಏನು ಮಾಡುತ್ತಾರೆಂದರೆ ಅಷ್ಟು ಕೆಲಸ ಕಡಿಮೆ ಮಾಡುತ್ತಾರೆ. ಒಂದು ಕೋಟಿ ರೂಪಾಯಿ ಕೆಲಸ ಇದ್ದರೆ ಅದರ ಮೇಲೆ 10 ಪರ್ಸೆಂಟ್ ಇದ್ದರೆ 10 ಲಕ್ಷ ರೂಪಾಯಿ ಯಾರು ಕೊಡುವವರು? ಅದಕ್ಕೆ ಅವರು ಅಷ್ಟು ಕೆಲಸ ಕಡಿಮೆ ಮಾಡುತ್ತಾರೆ. ಟೆಂಡರ್‌ನಲ್ಲಿ ಕೂಡ ಮೋಸ ನಡೆಯುತ್ತಿದೆ.

ಶ್ರೀ ಸಿ.ಚೆನ್ನಿಗಪ್ಪ: ನಾನು ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿಜ್ಞಾಪನಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇನೆ. ಸನ್ಮಾನ್ಯ ಶಾಸಕರುಗಳೆಲ್ಲರೂ ಸೇರಿ ಶಾಸಕರಿಗೆ ಒಂದು ಕೋಟಿ ರೂಪಾಯಿಗಳ ಅನುದಾನವನ್ನು ಕೊಡಬೇಕೆಂದು ಹಿಂದಿನಿಂದಲೂ ಕೇಳಿಕೊಂಡಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಯವರು ಬಹಳ ಒಳ್ಳೆಯ ಆಡಳಿತವನ್ನು ಮಾಡಿಕೊಂಡು ಬಂದಿದ್ದಾರೆ. ಒಳ್ಳೆಯ ಹೆಸರನ್ನು ಕೂಡ

ಗಳಿಸಿಕೊಂಡಿದ್ದಾರೆ. ಬಹಳ ಬುದ್ಧಿವಂತರು ಎಂದು ಪ್ರಖ್ಯಾತರು ಕೂಡ ಆಗಿದ್ದಾರೆ. ಸನ್ಮಾನ್ಯರು ನಮಗೆ ಈ ಸಂದರ್ಭದಲ್ಲಿ ಒಂದು ಕೋಟಿ ರೂಪಾಯಿಗಳ ಶಾಸಕರ ಅನುದಾನವನ್ನು ಘೋಷಿಸಬೇಕೆಂದು ಕೇಳಿಕೊಳ್ಳುತ್ತೇನೆ.

: ಸಭೆಯಲ್ಲಿ ಹರ್ಷೋದ್ಗಾರ :

ಶ್ರೀ ಎಸ್.ಎಂ.ಕೃಷ್ಣ(ಸನ್ಮಾನ್ಯ ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೇ, ಈ ಟೆಂಡರ್ ಪದ್ಧತಿಯು ನೂತನವಾಗಿ ಪ್ರಾರಂಭವಾಗಿರತಕ್ಕಂಥ ವ್ಯವಸ್ಥೆ. ಇದು ಸೆಟಲ್ ಆಗ ಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ. ಈ ಸೆನ್‌ಶೆಶನ್‌ನಲ್ಲಿ ಇಂಥ ತೊಂದರೆಗಳೆಲ್ಲವೂ ಉದ್ಭವಾಗುತ್ತವೆ. ಒಂದು ಸಿಂಡಿಕೇಟ್ ಆದರೆ ಇನ್ನೊಂದು ಇಂಡಿಕೇಟ್ ಆಗುತ್ತದೆ. ಹಿಂದೆ 1969ನೇ ಇಸವಿಯಲ್ಲಿ ಒಮ್ಮೆ ಹೀಗೆ ಆಗಿತ್ತು. ಆದ್ದರಿಂದ ನಾವು ಅದಕ್ಕೆ ಯೋಗ್ಯವಾದಂಥ ಕಲೆಕ್ಟಿವ್ ಮೆಜರ್ಸ್‌ನ್ನು ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಮಾನ್ಯ ಸದಸ್ಯರುಗಳೆಲ್ಲರೂ ಬಹಳ ಅನುಭವಶಾಲಿಗಳು ಆಗಿದ್ದೀರಿ. ಮಾನ್ಯ ಶಿವಪ್ಪನವರು ಈ ಬಗ್ಗೆ ಒಂದು ಸೂಚನೆಯನ್ನು ಕೊಟ್ಟರು. ಇಲ್ಲಿಂದಲೇ ಮುದ್ರೆ ಮಾಡಿ ಕಳುಹಿಸಿಕೊಡಿ ಎಂದು ಶಿವಪ್ಪನವರು ಸೂಚಿಸಿದ್ದಕ್ಕೆ ಮಾನ್ಯ ಸಿಂಧ್ಯಾರವರು ತಮ್ಮ ಒಪ್ಪಿಗೆಯನ್ನು ಕೊಟ್ಟರು. ಹಾಗೆಯೇ ಪಾಟೀಲರು ಕೂಡ ಒಪ್ಪಿಗೆ ಸೂಚಿಸಿದರು. ಇಂಥ ಸಲಹೆಗಳು ಬಂದಾಗ ಆ ಸಲಹೆಗಳನ್ನು ನಾವು ಬಹಳ ಗೌರವದಿಂದ ಸ್ವೀಕರಿಸುತ್ತೇವೆ. ಹಾಗೆಯೇ ನಾನು ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆಯನ್ನು ಕೊಡುತ್ತೇನೆ. ಈ ಟೆಂಡರಿಗೆ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಮಾಡಬೇಕು, ವೈಧಾನಿಕವಾಗಿ ಮಾಡಬೇಕು, ವ್ಯವಸ್ಥಿತವನ್ನಾಗಿ ಅದನ್ನು ಮಾಡಬೇಕು, ಅದರಲ್ಲಿ ಗ್ಯಾಂಗಿಂಗ್‌ಅಪ್, ಅಥವಾ ಸಿಂಡಿಕೇಟ್‌ನ್ನು ಮಾಡತಕ್ಕಂಥಾದ್ದು ಮುಕ್ತವಾಗಿ ಟೆಂಡರ್ ನಿಯಮಗಳನ್ನು ಪಾಲಿಸತಕ್ಕಂಥಾದ್ದು ಮುಂತಾಗಿ ಆಗಬೇಕು. ಕೆಲವು ಸಮಯ ಈ ವಿಚಾರದಲ್ಲಿ ದೌರ್ಜನ್ಯಗಳು ಕೂಡ ನಡೆದಿದ್ದಾವೆ. ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ನಲ್ಲಿ ಟೆಂಡರ್‌ಹಾಕುವ ವಿಚಾರದಲ್ಲಿ ಯಾರಾದರೂ ಪ್ರತಿಟೆಂಡರ್‌ದಾರ ಹೋದಾಗ ಅಂಥವರ ಮೇಲೆ ದೌರ್ಜನ್ಯ ನಡೆಸಿದಂಥ ಸಂದರ್ಭಗಳು ನನಗೆ ಜ್ಞಾಪಕದಲ್ಲಿದೆ. ಆದ್ದರಿಂದ ಇವುಗಳನ್ನು ತಪ್ಪಿಸಲು ಯಾವ ಮೆಜರ್ಸ್ ತೆಗೆದುಕೊಳ್ಳಬಹುದು ಎನ್ನುವುದಕ್ಕೆ ಅದರ ಬಗ್ಗೆ ನಾವು ಚಿಂತನೆಯನ್ನು ಮಾಡಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಆದರೆ ಇದೊಂದು ಹೊಸ ವ್ಯವಹಾರ ಮತ್ತು ವರ್ತನೆ. ಇದಕ್ಕೆ ಪ್ರಾರಂಭದಲ್ಲಿ ಕೆಲವೊಂದು ಅಡ್ಡಿಆಡಚಣೆಗಳು ಬರತಕ್ಕಂಥಾದ್ದು ಸಹಜ ಎಂದು ನಾನು ಭಾವನೆ ಮಾಡುತ್ತೇನೆ.

ಮಾನ್ಯ ಸೋಮಶೇಖರ್‌ರವರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೈಸುಗರ್‌ನ ಸಾರಾಯಿ ಬಾಟ್ಲಿಂಗ್‌ನ ವ್ಯವಹಾರದ ಕುರಿತು ಹೇಳಿದ್ದಾರೆ. ಆ ಕುರಿತು

ರಿಪೋರ್ಟ್ ಬಂದಿದ್ದು ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ರಿಪೋರ್ಟ್‌ನ ಪ್ರಕಾರ ಅಂತಹ ಯಾವ ಗುರುತರವಾದ ಆಪಾದನೆಗಳು ಇಲ್ಲವೆಂದು ಹೇಳಿದ್ದಾರೆ. ಯಾವುದನ್ನು ನೀವು ವಿಚಾರಣೆ ಮಾಡಿಸಿ ಎಂದು ಮಾಡಿಸಿದ್ದೀರಿ ಆ ರಿಪೋರ್ಟ್‌ನ್ನು ತಮಗೆ ತಲುಪಿಸುತ್ತೇನೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೇ, ನಾವು ಒಂದು ಗಮನಸೆಳೆಯುವ ಸೂಚನೆಯನ್ನು ಆ ಬಗ್ಗೆ ಈಗಾಗಲೇ ಕಳುಹಿಸಿದ್ದೇವೆ. ಅದಕ್ಕೆ ಪ್ರಸ್ತಾವನೆಯ ಸಂದರ್ಭದಲ್ಲಿ ಉತ್ತರವನ್ನು ಕೊಡಿ.

ಶ್ರೀ ಎಸ್.ಎಂ.ಕೃಷ್ಣ: ಈ ಸಂದರ್ಭದಲ್ಲಿ ರಿಪೋರ್ಟ್‌ನ್ನು ತರುತ್ತೇನೆ. ಆಗ ಚರ್ಚೆ ಮಾಡೋಣ.

ಶ್ರೀ ಸಿ.ಭೈರೇಗೌಡ: ನಮ್ಮ ಹತ್ತಿರ ಕೆಲವು ದಾಖಲೆಗಳು ಇವೆ. ಅವುಗಳನ್ನು ತಮ್ಮ ಗಮನಕ್ಕೆ ತರಲು ಅವಕಾಶ ಇದ್ದಾಗ ಅನುಕೂಲವಾಗುತ್ತದೆ.

ಶ್ರೀ ಎಸ್.ಎಂ.ಕೃಷ್ಣ: ಆಗಬಹುದು. ನಾನು ರಿಪೋರ್ಟ್‌ನ್ನು ತಂದಾಗ, ತಮ್ಮ ಹತ್ತಿರ ಇರತಕ್ಕಂಥ ದಾಖಲೆಗಳು ಕೂಡ ನಮಗೆ ಸಹಾಯಕವಾಗಬಹುದು. ಇನ್ನು ಎರಡನೆಯದಾಗಿ ಮಂಡ್ಯದಲ್ಲಿ ಮೂಡ ನಿವೇಶನಗಳ ಬಗ್ಗೆ. ಕಾರ್ನರ್‌ಸೈಟ್ಸ್ ಬಿಟ್ಟು ಬಾಕಿ ನಿವೇಶನಗಳನ್ನು ಹಂಚಬೇಕು ಎಂದು ಆದೇಶವನ್ನು ಕೊಟ್ಟಿದ್ದೇವೆ. ಕಾರ್ನರ್ ಸೈಟ್‌ಗಳನ್ನು ಹರಾಜು ಮಾಡಲು ಸೂಚಿಸಿದ್ದೇವೆ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಅಂಗೀಕಾರ

ಅಧ್ಯಕ್ಷರು: ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ, ''ಫೆಬ್ರವರಿ 26ನೇ 2001ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಆ ಅಧಿವೇಶನದಲ್ಲಿ ಸೇರಿರುವ ವಿಧಾನಸಭಾ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾಗಿ ವಂದನೆಗಳನ್ನು ಸಮರ್ಪಿಸಲು ಅಪ್ಪಣೆಯನ್ನು ಕೋರುತ್ತೇನೆ.''

ಪ್ರಸ್ತಾವವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

(ಸದನವು ಸಂಜೆ 5.30 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ಸೋಮವಾರ 26.3.2001 ರಂದು 12-30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಮುದ್ರಕರು: ನಿರ್ದೇಶಕರು, ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು. ತುಮಕೂರು, ಕಾಸೂ. 114 - 350 ಪುಸ್ತಕಗಳು ದಿನಾಂಕ: 10-07-2002.